ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವಕಪ್‌ನಿಂದ ಲಂಕಾ ಹೊರಕ್ಕೆ

ರಚಿನ್ ರವೀಂದ್ರ ಅವರ ಆಲ್‌ರೌಂಡ್ ಪ್ರದರ್ಶನದ ನೆರವಿನಿಂದ (32 ರನ್, 4 ವಿಕೆಟ್) ಬುಧವಾರ ನ್ಯೂಜಿಲೆಂಡ್ ತಂಡವು ಲಂಕಾವನ್ನು 61 ರನ್‌ಗಳಿಂದ ಮಣಿಸಿ ವಿಶ್ವಕಪ್‌ನಿಂದ ಹೊರದಬ್ಬಿದೆ. 3 ಅಂಕ ಗಳಿಸಿದ ಕಿವೀಸ್‌ಗೆ ಸೆಮೀಸ್ ಆಸೆ ಇನ್ನೂ ಜೀವಂತವಾಗಿದೆ.

ಸೊಂಪಾದ ಪುಟಗಳು

ನ್ಯಾಯಾಧೀಶನ ಮಾತು ಶಾಸನ ವಾಗಬೇಕೇ ಹೊರತು ಹರಿಕಥೆ ಆಗಬಾರದು!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ರಬ್ಬರ್: ಅಬ್ಬರ ಮತ್ತು ಅವನತಿ
ಕಾಡುದಾರಿ
ಹರೀಶ್ ಕೇರ 6

ದಾರಿದೀಪೋಕ್ತಿ

ನಾವು ಅಂದುಕೊಂಡ ಗುರಿ ದೊಡ್ಡದಾಗಿದ್ದಾಗ, ಆ ಗುರಿಯ ದೂರವನ್ನು ಕಂಡು ನಮಗೆ ಭಯ ಅಥವಾ ಆತಂಕವಾಗುವುದು ಸಹಜ. ಆದರೆ ಆ ದೊಡ್ಡ ಗುರಿಯನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿ, ಪ್ರತಿದಿನ ಶ್ರದ್ಧೆಯಿಂದ ಕೆಲಸ ಮಾಡಿದರೆ ಅಸಾಧ್ಯವಾದುದು ಯಾವುದೂ ಇಲ್ಲ.

ವಕ್ರತುಂಡೋಕ್ತಿ

ಇಷ್ಟವಾದದ್ದನ್ನೆಲ್ಲ ತಿಂದ ಮೇಲೆ ಕಾಡುವ ಅಪರಾಧ ಪ್ರಜ್ಞೆಗೆ ಡಯಟ್ ಎನ್ನಬಹುದು.

ರನ್ಯಾ ವಿರುದ್ಧ ಇಡಿ ದೂರು

ಬೆಂಗಳೂರು: ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಸೇರಿದಂತೆ ಮೂವರ ವಿರುದ್ಧ ಜಾರಿ ನಿರ್ದೇಶನಾಲಯ ದೂರು ದಾಖಲಿಸಿದೆ. ರನ್ಯಾ ರಾವ್, ತರುಣ್ ಕೊಂಡೂರು ಮತ್ತು ಸಾಹಿಲ್ ಸಕರಿಯಾ ಜೈನ್ ವಿರುದ್ಧ ಚಿನ್ನ ಕಳ್ಳಸಾಗಣೆ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪಪಡಿ ಬೆಂಗಳೂರಿನ ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯದಲ್ಲಿ ಪ್ರಾಸಿಕ್ಯೂಷನ್ ದೂರು ದಾಖಲಿಸಲಾಗಿದೆ ಎಂದು ಇಡಿ ಪ್ರಕಟಣೆ ತಿಳಿಸಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ನಾನೂ ಸಮರ್ಥ ಎಂದ ಗೃಹ ಸಚಿವ ಡಾ.ಜಿ.ಪರಮೇಶ್ವರ ಪರಂಗೆ ಕೂಲಿ ಕೊಡಬೇಕು ಎನ್ನುವ ಮಾಜಿ ಸಚಿವ ರಾಜಣ್ಣ ಹೇಳಿಕೆಗೆ ಸಮರ್ಥನೆ

ಪಟ್ಟದಾಟಕ್ಕೆ ಪರಂ ಎಂಟ್ರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಶುರುವಾಗಿರುವ ನಾಯಕತ್ವ ಬದಲಾವಣೆ ಗೊಂದಲದ ನಡುವೆಯೇ ಮುಖ್ಯಮಂತ್ರಿ ಆಕಾಂಕ್ಷಿ ರೇಸ್‌ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು 'ಸಿಎಂ ಸ್ಥಾನಕ್ಕೆ ನಾನೂ ಸಮರ್ಥ' ಎನ್ನುವ ಮೂಲಕ ಎಂಟ್ರಿಯಾಗಿದ್ದಾರೆ.

ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು 'ಡಿಕೆಶಿಗೆ ಕೂಲಿ ಕೊಡುವ ಮೊದಲು ಪರಮೇಶ್ವರ ಅವರಿಗೆ ನೀಡಿ' ಎಂದು ಹೇಳಿರುವುದರಲ್ಲಿ ತಪ್ಪೇನಿಲ್ಲ. ನಾನೂ ಮುಖ್ಯಮಂತ್ರಿ ಸ್ಥಾನಕ್ಕೆ ಸಮರ್ಥ. ಪಕ್ಷ ನೀಡಿರುವ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ ಎಂದು ಪರಮೇಶ್ವರ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನಕ್ಕೆ ನಾನು ಸಮರ್ಥನಿದ್ದೇನೆ. ಈವರೆಗೂ ವಹಿಸಿದ ಎಲ್ಲ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿ, ಅದನ್ನು ಸಾಬೀತುಪಡಿಸಿದ್ದೇನೆ. ಹಾಗೆಂದು, ಮುಖ್ಯಮಂತ್ರಿ ಬಗ್ಗೆಯಾಗಲಿ ಅಥವಾ ಬದಲಾವಣೆಯ ಕುರಿತಾಗಲಿ ಹಾದಿ ಬೀದಿಯಲ್ಲಿ ಚರ್ಚೆ ಮಾಡಲು ಸಾಧ್ಯವಿಲ್ಲ. ಹೆಚ್ಚೆಂದರೆ ಪಕ್ಷದ ಶಾಸಕಾಂಗ ಸಭೆಯಲ್ಲಿ ಚರ್ಚೆ ಮಾಡಬಹುದು.

ನಾನು ದೆಹಲಿಗೆ ಹೋಗಲು ಯಾರ ಅನುಮತಿಯೂ ಅಗತ್ಯವಿಲ್ಲ. ಅಗತ್ಯಬಿದ್ದರೆ ಭೇಟಿ ನೀಡುತ್ತೇನೆ. ನಾನು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದೇನೆ. ಅದಕ್ಕೆ ಸಂಬಂಧಪಟ್ಟಂತೆ ದೆಹಲಿಗೆ ಹೋಗುತ್ತೇನೆ. ಪೊಲೀಸ್ ಇಲಾಖೆಯ ಕೆಲಸಗಳ ಕುರಿತು ದೆಹಲಿಗೆ ಹೋಗಬಹುದು. ರಾಜಕೀಯವಾಗಿ ಚರ್ಚಿಸುವ ಅಗತ್ಯವಿದ್ದರೆ ಹೈಕಮಾಂಡ್ ಭೇಟಿಗಾಗಿಯೂ ಹೋಗುತ್ತೇನೆ. ಅದರಲ್ಲಿ ವಿಶೇಷ ಏನು ಇಲ್ಲ.

-ಡಾ.ಜಿ.ಪರಮೇಶ್ವರ ಗೃಹ ಸಚಿವ

ಉಳಿದಂತೆ ಹೈಕಮಾಂಡ್ ನಾಯಕರು ನಾಲ್ಕು ಗೋಡೆಗಳ ನಡುವೆ ಚರ್ಚೆ ಮಾಡಿ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು.

ಯಾರಾದರೂ ನನ್ನ ಹೆಸರನ್ನು ಕೂಗಿದ ತಕ್ಷಣ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಹಾಗೆ ಕೂಗುವುದನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ. ನನ್ನ ಸಾಮರ್ಥ್ಯವನ್ನು ಎಷ್ಟು ಬಾರಿ ಸಾಬೀತುಪಡಿಸಬೇಕು? ಕೆಪಿಸಿಸಿ ಅಧ್ಯಕ್ಷನಾಗಿ ಎಂಟು ವರ್ಷ ಕೆಲಸ ಮಾಡಿದ್ದೇನೆ. ಎರಡು ಬಾರಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇನೆ. ಉಪಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಸಾಮರ್ಥ್ಯ ಇಲ್ಲದೆ ಇದ್ದರೆ ಉಪಮುಖ್ಯಮಂತ್ರಿಯಾಗಲು ಸಾಧ್ಯವಾಗುತ್ತಿತ್ತೆ? ನನ್ನ ಸಾಮರ್ಥ್ಯದ ಬಗ್ಗೆ ಯಾರೂ ಪ್ರಶ್ನೆ ಮಾಡುವಂತಿಲ್ಲ. ಹಲವಾರು ಬಾರಿ ನಾನು ಅದನ್ನು ಸಾಬೀತುಪಡಿಸಿದ್ದೇನೆ. ಆದರೆ ಸನ್ನಿವೇಶ ಮತ್ತು ಪಕ್ಷದ ತೀರ್ಮಾನ ಎಲ್ಲವನ್ನೂ ಆಧರಿಸಿರುತ್ತದೆ ಎಂದರು.

ಘೋಷಣೆ ಕೂಗುವುದರಲ್ಲಿ ತಪ್ಪೇನಿದೆ?:

ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಬೆಂಬಲಿಗರು ಘೋಷಣೆ ಕೂಗುತ್ತಿರುವುದರಲ್ಲಿ ತಪ್ಪೇನಿದೆ? ಒಂದು ವೇಳೆ ತಪ್ಪಿದ್ದರೆ ಯಾರಾದರೂ ಹೇಳಲಿ. ಸರಿಪಡಿಸೋಣ ಎಂದು ಮಾರ್ಮಿಕವಾಗಿ ಹೇಳಿದರು. ಇದರ ಹೊರತಾಗಿ ನಾನು ಪಕ್ಷದ ಶಿಸ್ತಿನ ಸಿಪಾಯಿ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧವಾಗಿರುತ್ತೇನೆ. ಮಾಧ್ಯಮಗಳ ಮುಂದೆ ಹೇಳಿಕೆ ನೀಡಿ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲ. ಹೇಳಿಕೆ ನೀಡಿದರೆ ಸಾರ್ವಜನಿಕವಾಗಿ ಚರ್ಚೆಯಾಗಬಹುದಷ್ಟೆ ಎಂದರು. ಸಚಿವ ಸತೀಶ್ ಜಾರಕಿಹೊಳಿ, ಶಾಸಕ ಕೆ.ಎನ್.ರಾಜಣ್ಣ ಅವರನ್ನು ನಾನು ಭೇಟಿ ಮಾಡಿಲ್ಲ. ಅವರು ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ. ಎಂಟು ವರ್ಷ ಕೆಪಿಸಿಸಿ ಅಧ್ಯಕ್ಷರಾಗಿರುವ ಪರಮೇಶ್ವರ ಅವರಿಗೆ ಮೊದಲು ಕೂಲಿ ಕೊಡಿ ಎಂದು ರಾಜಣ್ಣ ಹೇಳಿರುವುದು ತಪ್ಪಲ್ಲ ಎಂದರು.

ಪರಂ ಪ್ರಶ್ನೋತ್ತರ

- ನನ್ನ ಸಾಮರ್ಥ್ಯವನ್ನು ಎಷ್ಟು ಬಾರಿ ಸಾಬೀತುಪಡಿಸಬೇಕು?
- ಸಾಮರ್ಥ್ಯ ಇಲ್ಲದಿದ್ದರೆ ಡಿಸಿಎಂ ಆಗಲು ಸಾಧ್ಯವಾಗುತ್ತಿತ್ತೆ?
- ಕೆಪಿಸಿಸಿ ಅಧ್ಯಕ್ಷನಾಗಿ ಎಂಟು ವರ್ಷ ಕೆಲಸ ಮಾಡಿದ್ದೇನೆ.
- 2 ಬಾರಿ ಪಕ್ಷವನ್ನು ಅಧಿಕಾರಕ್ಕೆ ತಂದಿರುವುದು ನನ್ನ ಸಾಧನೆ
- ಈವರೆಗೂ ಕೊಟ್ಟ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಿದ್ದೇನೆ
- ಸಿಎಂ ಬದಲಾವಣೆ ವಿಷಯ ಬಹಿರಂಗ ಚರ್ಚೆಯ ವಿಷಯವಲ್ಲ

ಹಮಾಸ್ ವಿರುದ್ಧದ ಹೋರಾಟದಲ್ಲಿ ಯಹೂದಿ ರಾಷ್ಟ್ರಕ್ಕೆ ಬೆಂಬಲ | ಇಸ್ರೇಲ್ ಸಂಸತ್ತಿನಲ್ಲಿ ಭಾಷಣ

ಇಸ್ರೇಲ್ ಮೈತ್ರಿಗೆ ಮೋದಿ ಹೊಸ ಭಾಷ್ಯ

ಟೆಲ್ ಅವಿವ್: ಪ್ರಧಾನಿ ನರೇಂದ್ರ ಮೋದಿ ಬುಧವಾರ ಇಸ್ರೇಲ್ ಸಂಸತ್ ನೆಸೆಟ್ ಅನ್ನು ಉದ್ದೇಶಿಸಿ ಮಾತನಾಡಿದ್ದು, ಈ ಗೌರವಾನ್ವಿತ ಸದನದಲ್ಲಿ ನಿಲ್ಲುವುದೊಂದು ಗೌರವ. ಭಾರತದ ಪ್ರಧಾನಿಯಾಗಿ, ಒಂದು ಪ್ರಾಚೀನ ನಾಗರಿಕತೆಯ ಪ್ರತಿನಿಧಿಯಾಗಿ ಇನ್ನೊಂದು ನಾಗರಿಕತೆಯನ್ನುದ್ದೇಶಿಸಿ ಮಾತನಾಡುತ್ತಿದ್ದೇನೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತ ಇಸ್ರೇಲ್ ಜೊತೆ ದೃಢವಾಗಿ ನಿಲ್ಲುತ್ತದೆ ಎಂದು ಹೇಳಿದ್ದಾರೆ. ಇಸ್ರೇಲ್ ಸಂಸತ್ತನ್ನು ಉದ್ದೇಶಿಸಿ ಮಾತನಾಡಿದ ಮೊದಲ ಭಾರತೀಯ ಪ್ರಧಾನಿಯೆಂಬ ಹೆಗ್ಗಳಿಕೆಗೂ ಮೋದಿ ಪಾತ್ರರಾಗಿದ್ದಾರೆ.

ಅಕ್ಟೋಬರ್ 7, 2023ರಂದು ಹಮಾಸ್ ನಡೆಸಿದ ದಾಳಿಯನ್ನು ಖಂಡಿಸಿದ ಮೋದಿ, ನಿಮ್ಮ ನೋವನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ, ನಿಮ್ಮ ದುಃಖವನ್ನು ಹಂಚಿಕೊಳ್ಳುತ್ತೇವೆ ಎಂದು ಹೇಳಿದರು. ನಾಗರಿಕರ ಹತ್ಯೆಯನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲು ಸಾಧ್ಯವಿಲ್ಲ, ಭಯೋತ್ಪಾದನೆಯನ್ನು ಯಾವುದೂ ಸಮರ್ಥಿಸಲು ಸಾಧ್ಯವಿಲ್ಲ. ಈ ಕ್ಷಣದಲ್ಲಿ ಭಾರತವು ಇಸ್ರೇಲ್‌ನೊಂದಿಗೆ ದೃಢವಾಗಿ ನಿಂತಿದೆ ಎಂದು ಅವರು ಹೇಳಿದರು.

140 ಕೋಟಿ ಜನರ ಹಾರೈಕೆಗಳನ್ನು ನಾನು ಹೊತ್ತು ತಂದಿದ್ದೇನೆ. 9 ವರ್ಷಗಳ ಹಿಂದೆ ನಾನಿಲ್ಲಿಗೆ ಬಂದಿದ್ದೆ. ಈ ನೆಲಕ್ಕೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಎಂಬ ಖುಷಿ ನನಗಿದೆ. ಭಾರತ ಭಯೋತ್ಪಾದನೆಯ ನೋವನ್ನು ದೀರ್ಘಕಾಲದಿಂದ ಅನುಭವಿಸಿದೆ. 26/11ರ ಮುಂಬೈ ದಾಳಿ, ಮುಗ್ಧ ಜನರನ್ನು ಕಳೆದುಕೊಂಡು ನೋವು ನಮಗೆ ನೆನಪಿದೆ. ನಿಮ್ಮಂತೆ ನಾವೂ ಕೂಡ ಭಯೋತ್ಪಾದನೆ ವಿರುದ್ಧ ರಾಜೀರಹಿತ ನಿಲುವು ಹೊಂದಿದ್ದೇವೆ. ಉಗ್ರವಾದ ಸಮಾಜವನ್ನು ಅಸ್ಥಿರಗೊಳಿಸುವ ಉದ್ದೇಶ ಹೊಂದಿದೆ. ಅಭಿವೃದ್ಧಿಯನ್ನು ಹಾಳುಗೆಡವಿ, ನಂಬಿಕೆಯನ್ನು ನಾಶ ಮಾಡುವ ಹುನ್ನಾರ ಅದರದ್ದು. ಉಗ್ರವಾದವನ್ನು ನಿಗ್ರಹಿಸಲು ಸ್ಥಿರವಾದ ಮತ್ತು ಪರಸ್ಪರ ಸಹಕಾರ ಹೊಂದಿರುವ ಜಾಗತಿಕ ಕ್ರಿಯಾಯೋಜನೆ ಬೇಕು. ಆದ್ದರಿಂದಲೇ ದೀರ್ಘಕಾಲದ ಶಾಂತಿ, ಪ್ರಾದೇಶಿಕ ಸ್ಥಿರತೆಗೆ ಕಾರಣವಾಗುವ ಎಲ್ಲ ಯತ್ನಗಳನ್ನೂ ಬೆಂಬಲಿಸುತ್ತದೆ ಎಂದು ಮೋದಿ ಹೇಳಿದ್ದಾರೆ.

ನನ್ನ ಸಹೋದರ

ಇದು ನಮಗೆ ಹೆಮ್ಮೆಯ ಕ್ಷಣ. ಪ್ರಧಾನಿ ಮೋದಿ ನನ್ನ ಉತ್ತಮ ಸ್ನೇಹಿತ. ನನ್ನ ಗೆಳೆಯ ಎನ್ನುವುದಕ್ಕಿಂತಲೂ ಸಹೋದರ ಎಂದರೂ ತಪ್ಪಾಗಲಾರದು. ಭಾರತದೊಂದಿಗಿನ ವ್ಯಾಪಾರ ದ್ವಿಗುಣಗೊಂಡಿದೆ ಮತ್ತು ಸಹಕಾರ 4 ಪಟ್ಟು ಹೆಚ್ಚಾಗಿದೆ ಎಂದು ಮೋದಿ ಹೇಳಿದ್ದಾರೆ.

-ಬೆಂಜಮಿನ್ ನೆತನ್ಯಾಹು, ಇಸ್ರೇಲ್ ಪ್ರಧಾನಿ

ಅದ್ದೂರಿ ಸ್ವಾಗತ

ಪ್ರಧಾನಿ ನರೇಂದ್ರ ಮೋದಿಯನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿಮಾನ ನಿಲ್ದಾಣಕ್ಕೇ ಆಗಮಿಸಿ ಆತ್ಮೀಯವಾಗಿ ಸ್ವಾಗತಿಸಿದರು. ಬೆನ್ ಗುರಿಯನ್ ವಿಮಾನ ನಿಲ್ದಾಣಕ್ಕೆ ಆಗಮಿಸಿ, ಬಲವಾದ ರಾಜಕೀಯ ಸಂದೇಶವನ್ನು ವಿಶ್ವಕ್ಕೆ ರವಾನಿಸಿದರು.

ರಾಜ್ಯ ಬಿಜೆಪಿ ನಾಯಕರಿಗೆ ಪೀಕಲಾಟ, ಕಾರ್ಯಕರ್ತರಲ್ಲಿ ಗೊಂದಲ

ಪಂಚಾಯಿತಿ ಚುನಾವಣೆಗೂ ಕಮಲ ಮೈತ್ರಿ: ಎಚ್‌ಡಿಡಿ



ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮುಖಂಡರು ಇಲ್ಲಿಯವರೆಗೆ ಸಮನ್ವಯ ಸಭೆ ನಡೆಸದಿರುವ ನಡುವೆಯೇ ನಗರ ಸ್ಥಳೀಯ ಸಂಸ್ಥೆಗಳ ಹಾಗೂ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳಿಗೆ ಎನ್‌ಡಿಎ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದಾಗಿ ಜೆಡಿಎಸ್ ಹೇಳಿದೆ.

ಬಿಜೆಪಿ ಕಾರ್ಯಕಾರಿಣಿ ಸಭೆ ನಡೆಸಿ ಚುನಾವಣೆಗೆ ಸಿದ್ದತೆ ನಡೆಸಿರುವ ಸಮಯದಲ್ಲೇ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ನಮ್ಮದು ಪ್ರಾದೇಶಿಕ ಪಕ್ಷ, ಬಿಜೆಪಿ ರಾಷ್ಟ್ರೀಯ ಪಕ್ಷ. ಅವರು ಚುನಾವಣಾ ಪೂರ್ವ ಹೊಂದಾಣಿಕೆ ಕುರಿತಂತೆ ಯಾವ ತೀರ್ಮಾನ ಮಾಡಿದ್ದಾರೆ ಎಂದು ಕಾದು ನೋಡೋಣ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ವಿಚಾರದಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡುತ್ತೇವೆ ಎಂದಿದ್ದಾರೆ. ಜೆ.ಪಿ.ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯ ಕೇಂದ್ರದ ನಾಯಕರೊಂದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಚರ್ಚೆ ಮಾಡುತ್ತಾರೆ.

→ 4

ರಾಜ್ಯ ಬಿಜೆಪಿಗರಿಗೆ ಮೋಶಾ ಗುಮ್ಮ!

ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರಲ್ಲಿ ಸ್ಥಳೀಯವಾಗಿ ಜಿದ್ದಾಜಿದ್ದಿನ ಹೋರಾಟವಿದೆ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮೈತ್ರಿ ಏರ್ಪಟ್ಟರೂ ಕಾರ್ಯಕರ್ತರಲ್ಲಿ, ಸೀಟು ಹಂಚಿಕೆಯಲ್ಲಿ ಗೊಂದಲ, ಅಸಮಾಧಾನ ಮೂಡುವುದು ಸಹಜ ಎನ್ನುವಂತಾಗಿದೆ. ಹೀಗಾಗಿ ಕಾರ್ಯಕರ್ತರು ಮೈತ್ರಿಗೆ ಒಲವು ತೋರಿಸುತ್ತಿಲ್ಲ. ಈ ಲೆಕ್ಕಾಚಾರ ಎರಡೂ ಪಕ್ಷದ ರಾಜ್ಯ ನಾಯಕರಲ್ಲಿದೆ. ಆದರೆ, ಕೇಂದ್ರದ ಮೋದಿ ಹಾಗೂ ಅಮಿತ್ ಶಾ ಜೋಡಿ ಹೇಳುವುದನ್ನೇ ರಾಜ್ಯ ಬಿಜೆಪಿಗರು ವೇದವಾಕ್ಯ ಎಂಬಂತೆ ಪಾಲಿಸಿಕೊಂಡು ಬರಬೇಕಾಗಿದೆ. ಆಡಳಿತಾರೂಢ ಕಾಂಗ್ರೆಸ್‌ಗೆ ಇದು ಅನುಕೂಲಕರವಾಗಬಹುದು ಎಂಬ ಲೆಕ್ಕಾಚಾರವೂ ಇದೆ.

ಶಿರಸಿಯ ಅಧಿದೇವತೆ ಶಿರಸಿ ಮಾರಿಕಾಂಬಾ ದೇವಿಯ ವಿಶ್ವ ವಿಖ್ಯಾತ ರಥೋತ್ಸವವು ಬುಧವಾರ ಬೆಳಗ್ಗೆ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸಡಗರ, ಸಂಭ್ರಮದಿಂದ ನಡೆಯಿತು. ದಾರಿಯುದ್ದಕ್ಕೂ ಲಕ್ಷಾಂತರ ಭಕ್ತರು ಮಾರಿಕಾಂಬೆಗೆ ಜೈಕಾರ ಹಾಕುತ್ತ, ಕುಣಿಯುತ್ತಾ ಸಂಭ್ರಮಿಸಿದರು.

ಕಬ್ಬು ಬೆಳೆಗಾರರ ಸಬ್ಸಿಡಿ ಬಿಡುಗಡೆ

ಬೆಂಗಳೂರು: 2025-26ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿಟನ್‌ಗೆ 50 ರು.ಗಳ ಆರ್ಥಿಕ ನೆರವಿನ ಮೊತ್ತ 300 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

100 ರು.ಗಳ ಆರ್ಥಿಕ ನೆರವಿನಲ್ಲಿ ರಾಜ್ಯ ಸರಕಾರ 50 ರು. ಹಾಗೂ ಸಕ್ಕರೆ ಕಾರ್ಖಾನೆಗಳು 50 ರು. ನೀಡಬೇಕು ಎಂಬ ರಾಜ್ಯ ಸರಕಾರದ ತೀರ್ಮಾನದಂತೆ, ರಾಜ್ಯ ಸರಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣವನ್ನು ಬಿಡುಗಡೆ ಮಾಡಿದೆ. ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆ ಆಧರಿಸಿ ಕಬ್ಬು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿದ್ದಾರೆ. ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರತಿ ಟನ್‌ಗೆ 50ರು.ನಂತೆ ಜಮಾ ಮಾಡಲು ಡಿ.ಸಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಖಾಲಿ ಹುದ್ದೆ ಭರ್ತಿ: ಸಿಎಂ

ಉಡುಪಿ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಾರ್ಕಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉದ್ಯೋಗ ಒದಗಿಸುವ ಭರವಸೆಯನ್ನು ಸರಕಾರ ನೀಡುತ್ತದೆ. ಒಳಮೀಸಲಾತಿಯ ಕಾರಣ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದೆ. ಪ್ರಸ್ತುತ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ 2027ರ ಕಾರ್ಕಳ ಬಾಹುಬಲಿ ಮಹಾಮಸ್ತಕಾಭಿಷೇಕಕ್ಕೆ ಸರಕಾರದಿಂದ ಸರ್ವರೀತಿಯ ಸಹಕಾರ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.

ಸಿಸಿಎಲ್ ನೌಕರರ ಹಕ್ಕು



ಬೆಂಗಳೂರು: ಮಕ್ಕಳ ಆರೈಕೆ ರಜೆ (ಸಿಸಿಎಲ್) ಮಗುವಿನ ಹಕ್ಕಾಗಿದ್ದು, ಈ ರಜೆಯ ಕೋರಿಕೆ ಬಂದಾಗ ಅದನ್ನು ನಿರಾಕರಿಸದೆ, ಆದ್ಯತೆ ಮೇರೆಗೆ ರಜೆ ಮಂಜೂರು ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ. ನೌಕರರಿಂದ ಬೇರೆ ರಜೆಗಳಿಗೆ ಬೇಡಿಕೆ ಬಂದಾಗ ಮಂಜೂರು ಮಾಡಲು ವಿವೇಚನಾ ಅಧಿಕಾರ ಉದ್ಯೋಗದಾತರಿಗಿದೆ. ಆದರೆ ಸಿಸಿಎಲ್ ರಜೆಯನ್ನು ನಿರಾಕರಿಸುವಂತಿಲ್ಲ ಎಂದು ಹೈಕೋರ್ಟ್ ತಿಳಿಸಿದೆ. ಕೇಂದ್ರ ಸರಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧೀನದಲ್ಲಿರುವ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್‌ನಲ್ಲಿ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕವಿತಾ ವಡ್ಡೆ ಅವರಿಗೆ ಫೆ.6ರಿಂದ ಮೇ 20ರವರೆಗೆ ಮಕ್ಕಳ ಪಾಲನೆ ರಜೆ ನೀಡಲು ಹೈಕೋರ್ಟ್ ನಿರ್ದೇಶನ ನೀಡಿದೆ.

ಜೋಶಿಗೆ ಹೈ ರಿಲೀಫ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಅವರ ವಿರುದ್ಧ ತಳೆಯುವ ಯಾವುದೇ ನಿಲುವನ್ನು ಮುಂದಿನ ವಿಚಾರಣೆವರೆಗೆ ಜಾರಿಗೊಳಿಸಬಾರದು ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ಬುಧವಾರ ನಿರ್ದೇಶಿಸಿದೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ಜಾರಿ ಮಾಡಿರುವ ಶೋಕಾಸ್ ನೋಟಿಸ್ ಪ್ರಶ್ನಿಸಿ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಅರ್ಜಿ ಸಂಬಂಧ ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರ ಏಸದಸ್ಯ ಪೀಠ ಈ ಆದೇಶ ನೀಡಿದೆ.

ಸಿಬಿಎಸ್‌ಇ ಸೂಚನೆ

ಬೆಂಗಳೂರು: ಸಿಬಿಎಸ್‌ಇ ಶಾಲೆಗಳು ಏಪ್ರಿಲ್ 1 ರ ಮೊದಲು 10 ಮತ್ತು 12 ನೇ ತರಗತಿಗಳನ್ನು ಪ್ರಾರಂಭಿಸಬಾರದು ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ನಿರ್ದೇಶಿಸಿದೆ. ವಿದ್ಯಾರ್ಥಿಗಳ ಆತಂಕ ಮತ್ತು ಬಳಲಿಕೆಯನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಶೈಕ್ಷಣಿಕ ಅವಧಿಯು ಏಪ್ರಿಲ್ 1 ರಿಂದ ಮಾರ್ಚ್ 31 ರವರೆಗೆ ಮಾತ್ರವೇ ನಡೆಯಬೇಕು ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ ಬೆಂಗಳೂರು ಪ್ರಾದೇಶಿಕ ಕಚೇರಿಯು ಎಂದು ನಿರ್ದೇಶಿಸಿದೆ. ಸಿಬಿಎಸ್ ಶಾಲೆಗಳು ಫೆಬ್ರವರಿಯಲ್ಲಿ 9 ಮತ್ತು 11 ನೇ ತರಗತಿಗಳನ್ನು ಮುಕ್ತಾಯಗೊಳಿಸಿ 10 ಮತ್ತು 12 ನೇ ತರಗತಿಗಳಿಗೆ ಎರಡು ತಿಂಗಳ ಮುಂಚಿತವಾಗಿಯೇ ತರಗತಿಗಳನ್ನು ಪ್ರಾರಂಭಿಸುವುದು ಸಾಮಾನ್ಯ. ಇದೀಗ ಹೊಸ ಶೈಕ್ಷಣಿಕ ಕ್ಯಾಲೆಂಡರ್ ಅನ್ನು ಅನುಸರಿಸಲು ಸಿಬಿಎಸ್‌ಇ ಸೂಚಿಸಿದೆ.

ಕ್ಷಮೆ ಕೋರಿದ ಗೇಟ್ಸ್



ವಾಷಿಂಗ್ಟನ್: ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೀನ್ ಜೊತೆಗಿನ ಸಂಬಂಧಕ್ಕಾಗಿ ಕ್ಷಮೆಯಾಚಿಸಿರುವ ಮೈಕ್ರೋಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ರಷ್ಯಾದ ಮಹಿಳೆಯರೊಂದಿಗೆ ತನಗೆ ಎರಡು ಸಂಬಂಧಗಳಿವೆ ಎಂಬುದನ್ನು ಒಪ್ಪಿಕೊಂಡಿದ್ದಾರೆ.

ಗೇಟ್ಸ್ ಫೌಂಡೇಶನ್ ಸಿಬ್ಬಂದಿಗಳ ಜೊತೆ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ ಅವರು ತಾನು ಎಪ್‌ಸ್ಟೀನ್ ಅಪರಾಧಗಳಲ್ಲಿ ಭಾಗಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಾನು ಅಕ್ರಮವಾಗಿ ಏನನ್ನೂ ಮಾಡಿಲ್ಲ. ನಾನು ಅಕ್ರಮವಾಗಿ ಏನನ್ನೂ ನೋಡಲಿಲ್ಲ. ಎಪ್‌ಸ್ಟೀನ್ ಜೊತೆಗಿದ್ದ ಮಹಿಳೆಯರೊಂದಿಗೆ ಯಾವುದೇ ಸಮಯವನ್ನು ಕಳೆದಿಲ್ಲ. ನಾನು ಮಾಡಿದ ತಪ್ಪಿನಿಂದಾಗಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಇತರ ಜನರಲ್ಲಿ ನಾನು ಕ್ಷಮೆಯಾಚಿಸುತ್ತೇನೆ ಎಂದು ಹೇಳಿದ್ದಾರೆ.

ಕೇರಳದ ಶಾಲೆ ಸೆಕ್ಯುಲರ್

ತಿರುವನಂತಪುರಂ: ಇನ್ನು ಮುಂದೆ ಕೇರಳದಲ್ಲಿ ಸರಕಾರದಿಂದ ನಿರ್ವಹಿಸುವ ಯಾವುದೇ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳು ಮತ್ತು ಇತರೆ ಶಿಕ್ಷಣ ಸಂಸ್ಥೆಗಳಿಗೆ ಧರ್ಮವನ್ನು ಸೂಚಿಸುವ ಹೆಸರಿಡುವ ಹಾಗಿಲ್ಲ. ಸಿಎಂ ಪಿಣರಾಯಿ ವಿಜಯನ್ ಅಧ್ಯಕ್ಷತೆಯ ಸಂಪುಟ ಸಭೆ ಈ ತೀರ್ಮಾನ ತೆಗೆದುಕೊಂಡಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

'ನಮ್ಮ ಪಕ್ಷಕ್ಕೆ ಹೊಸ ರಕ್ತ, ಹೊಸ ಚಿಂತನೆ ಬೇಕು' – ಕಾಂಗ್ರೆಸ್ ಮುಖಂಡ
ಸುದ್ದಿ



ಮೇಲ್ಮನೆಯ ಐವರಿಗೆ ಸಚಿವ ಸ್ಥಾನ ನೀಡಲು ಮನವಿ

ಪರಿಷತ್ ಸದಸ್ಯರಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ ಪತ್ರ

ಬೆಂಗಳೂರು: ಸಂಪುಟ ಪುನಾರಚನೆ ವೇಳೆ ಮೊದಲ ಬಾರಿಯ ಶಾಸಕರಿಗೆ ಸಂಪುಟ ಸ್ಥಾನ ನೀಡಿ ಎನ್ನುವ ಪತ್ರದ ಬೆನ್ನಲ್ಲೇ, ಪರಿಷತ್ ಸದಸ್ಯರಿಂದಲೂ ಇದೇ ರೀತಿಯ ಪತ್ರ ಚಳವಳಿ ಆರಂಭವಾಗಿರುವುದು ಹೈಕಮಾಂಡ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ವಿಧಾನಪರಿಷತ್ತಿನ 24 ಸದಸ್ಯರು ಸಹಿ ಹಾಕಿರುವ ಪತ್ರ ಇದೀಗ ವೈರಲ್ ಆಗುತ್ತಿದೆ. ರಾಜ್ಯ ಸಚಿವ ಸಂಪುಟದಲ್ಲಿ ಕನಿಷ್ಠ ಐವರಿಗೆ ಸ್ಥಾನ ನೀಡುವಂತೆ ಮೇಲ್ಮನೆ ಸದಸ್ಯರು ಪತ್ರ ಬರೆದಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಮನವಿಯನ್ನೂ ಸಲ್ಲಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದವರು ತಳಮಟ್ಟದ ಜನರೊಂದಿಗೆ ನೇರ ಸಂಪರ್ಕದಲ್ಲಿರುವ ಪ್ರತಿನಿಧಿಗಳು. ಪಕ್ಷದ ನೆಲೆಯನ್ನು ಬಲಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ಆಯ್ಕೆಯಾದ ಸದಸ್ಯರು 15-20 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡ ವಿಶಾಲ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ. ಆದ್ದರಿಂದ ನಮಗೂ ಸಚಿವ ಸ್ಥಾನ ನೀಡಬೇಕು ಎನ್ನುವುದು ಪತ್ರದಲ್ಲಿರುವ ಅಂಶ ಎನ್ನಲಾಗಿದೆ.

ಕೊಡಲಾಗದು: ಸಿಎಂ

ಉಡುಪಿ : ಮೊದಲನೇ ಅವಧಿಗೆ ಶಾಸಕರಾದವರಿಗೆ ಮಂತ್ರಿ ಸ್ಥಾನ ಕೊಡಬಾರದು ಎಂದು ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಕಾರ್ಕಳದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ಡಿಸೆಂಬರ್‌ನಲ್ಲೇ ಪತ್ರ

ಈ ಪತ್ರವನ್ನು ಡಿಸೆಂಬರ್‌ನಲ್ಲಿಯೇ ಸಲ್ಲಿಸಲಾಗಿದೆ. ಆದರೆ ನೂತನ ಶಾಸಕರ ಪತ್ರ ವೈರಲ್ ಆದ ಬಳಿಕ, ಇದೀಗ ಪರಿಷತ್ ಸದಸ್ಯರ ಪತ್ರವೂ ವೈರಲ್ ಆಗಿದೆ ಎನ್ನಲಾಗಿದೆ.

ತಮಿಳುನಾಡು ಸರಕಾರ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಜಾ, 18 ವರ್ಷಗಳ ವಿಚಾರಣೆಗೆ ತೆರೆ

ಡಾ.ರಾಜ್ ಅಪಹರಣ ಪ್ರಕರಣ: 9 ಆರೋಪಿಗಳ ಖುಲಾಸೆ

ಬೆಂಗಳೂರು: ಕನ್ನಡದ ವರನಟ ಡಾ. ರಾಜ್‌ಕುಮಾರ್ ಅವರ ಅಪಹರಣ ಪ್ರಕರಣದಲ್ಲಿ 9 ಆರೋಪಿಗಳನ್ನು ಖುಲಾಸೆಗೊಳಿಸಿದ್ದ ಕೆಳ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ತಮಿಳುನಾಡು ಸರಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಮದ್ರಾಸ್ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ. ಈ ಮೂಲಕ ಸುದೀರ್ಘ ಕಾನೂನು ಹೋರಾಟದ ನಂತರ ವೀರಪ್ಪನ್ ಸಹಚರರ ಖುಲಾಸೆ ಆದೇಶವನ್ನು ನ್ಯಾಯಾಲಯವು ಎತ್ತಿಹಿಡಿದಿದೆ.

ಜುಲೈ 30, 2000 ರಂದು ತಮಿಳುನಾಡು ಮತ್ತು ಕರ್ನಾಟಕ ಗಡಿಭಾಗದ ದೊಡ್ಡಗಾಜನೂರಿನ ತೋಟದ ಮನೆಯಲ್ಲಿದ್ದ ಡಾ.ರಾಜ್‌ಕುಮಾರ್ ಹಾಗೂ ಅವರೊಂದಿಗೆ ಇದ್ದ ಮೂವರನ್ನು ವೀರಪ್ಪನ್ ನೇತೃತ್ವದ ತಂಡ ಅಪಹರಿಸಿತ್ತು. ಸತತ 108 ದಿನಗಳ ಕಾಲ ಕಾಡಿನಲ್ಲಿ ಒತ್ತೆಯಾಳಾಗಿರಿಸಿಕೊಂಡಿದ್ದ ವೀರಪ್ಪನ್, ಉಭಯ ಸರಕಾರಗಳ ಸಂಧಾನದ ನಂತರ ನ.15 ರಂದು ಅವರನ್ನು ಬಿಡುಗಡೆ ಮಾಡಿದ್ದ. ಈ ಘಟನೆಗೆ ಸಂಬಂಧಿಸಿದಂತೆ ತಾಳವಾಡಿ ಪೊಲೀಸರು ವೀರಪ್ಪನ್ ಸೇರಿದಂತೆ 14 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದರು. ನಂತರ ಪ್ರಕರಣದ ತನಿಖೆಯನ್ನು ಸಿಸಿಬಿ-ಸಿಐಡಿಗೆ ವಹಿಸಲಾಗಿತ್ತು. ಇವರಲ್ಲಿ ವೀರಪ್ಪನ್, ಸೇತುಕುಳಿ ಗೋವಿಂದನ್, ಚಂದ್ರಗೌಡ ಮತ್ತು ಸೇತುಮಣಿ 2004 ರಲ್ಲಿ ಎನ್‌ಕೌಂಟರ್‌ನಲ್ಲಿ ಹತರಾಗಿದ್ದರು. ರಮೇಶ್ ಎಂಬ ಆರೋಪಿ ಇದುವರೆಗೂ ಪತ್ತೆಯಾಗಿಲ್ಲ.

ಸಾಕ್ಷ್ಯಾಧಾರಗಳ ಕೊರತೆ: ಸೆಪ್ಟೆಂಬರ್ 25, 2018 ರಂದು ಗೋಪಿಚೆಟ್ಟಿಪಾಳ್ಯಂನ ಸೆಷನ್ಸ್ ನ್ಯಾಯಾಲಯವು ಈ ಪ್ರಕರಣದಲ್ಲಿ ಬದುಕುಳಿದಿದ್ದ ಒಂಬತ್ತು ಆರೋಪಿಗಳಾದ ಗೋವಿಂದರಾಜ್, ಆಂಡ್ರಿಲ್, ಪಸುವಣ್ಣ, ಪುಟ್ಟುಸಾಮಿ, ಕಲ್ಮಂಡಿರಾಮನ್, ಮಾರನ್, ಸೆಲ್ವಂ, ಅಮೃತಲಿಂಗಂ ಮತ್ತು ನಾಗರಾಜ್ ಅವರನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಬಿಡುಗಡೆ ಮಾಡಿತ್ತು. ಪ್ರಕರಣದ ವಿಚಾರಣೆ ನಡೆಯುತ್ತಿರುವಾಗಲೇ 2004ರಲ್ಲಿ ವೀರಪ್ಪನ್ ಹಾಗೂ ಅವನ ಪ್ರಮುಖ ಸಹಚರರು ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದರು. ಮುಖ್ಯ ಸಾಕ್ಷಿಗಳಾದ ಡಾ. ರಾಜ್‌ಕುಮಾರ್ ಮತ್ತು ಅವರ ಪತ್ನಿ ಪಾರ್ವತಮ್ಮ ಅವರ ವಿಚಾರಣೆ ನಡೆಯದಿರುವುದು ಹಾಗೂ ಹಣಕ್ಕಾಗಿ ಬೇಡಿಕೆಯಿಟ್ಟಿದ್ದ ಆಡಿಯೊ ಕ್ಯಾಸೆಟ್‌ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸದ ಹಿನ್ನೆಲೆಯಲ್ಲಿ ಉಳಿದ ಒಂಬತ್ತು ಮಂದಿ ಆರೋಪಿಗಳ ವಿರುದ್ಧ 2018ರ ಸೆಪ್ಟೆಂಬರ್ 25ರಂದು ತೀರ್ಪು ನೀಡಿದ್ದ ಗೋಬಿಚೆಟ್ಟಿಪಾಳಯಂ ನ್ಯಾಯಾಲಯ, ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಎಲ್ಲರನ್ನೂ ಬಿಡುಗಡೆ ಮಾಡಿತ್ತು.

ಪ್ರಾಸಿಕ್ಯೂಷನ್ ವೈಫಲ್ಯ

ಪ್ರಕರಣದ ಮುಖ್ಯ ಸಾಕ್ಷಿಗಳಾದ ಡಾ. ರಾಜ್‌ಕುಮಾರ್ ಮತ್ತು ಅವರ ಪತ್ನಿ ಪಾರ್ವತಮ್ಮ ಅವರ ವಿಚಾರಣೆ ನಡೆಯದಿರುವುದು ಹಾಗೂ ಹಣಕ್ಕಾಗಿ ಬೇಡಿಕೆಯಿಟ್ಟಿದ್ದ ಆಡಿಯೊ ಕ್ಯಾಸೆಟ್‌ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸದ ಕಾರಣಗಳನ್ನು ಮುಂದಿಟ್ಟು ಗೋಬಿಚೆಟ್ಟಿಪಾಳಯಂ ನ್ಯಾಯಾಲಯ 2018ರಲ್ಲಿ ಎಲ್ಲ 9 ಮಂದಿ ಆರೋಪಿಗಳನ್ನು ಖುಲಾಸೆಗೊಳಿಸಿತ್ತು.

ಸುದೀರ್ಘ ಕಾನೂನು ಹೋರಾಟಕ್ಕೆ ತೆರೆ

ಕೆಳನ್ಯಾಯಾಲಯದ ಈ ಆದೇಶದ ವಿರುದ್ಧ ಪ್ರಾಸಿಕ್ಯೂಷನ್ 2019 ರಲ್ಲಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಐದು ವರ್ಷಗಳ ನಂತರ ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ. ವೇಲ್ಮುರುಗನ್ ಮತ್ತು ನ್ಯಾಯಮೂರ್ತಿ ಎಂ. ಜ್ಯೋತಿರಾಮನ್ ಅವರಿದ್ದ ವಿಭಾಗೀಯ ಪೀಠವು, ಕೆಳ ನ್ಯಾಯಾಲಯದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡಲು ನಿರಾಕರಿಸಿತು. 18 ವರ್ಷಗಳ ಸುದೀರ್ಘ ಕಾಲ ನಡೆದ ಈ ಪ್ರಕರಣದ ವಿಚಾರಣೆಯಲ್ಲಿ ಸುಮಾರು 10 ಮಂದಿ ನ್ಯಾಯಾಧೀಶರು ಬದಲಾಗಿದ್ದರು. ಅಂತಿಮವಾಗಿ ಪ್ರಾಸಿಕ್ಯೂಷನ್ ಸರಿಯಾದ ಸಾಕ್ಷ್ಯಗಳನ್ನು ಒದಗಿಸಲು ವಿಫಲವಾದ ಕಾರಣ ಕೆಳ ನ್ಯಾಯಾಲಯವು ಆರೋಪಿಗಳನ್ನು ಖುಲಾಸೆಗೊಳಿಸಿತ್ತು, ಈಗ ಹೈಕೋರ್ಟ್ ಕೂಡ ಅದೇ ತೀರ್ಪನ್ನು ಎತ್ತಿಹಿಡಿದಿದೆ.

'ಕಾಶ್ಮೀರದ ಸೈನಿಕರು ಅತ್ಯಾಚಾರಿಗಳು' ಚರ್ಚೆ ವಿರೋಧಿಸಿ ಅಜೀಂ ಪ್ರೇಮ್‌ಜಿ ವಿವಿಗೆ ಮುತ್ತಿಗೆ

25 ಎಬಿವಿಪಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ಸರ್ಜಾಪುರ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಗೆ ನುಗ್ಗಿ ದಾಂಧಲೆ ಮಾಡಿದ ಆರೋಪದ ಮೇಲೆ 25 ಎಬಿವಿಪಿ ಕಾರ್ಯಕರ್ತರ ಮೇಲೆ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಮಂಗಳವಾರ ಸಂಜೆ ಸರ್ಜಾಪುರ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ ಮುಂದೆ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ಹಮ್ಮಿಕೊಂಡಿದ್ದರು. ಕಾಶ್ಮೀರದ ಸೈನಿಕರನ್ನು ಅತ್ಯಾಚಾರಿಗಳು ಎಂದು ಬಿಂಬಿಸುವ ಚರ್ಚೆಯನ್ನು ಅಖಿಲ ಭಾರತೀಯ ವಿದ್ಯಾರ್ಥಿ ಸಂಘ ವಿದ್ಯಾರ್ಥಿ ವೃಂದದಿಂದ ಆಯೋಜಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಿದರು. ಕೂಡಲೇ ಯೂನಿವರ್ಸಿಟಿಯ ಮಾನ್ಯತೆ ರದ್ದುಗೊಳಿಸಲು ಕೋರಿ ಎಬಿವಿಪಿ ಕೇಂದ್ರ ಸಚಿವರಿಗೆ ಪತ್ರದ ಮೂಲಕ ಮನವಿ ಮಾಡಿ ಎಬಿವಿಪಿ ಪ್ರತಿಭಟನೆ ನಡೆಸುತ್ತಿದ್ದಾಗ ಯೂನಿವರ್ಸಿಟಿ ಒಳಗಡೆಯಿಂದ ವಿವಿ ಪರ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಪರಿಸ್ಥಿತಿ ಕೈ ಮೀರುತ್ತಿದ್ದುದನ್ನು ಗಮನಿಸಿ, ಯೂನಿವರ್ಸಿಟಿ ಒಳಗಡೆಗೆ ಎಬಿವಿಪಿ ಕಾರ್ಯಕರ್ತರು ನುಗ್ಗಿದ್ದಲ್ಲದೆ ಯೂನಿವರ್ಸಿಟಿ ನಾಮಫಲಕಕ್ಕೆ ಮಸಿ ಬಳಿದು ಹಿಂಸೆಯ ರೂಪ ಪಡೆದಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಕೂಡಲೇ ಎಚ್ಚೆತ್ತು ಎಬಿವಿಪಿ ಕಾರ್ಯಕರ್ತರನ್ನು ಬಂಧಿಸಿ ರಾತ್ರಿ ಗಲಾಟೆಗೆ ತೆರೆ ಎಳೆದಿರುವುದಾಗಿ ಸರ್ಜಾಪುರ ಪೊಲೀಸರು ತಿಳಿಸಿದ್ದಾರೆ. ಬುಧವಾರ ಬೆಳಗ್ಗೆ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ ಸೆಕ್ಯೂರಿಟಿ ಹೆಡ್ ಎಸ್ ವಿಲ್ಸನ್ ನೀಡಿದ ದೂರಿನಂತೆ ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, 25 ಎಬಿವಿಪಿ ಕಾರ್ಯಕರ್ತರನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಒಪ್ಪಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ. ದೂರಿನಲ್ಲಿ ಯೂನಿವರ್ಸಿಟಿಗೆ ಒತ್ತಾಯಪೂರ್ವಕ ಪ್ರವೇಶ ಹಾಗೂ ಸೆಕ್ಯೂರಿಟಿಗಳಾದ ಜಗದೀಶ್, ಚಂದನ್ ಮಹಾಲಿಕ್, ಚಟ್ಟಾರ್ ಬಹದ್ದೂರ್, ನರೇಶ್, ಶ್ರೀಪತಿ ಮತ್ತು ಹರೀಶ್ ಮೇಲೆ ದೊಣ್ಣೆಗಳಿಂದ ಕೊಲೆ ಬೆದರಿಕೆ ಅಲ್ಲದೆ ಮೊದಲ ಬಿಎ ವಿದ್ಯಾರ್ಥಿ ಮಹಮದ್ ಅಲಿ ಅಹಮದ್ ಮೇಲೆ ಹಲ್ಲೆ ಮಾಡಿದ ಆರೋಪ ಹೊರೆಸಿ ದೂರು ನೀಡಿದ್ದರು.

ಅಜಿಂ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ವಿಚಾರ ಸಂಕೀರ್ಣ ನಡೆಯುತ್ತಿದ್ದಾಗ ಎಬಿವಿಪಿ ಕಾರ್ಯಕರ್ತರು ನುಗ್ಗಿ ಗಲಾಟೆ ಮಾಡಿರುವುದು ಸರಿಯಲ್ಲ. ವಿಚಾರ ಸಂಕೀರ್ಣದ ವಿಷಯ ಏನೇ ಇರಲಿ, ಅಲ್ಲಿ ಚರ್ಚೆಯಾದ ಕ್ಷಣ ಏನು ಪರಿಣಾಮವಾಗುವುದಿಲ್ಲ. ಅದಕ್ಕಾಗಿ ಗಲಾಟೆ ಮಾಡುವುದು, ವಿದ್ಯಾರ್ಥಿಗಳ ಮೇಲೆ ಹಲ್ಲೆಗೆ ಯತ್ನಿಸುವುದನ್ನು ಸಹಿಸಲು ಸಾಧ್ಯವಿಲ್ಲ. ಕಾನೂನು ಕೈಗೆತ್ತಿಕೊಂಡರೆ ಸರಕಾರ ಅದನ್ನು ಸಹಿಸುವುದಿಲ್ಲ. ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುತ್ತದೆ.
– ಡಾ.ಜಿ.ಪರಮೇಶ್ವರ, ಗೃಹ ಸಚಿವ

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ–1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು–560001
ದೂ: 080–25310066, ಇ–ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 16.03.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ.5544994875.44/– (ರೂಪಾಯಿ ಐದುನೂರ ಐವತ್ತನಾಲ್ಕು ಕೋಟಿ ನಲವತ್ತೊಂಭತ್ತು ಲಕ್ಷದ ತೊಂಭತ್ತನಾಲ್ಕು ಸಾವಿರದ ಎಂಟುನೂರ ಎಪ್ಪತ್ತೈದು ಮತ್ತು ನಲವತ್ತನಾಲ್ಕು ಪೈಸೆ ಮಾತ್ರ) ಜೊತೆಗೆ ದಿನಾಂಕ: 24.02.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್,** ಕಂಪನಿಗಳ ಕಾಯ್ದೆಯಡಿಯಲ್ಲಿ ಸಂಘಟಿತವಾದ ಕಂಪನಿಯಾಗಿದ್ದು, ನೋಂದಾಯಿತ ಕಚೇರಿಯ ವಿಳಾಸ : 481–ಬಿ, 4ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–560058. ಪ್ರತಿನಿಧಿಸುವ ವ್ಯವಸ್ಥಾಪಕ ನಿರ್ದೇಶಕರು : ಶ್ರೀ ನಸೀರ್ ಅಹ್ಮದ್ (2) **ಶ್ರೀ.ನಸೀರ್ ಅಹ್ಮದ್,** ನಂ, 391, 2ನೇ ಕ್ರಾಸ್, 2ನೇ ಮುಖ್ಯರಸ್ತೆ, 2ನೇ ಹಂತ, ಆರ್‌ಎಂವಿ ಎಕ್ಸ್‌ಟೆನ್ಷನ್, ಬೆಂಗಳೂರು–560058 (3) **ಶ್ರೀ.ನುಝುತ್ ಆಯಿಷಾ ನಸೀರ್,** ಬಿನ್ ಶ್ರೀ ನಸೀರ್ ಅಹ್ಮದ್, ನಂ. 391, 2ನೇ ಕ್ರಾಸ್, 2ನೇ ಮುಖ್ಯರಸ್ತೆ, 02ನೇ ಹಂತ, ಆರ್‌ಎಂವಿ ಎಕ್ಸ್‌ಟೆನ್ಷನ್, ಬೆಂಗಳೂರು–560058 (4) **ಶ್ರೀ. ಅವೈಜ್ ಅಹ್ಮದ್,** ಬಿನ್ ನಸೀರ್ ಅಹ್ಮದ್, ನಂ.391, 2ನೇ ಕ್ರಾಸ್, 2ನೇ ಮುಖ್ಯ, 2ನೇ ಹಂತ, ಆರ್‌ಎಂವಿ ಎಕ್ಸ್‌ಟೆನ್ಷನ್, ಬೆಂಗಳೂರು–560058. (5) **ಸ್ಕಾಟ್ಸ್ ಪ್ಲಾಂಟೇಶನ್ಸ್ ಪ್ರೈವೇಟ್ ಲಿಮಿಟೆಡ್,** ಕಂಪನಿಗಳ ಕಾಯ್ದೆಯಡಿಯಲ್ಲಿ ಸಂಘಟಿತವಾದ ಕಂಪನಿ, ನೋಂದಾಯಿತ ಕಚೇರಿಯ ವಿಳಾಸ: 481–ಬಿ, 4ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–560058. ಪ್ರತಿನಿಧಿಸುವ ಅಧಿಕೃತ ಸಹಿದಾರರು : ಶ್ರೀ. ನಸೀರ್ ಅಹ್ಮದ್ (6) **ಕಾಪರ್ಸ್ ಕಾಯಿನ್ಸ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್,** ಕಂಪನಿಗಳ ಕಾಯ್ದೆಯಡಿಯಲ್ಲಿ ಸಂಘಟಿತವಾದ ಕಂಪನಿ, ನೋಂದಾಯಿತ ಕಚೇರಿಯ ವಿಳಾಸ: 481–ಬಿ, 4ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–560058. ಪ್ರತಿನಿಧಿಸುವ ಅಧಿಕೃತ ಸಹಿದಾರರು ಶ್ರೀ ಅವೈಜ್ ಅಹ್ಮದ್, ಬೆಂಗಳೂರು–560023. ಇವರುಗಳಿಗೆ ಸಾಲವನ್ನು ನೀಡಿರುತ್ತದೆ. ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿ ವಿವರಗಳು ಕೆಳಗಿನಂತಿದೆ, ಮತ್ತು ಅರ್ನೆಸ್ಟ್ ಮನಿ ಠೇವಣಿ ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು** ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು ಅಥವಾ ಆರ್‌ಟಿಜಿಎಸ್ / ನೆಫ್ಟ್ / ಫಂಡ್ ವರ್ಗಾವಣೆಯ ಮೂಲಕ ಠೇವಣಿ ಇಡಬೇಕು. ಅಥವಾ **ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು,** ಖಾತೆ ಸಂಖ್ಯೆ **209272434,** ಐಎಫ್‌ಎಸ್‌ಸಿ ಕೋಡ್: **(IFSC – CNRB0002366)**
ದಿನಾಂಕ : 15.03.2026 ರಂದು ಸಂಜೆ 5.00 ಗಂಟೆಗೆ ಅಥವಾ ಮೊದಲು ಬಿಡ್ ಫಾರ್ಮ್‌ನ ಹಾರ್ಡ್ ಕಾಪಿಯನ್ನು ಸಲ್ಲಿಸಬೇಕು:– (₹. ಕೋಟಿಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ	ಆಸ್ತಿ ಪರಿಶೀಲನಾ ದಿನಾಂಕ ಮತ್ತು ಸ್ಥಳ
1	ಇಂಡಸ್ಟ್ರಿಯಲ್ ಭೂಮಿ ಮತ್ತು ಕಟ್ಟಡದ ನಂ. 481/ಎ, 4ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಏರಿಯಾ, ಪೀಣ್ಯ ಸರ್ವೆ ನಂ. 46, ನಲ್ಲಕದರನಹಳ್ಳಿ, ಬೆಂಗಳೂರು–560058. ಭೂಮಿಯ ವಿಸ್ತೀರ್ಣ 4,146 ಚದರ ಮೀಟರ್‌ಗಳು (44,628 ಚದರ ಅಡಿ) ಜೊತೆಗೆ ಒಟ್ಟು ಬಿಲ್ಟ್ ಅಪ್ ಪ್ರದೇಶ 1,65,000 ಚದರ ಅಡಿ.	32.25	3.23	0.25	10.03.2026 ಬೆಳಿಗ್ಗೆ 10.00 ರಿಂದ ಸಂಜೆ 2.00 ರವರೆಗೆ ಅಧಿಕೃತ ಅಧಿಕಾರಿಯವರ ಪೂರ್ವ ನಿರ್ಧಾರಿತದಂತೆ
2	ಇಂಡಸ್ಟ್ರಿಯಲ್ ಭೂಮಿ ಮತ್ತು ಕಟ್ಟಡದ ನಂ. 481/ಬಿ, 4ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಏರಿಯಾ, ಪೀಣ್ಯ ಸರ್ವೆ ನಂ. 46, ನಲ್ಲಕದರನಹಳ್ಳಿ, ಬೆಂಗಳೂರು–560058. ಭೂಮಿಯ ವಿಸ್ತೀರ್ಣ 1874 ಚದರ ಮೀಟರ್‌ಗಳು (20,172 ಚದರ ಅಡಿ) ಜೊತೆಗೆ ಒಟ್ಟು ಬಿಲ್ಟ್ ಅಪ್ ಪ್ರದೇಶ 69,600 ಚದರ ಅಡಿ.	15.00	1.50	0.25	
3	ಇಂಡಸ್ಟ್ರಿಯಲ್ ಭೂಮಿಯ ಸರ್ವೆ ನಂ. 60, ಸುಲ್ತಾನ ತಿಪ್ಪಸಂದ್ರ ಗ್ರಾಮ, ಈಗ ಶಾಹೀನ್ಶಾನಗರ, ರೈಲ್ವೆ ಪ್ಯಾರಲೆಲ್ ರಸ್ತೆ, ಕೋಲಾರ ಟೌನ್, ಕಸಬಾ ಹೋಬಳಿ, ಕೋಲಾರ ಜಿಲ್ಲೆ–563101, ಭೂಮಿಯ ವಿಸ್ತೀರ್ಣ 32 ಗುಂಟೆಗಳು ಅಥವಾ 34,848 ಚದರ ಅಡಿ.	4.70	0.47	0.25	
4	ಇಂಡಸ್ಟ್ರಿಯಲ್ ಭೂಮಿ ಮತ್ತು ಕಟ್ಟಡದ ಸರ್ವೆ ನಂ. 30/1, 30/2 ಮತ್ತು 32/2, ಸಂಗೊಂಡನಹಳ್ಳಿ ಗ್ರಾಮ, ಕಸಬಾ ಹೋಬಳಿ, ಕೊಂಡರಾಜನಹಳ್ಳಿ ಪಂಚಾಯತ್, ಚಿಕ್ಕಬಳ್ಳಾಪುರ ರಸ್ತೆ, ಕೋಲಾರ ಜಿಲ್ಲೆ, ಭೂಮಿಯ ವಿಸ್ತೀರ್ಣ 2 ಎಕರೆ 29 ಗುಂಟೆಗಳು ಅಥವಾ 11,8701 ಚದರ ಅಡಿ.	13.30	1.33	0.25	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ–ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: (www.canarabank.com) ಅಥವಾ M/s PSB Alliance (Ebkray),e- mail: support.ebkray@psballiance.com,Helpdesk Number : 8291220220, Website: https://ebkray.in/ ನಲ್ಲಿ ಒದಗಿಸಲಾಗಿದೆ ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ–1 ಶಾಖೆ, ಬೆಂಗಳೂರು ಮೊಬೈಲ್ ಸಂಖ್ಯೆ: 08025310066, 9483544116 ಮತ್ತು 8508442767 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 25.02.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

PUBLIC NOTICE

This is to inform the general public that I have lost/misplaced the **B.A. LL.B. (Hons.) Certificate issued by The West Bengal National University of Juridical Sciences, Kolkata dated 23rd June 2007 to me.** The above document could not be traced despite my best efforts, and I have lodged a police complaint at J.C. Nagar Police Station to this effect.

Hence, this is to inform the general public that if any person or persons happen to come into possession of the above document, the same may kindly be sent to the undersigned advocate, whose name and address are mentioned below.

MANEESHA KONGOVI, Advocate
No. 677, 9th A Cross, 2nd Stage,
West of Chord Road, Bengaluru - 560086

ಕೆನರಾ ಬ್ಯಾಂಕ್
ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ

ಎಆರ್‌ಎಂ ಶಾಖೆ – II, 2ನೇ ಮಹಡಿ, ಸರ್ಕಲ್ ಆಫೀಸ್, ಸ್ಪೆನ್ಸರ್ ಟವರ್ಸ್, ನಂ.86, ಎಂಜಿ ರಸ್ತೆ, ಬೆಂಗಳೂರು–560001. ದೂರವಾಣಿ: 080–25310181, 25310099, E-mail - cb6298@canarabank.com

ಸ್ಥಿರಾಸ್ತಿಗಳ ಹರಾಜು ಮಾರಾಟ ನೋಟೀಸ್

(ನಿಯಮ 8(6)ರ ಅಡಿಯಲ್ಲಿ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಮಯ 2002

ಪ್ರೊವಿಜನ್ ನಿಯಮ 8(6) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್)ನ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ/ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 17.03.2026 ಮಧ್ಯಾಹ್ನ 1.00 ರಿಂದ 3.00)** ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ", "ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ–ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 16.03.2026** ಠೇವಣಿ ಮಾಡಬೇಕು. (ರೂ. ಲಕ್ಷಗಳಲ್ಲಿ)

ಕ್ರ ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು/ ಚರ / ಸ್ಥಿರ ಆಸ್ತಿಗಳ ವಿವರಣೆ	ಬಾಕಿ ಇರುವ ಸಾಲದ ಮೊತ್ತ	ಆಸ್ತಿಯ ವಿವರ	ಮೀಸಲು ಬೆಲೆ & ಇಎಂಡಿ ಬೆಲೆ
1.	(1) **ಮೆ॥ ಮಲ್ಲೆಲ್ಲಾ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್,** ಅದರ ನಿರ್ದೇಶಕರ ಮೂಲಕ : ಶ್ರೀ.ಎಂ ಪವನ್ ಕುಮಾರ್, ಶ್ರೀಮತಿ. ಎಂ ಲತಾ ಪ್ರೀತಿ ಮತ್ತು ಶ್ರೀ.ಕೆ ಚರಣ್ ಕುಮಾರ್ ನೋಂದಣಿ ಕಚೇರಿ: ಸಂಖ್ಯೆ 540, 17ನೇ ಮುಖ್ಯ ರಸ್ತೆ, 4ನೇ ವಲಯ, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು–560102. **ಜಾಮೀನುದಾರರು :** (1) **ಶ್ರೀ.ಎಂ ಪವನ್ ಕುಮಾರ್,** ಬಿನ್ ಶ್ರೀ ಎಂ ನಾಗಿರೆಡ್ಡಿ, ನಂ.307/7, 23ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು–560070 (2) **ಶ್ರೀಮತಿ. ಎಂ ಲತಾ ಪ್ರೀತಿ,** ಕೋಂ ಶ್ರೀ. ಎಂ ಪವನ್ ಕುಮಾರ್, ನಂ.307/7, 23ನೇ ಕ್ರಾಸ್, 6ನೇ ಬ್ಲಾಕ್, ಜಯನಗರ, ಬೆಂಗಳೂರು–560070 (3) **ಶ್ರೀ. ಕೆ ಚರಣ್ ಕುಮಾರ್,** ಬಿನ್ ಮತ್ತು C/o ಶ್ರೀ.ರೆಡ್ಡೆಪ್ಪ ರೆಡ್ಡಿ, ನಂ.54 ನೆಲ ಮಹಡಿ, ಯುಎಎಸ್ ಲೇಔಟ್, 8ನೇ ಕ್ರಾಸ್ ಆರ್‌ಎಂವಿ 2ನೇ ಹಂತ, ಸಂಜಯ್‌ನಗರ, ಬೆಂಗಳೂರು ಉತ್ತರ, ಅಂಚೆ: ಆರ್‌ಎಂವಿ ಎಕ್ಸ್‌ಟೆನ್ಷನ್ 2ನೇ ಹಂತ, ಬೆಂಗಳೂರು–560 094.	ರೂ. 54,79,54,708.67 (ರೂಪಾಯಿ ಐವತ್ತನಾಲ್ಕು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಐವತ್ತನಾಲ್ಕು ಸಾವಿರದ ಏಳುನೂರ ಎಂಟು ಮತ್ತು ಅರವತ್ತೇಳು ಪೈಸೆ ಮಾತ್ರ) ಮೆ॥ ಮಲ್ಲೆಲ್ಲಾ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್, ದಿನಾಂಕ 01.02.2026 ರಂದು ಇದ್ದಂತೆ ಮುಂದಿನ ಬಡ್ಡಿ ಮತ್ತು ಖರ್ಚುಗಳು.	(1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 249, ಹಿಂದಿನ ಬೇಗೂರು ಗ್ರಾಮ ಪಂಚಾಯತ್ ಖಾತಾ ನಂ. 766/ಎ, ಸರ್ವೆ ನಂ. 396 (ಹೊಸ ನಂ.396/1) ರಲ್ಲಿ ರೂಪುಗೊಂಡಿದ್ದು, ದಿನಾಂಕ 19.9.1985 ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. Dis.ALN.SR.(S) 128/85-86 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, "ವಿಶ್ವಪ್ರಿಯ ಗ್ರೀನರೀಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಲೇಔಟ್ ಅನ್ನು ಒಳಗೊಂಡಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ವ್ಯಾಪ್ತಿಯಲ್ಲಿದ್ದು, ಬೇಗೂರು ವಾರ್ಡ್ ನಂ. 192, ಖಾತಾ ನಂ. 1498/249, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 70 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 95 ಅಡಿ, ಒಟ್ಟು ವಿಸ್ತೀರ್ಣ 6650 ಚದರ ಅಡಿ. ಮತ್ತು ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 250, ಪಶ್ಚಿಮಕ್ಕೆ : ನಿವೇಶನ ನಂ. 248, ಉತ್ತರಕ್ಕೆ ; ನಿವೇಶನ ನಂ. 246, ದಕ್ಷಿಣಕ್ಕೆ : ರಸ್ತೆ.	ಮೀಸಲು ಬೆಲೆ ರೂ. 1,64,00,000/– ಇಎಂಡಿ ರೂ. 16,40,000/–
			(2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 248, ಹಿಂದಿನ ಬೇಗೂರು ಗ್ರಾಮ ಪಂಚಾಯತ್ ಖಾತಾ ನಂ. 766/ಎ, ಸರ್ವೆ ನಂ. 396 (ಹೊಸ ನಂ.396/1) ರಲ್ಲಿ ರೂಪುಗೊಂಡಿದ್ದು, ದಿನಾಂಕ 19.9.1985 ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. Dis.ALN.SR.(S) 128/85-86 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, "ವಿಶ್ವಪ್ರಿಯ ಗ್ರೀನರೀಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಲೇಔಟ್ ಅನ್ನು ಒಳಗೊಂಡಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ವ್ಯಾಪ್ತಿಯಲ್ಲಿದ್ದು, ಬೇಗೂರು ವಾರ್ಡ್ ನಂ. 192, ಖಾತಾ ನಂ. 1500/248, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ಸ್ವತ್ತಿನ ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 95 ಅಡಿ, ಒಟ್ಟು ವಿಸ್ತೀರ್ಣ 5700 ಚದರ ಅಡಿ. ಮತ್ತು ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 249, ಪಶ್ಚಿಮಕ್ಕೆ : ಖಾಸಗಿ ಆಸ್ತಿ, ಉತ್ತರಕ್ಕೆ ; ನಿವೇಶನ ನಂ. 247, ದಕ್ಷಿಣಕ್ಕೆ : ರಸ್ತೆ.	ಮೀಸಲು ಬೆಲೆ ರೂ. 1,39,00,000/– ಇಎಂಡಿ ರೂ. 13,90,000/–
			(3) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 121, ಬಿಬಿಎಂಪಿ ಖಾತಾ ನಂ. 1803/121, ಹೊಸ ಪಿಐಡಿ ನಂ. 192–ಡಬ್ಲ್ಯೂ1298–50, (ಹಿಂದಿನ ಬೇಗೂರು ಗ್ರಾಮ ಪಂಚಾಯತ್ ಖಾತಾ ನಂ. 1019–1181–766/ಎ–1026/1184, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 100 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60 ಅಡಿ, ಒಟ್ಟು ವಿಸ್ತೀರ್ಣ 6000 ಚದರ ಅಡಿ, ಸರ್ವೆ ನಂ. 114 ರಲ್ಲಿ ರೂಪುಗೊಂಡಿದ್ದು, ದಿನಾಂಕ 25.01.1982 ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. B.DIS.ALN.SR(S)581/82-83 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, "ವಿಶ್ವಪ್ರಿಯ ಗ್ರೀನರೀಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಲೇಔಟ್ ಅನ್ನು ಒಳಗೊಂಡಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ವ್ಯಾಪ್ತಿಯಲ್ಲಿದ್ದು, ಬೇಗೂರು ವಾರ್ಡ್ ನಂ. 192, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುವ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ. 120, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 122, ದಕ್ಷಿಣಕ್ಕೆ : ರಸ್ತೆ.	ಮೀಸಲು ಬೆಲೆ ರೂ. 1,40,00,000/– ಇಎಂಡಿ ರೂ. 14,00,000/–
			(4) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 77, ಬಿಬಿಎಂಪಿ ಖಾತಾ ನಂ. 1343/77, ಹೊಸ ಪಿಐಡಿ ನಂ. 192–ಡಬ್ಲ್ಯೂ0422–10, (ಹಿಂದಿನ ಬೇಗೂರು ಗ್ರಾಮ ಪಂಚಾಯತ್ ಖಾತಾ ನಂ. 1025–1183/1026–1184/766/ಸಿ), ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 100 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60 ಅಡಿ, ಒಟ್ಟು ವಿಸ್ತೀರ್ಣ 6000 ಚದರ ಅಡಿ, ಪರಿವರ್ತಿತ ಭೂಮಿಯ ಸರ್ವೆ ನಂ. 142, 143/1 ಮತ್ತು ಸರ್ವೆ ನಂ. 143/2 ರಲ್ಲಿ ರೂಪುಗೊಂಡಿದ್ದು, "ವಿಶ್ವಪ್ರಿಯ ಗ್ರೀನರೀಸ್" ಎಂದು ಕರೆಯಲ್ಪಡುವ ವಾಸಯೋಗ್ಯ ಲೇಔಟ್ ಅನ್ನು ಒಳಗೊಂಡಿರುತ್ತದೆ. ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ವ್ಯಾಪ್ತಿಯಲ್ಲಿದ್ದು, ಬೇಗೂರು ವಾರ್ಡ್ ನಂ. 192, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿದೆ. ಜೊತೆಗೆ ಎಲ್ಲಾ ನಾಗರೀಕ ಹಕ್ಕು ಬಾಧ್ಯತೆಗಳನ್ನೊಳಗೊಂಡಿರುತ್ತದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ.52, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 78ಎ, ದಕ್ಷಿಣಕ್ಕೆ : ನಿವೇಶನ ನಂ. 76	ಮೀಸಲು ಬೆಲೆ ರೂ. 1,30,00,000/– ಇಎಂಡಿ ರೂ. 13,00,000/–
			(5) **ಐಟಂ ನಂ.1 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 182, ಬಿಬಿಎಂಪಿ ಖಾತಾ ನಂ. 3315/117/7/182, ಈ ಆಸ್ತಿಯು ವಿಶ್ವಪ್ರಿಯ ಗ್ರೀನರೀಸ್"ಮದು ಕರೆಯಲ್ಪಡುವ ಲೇಔಟ್‌ನಲ್ಲಿ ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು (ದಿನಾಂಕ 31.8.1981 ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. BDIS.ALN.SR(S)154/81-82 ರ ಪ್ರಕಾರ ಭೂಮಿಯನ್ನು ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ) ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 100 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 38 ಅಡಿ, ಒಟ್ಟು ವಿಸ್ತೀರ್ಣ 3800 ಚದರ ಅಡಿ, ಬಿಬಿಎಂಪಿ ಬೇಗೂರು ವಾರ್ಡ್ ನಂ. 192, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ನಂ.179, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 183, ದಕ್ಷಿಣಕ್ಕೆ : ನಿವೇಶನ ನಂ. 181. **ಐಟಂ ನಂ.2 :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 179, ಬಿಬಿಎಂಪಿ ಖಾತಾ ನಂ. 3316/117/7/182, ಈ ಆಸ್ತಿಯು ವಿಶ್ವಪ್ರಿಯ ಗ್ರೀನರೀಸ್"ಮದು ಕರೆಯಲ್ಪಡುವ ಲೇಔಟ್‌ನಲ್ಲಿ ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು (ದಿನಾಂಕ 31.8.1981 ರಂದು ಬೆಂಗಳೂರು ಜಿಲ್ಲೆಯ ಉಪ ಆಯುಕ್ತರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. BDIS.ALN.SR(S)154/81-82 ರ ಪ್ರಕಾರ ಭೂಮಿಯನ್ನು ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ) ರಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 100 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 38 ಅಡಿ, ಒಟ್ಟು ವಿಸ್ತೀರ್ಣ 3800 ಚದರ ಅಡಿ, ಬಿಬಿಎಂಪಿ ಬೇಗೂರು ವಾರ್ಡ್ ನಂ. 192, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿವೇಶನ ನಂ. 182, ಉತ್ತರಕ್ಕೆ : ನಿವೇಶನ ನಂ. 178, ದಕ್ಷಿಣಕ್ಕೆ : ನಿವೇಶನ ನಂ. 180.	ಮೀಸಲು ಬೆಲೆ ರೂ. 1,60,00,000/– ಇಎಂಡಿ ರೂ. 16,00,000/–
			(6) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 201, ಪರಿವರ್ತಿತ ಸರ್ವೆ ನಂ. 113 ರಲ್ಲಿ ರೂಪುಗೊಂಡಿದ್ದು, (ದಿನಾಂಕ 05–09–1980 ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ರವರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. ALN:SR(S)270/80-81 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, ಪ್ರಸ್ತುತ ಬಿಬಿಎಂಪಿ ಖಾತಾ ನಂ. 290/201, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ. ಪ್ರಸತುತ ಬೇಗೂರು ಬಿಬಿಎಂಪಿ ವಾರ್ಡ್ ನಂ. 192, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60 ಅಡಿ, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಬಸಾಪುರ ಗ್ರಾಮ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 202, ದಕ್ಷಿಣಕ್ಕೆ: ಖಾಸಗಿ ಸ್ವತ್ತು, (Land Locked)	ಮೀಸಲು ಬೆಲೆ ರೂ. 63,00,000/– ಇಎಂಡಿ ರೂ. 6,30,000/–
			(7) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 202, ಪರಿವರ್ತಿತ ಸರ್ವೆ ನಂ. 113 ರಲ್ಲಿ ರೂಪುಗೊಂಡಿದ್ದು, (ದಿನಾಂಕ 05–09–1980 ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ರವರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. ALN:SR(S)270/80-81 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, ಪ್ರಸ್ತುತ ಬಿಬಿಎಂಪಿ ಖಾತಾ ನಂ. 291/202, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ. ಪ್ರಸತುತ ಬೇಗೂರು ಬಿಬಿಎಂಪಿ ವಾರ್ಡ್ ನಂ. 192, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60 ಅಡಿ, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಬಸಾಪುರ ಗ್ರಾಮ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ : ನಿವೇಶನ ನಂ. 203, ದಕ್ಷಿಣಕ್ಕೆ : ನಿವೇಶನ ನಂ. 201. (Land Locked)	ಮೀಸಲು ಬೆಲೆ ರೂ. 63,00,000/– ಇಎಂಡಿ ರೂ. 6,30,000/–
			(8) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಸ್ವತ್ತಿನ ನಿವೇಶನ ನಂ. 203, ಪರಿವರ್ತಿತ ಸರ್ವೆ ನಂ. 113 ರಲ್ಲಿ ರೂಪುಗೊಂಡಿದ್ದು, (ದಿನಾಂಕ 05–09–1980 ರಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ರವರು ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಅಫೀಸಿಯಲ್ ಮೆಮೊರಂಡಮ್ ನಂ. ALN:SR(S)270/80-81 ರ ಪ್ರಕಾರ ಭೂಮಿಯನ್ನು ಪರಿವರ್ತಿಸಲಾಗಿದ್ದು, ಪ್ರಸ್ತುತ ಬಿಬಿಎಂಪಿ ಖಾತಾ ನಂ. 633/203, ಈ ಆಸ್ತಿಯು ಬೇಗೂರು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿದೆ. ಪ್ರಸತುತ ಬೇಗೂರು ಬಿಬಿಎಂಪಿ ವಾರ್ಡ್ ನಂ. 192, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 120 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 60 ಅಡಿ, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಬಸಾಪುರ ಗ್ರಾಮ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ನಿವೇಶನ ನಂ. 204, ದಕ್ಷಿಣಕ್ಕೆ : ನಿವೇಶನ ನಂ. 202. (Land Locked)	ಮೀಸಲು ಬೆಲೆ ರೂ. 60,00,000/– ಇಎಂಡಿ ರೂ. 6,00,000/–

ಇತರ ನಿಯಮಗಳು ಮತ್ತು ನಿಬಂಧನೆಗಳು : (ಎ) ವೆಬ್‌ಸೈಟ್ **website https://baanknet.com/** ದಲ್ಲಿ "ಆನ್‌ಲೈನ್ ಎಲೆಕ್ಟ್ರಾನಿಕ್ ಬಿಡ್ಡಿಂಗ್" (ವಿದ್ಯುನ್ಮಾನ ಹರಾಜು) ಮೂಲಕ ಮಾತ್ರ ಹರಾಜು ಮಾರಾಟ ಬಿಡ್ಡರ್‌ಗಳು ಇ–ಹರಾಜು ಕಲಾಪಗಳಲ್ಲಿ ಭಾಗವಹಿಸುವ ಮುನ್ನ, ಹರಾಜು ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ ಅನ್ನು ನೋಡಲು ಸೂಚಿಸಲಾಗಿದೆ. (ಬಿ) ಆಸ್ತಿಯನ್ನು ಪರಿವೀಕ್ಷಿಸಬಹುದಾದ ದಿನಾಂಕ & ಸಮಯವನ್ನು ಮೇಲೆ ತಿಳಿಸಿದಂತೆ.(ಸಿ) ಆಸ್ತಿಯನ್ನು ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತದೆ ಮತ್ತು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಿಡ್‌ದಾರರು ತಮ್ಮ ಕೊಡುಗೆಯನ್ನು ಇನ್ನಷ್ಟು ಸುಧಾರಿಸಬಹುದು.(ಡಿ) ಇಎಂಡಿ 10% ನಷ್ಟು ಮೊತ್ತವನ್ನು **M/s PSB Alliance Private Limited (Baanknet)** ಪೋರ್ಟಲ್‌ನ ಇ–ವ್ಯಾಲೆಟ್‌ನಲ್ಲಿ ನೇರವಾಗಿ ಅಥವಾ ಅದರಲ್ಲಿ ಚಲನ್ ಅನ್ನು ರಚಿಸುವ ಮೂಲಕ ಠೇವಣಿ ಇಡಬೇಕು ಮತ್ತು ಸದರಿ ಚಲನ್‌ನಲ್ಲಿ ಉಲ್ಲೇಖಿಸಿರುವಂತೆ ಖಾತೆ ವಿವರಗಳಲ್ಲಿ ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಇಎಂಡಿಯನ್ನು ಠೇವಣಿ ಇಡಬೇಕು. (ಇ) ಇಎಂಡಿ ಮೊತ್ತವನ್ನು ಪಾವತಿಸಿದ ನಂತರ, ಉದ್ದೇಶಿತ ಬಿಡ್‌ದಾರರು ಮೇಲೆ ತಿಳಿಸಿದ ಕೆಳಗಿನ ದಾಖಲೆಗಳು/ವಿವರಗಳ ಪ್ರತಿಯನ್ನು **ದಿನಾಂಕ : 16.03.2026** ರಂದು ಅಥವಾ ಅದಕ್ಕೂ ಮೊದಲು **ಕೆನರಾ ಬ್ಯಾಂಕ್, ಎಆರ್‌ಎಂ–II ಶಾಖೆ, ಬೆಂಗಳೂರು** ಇಲ್ಲಿಗೆ ನೇರವಾಗಿ ಅಥವಾ ಇಮೇಲ್ ಮೂಲಕ ಸಲ್ಲಿಸಬೇಕು. (i) ಇಎಂಡಿ ಮೊತ್ತಕ್ಕೆ ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್, ಆರ್‌ಟಿಜಿಎಸ್/ಎನ್‌ಇಎಫ್‌ಟಿ ಸ್ವೀಕೃತಿ ರಸೀದಿ ಮೂಲಕ ಪಾವತಿಸಿದ್ದರೆ, ಯುಟಿಆರ್ ಸಂಖ್ಯೆಯೊಂದಿಗೆ ಪಾವತಿಸಬೇಕು. (ii) ಪ್ಯಾನ್ ಕಾರ್ಡ್, ಐಡಿ ಪ್ರೂಫ್ ಮತ್ತು ವಿಳಾಸ ಪ್ರೂಫ್‌ಗಳ ನಕಲು ಪ್ರತಿಗಳು. ಆದಾಗ್ಯೂ, ಯಶಸ್ವಿ ಬಿಡ್ಡಾರರು ಬಿಡ್ ಮೊತ್ತದ 25% ಬಾಕಿ ಮೊತ್ತವನ್ನು ಪಾವತಿಸುವ ಸಮಯದಲ್ಲಿ ಈ ಮೂಲ ದಾಖಲೆಗಳನ್ನು ಬ್ಯಾಂಕಿಗೆ ಹಾಜರುಪಡಿಸಬೇಕು. (iii) ಬಿಡ್ ಫಾರ್ಮ್ ಸಲ್ಲಿಸಬೇಕು. ಉದ್ದೇಶಿತ ಬಿಡ್ಡರ್‌ಗಳು ತಮ್ಮ ಹೆಸರುಗಳನ್ನು **https://baanknet.com/** ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ಸಂಭಾವ್ಯ ಬಿಡ್ಡರ್‌ಗಳು ಸೇವಾ ಪೂರೈಕೆದಾರರಾದ **M/s.PSB Alliance (Baanknet) - e- mail: support.BAANKNET@psballiance.com** ನಿಂದ ಇ–ಹರಾಜಿನ ಕುರಿತು ಆನ್‌ಲೈನ್ ತರಬೇತಿಯನ್ನು ಪಡೆಯಬಹುದು. ವಿಫಲ ಬಿಡ್ಡರ್‌ಗಳು ಠೇವಣಿ ಮಾಡಿದ ಇಎಂಡಿಯನ್ನು ಅವರಿಗೆ ಮರುಪಾವತಿಸಲಾಗುತ್ತದೆ. ಇಎಂಡಿ ಯಾವುದೇ ಬಡ್ಡಿಯನ್ನು ಹೊಂದಿರುವುದಿಲ್ಲ. **(ಎಫ್)** ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು **ರೂ. 1,00,000/–** ಗಳ ಗುಣಕಗಳಲ್ಲಿ ಸುಧಾರಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ನಂತರ ಅತಿ ಹೆಚ್ಚು ಬಿಡ್ (ಮೀಸಲು ಬೆಲೆಗಿಂತ ಕಡಿಮೆಯಿಲ್ಲದ) ಸಲ್ಲಿಸುವ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ಸುರಕ್ಷಿತ ಸಾಲದಾತರಿಂದ ದೃಢೀಕರಣಕ್ಕೆ ಒಳಪಟ್ಟು, ಯಶಸ್ವಿ ಬಿಡ್ಡರ್ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ. (ಜಿ) ಯಶಸ್ವಿಯಾದ ಟೆಂಡರುದಾರರು ಆತನ/ಆಕೆಯ ಪರವಾಗಿ ಟೆಂಡರ್ ತೀರ್ಮಾನದ ನಂತರ ಅದೇ ದಿನ ತಕ್ಷಣ ಮಾರಾಟ ಬೆಲೆಯ 25% ಮೊತ್ತವನ್ನು (ಈಗಾಗಲೇ ಪಾವತಿ ಮಾಡಿರುವ ಇಎಂಡಿ ಸೇರಿದಂತೆ) ಪಾವತಿ ಮಾಡಬೇಕು. ಬಾಕಿ ಹಣವನ್ನು ಮಾರಾಟ ದೃಢೀಕರಣವಾದ ದಿನಾಂಕದಿಂದ 15 ದಿನಗಳ ಒಳಗೆ ಪಾವತಿ ಮಾಡಬೇಕು. ಯಶಸ್ವಿಯಾದ ಟೆಂಡರುದಾರರು ಮೇಲೆ ತಿಳಿಸಿರುವಂತೆ ಮಾರಾಟ ಬೆಲೆ ಪಾವತಿಸಲು ವಿಫಲವಾದರೆ ಅವರು ಪಾವತಿ ಮಾಡಿರುವ ಠೇವಣಿ ಹಣವನ್ನು ಅಧಿಕೃತ ಅಧಿಕಾರಿ ಇವರಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಈ ಮೊತ್ತವನ್ನು ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆಯ ಅಧಿಕೃತ ಅಧಿಕಾರಿಯ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಠೇವಣಿ ಇಡಬೇಕು ಅಥವಾ RTGS / NEFT / ನಿಧಿ ವರ್ಗಾವಣೆಯ ಮೂಲಕ **ಕೆನರಾ ಬ್ಯಾಂಕ್, ಎಆರ್‌ಎಂ II ಶಾಖೆ, ಖಾತೆ ಸಂಖ್ಯೆ 209272434, ಐಎಫ್‌ಎಸ್‌ಸಿ ಕೋಡ್: CNRB0006298** ರ ಖಾತೆಗೆ ಜಮಾ ಮಾಡಬೇಕು. **(ಹೆಚ್) ರೂ.50 ಲಕ್ಷಗಳು (ಐವತ್ತು ಲಕ್ಷ ರೂಪಾಯಿಗಳು)** ಮತ್ತು ಅದಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕಾಗಿ, ಯಶಸ್ವಿ ಬಿಡ್‌ದಾರರು ಮಾರಾಟದ ಆದಾಯದ ಮೇಲೆ ದರದಲ್ಲಿ 1% ಟಿಡಿಎಸ್ ಅನ್ನು ಕಡಿತಗೊಳಿಸಬೇಕು ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಸೀದಿಯನ್ನು ಬ್ಯಾಂಕ್‌ಗೆ ಸಲ್ಲಿಸಬೇಕು. (ಐ) ಎಲ್ಲಾ ಕನ್ವೇಯನ್ಸ್, ಸ್ಟಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಷನ್ ಚಾರ್ಜ್‌ಗಳು ಎಲ್ಲಾ ಟ್ಯಾಕ್ಸ್‌ಗಳು, ಕಾನೂನು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಇತ್ಯಾದಿಯಂತಹ ಎಲ್ಲಾ ಇತರೆ ಬಾಕಿ ಖರ್ಚುಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕು. (ಜೆ) ಯಾವುದೇ ಕಾರಣವನ್ನು ನೀಡದೆ ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಅಧಿಕೃತ ಅಧಿಕಾರಿ ಕಾಯ್ದಿರಿಸಿಕೊಂಡಿದ್ದಾರೆ. (ಕೆ) ಒಂದು ವೇಳೆ ಬಿಡ್ಡುದಾರರು ಇಂಟರ್‌ನೆಟ್ ಸಂಪರ್ಕವನ್ನು ಹೊಂದಿರದವರು ಇ–ಹರಾಜಿನಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವವರು, ಅವರು ಸಂಬಂಧಪಟ್ಟ ಸರ್ಕಲ್ ಆಫೀಸ್ ಅಥವಾ **ಕೆನರಾ ಬ್ಯಾಂಕ್ ಎಆರ್‌ಎಂ–II ಶಾಖೆಯನ್ನು** ಸಂಪರ್ಕಿಸಬಹುದು, ಅವರು ಸುಗಮಗೊಳಿಸುವ ಕೇಂದ್ರವಾಗಿ ಅಗತ್ಯ ವ್ಯವಸ್ಥೆಗಳನ್ನು ಮಾಡುತ್ತಾರೆ. (ಎಲ್) ಬಿಡ್ಡುದಾರರು ಆಸ್ತಿಯ ಶೀರ್ಷಿಕೆ, ವ್ಯಾಪ್ತಿ, ಪ್ರದೇಶದ ಬಾಕಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸೂಕ್ತ ಭೌತಿಕ ಪರಿಶೀಲನೆಯನ್ನು ಮಾಡುವುದು. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ–II (9113092975, 8921102717, 9201460154, 9483544116, 8709675503 ಮತ್ತು 080–25310181) ಇ–ಮೇಲ್ ಐಡಿ–cb6298@canarabank.com ಅಥವಾ ಸೇವಾ ಪೂರೈಕೆದಾರರು M/s PSB Alliance Private Limited (Baanknet-ಇ–ಮೇಲ್: support.BAANKNET@psballiance.com

ವಿಶೇಷ ಸೂಚನೆ / ಎಚ್ಚರಿಕೆ:

ಕೊನೆಯ ನಿಮಿಷಗಳು/ಸೆಕೆಂಡುಗಳಲ್ಲಿ ಬಿಡ್ಡಿಂಗ್ ಅನ್ನು ತಮ್ಮ ಸ್ವಂತ ಆಸಕ್ತಿಯಿಂದ ಬಿಡ್‌ದಾರರು ತಪ್ಪಿಸಬೇಕು. ಅಂತಹ ಸಂದರ್ಭಗಳಲ್ಲಿ ಯಾವುದೇ ತೊಂದರೆ ಅಥವಾ ವೈಫಲ್ಯ (ಇಂಟರ್ನೆಟ್ ವೈಫಲ್ಯ, ವಿದ್ಯುಚ್ಛಕ್ತಿ ವೈಫಲ್ಯ, ಇತ್ಯಾದಿ) ಉಂಟಾದಲ್ಲಿ ಗುತ್ತಿಗೆದಾರರು ಅಥವಾ ಮಾರಾಟಗಾರರ ಭಾಗವಾಗಿ ಕೆನರಾ ಬ್ಯಾಂಕ್ ಅಥವಾ ಸೇವಾ ಪೂರೈಕೆದಾರರು ಜವಾಬ್ದಾರರಾಗಿರುವುದಿಲ್ಲ. ಅಂತಹ ಅನಿಶ್ಚಿತ ಪರಿಸ್ಥಿತಿಯನ್ನು ತಡೆಗಟ್ಟಲು, ವಿದ್ಯುತ್ ಸರಬರಾಜು ಮತ್ತು ಅಗತ್ಯವಿರುವ ಎಲ್ಲ ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಮಾಡಲು ಬಿಡ್‌ದಾರರನ್ನು ಕೋರಲಾಗುತ್ತದೆ. ಆದ್ದರಿಂದ ಅವರು ಇಂತಹ ಪರಿಸ್ಥಿತಿಯನ್ನು ತಪ್ಪಿಸಲು ಸಮರ್ಥರಾಗಿದ್ದಾರೆ ಮತ್ತು ಯಶಸ್ವಿಯಾಗಿ ಹರಾಜಿನಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ.

ದಿನಾಂಕ : 25.02.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

AEQUS
ecosystems of efficiency

ಏಕಸ್ ಅಮಿಟೆಡ್
(ಮೊದಲಿನ ಹೆಸರು ಏಕಸ್ ಪ್ರೈವೇಟ್ ಲಿಮಿಟೆಡ್)
ಸಿಐಎನ್ : L80302KA2000PLC026760
ನೋಂದಾಯಿತ ಕಛೇರಿ : ಏಕಸ್ ಟವರ್, ನಂ.55,
ವೈಟ್‌ಫೀಲ್ಡ್ ಮುಖ್ಯರಸ್ತೆ, ಮಹಾದೇವಪುರ ಅಂಚೆ, ಬೆಂಗಳೂರು–560048. ಕರ್ನಾಟಕ, ಭಾರತ.
ದೂರವಾಣಿ +91 080 61348000, ಇ–ಮೇಲ್ ಐಡಿ: Investor.relations@aequs.com

ಅಂಚೆ ಮತಪತ್ರದ ಬಗ್ಗೆ ಸೂಚನೆ

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕಂಪನಿಗಳ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 22 ಮತ್ತು 20 ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ವಿಧಿ 110 ಮತ್ತು 108 ಮತ್ತು ಯಾವುದೇ ಇದ್ದಲ್ಲಿ ಅಂತಹ ಅನ್ವಯವಾಗುವ ಉಪಬಂಧಗಳು, ("ನಿಯಮಗಳು"), ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಇತರೆ ಸಂಬಂಧಪಟ್ಟ ಸುತ್ತೋಲೆಗಳನ್ನು ಅದರಲ್ಲೂ ಇತ್ತೀಚಿನದಾದ 03/2025 ದಿನಾಂಕ ಸೆಪ್ಟಂಬರ್ 22, 2025 ಓದಿಕೊಂಡಂತೆ ಸಾಮಾನ್ಯ ಸುತ್ತೋಲೆ ಸಂಖ್ಯೆಗಳು: 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020, ('ಎಂಸಿಎ ಸುತ್ತೋಲೆಗಳು') ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ನಿಯಮಾವಳಿಗಳು) ನಿಭಂದನೆಗಳು 2015 ರ ನಿಬಂಧನೆ 44, ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯಿಂದ ಹೊರಡಿಸಲಾಗಿರುವ ಸಾಮಾನ್ಯ ಸಭೆಗಳ ಬಗೆಗಿನ ಸೆಕ್ರೇಟೆರಿಯಲ್ ಮಾನದಂಡಗಳು, ಮತ್ತು ಯಾವುದೇ ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳು ಅನ್ವಯ (ಪ್ರಸ್ತುತ ಸಮಯದಲ್ಲಿ ಜಾರಿಯಲ್ಲಿರುವ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರು ಕಾಯ್ದೆ ಜಾರಿ(ಗಳು) ಸೇರಿದಂತೆ), ಕೆಳಕಂಡ ವಿಶೇಷ ವ್ಯವಹಾರಗಳಿಗೆ ರಿಮೋಟ್ ಇ–ವೋಟಿಂಗ್ ("ಇ–ವೋಟಿಂಗ್") ಪ್ರಕ್ರಿಯೆ ರೂಪದಲ್ಲಿ ಏಕಸ್ ಲಿಮಿಟೆಡ್‌ನ ("ದಿ ಕಂಪನಿ") ಸದಸ್ಯರುಗಳ ಅನುಮೋದನೆಯನ್ನು ಕೋರಲಾಗಿದೆ.

ಐಟಂ ಸಂಖ್ಯೆ.	ನಿರ್ಣಯಗಳ ವಿವರ	ನಿರ್ಣಯದ ಸ್ವರೂಪ
1.	"ಏಕಸ್ ಎಂಪ್ಲಾಯೀಸ್ ಸ್ಟಾಕ್ ಆಪ್ಷನ್ ಪ್ಲಾನ್ 2025" ("ಈಸಾಪ್ 2025") ರ ಅನುಮೋದನೆ ಮತ್ತು ತಿದ್ದುಪಡಿ	ವಿಶೇಷ ಠರಾವು
2.	ಧಾರಕ ಕಂಪನಿ ಅಥವಾ ಕಂಪನಿಯ ಸಹಾಯಕ ಕಂಪನಿಗಳ ಉದ್ಯೋಗಿಗಳಿಗೆ ಏಕಸ್ ಎಂಪ್ಲಾಯೀಸ್ ಸ್ಟಾಕ್ ಆಪ್ಷನ್ ಪ್ಲಾನ್ 2025 ("ಈಸಾಪ್ 2025") ರ ಸೌಲಭ್ಯಗಳನ್ನು ನೀಡುವ ಬಗ್ಗೆ ಅನುಮೋದನೆ	ವಿಶೇಷ ಠರಾವು
3.	ಏಕಸ್ ಎಂಪ್ಲಾಯೀಸ್ ಸ್ಟಾಕ್ ಆಪ್ಷನ್ ಪ್ಲಾನ್ 2025 ("ಈಸಾಪ್ 2025") ಅನುಷ್ಠಾನಕ್ಕಾಗಿ ಟ್ರಸ್ಟ್ ಮಾರ್ಗದ ಮೂಲಕ ಷೇರುಗಳ ಸೆಕೆಂಡರಿ ಮಾರ್ಕೆಟ್ ಅಕ್ವಿಸಿಷನ್‌ಗಾಗಿ	ವಿಶೇಷ ಠರಾವು
4.	ಉದ್ಯೋಗಿಗಳ ಸೌಲಭ್ಯಕ್ಕಾಗಿ ಏಕಸ್ ಎಂಪ್ಲಾಯೀಸ್ ಸ್ಟಾಕ್ ಆಪ್ಷನ್ ಪ್ಲಾನ್‌ನಿಂದ ತನ್ನ ಸ್ವಂತ ಷೇರುಗಳನ್ನು ಖರೀದಿಸಲು ಕಂಪನಿಯಿಂದ ಸಾಲ ಸೌಲಭ್ಯ ಒದಗಿಸುವುದರ ಕುರಿತು ಅನುಮೋದನೆ	ವಿಶೇಷ ಠರಾವು
5.	ಷೇರುದಾರರ ಒಪ್ಪಂದ ಪತ್ರ ದಿನಾಂಕ 12ನೇ ಅಕ್ಟೋಬರ್ 2023 ಇದರ ತಿದ್ದುಪಡಿ ಮತ್ತು 12ನೇ ಮೇ 2025ರ ವಜಾಗೊಳಿಸುವಿಕೆ ಒಪ್ಪಂದ ಓದಿಕೊಂಡಂತೆ ಅದರ ಅನ್ವಯ ನಿರ್ದೇಶಕರನ್ನು ನಾಮ ನಿರ್ದೇಶನದ ಹಕ್ಕಿಗೆ ಅನುಮೋದನೆ	ವಿಶೇಷ ಠರಾವು
6.	ಕಂಪನಿಯ ನಿಯಮಾವಳಿಗಳ ಮಾರ್ಪಾಡಿಗಾಗಿ ಅನುಮೋದನೆ	ವಿಶೇಷ ಠರಾವು
7.	ಏಕಸ್ ಎಸ್‌ಇಜಡ್ ಪ್ರೈವೇಟ್ ಲಿಮಿಟೆಡ್ ಜೊತೆ ಕಂಪನಿ ಮತ್ತು ಇದರ ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿಗಳ ಸಂಬಂಧಿತ ವ್ಯಕ್ತಿಯ ಜೊತೆ ನಡೆಸುವ ಗಣನೀಯ ವ್ಯವಹಾರಗಳಿಗೆ ಅನುಮೋದನೆ	ಸಾಮಾನ್ಯ ಠರಾವು

ಇತರೆ ವಿಷಯಗಳು ಸೇರಿದಂತೆ ರಿಮೋಟ್ ಇ–ಮತದಾನದ ಪ್ರಕ್ರಿಯೆ ಮತ್ತು ಸ್ವರೂಪವನ್ನು ತಿಳಿಸಲ್ಪಟ್ಟಿರುವ ಸದರಿ ಅಂಚೆ ಮತ ಪತ್ರದ ನೋಟಿಸ್ ಅನ್ನು ("ನೋಟಿಸ್") ಎಂಸಿಎ ಸುತ್ತೋಲೆಗಳ ಅನುಸಾರ ಸದಸ್ಯರುಗಳ ರಿಜಿಸ್ಟರ್‌ನಲ್ಲಿ ಯಾರ ಹೆಸರುಗಳು ಇರುವುದೊ ಅಂತಹ ಸದಸ್ಯರುಗಳಿಗೆ ಡೆಪಾಜಿಟರಿ ರಿಂದ ಪಡೆದಿರುವ ಫಲಾನುಭವಿಗಳ ಪಟ್ಟಿಯಲ್ಲಿ 20ನೇ ಫೆಬ್ರವರಿ 2026ರ ಶುಕ್ರವಾರದಂದು ("ಕಟ್ ಆಫ್ ದಿನಾಂಕ") ಹೆಸರಿಸಿರುವ ಮತ್ತು ಕಂಪನಿಯಲ್ಲಿ/ಡಿಪಾಜಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸ ನೊಂದಾಯಿಸಿದ ಸದಸ್ಯರುಗಳಿಗೆ ದಿನಾಂಕ 25ನೇ ಫೆಬ್ರವರಿ 2026 ಬುಧವಾರದಂದು ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಲಾಗಿದೆ.

ಕಟ್ ಆಫ್ ದಿನಾಂಕದಂದು ಸದಸ್ಯರಾಗಿಲ್ಲದ ವ್ಯಕ್ತಿಯು ಸದರಿ ನೋಟಿಸ್ ಅನ್ನು ಕೇವಲ ಮಾಹಿತಿ ನೀಡುವ ಉದ್ದೇಶಗಳಿಗಾಗಿ ಕಳುಹಿಸಿರುವುದಾಗಿ ಭಾವಿಸಬೇಕು. ಎಂಸಿಎ ಸುತ್ತೋಲೆಗಳ ಮೂಲಕ ಮಂಜೂರು ಮಾಡಿರುವ ವಿನಾಯತಿ ಅನುಸಾರ ಸದರಿ ಅಂಚೆ ಮತ ಪತ್ರದ ಸಂಬಂಧ ಸದಸ್ಯರುಗಳಿಗೆ ಅಂಚೆ ಮತ ಪತ್ರದ ನೋಟಿಸ್ ಜೊತೆಗೆ ಅಂಚೆ ಮತ ಪತ್ರದ ಷೇರುಗಳು ಮತ್ತು ಪೂರ್ವ ಭಾವಿ ಬಿಸಿನೆಸ್ ಎನ್‌ವಲಪ್‌ಗಳ ಕಾಗದದ ಪ್ರತಿಗಳನ್ನು ಕಳುಸಿರುವುದಿಲ್ಲ. ಸದರಿ ಸದಸ್ಯರು ರಿಮೋಟ್ ಇ–ವೋಟಿಂಗ್ ವ್ಯವಸ್ಥೆ ಮೂಲಕ ಮಾತ್ರ ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸಬೇಕಾಗಿರುವುದು. ಕಂಪನಿಯು ತನ್ನ ಎಲ್ಲಾ ಸದಸ್ಯರುಗಳಿಗೆ ಇ–ವೋಟಿಂಗ್ ಸೌಲಭ್ಯ ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ("ಕೆಫಿನ್ ಟೆಕ್") ನ ಸೇವೆಗಳನ್ನು ನಿಯೋಜನೆ ಮಾಡಿದೆ. ಇ–ವೋಟಿಂಗ್ ಸೌಲಭ್ಯವು ಈ ಕೆಳಕಂಡ ಅವಧಿಯಲ್ಲಿ ಲಭ್ಯವಿರುವುದು.

ಇ–ವೋಟಿಂಗ್ ಅವಧಿ ಪ್ರಾರಂಭದ ದಿನಾಂಕ ಸಮಯ ಮತ್ತು ದಿನ	26ನೇ ಫೆಬ್ರವರಿ 2026 ರ ಗುರುವಾರ ಬೆಳಿಗ್ಗೆ 9–00 (IST)
ಇ–ವೋಟಿಂಗ್ ಅವಧಿ ಮುಕ್ತಾಯದ ದಿನಾಂಕ ಸಮಯ ಮತ್ತು ದಿನ	27ನೇ ಮಾರ್ಚ್ 2026 ರ ಶುಕ್ರವಾರ ಸಂಜೆ 5–00 (IST)

ದಿನಾಂಕ 27ನೇ ಮಾರ್ಚ್ 2026 ರ ಶುಕ್ರವಾರದಂದು ಸಂಜೆ 5–00ಗೆ ಇ–ವೋಟಿಂಗ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು. ತದನಂತರ ಮತದಾನ ಮಾಡಲು ಅವಕಾಶ ನೀಡುವುದಿಲ್ಲ. ಸದಸ್ಯರು ನಿರ್ಣಯಗಳ ಬಗ್ಗೆ ಒಮ್ಮೆ ಮತವನ್ನು ಚಲಾಯಿಸಿದ ನಂತರ ಬದಲಾವಣೆ ಮಾಡಲು ಅವಕಾಶ ನೀಡುವುದಿಲ್ಲ.

ಈ ಮತದಾನದ ಬಗ್ಗೆ ವಿವರವಾದ ಸೂಚನೆಗಳನ್ನು ನೋಟಿಸ್‌ನ ಭಾಗವಾಗಿ ಒದಗಿಸಲಾಗಿದೆ. ಸದಸ್ಯರು ಮತ ಚಲಾಯಿಸುವ ಮುನ್ನ ಇದನ್ನು ಜಾಗರೂಕತೆಯಿಂದ ಓದಿಕೊಳ್ಳಬೇಕಾಗಿ ಕೋರಲಾಗಿದೆ. ನೋಟಿಸ್ ಜೊತೆಗೆ ವಿವರಣಾತ್ಮಕ ಹೇಳಿಕೆಯನ್ನು ಕಂಪನಿ ವೆಬ್‌ಸೈಟ್ : https://www.aequs.com/investor/. ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ ಅನುಕ್ರಮವಾಗಿ ಬಿಎಸ್‌ಇ ಲಿಮಿಟೆಡ್, ("ಬಿಎಸ್‌ಇ") ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ("ಎನ್‌ಎಸ್‌ಇ") ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿ ಮತ್ತು ಕೆಫಿನ್ ಟೆಕ್‌ನ ವೆಬ್‌ಸೈಟ್ http://evoting.kfintech.com ರಲ್ಲಿಯೂ ಸಹ ದೊರೆಯುವುದು.

ಡಿಪಾಸಿಟರಿಸ್‌ನಲ್ಲಿ ಯಾವ ಸದಸ್ಯರುಗಳ ಇ–ಮೇಲ್ ಐಡಿಗಳು ನೋಂದಣಿಯಾಗಿರುವುದಿಲ್ಲವೋ ಅಂತಹವರ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಮತ್ತು ಸದರಿ ನೋಟೀಸಿನಲ್ಲಿ ತಿಳಿಸಿರುವ ಠರಾವುಗಳಿಗೆ ಇ–ಮತದಾನ ಮಾಡಲು ಇ–ಮೇಲ್ ಐಡಿಗಳ ನೋಂದಣಿ ಪ್ರಕ್ರಿಯೆಯು ಈ ಕೆಳಕಂಡಂತಿರುವುದು.

1. ಡಿಮ್ಯಾಟ್ ವಿಧಾನದಲ್ಲಿ ಹೊಂದಿರುವ ಷೇರುಗಳ ಬಗ್ಗೆ ಡಿಪಿಐಡಿ – ಕ್ಲೈಂಟ್ ಐಡಿ (16 ಅಂಕಿಗಳ ಡಿಪಿಐಡಿ + ಕ್ಲೈಂಟ್ ಐಡಿ ಅಥವಾ 16 ಅಂಕಿಗಳ ಫಲಾನುಭವಿಗಳ ಐಡಿ), ಹೆಸರು, ಕ್ರೂಢೀಕೃತ ಲೆಕ್ಕದ ವಿವರದ ಗ್ರಾಹಕರ ಮೂಲ ಪ್ರತಿ ಅಥವಾ ಪ್ಯಾನ್ (ಸ್ವಯಂ ಧೃಢೀಕೃತ ಸ್ಕ್ಯಾನ್ ಮಾಡಿದ ಪ್ಯಾನ್ ಕಾರ್ಡಿನ ಪ್ರತಿ), ಆಧಾರ್ (ಸ್ವಯಂ ಧೃಢೀಕೃತ ಸ್ಕ್ಯಾನ್ ಮಾಡಿದ ಆಧಾರ್ ಕಾರ್ಡಿನ ಪ್ರತಿ), ಅನ್ನು Investor.relations@aequs.com ಇಲ್ಲಿಗೆ ಒದಗಿಸುವಂತೆ ಕೋರಲಾಗಿದೆ.
2. ಪರ್ಯಾಯವಾಗಿ, ಸದಸ್ಯರು ಮೇಲೆ ತಿಳಿಸಿರುವ ದಾಖಲೆ ಪತ್ರಗಳನ್ನು ಒದಗಿಸುವ ಮೂಲಕ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಕೋರಿಕೆಯನ್ನು einward.ris@kfintech.com ಗೆ ಕಳುಹಿಸಬಹುದು.
3. ಹೆಸರು ಸೇರ್ಪಡೆಯಾಗಿರುವ ಕಂಪನಿಗಳು ಒದಗಿಸಿರುವ ಇ–ಮತದಾನದ ಸೌಲಭ್ಯದ ಬಗ್ಗೆ ದಿನಾಂಕ 9ನೇ ಡಿಸಂಬರ್ 2020ರ ಸೆಬಿ ಸುತ್ತೋಲೆಯ ಅನ್ವಯ ಡಿಮ್ಯಾಟ್ ವಿಧಾನದಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ಪ್ರತಿ ಷೇರುದಾರರು ಡಿಪಾಸಿಟರೀಸ್ ಮತ್ತು ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಲ್ಲಿ ನಿರ್ವಹಣೆ ಮಾಡಿರುವ ತಮ್ಮ ಡಿಮ್ಯಾಟ್ ಖಾತೆ ಮೂಲಕ ಮತ ಹಾಕಲು ಅವಕಾಶವಿರುವುದು. ಷೇರುದಾರರು ಇ–ಮತದಾನದ ಸೌಲಭ್ಯ ಪಡೆಯಲು ತಮ್ಮ ಡಿಮ್ಯಾಟ್ ಖಾತೆಯಲ್ಲಿ ಅವರ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ಸರಿಯಾಗಿ ಸಕ್ರಿಯಗೊಳಿಸಬೇಕಾಗುತ್ತದೆ.

ರಿಮೋಟ್ ಇ–ವೋಟಿಂಗ್ ಸೌಲಭ್ಯದ ಬಗ್ಗೆ ಯಾವುದೇ ವಿಚಾರಣೆಗಳು/ಕುಂದುಕೊರತೆಗಳು/ವಿಚಾರಗಳು ಇದ್ದಲ್ಲಿ https://evoting.kfintech.com ನ "ಡೌನ್‌ಲೋಡ್ಸ್" ವಿಭಾಗದಲ್ಲಿ ದೊರೆಯುವ ಸಾಮಾನ್ಯ ಪ್ರಶ್ನೆಗಳು **(Frequently Ask Questions)** (ಎಫ್‌ಎಕ್ಯೂಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ಸದಸ್ಯರು ನೋಡಬಹುದು ಅಥವಾ ಶ್ರೀ ಎಸ್. ಪ್ರಸಾದ್ ರವರನ್ನು evoting@kfintech.com ನಲ್ಲಿ ಸಂಪರ್ಕಿಸಬಹುದು. ಅಥವಾ ಕೆಫಿನ್ ಟೆಕ್‌ನ ಉಚಿತ ಸಂ. 1–800–209–4001 ಗೆ ಕರೆ ಮಾಡಬಹುದು.

ಅಂಚೆ ಮತಪತ್ರಗಳ ಮೂಲಕ ನಡೆದ ಇ–ಮತದಾನದ ಫಲಿತಾಂಶವನ್ನು ಈ ಮತದಾನ ಮುಕ್ತಾಯವಾದ ಅವಧಿಯಿಂದ ಅಂದರೆ ದಿನಾಂಕ 27ನೇ ಮಾರ್ಚ್ 2026 ರ ಶುಕ್ರವಾರದಿಂದ 02 (ಎರಡು) ದಿನಗಳ ಒಳಗೆ ಪ್ರಕಟಿಸಲಾಗುವುದು. ಫಲಿತಾಂಶಗಳ ಜೊತೆಗೆ ಪರಿಶೀಲಕರ ವರದಿಯನ್ನು ಕಂಪನಿಯ ವೆಬ್‌ಸೈಟ್ https://www.aequs.com/investor/. ರಲ್ಲಿ ಪ್ರಕಟಿಸಲಾಗುವುದು. ಠರಾವುಗಳು ಅಗತ್ಯವಾದ ಬಹುಮತದಿಂದ ಅಂಗೀಕಾರವಾದ ಪಕ್ಷದಲ್ಲಿ ಅದನ್ನು ದಿನಾಂಕ 27ನೇ ಮಾರ್ಚ್ 2026ರ ಶುಕ್ರವಾರದಂದು ಅಂಗೀಕರಿಸಿರುವುದಾಗಿ ಭಾವಿಸಲಾಗುವುದು.

ದಿನಾಂಕ 26ನೇ ಫೆಬ್ರವರಿ 2026
ಸ್ಥಳ : ಹತ್ತರಗಿ

ತಮ್ಮ ವಿಶ್ವಾಸಿ,
ಏಕಸ್ ಲಿಮಿಟೆಡ್ ಪರವಾಗಿ
ಸಹಿ/–
ರವಿ ಮಲ್ಲಿಕಾರ್ಜುನ ಹೂಗಾರ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ.: A20823

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನರಸಮ್ಮ ಕೋಂ ರಾಜೇಂದ್ರ ಪ್ರಸಾದ್ ರವರ ಮಾಲೀಕತ್ವದ ಸ್ವತ್ತಾದ ಇದೇ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ಮಾಲೂರು ಟೌನ್ ವೆಂಕಟೇಶ್ವರ ಬಡಾವಣೆ ರಲ್ಲಿರುವ ಖಾತೆ ಸಂಖ್ಯೆ 8300/7168/73, ಸೈಟ್ ಸಂಖ್ಯೆ 73 ರ ವಿಸ್ತೀರ್ಣ:– ಪೂರ್ವ–ಪಶ್ಚಿಮ 40 ಅಡಿಗಳು ಮತ್ತು ಉತ್ತರ–ದಕ್ಷಿಣ 16+15/2 ಅಡಿಗಳ ಸ್ವತ್ತಿಗೆ ಚಕ್ಕುಬಂಧಿ ಪೂರ್ವಕ್ಕೆ :ಸೈಟ್ ನಂ. 96, ಪಶ್ಚಿಮ 20 ಅಡಿ ರಸ್ತೆ, ಉತ್ತರ–ಖಾಸಗಿ ಆಸ್ತಿ, ದಕ್ಷಿಣ ಸೈಟ್ ಸಂಖ್ಯೆ 74 ರ ಶುದ್ಧ ಕ್ರಯ ಪತ್ರದ ದಾಖಲೆ ಸಂಖ್ಯೆ 04804 2012–13 ಮತ್ತು ಸಿಡಿ ಸಂಖ್ಯೆ ಒಐಖಿಅ 82 ದಿನಾಂಕ:– 19 ನವೆಂಬರ್ 2012 ರನ್ನು ಶ್ರೀಮತಿ ಅಮರಾವತಿ ಕೋಂ ವಿ.ಆರ್. ನಾರಾಯಣಪ್ಪ ಅವರಿಂದ ನರಸಮ್ಮ ಕೋಂ ರಾಜೇಂದ್ರ ಪ್ರಸಾದ್ ಆದ ನನಗೆ ಬರೆದುಕೊಟ್ಟಿದ್ದು, ಸದರಿ ಮೂಲ ದಾಖಲೆ ಪತ್ರ ಕಳೆದುಹೋಗಿರುತ್ತದೆ. ಹಾಗೂ ನಾನು ಮೂಲ ದಾಖಲೆಗಳನ್ನು ಹುಡುಕಲು ಆಗುತ್ತಿಲ್ಲ.

ಮೇಲೆ ತಿಳಿಸಿದ ಮೂಲ ದಾಖಲೆಯನ್ನು ಹೊಂದಿರುವ ಯಾವುದೇ ವ್ಯಕ್ತಿ/ಗಳು ಮೇಲೆ ತಿಳಿಸಿದ ದಾಖಲೆಗಳ ಆಸ್ತಿಯನ್ನು ಖರೀದಿಸುವ ವ್ಯಕ್ತಿಗೆ ಅದನ್ನು ಹಿಂತಿರುಗಿಸಬಹುದು. ಯಾವುದೇ ವ್ಯಕ್ತಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಸಹಕಾರಿ ಸಂಘದ ನಿಯಮಗಳಿಂದ ನಿಯಂತ್ರಿಸಲ್ಪಡುವ ಯಾವುದೇ ಹಣಕಾಸು ಸಂಸ್ಥೆಯ ವಿರುದ್ಧ ಯಾರಾದರೂ ಹಕ್ಕು ಹೊಂದಿದ್ದರೆ, ಈ ದಿನದಿಂದ 07 ದಿನಗಳಲ್ಲಿ ಕೆಳಗೆ ಉಲ್ಲೇಖಿಸಲಾದ ವಕೀಲರಿಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬಹುದು.

ಚಾಕನಹಳ್ಳಿ ಗ್ರಾಮ, ಅರಳೇರಿ ಪೋಸ್ಟ್, ಮಾಲೂರು ಕಸಬಾ ಹೋಬಳಿ, ಕೋಲಾರ ಜಿಲ್ಲೆ, ಪಿನ್ ಕೋಡ್ 563130.
+91 90363 27404 Narasamma

IN THE COURT OF THE HON'BLE IX ADDITIONAL CITY CIVIL AND SESSIONS JUDGE AT BENGALURU (CCH-5)

O.S. No. 8148 OF 2024

BETWEEN : State Bank of India, Retail Assets Central Processing Centre (RACPC), Branch Code 18994 at Sy.No. 5/1, "Prestige Star" Next to Mother Dairy, Yelahanka, BENGALURU - 560064. Rept., by its Chief Manager, Mr. Amrendra ...**PLAINTIFF**

AND : Mr. LAVA KUMAR I C ...DEFENDANT

Notice to the Defendant Under Order V Rule 20(1-A) OF CPC:

To: Mr. Lava Kumar I C, S/o. Muthanna Cheeyana, Aged about 53 years. No. 2121/Q ST Cross, T. Dasarahalli, Bangalore-560057.

The plaintiff has instituted the above suit against you for the recovery of a total Sum of Rs.4,58,117/- (Rupees Four Lakhs Fifty-Eight Thousand One Hundred Seventeen Only) as on 03.09.2024 along with Court costs and interest at 8.1% P.A. there on till its realization. Therefore, you are hereby summoned to appear before this Hon'ble Court either in person or through a duly instructed advocate **on 23.04.2026 at 11.00 A.M.** to answer the claim of the plaintiff on your failure to appear before the Hon'ble Court on the aforesaid date the case will be decided EXPARTE. Given under my hand and seal of the Court on 19.02.2026, Bengaluru.

By Order of the Court, Senior Sheristedar, City Civil Court, Bengaluru.

Advocate for Plaintiff: **Mr. G.M. RUDRASWAMY,**
Office at No.27, Akshya Complex,
2nd Cross, First Floor, Nagappa Street,
Palace Guttahalli, BENGALURU - 560 003.
Phone : 99868 33635

IN THE COURT OF THE HON'BLE ADDITIONAL SENIOR CIVIL JUDGE AT MAGADI

MVC.No. 185/2023

PETITIONERS: Sri. Nagarajaiah and others. **-V/s-**

RESPONDENTS: Sri. Syed Gafoor and another

NOTICE/SUMMONS TO THE RESPONDENT NO. 1

1. Sri. Syed Gafoor, S/o Syed Masthana, aged major, residing at Devanga street, 1st cross, K.P. Mohalla, Chamarajanagara district-571313

Where the above named petitioners have filed the above petition for Motor vehicle accident claim and other reliefs against you and another in MVC No. 185/2023 on the file of additional senior civil judge at Magadi and the case is pending for steps. The summons/ notice issued through court as well as RPAD have been returned as un-served.

The above matter has been posted to **04-04-2026.**

Take notice/summons and to appear before the Hon'ble court Magadi on 11:00 A.M on the above mentioned dated and time either personally or through counsel and to file objection if any. If you fail to appear before the court the case will be decided exparte. Issued as per the orders of this Hon'ble court on this day 20-02-2026 with seal of this Hon'ble court.

By order of the Court, Sheristder, Senior Civil Judge & JMFC Court, Magadi.

SRI. M NAGESHA, Advocate
Hosapete road, Magadi Town,
Bangalore South District.

PUBLIC NOTICE

Public are hereby informed that, my clients intends to purchase the Schedule Property from **Mr. H. VASUDEV,** Son of Mr. Hukamchand, Aged about 76 Years and **Mrs. ASMITHA SANTOSH** W/o Santosh Kumar, Aged about 45 Years, Residing at No.1001, "A" Wing Sheddar, Godrej Woodshan Estate, Bellary Road, Hebbal, Bengaluru 560024.

Persons objecting for the proposed purchase or having any right in the below mentioned property may lodge their objection/s and/or claim/s with the undersigned along with supporting documentary evidence **within Seven Days** from the date of this publication and objections and/or claim/s received thereafter will not be binding on my client and my client or his nominees will proceed to purchase the below mentioned property as if there are no claims/ objections.

SCHEDULE PROPERTY

All that piece and parcel of Immoveable Property of the House Site bearing **House List No. 40 & 41,** Katha No. 182A, **PID No. 100-445-4,** formed in Survey No. 39, situated at Geddalahalli Village, Kasaba Hobli, Previous Corporation Ward No. 100, New Ward No. 19, **Near K.E.B Layout, Ashwathnagar, 1st Main Road, Geddalahalli, Bengaluru** measuring to an extent **East to West: 40 x 37 /2 Feet and North to South: 12.2 x 11.3/2 Feet, totally measuring 1480 Square Feet (137.5 Square Meters) with 10 Squares of Residential Building,** and bounded on as follows:
East by: Main Road; **West by:** Conservancy;
North by: Road; **South by:** Property No. 39;

Ravi H.S
HSR Vakils, Advocates
No. 477, 2nd Floor, 12th Cross,
Wilson Garden, Bengaluru-560 027.
Mob: 9886677303 / 9035077303
Place: Bengaluru Date: 26.02.2026

ಸಮಾಚಾರ ಸಣ್ಣದಲ್ಲ

ಅಧಿಕೃತ ಪ್ಯಾಕ್ಸ್ ಸಿಲಿಕಾ ಘೋಷಣೆಗೆ ಸಹಿ

ಬೆಂಗಳೂರು: ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರ ನೇತೃತ್ವದಲ್ಲಿ 'ಎಐ ಇಂಪ್ಯಾಕ್ಟ್ ಸಮಿಟ್'ನಲ್ಲಿ ಭಾರತವು ಅಧಿಕೃತವಾಗಿ ಪ್ಯಾಕ್ಸ್ ಸಿಲಿಕಾ ಘೋಷಣೆಗೆ ಸಹಿ ಹಾಕಿದೆ. ಪ್ಯಾಕ್ಸ್ ಸಿಲಿಕಾ ಎಂಬುದು ವಿಶ್ವದ ಒಂದು ಹೊಸ ಕಾರ್ಯತಂತ್ರದ ಚೌಕಟ್ಟನ್ನು ಪ್ರತಿನಿಧಿಸುತ್ತದೆ. ಇಲ್ಲಿ ಸೆಮಿಕಂಡಕ್ಟರ್‌ಗಳು, ನಿರ್ಣಾಯಕ ಖನಿಜಗಳು ಮತ್ತು ಎಐ ಮೂಲಸೌಕರ್ಯಗಳಲ್ಲಿನ ಸಹಕಾರವು ತಂತ್ರಜ್ಞಾನದ ಮೇಲಿನ ಸಂಘರ್ಷಗಳನ್ನು ಭರ್ತಿ ಮಾಡುತ್ತದೆ. 20ನೇ ಶತಮಾನದಲ್ಲಿ ಜಾಗತಿಕ ಸ್ಥಿರತೆಯು ಇಂಧನ ಮತ್ತು ತೈಲದಿಂದ ರೂಪಿಸಲ್ಪಟ್ಟಿದ್ದರೆ, 21ನೇ ಶತಮಾನದಲ್ಲಿ ಅದು ಸಿಲಿಕಾನ್, ಡೇಟಾ ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಳಿಗಳಿಂದ ರೂಪಿಸಲ್ಪಡುತ್ತದೆ. ಯಾವುದೇ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವು ಚಿಪ್‌ಗಳು ಮತ್ತು ಕಂಪ್ಯೂಟಿಂಗ್‌ನ ಜಾಗತಿಕ ಹರಿವಿಗೆ ಅಡ್ಡಿಪಡಿಸದಂತೆ, ಚೇತರಿಸಿಕೊಳ್ಳುವ, ಪ್ರಜಾಪ್ರಭುತ್ವವಾದಿ ಮತ್ತು ವೈವಿಧ್ಯಮಯ ತಂತ್ರಜ್ಞಾನ ಪರಿಸರ ವ್ಯವಸ್ಥೆ ನಿರ್ಮಿಸುವುದು ಪ್ಯಾಕ್ಸ್ ಸಿಲಿಕಾದ ಗುರಿಯಾಗಿದೆ ಎಂದು ತಿಳಿಸಿದೆ. ತಂತ್ರಜ್ಞಾನದ ಭವಿಷ್ಯವು ವಿಶ್ವಾಸಾರ್ಹ ಪಾಲುದಾರಿಕೆಗಳ ಮೇಲೆ ನಿರ್ಮಿಸಲ್ಪಡುತ್ತದೆ. ಪ್ಯಾಕ್ಸ್ ಸಿಲಿಕಾವು ಭಾರತಕ್ಕೆ ತನ್ನ ಪ್ರತಿಭೆಯ ನಾಯಕತ್ವವನ್ನು ತಂತ್ರಜ್ಞಾನ ಮತ್ತು ಉತ್ಪಾದನಾ ನಾಯಕತ್ವವನ್ನಾಗಿ ಪರಿವರ್ತಿಸಲು ಒಂದು ದೊಡ್ಡ ಅವಕಾಶವನ್ನು ನೀಡುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಶಿರಸಿ ಮಾರಿಕಾಂಬಾ ಜಾತ್ರೆಗೆ ವಿಶೇಷ ರೈಲು

ಬೆಂಗಳೂರು: ಶಿರಸಿಯ ಮಾರಿಕಾಂಬಾ ದೇವಿ ಜಾತ್ರಾ ಮಹೋತ್ಸವದ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿಯಂತ್ರಿಸಲು ಯಶವಂತಪುರ ಮತ್ತು ತಾಳಗುಪ್ಪ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ. ರೈಲು (06587) ಫೆ.27ರಂದು ರಾತ್ರಿ 10.45ಕ್ಕೆ ಯಶವಂತಪುರದಿಂದ ಹೊರಟು ಮರುದಿನ ಬೆಳಿಗ್ಗೆ 5.05ಕ್ಕೆ ತಾಳಗುಪ್ಪ ತಲುಪಲಿದೆ. ರೈಲು (06588) ಫೆ.28ರಂದು ಬೆಳಿಗ್ಗೆ 9.30ಕ್ಕೆ ತಾಳಗುಪ್ಪದಿಂದ ಹೊರಟು, ಅದೇ ದಿನ ಸಂಜೆ 5.15ಕ್ಕೆ ಯಶವಂತಪುರ ಸೇರಲಿದೆ. ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು ಜಂಕ್ಷನ್, ತರೀಕೆರೆ, ಭದ್ರಾವತಿ, ಶಿವಮೊಗ್ಗ ಟೌನ್, ಕೊನಗವಳ್ಳಿ, ಹಾರನಹಳ್ಳಿ, ಕುಂಸಿ, ಅರಸಾಳು, ಕೆಂಚನಾಳು, ಆನಂದಪುರಂ, ಅಡ್ಡೇರಿ ಮತ್ತು ಸಾಗರ ಜಂಬಗಾರು ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ಪ್ಯಾರಾಮಿಲಿಟರಿ ಪಡೆಗಳಲ್ಲಿ ಹುದ್ದೆ

ಬೆಂಗಳೂರು: ದೇಶದ ಪ್ಯಾರಾ ಮಿಲಿಟರಿ ಪಡೆಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಬೇಕು ಎಂದು ಕನಸು ಕಟ್ಟಿಕೊಂಡಿರುವ ಯುವಕಯುವತಿಯರಿಗೆ ಮತ್ತೊಂದು ಅವಕಾಶ ಒದಗಿ ಬಂದಿದೆ. ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಕೇಂದ್ರ ಗೃಹ ಇಲಾಖೆಯ ಅಂಗ ಸಂಸ್ಥೆಯಾದ ಕೇಂದ್ರಿಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) ವಿವಿಧ ಘಟಕಗಳಲ್ಲಿ ಖಾಲಿ ಇರುವ 349 ಅಸಿಸ್ಟೆಂಟ್ ಕಮಾಂಡೆಂಟ್ ಗ್ರೂಪ್ ಎ ಹುದ್ದೆಗಳ ಭರ್ತಿಗೆ ನೇಮಕಾತಿ ಪರೀಕ್ಷೆ ನಡೆಸುತ್ತಿದೆ. ಆನ್‌ಲೈನ್ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಇದೇ ಫೆಬ್ರುವರಿ 20 ರಿಂದ ಆರಂಭವಾಗಿದ್ದು, ಮಾರ್ಚ್ 12 ಅರ್ಜಿ ಸಲ್ಲಿಸಲು ಕಡೆಯ ದಿನ. ದೇಶದ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯಗಳಿಂದ ಯಾವುದೇ ಪದವಿ ಪಾಸಾದ ಅದಕ್ಕೆ ತತ್ಸಮಾನವಾದ ಶೈಕ್ಷಣಿಕ ಅರ್ಹತೆ ಹೊಂದಿರುವ ಯುವಕಯುವತಿಯರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಕನಿಷ್ಠ 20 ವರ್ಷ ವಯಸ್ಸು ಪೂರೈಸಿರಬೇಕು. ಗರಿಷ್ಠ 25. ಮೀಸಲು ವರ್ಗದವರಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ. ಅರ್ಜಿ ಶುಲ್ಕ 200. ಎಸ್‌ಸಿ/ಎಸ್‌ಟಿ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. ಲಿಖಿತ ಪರೀಕ್ಷೆ, ದೈಹಿಕ ಸಾಮರ್ಥ್ಯ ಪರೀಕ್ಷೆ, ವೈದ್ಯಕೀಯ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ನೇಮಕಾತಿ ನಡೆಯಲಿದೆ. ಕೇಂದ್ರ ಸರ್ಕಾರದ ಗ್ರೂಪ್ ಎ ಹಂತದ ವೇತನ ಶ್ರೇಣಿ ಇರಲಿದೆ.

ಇಂದು ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ನಗರದ ವಿವಿಧ ಬಡಾವಣೆಗಳಲ್ಲಿ ಫೆ.26ರ ಬೆಳಿಗ್ಗೆ 6ರಿಂದ ಫೆ.27ರ ಬೆಳಗ್ಗೆ 6ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಂಗಳೂರು ಜಲಮಂಡಳಿ ತಿಳಿಸಿದೆ. ಮಂಡಳಿ ವತಿಯಿಂದ ಕಾವೇರಿ ಐದನೇ ಹಂತದ ಗೊಟ್ಟಿಗೆರೆ ಜಲಸಂಗ್ರಹಗಾರದ ಸಮೀಪ ಇಎಂಎಫ್ ಮೀಟರ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಆದ್ದರಿಂದ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ನಾಗರಿಕರು ಮುಂಜಾಗ್ರತೆಯಾಗಿ ನೀರನ್ನು ಸಂಗ್ರಹಣೆ ಮಾಡಿಕೊಳ್ಳಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ನೀರು ಪೂರೈಕೆಯಲ್ಲಿ ವ್ಯತ್ಯಯವಾಗುವ ಪ್ರದೇಶಗಳು: ವೈಟ್‌ಫೀಲ್ಡ್, ನೆಲ್ಲೂರಹಳ್ಳಿ, ಸಿದ್ದಾಪುರ, ನಾಗೊಂಡನಹಳ್ಳಿ, ರಾಮಗೊಂಡನಹಳ್ಳಿ, ಚನ್ನಸಂದ್ರ, ಹೂಡಿ, ಗರುಡಾಚಾರ್ ಪಾಳ್ಯ, ದೊಡ್ಡನೆಕ್ಕುಂದಿ, ಮುನ್ನೇನಕೊಳಾಲು, ಕುಮಾರಸ್ವಾಮಿ ಬಡಾವಣೆ, ಪೂರ್ಣಪ್ರಜ್ಞ ಲೇಔಟ್, ಬನಶಂಕರಿ, ಕೊಲ್ಲಹಳ್ಳಿ, ಅಂಜನಾಪುರ, ಗೊಟ್ಟಿಗೆರೆ, ಬೇಗೂರು, ಕೋಡಿಚಿಕ್ಕನಹಳ್ಳಿ, ಕೂಡ್ಲು, ಕಾಡುಗೋಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

{ - ಡಿ.ಕೆ.ಶಿವಕುಮಾರ್ } ಡಿಸಿಎಂ

ಬೆಂಗಳೂರಿನ ರಸ್ತೆ ಅಭಿವೃದ್ಧಿಗೆ ನಮ್ಮ ಸರಕಾರ 5,065 ಕೋಟಿ ರು.ವೆಚ್ಚ ಮಾಡುತ್ತಿದ್ದು, ಸಿಎಂ 2 ಸಾವಿರ ಕೋಟಿ ಅನುದಾನ ನೀಡಿದ್ದಾರೆ. 75% ಕಾಮಗಾರಿಗಳು ಮುಕ್ತಾಯವಾಗಿದ್ದು, ಏಪ್ರಿಲ್ ತಿಂಗಳಾಂತ್ಯದ ವೇಳೆಗೆ ಎಲ್ಲವೂ ಮುಕ್ತಾಯಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಕಾಮಗಾರಿಯ ಗುಣಮಟ್ಟದಲ್ಲಿ ರಾಜಿಯಾಗಬಾರದು.

ಹಿಮೋಫಿಲಿಯ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆಗೆ ಡಿಸಿಎಂ ಡಿಕೆಶಿ ಚಾಲನೆ

ರೋಗಿಗಳು ಆತ್ಮವಿಶ್ವಾಸ ಕಳೆದುಕೊಳ್ಳದಿರಿ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಹಿಮೋಫಿಲಿಯಾ ಹಾಗೂ ಇತರೆ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳೊಂದಿಗೆ ಕಾಂಗ್ರೆಸ್ ಸರಕಾರ ನಿಲ್ಲುತ್ತದೆ. ಹಣದ ಬಗ್ಗೆ ಚಿಂತೆ ಮಾಡಬೇಡಿ. ಆದರೆ ಯಾರೂ ತಮ್ಮ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಕುಸುಮ ಸಂಜೀವಿನಿ' ಹಿಮೋಫಿಲಿಯ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತಿತರರು ಇದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 'ಕುಸುಮ ಸಂಜೀವಿನಿ' ಹಿಮೋಫಿಲಿಯ ರೋಗಿಗಳಿಗೆ ರೋಗ ನಿರೋಧಕ ಚಿಕಿತೆಗೆ ಚಾಲನೆ ನೀಡಿ ಮಾತನಾಡಿದ ಅವರು, ಒಬ್ಬ ರೋಗಿಗೆ ಚುಚ್ಚುಮದ್ದು ನೀಡಲು ವರ್ಷಕ್ಕೆ ಐದು ಲಕ್ಷ ಖರ್ಚಾಗಲಿದೆ. ಹಿಮೋಫಿಲಿಯಾದಂತಹ ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಬದುಕಿನಲ್ಲಿ ಭರವಸೆ ಮೂಡಿಸಬೇಕು, ಅವರ ಬದುಕಿಗೆ ಶಕ್ತಿ ತುಂಬಬೇಕು ಎಂದು ನಮ್ಮ ಸರಕಾರ ಹೊರಟಿದೆ. ಇಡೀ ದೇಶದಲ್ಲಿ ಮೊದಲ ಬಾರಿಗೆ ನಮ್ಮ ಸರಕಾರ ಸಹಾಯಹಸ್ತ ಚಾಚಿದೆ ಎಂದರು.

ಈ ರೋಗ ಬಂದ ತಕ್ಷಣ ಭವಿಷ್ಯವೇ ಇಲ್ಲ ಎಂದು ಭರವಸೆ ಕಳೆದುಕೊಳ್ಳಬಾರದು. ಮಕ್ಕಳು, ತಂದೆ-ತಾಯಂದಿರ ಜತೆಗೆ ನಾವಿದ್ದೇವೆ. ಇಷ್ಟೊಂದು ಹಣ ಹೊಂದಿಸಲು ಎಲ್ಲರಿಗೂ ಸಾಧ್ಯವಿಲ್ಲ. ಆದ ಕಾರಣ ನಾವು ನಿಮ್ಮ ಜತೆಯಾಗಿದ್ದೇವೆ. ಯಾವುದೇ ರೋಗ ಆಗಿರಬಹುದು ಬಯಸಿ ಬರುವಂತಹದ್ದಲ್ಲ. ಮುಗ್ಧ ಮಕ್ಕಳು ಇದರಿಂದ ಬಳಲುತ್ತಿದ್ದಾರೆ.

ಪ್ರಕೃತಿ ನಿಯಮ ಎಂದೂ ಹೇಳಬಹುದು. ಇಲ್ಲಿ ತಂದೆ ತಾಯಿ, ಮಕ್ಕಳದ್ದು ಸೇರಿದಂತೆ ಯಾರದ್ದೂ ತಪ್ಪಿಲ್ಲ, ಇದನ್ನು ನಾವು ಸ್ವೀಕರಿಸಲೇಬೇಕು ಎಂದರು.

ನಮ್ಮ ಆರೋಗ್ಯ ಇಲಾಖೆ ಇಡೀ ದೇಶದಲ್ಲಿಯೇ ಕ್ರಾಂತಿ ಮಾಡುತ್ತಿದೆ. ದಿನೇಶ್ ಅವರು ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಜನರು ಎದ್ದುನಿಂತು ಚಪ್ಪಾಳೆ ಹೊಡೆಯಬೇಡಿ ಬದಲಾಗಿ, ಮತ್ತೆ ಇದೇ ಸರಕಾರ ಅಧಿಕಾರಕ್ಕೆ ಬರಲಿ ಎಂದು ಆಶೀರ್ವದಿಸಿ. ಆಗ ಇನ್ನೂ ಹೆಚ್ಚಿನ ಸೇವೆ ಮಾಡುತ್ತೇವೆ. ಸರಕಾರವೇ ರೋಗಿಗಳ ನೋವಿಗೆ ಜತೆಯಾಗಬೇಕು ಎಂದು ದಿನೇಶ್ ಗುಂಡೂರಾವ್ ಅವರು ಸಂಪುಟದಲ್ಲಿ ಈ ವಿಚಾರ ಮಂಡಿಸಿ ಸಹಾಯಕ್ಕೆ ನಿಂತಿದ್ದಾರೆ. ಇದಕ್ಕೆ ಬೆನ್ನೆಲುಬಾಗಿ ವೈದ್ಯಕೀಯ ಶಿಕ್ಷಣ ಸಚಿವರಾದ ಶರಣಪ್ರಕಾಶ್ ಪಾಟೀಲ್ ಅವರು ಜತೆಯಾಗಿದ್ದಾರೆ ಎಂದರು.

ರಾಜ್ಯದಿಂದ ಪ್ರತಿವರ್ಷ 13,940 ವೈದ್ಯರು:

ನಮ್ಮ ರಾಜ್ಯದಿಂದ ಪ್ರತಿವರ್ಷ 13,940 ವೈದ್ಯರು ತಯಾರಾಗುತ್ತಿದ್ದಾರೆ. ಸುಮಾರು 3 ಸಾವಿರ ವೈದ್ಯರು ಎಂಡಿ ಪದವಿ ಪಡೆಯುತ್ತಿದ್ದಾರೆ. 70 ಮೆಡಿಕಲ್ ಕಾಲೇಜು ಹೊಂದಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮೆಡಿಕಲ್ ಕಾಲೇಜುಗಳಿವೆ.

ಸುಮಾರು 1 ಲಕ್ಷ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರತಿವರ್ಷ ಸೇವೆಗೆ ಸಜ್ಜಾಗುತ್ತಿದ್ದಾರೆ. ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ಉಪಸಮಿತಿಯ ಅಧ್ಯಕ್ಷನಾಗಿದ್ದೆ. ಆಗ ಕೇಳಿದ ಎಲ್ಲರಿಗೂ ಅನುಮತಿ ನೀಡಲಾಯಿತು. ಅಂದು ಮಾಡಿದ ತೀರ್ಮಾನ ಇಂದು ಫಲ ಕಾಣುತ್ತಿದೆ. ಅಸ್ಸಾಂ, ಕೇರಳ ಸೇರಿದಂತೆ ದೇಶದ ಅನೇಕ ಭಾಗಗಳ ವಿದ್ಯಾರ್ಥಿಗಳು ಇಲ್ಲಿ ತರಬೇತಿ ಪಡೆದು ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.

ಮಾನವನ ಸೇವೆ ಮಾಡುವುದು ನಮ್ಮ ಸರಕಾರದ ಬದ್ಧತೆ. ಆರೋಗ್ಯ ಕ್ಷೇತ್ರದ ಬೇಡಿಕೆಗೆ ನಮ್ಮ ಸರಕಾರ ಎಂದಿಗೂ ಹಿಂದೇಟು ಹಾಕಿಲ್ಲ. ಇಂತಹ ಅಪರೂಪದ ಕಾಯಿಲೆಯಿಂದ ಬಳಲುವ ಮಕ್ಕಳಿಗೆ ಆತ್ಮವಿಶ್ವಾಸ ತುಂಬಬೇಕು. ಮಕ್ಕಳು ಡಿ.ಕೆ.ಶಿವಕುಮಾರ್, ದಿನೇಶ್ ಗುಂಡುರಾವ್ ಆಗುವಂತೆ ಬೆಳೆಯಬೇಕು. ಯಾವುದೂ ಅಸಾಧ್ಯವಲ್ಲ. ದೇವರು ಅವಕಾಶ ನೀಡುತ್ತಾನೆ. ಸಿಕ್ಕಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು.

ಕರ್ನಾಟಕ ತನ್ನದೇ ಆದ ಪ್ರತಿಭಾ ಸಂಪನ್ಮೂಲವನ್ನು ಹೊಂದಿದೆ. ಇಡೀ ದೇಶದಲ್ಲಿಯೇ ಕರ್ನಾಟಕ ಅನೇಕ ಕ್ಷೇತ್ರಗಳಲ್ಲಿ ಮುಂದಿದೆ. ನಮ್ಮ ಸರಕಾರವೂ ಯುವಕರು, ಮಕ್ಕಳ ಪ್ರತಿಭೆಗೆ ಪ್ರೋತ್ಸಾಹದಾಯಕವಾಗಿ ನಿಂತಿದೆ. ಐದು ಗ್ಯಾರಂಟಿಗಳ ಮೂಲಕ ಪ್ರತಿ ಕುಟುಂಬಕ್ಕೆ 5 ಸಾವಿರ ಹಣವನ್ನು ಉಳಿತಾಯ ಮಾಡುತ್ತಿದೆ. ಸರಕಾರಕ್ಕೆ ಹೊರೆ ಆಗುತ್ತಿರಬಹುದು, ಆದರೆ ಜನರ ಮೇಲಿರುವ ಆರ್ಥಿಕ ಒತ್ತಡ, ಮಾನಸಿಕ ಒತ್ತಡ ಕಡಿಮೆಯಾಗಬೇಕು ಎಂದು ನಾವು ಕೆಲಸ ಮಾಡುತ್ತಿದ್ದೇವೆ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮೆಟ್ರೋ ವಿಸ್ತರಣೆ ಸರಕಾರದ ಗುರಿ

ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ಮೆಟ್ರೋ ಜಾಲವನ್ನು 2027ರ ಹೊತ್ತಿಗೆ 175 ಕಿಮೀಗೆ ವಿಸ್ತರಿಸಲು ಬಿಎಂಆರ್‌ಸಿಎಲ್‌ಗೆ ಡೆಡ್ ಲೈನ್ ನೀಡಿರುವ ಬಗ್ಗೆ ಕೇಳಿದಾಗ, ಈ ಬಗ್ಗೆ ಸರ್ವೆ ಮಾಡಿಸುತ್ತಿದ್ದೇವೆ. ಮೆಟ್ರೋ ವಿಚಾರವಾಗಿ ನೀಡಿದ ಭರವಸೆಗಳನ್ನು ಈಡೇರಿಸುತ್ತೇವೆ. ಡಬಲ್ ಡೆಕ್ಕರ್ ವಿಚಾರದಲ್ಲಿ ಸಣ್ಣ ಸ್ಪಷ್ಟನೆ ಕೇಳುತ್ತಿರುವ ಕಾರಣಕ್ಕೆ ಸದ್ಯದಲ್ಲೇ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ. ಮೆಟ್ರೋ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಬದ್ಧವಾಗಿದ್ದೇವೆ. ಇದು ನಮ್ಮ ಸರಕಾರದ ಉದ್ದೇಶ ಎಂದು ಹೇಳಿದರು. ಬಾಕಿ ಬಿಲ್‌ಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ಯಡಿಯೂರಪ್ಪ ಅವರು ಹಾಗೂ ಬೊಮ್ಮಾಯಿ ಅವರ ಸರಕಾರದ ವೇಳೆ ಯಾವುದೇ ಆರ್ಥಿಕ ಸ್ಥಿತಿಗತಿಯನ್ನು ನೋಡದೆ ಹೆಚ್ಚಿನ ಕಾಮಗಾರಿಗಳಿಗೆ ಅನುಮತಿ ನೀಡಲಾಯಿತು. ಈ ಕಾರಣಕ್ಕೆ ಈಗ ಸಮಸ್ಯೆ ಉಂಟಾಗಿದೆ. ನಾವು ಅನೇಕ ಗುತ್ತಿಗೆದಾರರಿಗೆ ಹಣ ಲಭ್ಯತೆ ಇಲ್ಲದೇ ಇರುವ ಕಾರಣಕ್ಕೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದ್ದರೂ, ಒಂದಷ್ಟು ಜನ ಕಾಮಗಾರಿಗಳನ್ನು ತೆಗೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು.

ರಕ್ತದಾನ ಶಿಬಿರಕ್ಕೆ ಚಾಲನೆ

ಬೆಂಗಳೂರು: ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಸಂಸ್ಥೆಯು ಭಾರತೀಯ ರೆಡ್ ಕ್ರಾಸ್ ಸೊಸೈಟಿ ರಕ್ತ ಬ್ಯಾಂಕ್, ಕರ್ನಾಟಕ ಸ್ವಯಂ ಪ್ರೇರಿತ ರಕ್ತದಾತರ ಸಂಘ ಸಹಯೋಗದಲ್ಲಿ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕೆ.ಎಂ. ನಂಜಪ್ಪ ಸ್ಮಾರಕ ಮಹಾ ರಕ್ತದಾನ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಂದಿ ರಕ್ತ ದಾನ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರ ಎಜುಕೇಶನಲ್ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವೂಡೆ ಪಿ. ಕೃಷ್ಣ ಮಾತನಾಡಿ, ಶೇಷಾದ್ರಿಪುರಂ ಎಜುಕೇಶನಲ್ ಟ್ರಸ್ಟ್‌ನ ಮಾಜಿ ಅಧ್ಯಕ್ಷರಾದ ಲೇಟ್ ಕೆ.ಎಂ. ನಂಜಪ್ಪ ಅವರ ಸ್ಮರಣಾರ್ಥ ಕಳೆದ 18 ವರ್ಷಗಳಿಂದ ವಿವಿಧ ಸಂಸ್ಥೆಗಳಲ್ಲಿ ಈ ಮಹಾ ರಕ್ತದಾನ ಶಿಬಿರ ಆಯೋಜಿಸಲಾಗುತ್ತಿದೆ ಎಂದರು. ಸಾಲುಮರದ ತಿಮ್ಮಕ್ಕ ಮತ್ತು ಮದರ್ ತೆರೆಸಾ ಅವರ ಉದಾಹರಣೆ ಉಲ್ಲೇಖಿಸಿ, ವ್ಯಕ್ತಿಯ ಸೌಂದರ್ಯವು ಅವನು ಮಾಡುವ ಕಾರ್ಯದಲ್ಲಿ ಅಡಗಿದೆ ಎಂದು ಹೇಳಿದರು. ರಕ್ತದಾನ ಕಡ್ಡಾಯವಾಗಿರಬಾರದು, ಅದು ಸ್ವಯಂಪ್ರೇರಿತವಾಗಿರಬೇಕು ಎಂದು ತಿಳಿಸಿದರು. ರಕ್ತದಾನವು ಉತ್ತಮ ಆರೋಗ್ಯದ ಪ್ರಮಾಣಪತ್ರವಾಗಿದೆ ಎಂದು ತಿಳಿಸಿದರು.

ಎಸಿಪಿ ಬಸವರಾಜ ಎ. ತೆಲಿ ಅವರು ಜೀವನದ ಮಹತ್ವವನ್ನು ವಿವರಿಸಿದರು. ರಸ್ತೆ ಅಪಘಾತಗಳಂತಹ ಸಂದರ್ಭಗಳಲ್ಲಿ ರಕ್ತದ ಮೌಲ್ಯ ತಿಳಿಯುತ್ತದೆ ಎಂದು ಹೇಳಿದರು. ಕಾಲೇಜಿನ ಈ ಮಹತ್ವದ ಕಾರ್ಯ ಶ್ಲಾಘಿಸಿದರು.

ಬೀದಿ ನಾಯಿಗಳಿಗೆ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಕ್ರಮ

ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಜನಸಂಖ್ಯೆ ನಿಯಂತ್ರಣ ಹಾಗೂ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಸಂತಾನ ನಿಯಂತ್ರಣ ಕಾಯಿದೆ 2023 ಮತ್ತು ಕೇಂದ್ರ ಸರಕಾರದ ಮಾರ್ಗಸೂಚಿಗಳಂತೆ ಕ್ರಮಬದ್ಧವಾಗಿ ಅನುಷ್ಠಾನ ಗೊಳಿಸಲಾಗುತ್ತಿದೆ.ಈ ಕಾರ್ಯಕ್ರಮದಲ್ಲಿ ಬೀದಿ ನಾಯಿ ಗಳನ್ನು ಮಾನವೀಯ ರೀತಿಯಲ್ಲಿ ಹಿಡಿದು ಅರ್ಹ ಪಶುವೈದ್ಯರಿಂದ ಶಸ್ತ್ರಚಿಕಿತ್ಸೆ ಹಾಗೂ ರೇಬೀಸ್ ಲಸಿಕೆ ನೀಡಲಾಗುತ್ತದೆ. ಶಸ್ತ್ರಚಿಕಿತ್ಸೆಯ ನಂತರ ನಾಯಿಗಳಿಗೆ ಅಗತ್ಯವಾದ ಆರೈಕೆ ಮತ್ತು ಚೇತರಿಕೆ ಒದಗಿಸಿ ನಂತರ ನಿಯಮಾ ನುಸಾರ ಮರುಬಿಡುಗಡೆ ಮಾಡಲಾ ಗುತ್ತದೆ. ಎಬಿಸಿ ಕಾಯಿದೆ 2023 ರ ನಿಯಮಾನುಸಾರ ಶಸ್ತ್ರಚಿಕಿತ್ಸೆಗೊಂಡ ಬೀದಿ ನಾಯಿಗಳನ್ನು ಅವುಗಳನ್ನು ಹಿಡಿದ ಮೂಲ ಸ್ಥಳದಲ್ಲಿಯೇ ಮರು ಬಿಡುಗಡೆ ಮಾಡುವುದು ಕಡ್ಡಾಯ ವಾಗಿದೆ. ಶಸ್ತ್ರಚಿಕಿತ್ಸೆಗೊಂಡು ಕಿವಿಯಲ್ಲಿ ಗುರುತು ಹೊಂದಿರುವ ಬೀದಿ ನಾಯಿ ಗಳನ್ನು ಯಾವುದೇ ಕಾರಣಕ್ಕೂ ಸ್ಥಳಾಂತರ ಮಾಡಬಾರದು. ಇಂತಹ ನಾಯಿಗಳಿಗೆ ಹಾನಿ ಮಾಡುವುದು ಅಥವಾ ಬೇರೆ ಸ್ಥಳಕ್ಕೆ ಕೊಂಡೊ ಯ್ಯುವುದು ಕಾನೂನುಬಾಹಿರವಾಗಿದೆ. ನಾಗರಿಕರು ಸಹಕರಿಸಿ ಪಾಲಿಕೆಯ ಎಬಿಸಿ ಕಾರ್ಯ ಕ್ರಮವನ್ನು ಯಶಸ್ವಿಗೊಳಿಸುವಂತೆ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ವಿನಂತಿಸಿದರು.

- ಪ್ರದೇಶದ ಪರಿಸರ ಸಮತೋಲನ ಕಾಪಾಡಲು
- ಇತರ ಆಕ್ರಮಣಕಾರಿ ನಾಯಿಗಳ ಪ್ರವೇಶವನ್ನು ತಡೆಯಲು
- ನಾಯಿಗಳ ಪ್ರದೇಶಾಧಾರಿತ ಸ್ವಭಾವ ಗಮನದಲ್ಲಿಡಲು
- ಮಾನವ-ನಾಯಿ ಸಂಘರ್ಷವನ್ನು ಕಡಿಮೆ ಮಾಡಲು

ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮುಂದಕ್ಕೆ

ಬೆಂಗಳೂರು: ಜಿಬಿಎಯ ಐದು ನಗರ ಪಾಲಿಕೆಗಳ ಅಂತಿಮ ವಾರ್ಡ್‌ವಾರು ಮತದಾರರ ಪಟ್ಟಿ ಪ್ರಕಟವನ್ನು ರಾಜ್ಯ ಚುನಾವಣಾ ಆಯೋಗವು ಮುಂದೂಡಿದೆ.

ಜಿಬಿಎ ವ್ಯಾಪ್ತಿಯಲ್ಲಿ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ವಾರ್ಡುವಾರು ಕರಡು ಮತದಾರರ ಪಟ್ಟಿಯನ್ನು ಜ.19ರಂದು ಪ್ರಕಟಿಸಲಾಗಿತ್ತು. ಈ ಕುರಿತು ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ಹಲವಾರು ದೂರುಗಳು ಸ್ವೀಕೃತಗೊಂಡ ಹಿನ್ನೆಲೆ ಜಿಬಿಎಯ (ಮತದಾರರ ನೋಂದಣಿ) ನಿಯಮಗಳು, 2025ರ ನಿಯಮ 30 ರನ್ವಯ ಜಾರಿಯಲ್ಲಿರುವ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಜಿಬಿಎಯ ಐದು ನಗರ ಪಾಲಿಕೆಗಳಿಗೆ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವುದು ಸೂಕ್ತವೆಂದು ಹೇಳಿದೆ.

ಆಯೋಗ ಹೊಸ ಕರಡು ಮತದಾರರ ಪಟ್ಟಿಯನುಸಾರ ವಾರ್ಡುವಾರು ವಿಂಗಡಣೆಗೊಂಡಿರುವ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳ ಪ್ರದೇಶ ಮತ್ತು ಮತದಾರರನ್ನು ಭೌತಿಕವಾಗಿ ಪರಿಶೀಲನೆ ಮಾಡಿದ್ದು, ಕೆಲವು ಪ್ರದೇಶಗಳಲ್ಲಿ ಮತದಾರರ ವಿವರಗಳು ಅದಲು-ಬದಲು ಆಗಿದೆ. ಭೌಗೋಳಿಕವಾಗಿ ಒಂದು ವಾರ್ಡಿನಲ್ಲಿ ವಾಸವಾಗಿರುವ ಮತದಾರರು ಮತ್ತೊಂದು ವಾರ್ಡಿನ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದು ಹಾಗೂ ಮತಗಟ್ಟೆಗಳ ಕೊಠಡಿ ಸಂಖ್ಯೆಗಳು ನಮೂದಿಸುವಲ್ಲಿ ತಪ್ಪಾಗಿದ್ದು, ಈ ಲೋಪದೋಷಗಳನ್ನು ಸರಿಪಡಿಸಲು ಅವಕಾಶವಿರುವುದರಿಂದ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ರೂಪಿಸಲಾಗಿದೆ.

ಮಾ.1ರವರೆಗೆ ವಾರ್ಡ್‌ವಾಡು ಪರಿಷ್ಕೃತ ಕರಡು ಮತದಾರರ ಪಟ್ಟಿ ತಯಾರಿಸಿ ಮಾ.8ರವರೆಗೆ ಪರಿಷ್ಕೃತ ಕರಡು ಮತದಾರರ ಪಟ್ಟಿ ಪ್ರಕಟಿಸಿ, ಮಾ.9 ರಿಂದ ಆಕ್ಷೇಪಣೆ ಮತ್ತು ದೂರು ಸಲ್ಲಿಸಲು ಅವಕಾಶ ನೀಡಲಾಗುತ್ತಿದೆ. ಮಾ.10 ರಿಂದ 16 ರವರೆಗೆ ಯಾವುದಾದರು ತಿದ್ದುಪಡಿ ಇದ್ದಲ್ಲಿ ಆನ್‌ಲೈನ್‌ನಲ್ಲಿ ಅಳವಡಿಸುವುದು, ಮಾ.17 ಮತ್ತು 18ರವರೆಗೆ ಪರಿಶೀಲಿಸಿ ನಂತರ ಬದಲಾವಣೆ ಇದ್ದಲ್ಲಿ ಮ್ಯಾಟ್ರಿಕ್ಸ ಸಾಪ್ಟವೇರ್‌ನಲ್ಲಿ ಕಾಲೋಚಿತಗೊಳಿಸಲು ತೀರ್ಮಾನಿಸಲಾಗಿದೆ. ಈ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿ ಮಾ.28 ರಿಂದ ಏ.4 ರ ವೇಳೆಗೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ.

ರಸ್ತೆಗಳಿಗೆ ಮೀಸಲಿದ್ದ 1707.51 ಚ.ಮೀ ಸ್ವತ್ತು ಪಾಲಿಕೆ ವಶಕ್ಕೆ

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಐಟಿಪಿಎಲ್ ಮುಖ್ಯರಸ್ತೆಯನ್ನು ಪರಿಷ್ಕೃತ ಮಹಾಯೋಜನೆ -2015 ರಂತೆ 150 ಅಡಿ ಅಗಲದ ರಸ್ತೆ ಅಗಲೀಕರಣಗಾಗಿ ಮೀಸಲಿರಿಸಿದ್ದ ಆರ್.ಡಿ ಸ್ವತ್ತುಗಳನ್ನು ನಗರ ಪಾಲಿಕೆ ವಶಕ್ಕೆ ಪಡೆಯಲಾಯಿತು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ರಸ್ತೆ ಅಗಲೀಕರಣಕ್ಕಾಗಿ ಮೀಸಲಿರಿಸಿದ್ದ ಅಂದಾಜು 1,707.51 ಚ.ಮೀ ಸ್ವತ್ತುಗಳನ್ನು ಪೂರ್ವ ನಗರ ಪಾಲಿಕೆ ವಶಕ್ಕೆ ಪಡೆಯಲಾಯಿತು. ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾರ್ಯಕ್ಕಾಗಿ ಕಾಯ್ದಿರಿಸುವ ಪರಿತ್ಯಾಜನ ಪತ್ರ ಆಗಿರುವ ಸ್ವತ್ತುಗಳನ್ನು ನಗರ ಪಾಲಿಕೆ ವಶಕ್ಕೆ ಪಡೆಯುವಂತೆ ಸಂಭದ ಪಟ್ಟ ವಿಭಾಗಗಳ ಕಾರ್ಯಪಾಲಕ ಅಭಿಯಂತರು, ಸಹಾಯಕ ನಿರ್ದೇಶಕರು ನಗರ ಯೋಜನೆ, ಸಹಾಯಕ ಕಾರ್ಯಪಾಲಕ ಅಭಿಯಂತರು ಭೂಸ್ವಾಧೀನ ಮತ್ತು ಟಿ.ಡಿ.ಆರ್ ಹಾಗೂ ಸರ್ವೆಯರ್‌ಗಳನ್ನು ಒಳಗೊಂಡ ತಂಡ ರಚಿಸಿದ್ದು ಅದರಂತೆ ಇಂದು ಐಟಿಪಿಎಲ್ ಮುಖ್ಯರಸ್ತೆಯಲ್ಲಿರುವ ಆರ್.ಡಿ.ಸ್ವತ್ತುಗಳನ್ನು ವಶಕ್ಕೆ ಪಡೆಯಲಾಯಿತು ಎಂದು ವಿವರಿಸಿದರು.

ವಶಕ್ಕೆ ಪಡೆದ ಆರ್.ಡಿ. ಸ್ವತ್ತುಗಳು ಬೆಂಗಳೂರು ಪೂರ್ವ ನಗರ ಪಾಲಿಕೆಗೆ ಸೇರಿದ ಸ್ವತ್ತುಗಳಾಗಿದ್ದು, ರಸ್ತೆ ಅಗಲೀಕರಣಕ್ಕೆ ಕಾಯ್ದಿರಿಸಲಾಗಿದೆ. ಈ ಸ್ವತ್ತುಗಳನ್ನು ಅತಿಕ್ರಮಣವಾಗದಂತೆ ತಡೆಯಲು ಸೂಚನಾ ಫಲಕಗಳನ್ನು ಅಳವಡಿಸಲಾಗಿದ್ದು, ರಸ್ತೆ ಅಗಲೀಕರಣ ಕಾಮಗಾರಿಕೈಗೊಳ್ಳುವರೆಗೂ ನಗರ ಸಂಚಾರ ದಟ್ಟಣೆ ತಗ್ಗಿಸುವ ದೃಷ್ಟಿಯಿಂದ ಪೇ-ಪಾರ್ಕಿಂಗ್ ಸೌಲಭ್ಯಕ್ಕಾಗಿ ಬಳಸಲು ಇರುವ ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಅರಾಜಕತೆ ಆರನೇ ಗ್ಯಾರಂಟಿ

ಬೆಂಗಳೂರು: ಕಾಂಗ್ರೆಸ್ ಸರಕಾರದ ಆರನೇ ಗ್ಯಾರಂಟಿಯೇ ಅರಾಜಕತೆ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕಾಂಗ್ರೆಸ್ ಅಧಿಕಾರದಲ್ಲಿದೆ, ಜನರು ಬೀದಿಗಿಳಿದಿದ್ದಾರೆ. ಕಾಂಗ್ರೆಸ್ ಸರಕಾರದ ಕೆಟ್ಟ ಕೊಳಕು ಆಡಳಿತದಿಂದ ಸಮಾಜದ ಪ್ರತಿ ವರ್ಗ ಬೀದಿಗಿಳಿದು ಹೋರಾಟ ನಡೆಸುತ್ತಿದೆ ಎಂದು ಹೇಳಿದ್ದಾರೆ.

ಸರಕಾರಿ ಉದ್ಯೋಗಾಕಾಂಕ್ಷಿಗಳಿಂದ ನೇಮಕಾತಿಗೆ ಒತ್ತಾಯಿಸಿ ಪ್ರತಿಭಟನೆ, ಸರಕಾರಿ ವೈದ್ಯರಿಂದ ಮಾರ್ಚ್ 11 ರಿಂದ ಒಪಿಡಿ ಬಂದ್, 37,000 ಕೋಟಿ ರು. ಬಾಕಿಗೆ ಆಗ್ರಹಿಸಿ ಗುತ್ತಿಗೆದಾರರಿಂದ ಮಾರ್ಚ್ 6ರಂದು ಪ್ರತಿಭಟನೆ ಕೈಗೊಂಡಿದ್ದಾರೆ. ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣದಲ್ಲಿ ಆಗಿರುವ ಅನ್ಯಾಯ ಸರಿಪಡಿಸುವಂತೆ ಬಂಜಾರ, ಭೋವಿ, ಕೊರಮ, ಕೊರಚ ಮತ್ತು ಅಲೆಮಾರಿ ಸಮುದಾಯಗಳ ಪ್ರತಿಭಟನೆ, ಒಳಮೀಸಲಾತಿಯಿಂದ ಆಗಿರುವ ಅನ್ಯಾಯ ವಿರುದ್ಧ ಎಸ್ಸಿ ಬಲಗೈ ಸಮುದಾಯದ ಪ್ರತಿಭಟನೆ, ಕಬ್ಬು ಬಿಲ್ ಬಾಕಿ ವಿರುದ್ಧ ರೈತರಿಂದ ಬೀದಿಳಿಗಿದು ಪ್ರತಿಭಟನೆ, ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗೆ ಒತ್ತಾಯಿಸಿ ಫೆಬ್ರವರಿ 27 ರಿಂದ ಆಶಾ ಕಾರ್ಯಕರ್ತೆಯರಿಂದ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೂಚನೆ

ನಗರದಲ್ಲಿ ಪ್ರವಾಹ ನಿರ್ವಹಣಾ ಸಮಿತಿ ರಚನೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ಪ್ರವಾಹ ನಿರ್ವಹಣೆಯ ಸಮಗ್ರ ಕಾರ್ಯಯೋಜನೆಗಾಗಿ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗೂ ಪ್ರವಾಹ ನಿರ್ವಹಣಾ ಸಮಿತಿ ರಚನೆ ಮಾಡಲಾಗಿದೆ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಹೇಳಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಳೆಗಾಲದ ಸಮಯದಲ್ಲಿ ಉಂಟಾಗುವ ಜಲಾವೃತ ಪರಿಸ್ಥಿತಿಯನ್ನು ತಡೆಗಟ್ಟುವ ಉದ್ದೇಶದಿಂದ ನಗರ ಪ್ರವಾಹ ನಿರ್ವಹಣೆಗೆ ಸಂಬಂಧಿಸಿದಂತೆ ಸಮಗ್ರ ಕ್ರಮಗಳನ್ನು ಕೈಗೊಳ್ಳಲು ಸಲುವಾಗಿ ಪ್ರವಾಹ ನಿರ್ವಹಣಾ ಸಮಿತಿ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿ ಮತ್ತು ಸಾರ್ಜನಿಕರಿಗೆ ಸೇವೆ ಒದಗಿಸುವ ಇಲಾಖೆಗಳಿಂದ ರಸ್ತೆ ಕತ್ತರಿಸಿರುವುದನ್ನು ಗುಣಮಟ್ಟದೊಂದಿಗೆ ಮರುಸ್ಥಾಪಿಸಲು ರಸ್ತೆ ಪುನಃ ಸ್ಥಾಪನೆ ಸಮಿತಿಯನ್ನು ರಚನೆ ಮಾಡಿರುವುದಾಗಿ ತಿಳಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಅತಿಯಾದ ನಗರೀಕರಣ, ಮಳೆ ನೀರಿನ ಸರಾಗವಾಗಿ ಹರಿಯುವಿಕೆ ತೊಡಕುಗಳು, ರಾಜಕಾಲುವೆಗಳ ಆಕ್ರಮಣ, ಒಳಚರಂಡಿ ಸಮಸ್ಯೆಗಳು ಮತ್ತು ತುರ್ತು ಪ್ರತಿಕ್ರಿಯಾ ವ್ಯವಸ್ಥೆಯಲ್ಲಿನ ಕೊರತೆ ಮುಂತಾದ ಕಾರಣಗಳಿಂದ ನಗರದಲ್ಲಿ ಜಲಾವೃತ ಸಮಸ್ಯೆಗಳು ಹೆಚ್ಚುತ್ತಿರುವುದು ಗಮನದಲ್ಲಿಟ್ಟುಕೊಂಡು, ಆಯುಕ್ತರ ನೇತೃತ್ವದಲ್ಲಿ ನಗರ ಪಾಲಿಕೆ ಎಂಜಿನಿಯರಿಂಗ್ ವಿಭಾಗ, ಕೆ.ಆರ್.ಡಿ.ಸಿ.ಎಲ್, ಸಣ್ಣ ನೀರಾವರಿ, ಪೊಲೀಸ್ ಇಲಾಖೆ, ನೈರುತ್ಯ ರೈಲ್ವೆ, ಲೋಕೋಪಯೋಗಿ ಇಲಾಖೆ, ಬೆಸ್ಕಾಂ, ಜಿಲ್ಲಾ ವಿಪತ್ತು ನಿರ್ವಹಣೆ ಮತ್ತು ಇನ್ನಿತರೆ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಪ್ರವಾಹ ನಿರ್ವಹಣಾ ಸಮಿತಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು.

ನಗರ ಪಾಲಿಕೆಯ ಎಂಜಿನಿಯರಿಂಗ್ ವಿಭಾಗ, ಆರೋಗ್ಯ ಇಲಾಖೆ, ವಿಪತ್ತು ನಿರ್ವಹಣಾ ಘಟಕ ಮತ್ತು ಇತರೆ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಮೂಲಕ ನಗರದಲ್ಲಿ ಮಳೆಗಾಲದ ವೇಳೆ ಜನಜೀವನ ವ್ಯತ್ಯಯವಾಗದಂತೆ, ಸಾರ್ವಜನಿಕ ಸುರಕ್ಷತೆ ಹಾಗೂ ಮೂಲಸೌಕರ್ಯ ರಕ್ಷಣೆ ದೃಷ್ಟಿಯಿಂದ ಈ ಸಮಿತಿ ಕಾರ್ಯನಿರ್ವಹಿಸಲಿದೆ ಎಂದು ಆಯುಕ್ತರು ತಿಳಿಸಿದರು.

ರಸ್ತೆ ಪುನಃಸ್ಥಾಪನೆ ಸಮಿತಿ:

ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಯುಟಿಲಿಟಿ ಸಂಸ್ಥೆಗಳು ವಿದ್ಯುತ್ ಕೇಬಲ್, ನೀರಿನ ಪೈಪ್‌ಲೈನ್, ಒಳಚರಂಡಿ, ಟೆಲಿಕಾಂ ಲೈನ್ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳ ನಿಮಿತ್ತ ರಸ್ತೆಗಳನ್ನು ಕತ್ತರಿಸಲಾಗುತ್ತಿದೆ. ಇಂತಹ ಕಾಮಗಾರಿಗಳ ನಂತರ ರಸ್ತೆ ಪುನಃಸ್ಥಾಪನೆ ಸಮರ್ಪಕವಾಗಿ ನಡೆಯದಿರುವುದರಿಂದ ಸಾರ್ವಜನಿಕರಿಗೆ ಸಂಚಾರ ತೊಂದರೆ, ಅಪಘಾತಗಳ ಸಂಭವ ಹಾಗೂ ರಸ್ತೆ ಹಾನಿ ಹೆಚ್ಚುತ್ತಿರುವುದು ಗಮನಕ್ಕೆ ಬಂದಿರುತ್ತದೆ. ರಸ್ತೆಗಳನ್ನು ಮೂಲ ಸ್ಥಿತಿಗೆ ತರುವ ಸಲುವಾಗಿ ಅಪರ ಆಯುಕ್ತರು ನೇತೃತ್ವದಲ್ಲಿ ನಗರ ಪಾಲಿಕೆ ಎಂಜಿನಿಯರಿಂಗ್ ವಿಭಾಗ, ಬೆಸ್ಕಾಂ, ಕೆಪಿಟಿಸಿಎಲ್, ಬಿಡಬ್ಲ್ಯೂಎಸ್‌ಎಸ್‌ಬಿ, ಗೇಲ್, ಸಂಚಾರಿ ಪೊಲೀಸ್, ಹಾಗೂ ಒಎಫ್‌ಸಿ ಅಪರೇಟರ್‌ಗಳನ್ನು ಒಳಗೊಂಡ ರಸ್ತೆ ಪುನಃ ಸ್ಥಾಪನೆ ಸಮಿತಿಯನ್ನು ರಚಿಸಿಲಾಗಿದೆ ಎಂದು ಆಯುಕ್ತರು ತಿಳಿಸಿದರು.

ಸಮಿತಿಯ ಉದ್ದೇಶ

- ಮಳೆಗಾಲದ ಪೂರ್ವ ಸಿದ್ಧತಾ ಕ್ರಮಗಳನ್ನು ಸಮನ್ವಯದಿಂದ ಅನುಷ್ಠಾನಗೊಳಿಸುವುದು.
- ರಾಜಕಾಲುವೆ, ಮಳೆ ನೀರು ಕಾಲುವೆ ಮತ್ತು ಒಳಚರಂಡಿಗಳ ಶುದ್ಧೀಕರಣ ಹಾಗೂ ದುರಸ್ತಿ ಕಾರ್ಯಗಳ ಮೇಲ್ವಿಚಾರಣೆ.
- ಜಲಾವೃತ ಪ್ರದೇಶಗಳನ್ನು ಗುರುತಿಸಿ ಶಾಶ್ವತ ಪರಿಹಾರಕ್ಕೆ ಕ್ರಮ ರೂಪಿಸುವುದು.
- ತುರ್ತು ಪರಿಸ್ಥಿತಿಯಲ್ಲಿ ತ್ವರಿತ ಪ್ರತಿಕ್ರಿಯಾ ವ್ಯವಸ್ಥೆ ರೂಪಿಸುವುದು.
- ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು.

ಕಾರ್ಯ

- ಜಲಾವೃತ ಪ್ರದೇಶಗಳ ಮ್ಯಾಪಿಂಗ್ ಹಾಗೂ ಅಪಾಯ ಪ್ರದೇಶಗಳ ಗುರುತಿಸುವುದು.
- ಮಳೆ ನೀರು ಸರಾಗ ಹರಿವಿಗೆ ಅಡ್ಡಿಯಾಗಿರುವ ಅತಿಕ್ರಮಣವನ್ನು ತೆರವುಗೊಳಿಸುವುದು.
- ನೀರು ನಿಲ್ಲುವ ಪ್ರದೇಶಗಳಲ್ಲಿ ಪಂಪ್‌ಗಳ ನಿಯೋಜನೆ ಹಾಗೂ ತಾತ್ಕಾಲಿಕ ಪರಿಹಾರ ಕ್ರಮ.
- ವಿಪತ್ತು ನಿರ್ವಹಣಾ ತಂಡಗಳೊಂದಿಗೆ ಸಮನ್ವಯ.
- ಸಾರ್ವಜನಿಕರಿಂದ ಸ್ವೀಕರಿತ ದೂರುಗಳಿಗೆ ತ್ವರಿತ ಕ್ರಮವಹಿಸುವುದು.

ಮ್ಯಾಜಿಕ್ ಬಸ್ ಇಂಡಿಯಾಗೆ ಅಮೆರಿಕನ್ ಎಕ್ಸ್‌ಪ್ರೆಸ್ ಬಲ

ಬೆಂಗಳೂರು: ಯುವಕರಿಗೆ ಉದ್ಯೋಗಾವಕಾಶ ಮತ್ತು ಡಿಜಿಟಲ್ ಕೌಶಲ್ಯಗಳೊಂದಿಗೆ ಸಜ್ಜುಗೊಳಿಸಲು, ಸ್ಪರ್ಧಾತ್ಮಕ ಮತ್ತು ಹೆಚ್ಚುತ್ತಿರುವ ಡಿಜಿಟಲ್ ಆರ್ಥಿಕತೆಯನ್ನು ಯಶಸ್ವಿಗೊಳಿಸಲು ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್‌ಗೆ ಅಮೆರಿಕನ್ ಎಕ್ಸ್‌ಪ್ರೆಸ್ ಬೆಂಬಲ ನೀಡಿದೆ.

2024-25ರ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲಾದ ಮೂರು ವರ್ಷಗಳ ಪಾಲುದಾರಿಕೆಯ ಮೂಲಕ, ಸುಮಾರು 3,000 ಯುವಕರನ್ನು ಉದ್ಯಮ-ಸಂಬಂಧಿತ ತಾಂತ್ರಿಕ ಸಾಮರ್ಥ್ಯಗಳು ಮತ್ತು ಅಗತ್ಯ ಜೀವನ ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸುವ ಗುರಿಯನ್ನು ಈ ಯೋಜನೆ ಗುರಿಹೊಂದಿದೆ.

ಈ ಬಗ್ಗೆ ಅಮೆರಿಕನ್ ಎಕ್ಸ್‌ಪ್ರೆಸ್ ಇಂಡಿಯಾದ ಸಿಇಒ ಸಂಜಯ್ ಖನ್ನಾ ಮಾತನಾಡಿ, ನಾವು ಕೆಲಸ ಮಾಡುವ ಸ್ಥಳದಲ್ಲಿ ವಾಸಿಸುವ ಸಮುದಾಯದ ಆರ್ಥಿಕ ಅಭಿವೃದ್ಧಿಯ ಮಾರ್ಗಗಳನ್ನು ಸೃಷ್ಟಿಸಲು ನಾವು ಬದ್ಧರಾಗಿದ್ದೇವೆ. ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಶನ್‌ನೊಂದಿಗೆ ಪಾಲುದಾರಿಕೆಯ ಮೂಲಕ ನಾವು, ಇಂದಿನ ವೇಗವಾಗಿ ವಿಕಸನಗೊಳ್ಳುತ್ತಿರುವ ಉದ್ಯೋಗ ಮಾರುಕಟ್ಟೆಯಲ್ಲಿ ಯಶಸ್ವಿಯಾಗಲು ಯುವಜನರು ಕೌಶಲ್ಯ ಮತ್ತು ಆತ್ಮವಿಶ್ವಾಸವನ್ನು ಪಡೆಯಲು ನಾವು ಸಹಾಯ ಮಾಡುತ್ತಿದ್ದೇವೆ ಎಂದರು.

ಅಮೆರಿಕನ್ ಎಕ್ಸ್‌ಪ್ರೆಸ್ ಬೆಂಬಲದೊಂದಿಗೆ, ಸಮುದಾಯಗಳ ಯುವಕರು ಅಗತ್ಯವಾದ ಡಿಜಿಟಲ್, ಜೀವನ ಮತ್ತು ಉದ್ಯೋಗ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅವಕಾಶ ನೀಡುತ್ತೇವೆ. ಈ ಯೋಜನೆಯು ಆತ್ಮವಿಶ್ವಾಸ ಮತ್ತು ಅರ್ಥಪೂರ್ಣ ವೃತ್ತಿಜೀವನವನ್ನು ಪ್ರವೇಶಿಸುವ ಸಾಮರ್ಥ್ಯವನ್ನು ಪರಿವರ್ತಿಸುತ್ತಿದೆ.
- ಜಯಂತ್ ರಸ್ತೋಗಿ, ಮ್ಯಾಜಿಕ್ ಬಸ್ ಇಂಡಿಯಾ ಸಿಇಒ

ಸಮಾಚಾರ ಸಣ್ಣದಲ್ಲ

ಹಿಂದೂ ಮುಖಂಡನಿಗೆ ಚಾಕು ಇರಿತ

ಚಿತ್ರದುರ್ಗ: ಹಿಂದೂ ಸಂಘಟನೆಯಲ್ಲಿ ಗುರುತಿಸಿಕೊಂಡಿರುವ ಮೊಬೈಲ್ ಅಂಗಡಿ ಮಾಲೀಕನಿಗೆ ಯುವಕನೊಬ್ಬ ಚಾಕು ಇರಿದ ಘಟನೆ ಚಿತ್ರದುರ್ಗದ ಸಂತೆ ಮೈದಾನದಲ್ಲಿ ನಡೆದಿದೆ. ವಿಕ್ರಮ್ ಚೌದ್ರಿ ಎಂಬವರ ಅಂಗಡಿಗೆ ಯುವಕನೊಬ್ಬ ಮೊಬೈಲ್ ಸ್ಕ್ರೀನ್ ಹಾಕಿಸಲು ಬಂದಿದ್ದ. ಈ ವೇಳೆ ಬೇರೆ ಬ್ರ್ಯಾಂಡ್‌ನ ಮೊಬೈಲ್ ಸ್ಕ್ರೀನ್‌ಗೆ 100 ರು. ಹೆಚ್ಚುವರಿ ಆಗುತ್ತದೆ ಎಂದು ಹೇಳಿದ್ದಾರೆ.100 ರು. ಹೆಚ್ಚುವರಿ ಹಣ ಕೇಳಿದ್ದಕ್ಕೆ ಸಿಟ್ಟಾದ ಯುವಕ ಚಾಕು ಇರಿದಿದ್ದಾನೆ. ಯುವಕ ಚಾಕು ಇರಿಯುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವಿಕ್ರಮ್ ಚೌದ್ರಿ ಅವರು ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಸಾಪದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕೇಸ್ ಸಂಬಂಧ ಹೈಕೋರ್ಟ್ ಸೂಚನೆ

ಜೋಶಿ ವಿರುದ್ಧ ಕ್ರಮ ಜರುಗಿಸಬೇಡಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ (ಕಸಾಪ) ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಅವರ ವಿರುದ್ಧ ತಳೆಯುವ

ಯಾವುದೇ ನಿಲುವನ್ನು ಮುಂದಿನ ವಿಚಾರಣೆವರೆಗೆ ಜಾರಿಗೊಳಿಸಬಾರದು ಎಂದು ಹೈಕೋರ್ಟ್ ರಾಜ್ಯ ಸರಕಾರಕ್ಕೆ ಬುಧವಾರ ನಿರ್ದೇಶಿಸಿದೆ.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ಜಾರಿ ಮಾಡಿರುವ ಶೋಕಾಸ್ ನೋಟಿಸ್ ಪ್ರಶ್ನಿಸಿ ಕಸಾಪ ಮಾಜಿ ಅಧ್ಯಕ್ಷ ಮಹೇಶ್ ಜೋಶಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು ಎಲ್ಲಾ ವಿಚಾರಗಳನ್ನು ಪರಿಗಣಿಸಲಾಗಿದ್ದು, ಮುಂದಿನ ವಿಚಾರಣೆಯವರೆಗೆ ಜೋಶಿ ವಿರುದ್ಧ ಕೈಗೊಳ್ಳುವ ಕ್ರಮ ಜಾರಿಗೊಳಿಸಕೂಡದು ಎಂದು ಸರಕಾರಕ್ಕೆ ನಿರ್ದೇಶಿಸಿತು.

ಸರಕಾರವನ್ನು ಪ್ರತಿನಿಧಿಸಿದ್ದ ಹಿರಿಯ ವಕೀಲ ಪ್ರೊ. ರವಿವರ್ಮ ಕುಮಾರ್ ಅವರು ಸಹಕಾರ ಸಂಘಗಳ ನಿಬಂಧಕರನ್ನು ಪ್ರತಿವಾದಿ ಮಾಡಿಲ್ಲವಾದ್ದರಿಂದ ಅರ್ಜಿಯು ಊರ್ಜಿತವಾಗುವುದಿಲ್ಲ. ಆಡಳಿತಾಧಿಕಾರಿಯ ಅವಧಿಯು 2025ರ ಡಿಸೆಂಬರ್ 29 ಅಥವಾ ವರದಿ ಆಧರಿಸಿ ಕ್ರಮಕೈಗೊಳ್ಳುವವರೆಗೆ ಇದೆ. ಸಕ್ಷಮ ಪ್ರಾಧಿಕಾರವು ಸಲ್ಲಿಸುವ ವರದಿಯು ಈ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟಿದೆ. ಹೀಗಾಗಿ, ಆಡಳತಾಧಿಕಾರಿಯ ವ್ಯಾಪ್ತಿ ಪ್ರಶ್ನಿಸಲಾಗದು. ಕಸಾಪದಲ್ಲಿ ಸಾಕಷ್ಟು ಅಕ್ರಮ ನಡೆದಿದ್ದು, ದುರುಪಯೋಗವಾಗಿರುವ ಹಣವನ್ನು ಜೋಶಿ ಅವರಿಂದ ವಸೂಲಿ ಮಾಡಲು ಕ್ರಮಕೈಗೊಳ್ಳಬೇಕಿದೆ ಎಂದರು.

ದಂಡನೀಯ ಕ್ರಮಕ್ಕೈಗೊಳ್ಳುವ ಅಧಿಕಾರವಿಲ್ಲ

ಮೇಲ್ನೋಟಕ್ಕೆ ಆಡಳಿತಾಧಿಕಾರಿಯು ಶೋಕಾಸ್ ನೋಟಿಸ್ ನೀಡುವ ಅಧಿಕಾರ ವ್ಯಾಪ್ತಿ ಹೊಂದಿರುವುದನ್ನು ಸಮರ್ಥಿಸಿದ್ದಾರೆಯೇ ಎಂಬ ಪ್ರಶ್ನೆ ಇದೆ. ಪಕ್ಷಕಾರರ ವಾದ ಆಲಿಸಿ ಇದನ್ನು ನಿರ್ಧರಿಸಲಾಗುವುದು ಎಂದೂ ನ್ಯಾಯಾಲಯ ಆದೇಶಿಸಿದೆ. ಮಹೇಶ್ ಜೋಶಿ ಅವರು ಆಡಳಿತಾಧಿಕಾರಿಯ ಶೋಕಾಸ್ ನೋಟಿಸ್‌ಗೆ ಉತ್ತರಿಸಬೇಕಿದೆ. ಈಗಾಗಲೇ ಪ್ರತಿಕ್ರಿಯೆ ಸಲ್ಲಿಸುವ ಕಾಲಾವಧಿಯೂ ಮುಗಿದಿದ್ದರೂ ಸಕಾರಣವಾದ ಸಮಯವನ್ನು ಜೋಶಿ ಅವರಿಗೆ ಪ್ರತಿಕ್ರಿಯೆ ಸಲ್ಲಿಸಲು ನೀಡಬೇಕಿದ್ದು, ಮಾ.2ರ ಒಳಗೆ ಜೋಶಿ ಅವರು ಶೋಕಾಸ್ ನೋಟಿಸ್‌ಗೆ ಉತ್ತರಿಸಬೇಕು ಎಂದು ನಿರ್ದೇಶಿಸಿದೆ. ಮಹೇಶ್ ಜೋಶಿ ಅವರ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ಅವರು ಆಡಳಿತಾಧಿಕಾರಿಯು ಪರಿಷತ್‌ನ ಪದಾಧಿಕಾರಿಗಳ ವಿರುದ್ಧ ದಂಡನೀಯ ಕ್ರಮಕ್ಕೈಗೊಳ್ಳುವ ಅಧಿಕಾರ ಹೊಂದಿಲ್ಲ ಎಂದರು.

ಮಾರಿಕಾಂಬಾ ದೇವಿ ಜಾತ್ರೆ ಆರಂಭ



ಶಿರಸಿ: ರಾಜ್ಯದ ಪ್ರಸಿದ್ಧ ಶಿರಸಿಯ ಶ್ರೀ ಮಾರಿಕಾಂಬಾ ದೇವಿಯ ಜಾತ್ರಾ ಮಹೋತ್ಸವ ವಿದ್ಯುಕ್ತವಾಗಿ ಮಂಗಳವಾರದಿಂದ ಪ್ರಾರಂಭವಾಗಿದೆ. ಬುಧವಾರ ದೇವಸ್ಥಾನದಿಂದ ರಥದ ಮೂಲಕ ಆಗಮಿಸಿದ ತಾಯಿ ಶಿರಸಿ ಮಾರಿಕಾಂಬಾ ನಗರದ ಬಿಡಕಿಬೈಲಿನ ಗದ್ದುಗೆಯಲ್ಲಿ ಪ್ರತಿಷ್ಠಾಪನೆಯಾಗಿದ್ದಾಳೆ.

ದೇವಿಯ ಕಲ್ಯಾಣೋತ್ಸವ ಮಂಗಳವಾರ ತಡರಾತ್ರಿ ಜರುಗಿತು. ಬುಧವಾರ ಬೆಳಗ್ಗೆ ಅಮ್ಮನ ಮೆರವಣಿಗೆಯ ರಥೋತ್ಸವ ನಡೆಯಿತು. ಮಧ್ಯಾಹ್ನ ಸುಮಾರು 12.48 ಗಂಟೆ ವೇಳೆಗೆ ಮಾರಿಕಾಂಬೆ ಗದ್ದುಗೆಯನ್ನು ಅಲಂಕರಿಸಿದ್ದು, ಅಸಂಖ್ಯ ಭಕ್ತರ ಜಯಘೋಷದೊಂದಿಗೆ ಪ್ರತಿಷ್ಠಾಪನಾ ಕಾರ್ಯ ಜರುಗಿತು.

ರಥೋತ್ಸವ: ಬುಧವಾರ ಬೆಳಗ್ಗೆ 7.26ಕ್ಕೆ ಮಾರಿಕಾಂಬೆಯ ರಥವನ್ನೇರಿದ್ದು, 9.30ಕ್ಕೆ ದೇವಾಲಯದ ಆವರಣದಿಂದ ರಥ ಹೊರಟಿತು. ಬಿಡಕಿಬೈಲಿನಲ್ಲಿರುವ ಜಾತ್ರಾ ಗದ್ದುಗೆಗೆ ಬರುವ ವೇಳೆಗಾಗಲೇ ಸೂರ್ಯ ನೆತ್ತಿ ಸುಡುತ್ತಿದ್ದ. ಉರಿಯುವ ಬಿಸಿಲನ್ನೂ ಲೆಕ್ಕಿಸದೇ ಅಮ್ಮನ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತ ಪರಾಕಾಷ್ಠೆ ಮೆರೆದರು. ರಥೋತ್ಸವದುದ್ದಕ್ಕೂ ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಜನಸ್ತೋಮ ಮಾರಿಕಾಂಬೆ ಜಾತ್ರಾ ಗದ್ದುಗೆಗೆ ಆಸೀನಳಾಗುವವರೆಗೂ ಶಾಂತಿ ಯುತವಾಗಿ ಪಾಲ್ಗೊಂಡು ಭಕ್ತಿ-ಭಾವದಲ್ಲಿ ಮಿಂದೆದ್ದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು- 570005,
ದೂರವಾಣಿ/ಫ್ಯಾಕ್ಸ್: 0821-2420624

ಸಂಖ್ಯೆ: ಮೈಅಪ್ರಾ/ಅಸ/ಸಾ.ಟೆಂ.ಪ್ರ. 01/2025-26 ದಿನಾಂಕ: 24.02.2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಸಿವಿಲ್ ಕಾಮಗಾರಿಗಳು					
1.	ಮೈಅಪ್ರಾ/ಅಅ/ಪಿಬಿ/ಟಿಎನ್/20/2025 -26 ದಿನಾಂಕ: 24.02.2026	04	79.50	26.02.2026 ಬೆಳಿಗ್ಗೆ 11ರ ನಂತರ	04.03.2026 ಸಂಜೆ 5.30ರವರೆಗೆ	06.03.2026 ಬೆಳಿಗ್ಗೆ 11.00ಕ್ಕೆ
2	ಮೈಅಪ್ರಾ/ಅಅ/ಪಿಬಿ/ಟಿಎನ್/18/2025 -26 ದಿನಾಂಕ: 20.02.2026	02	906.50	10.02.2026 ಬೆಳಿಗ್ಗೆ 11ರ ನಂತರ	02.03.2026 ಸಂಜೆ 5.30ರವರೆಗೆ	04.03.2026 ಬೆಳಿಗ್ಗೆ 11.00ಕ್ಕೆ
3	ಮೈಅಪ್ರಾ/ಆಅ/ಪಿಬಿ/ಟಿಎನ್/19/2025 -26 ದಿನಾಂಕ: 17.02.2026	06	179.48	19.02.2026 ಬೆಳಿಗ್ಗೆ 11ರ ನಂತರ	06.03.2026 ಸಂಜೆ 5.30ರವರೆಗೆ	07.03.2026 ಸಂಜೆ 5.30ವರೆಗೆ
4	ಮೈಅಪ್ರಾ/ಆಅ/ಪಿಬಿ/ಟಿಎನ್/19/2025 -26 ದಿನಾಂಕ: 17.02.2026	01	645.00	26.02.2026 ಬೆಳಿಗ್ಗೆ 11ರ ನಂತರ	16.03.2026 ಸಂಜೆ 5.29ರವರೆಗೆ	17.03.2026 ಸಂಜೆ 5.30ಕ್ಕೆ
5	ಮೈನಪ್ರಾ/ಲೆಶಾ/ನಗದು/ನಿಶ್ಚಿತ ಠೇವಣಿ/17/ 2025-26 ದಿನಾಂಕ: 16.02.2025	01	117.00 ಕೋಟಿ	26.02.2026 ಬೆಳಿಗ್ಗೆ 11ರ ನಂತರ	16.03.2026 ಸಂಜೆ 5.29ರವರೆಗೆ	17.03.2026 ಸಂಜೆ 5.30ವರೆಗೆ

ಅರ್ಹ ನೋಂದಾಯಿತ ಗುತ್ತಿಗೆದಾರರು (http://KPPP.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಿವಿಲ್ ಅಧೀಕ್ಷಕ ಅಭಿಯಂತರರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.
ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ ತಿದ್ದುಪಡಿಗಳಿದ್ದಲ್ಲಿ (http://KPPP.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಅಧೀಕ್ಷಕ ಅಭಿಯಂತರರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.
DIPR/DDMYS/1749/KSMCA/978/2025-26

ಆರ್‌ಟಿಐನಲ್ಲಿ ಸಕಾಲಕ್ಕೆ ಮಾಹಿತಿ ನೀಡದ ಮೂವರು ಅಧಿಕಾರಿಗಳಿಗೆ ದಂಡ

ಮಾಲೂರು ತಹಸೀಲ್ದಾರ್‌ಗೆ 60 ಸಾವಿರ ರು. ದಂಡ

ಬೆಂಗಳೂರು: ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಸಕಾಲದಲ್ಲಿ ಮಾಹಿತಿ ನೀಡದ ಮಾಲೂರು ತಾಲೂಕು ತಹಸೀಲ್ದಾರರಾದ ರೂಪ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ಪೀಠ ಸಂಖ್ಯೆ-5 ರಲ್ಲಿ ಪ್ರತ್ಯೇಕ ಮೂರು ಪ್ರಕರಣಗಳಿಂದ ಒಟ್ಟು 60 ಸಾವಿರ ರು. ದಂಡ ವಿಧಿಸಲಾಗಿದೆ.

ಎರಡು ಪ್ರಕರಣಗಳಲ್ಲಿ ತಲಾ 25 ಸಾವಿರ ರು. ಹಾಗೂ ಒಂದು ಪ್ರಕರಣದಲ್ಲಿ 10 ಸಾವಿರ ರು.ಗಳ ದಂಡ ವಿಧಿಸಿ ಕರ್ನಾಟಕ ಮಾಹಿತಿ ಆಯೋಗದ ಪೀಠ -5 ರ ರಾಜ್ಯ ಮಾಹಿತಿ ಆಯುಕ್ತ ಎಸ್.ರಾಜಶೇಖರ ಅವರು ಆದೇಶ ಮಾಡಿದ್ದಾರೆ. ಮಾಹಿತಿ ಆಯೋಗದ ಆದೇಶ ಇದ್ದರೂ ಸಹ ಮಾಹಿತಿ ನೀಡದೇ ನಿರ್ಲಕ್ಷ್ಯ ತೋರಿಸಿರುವುದು ಹಾಗೂ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ದಂಡ ವಿಧಿಸಿದ್ದು, ವೇತನದಲ್ಲಿ ಒಂದೇ ಬಾರಿಗೆ ಕಟಾವು ಮಾಡಿ ಆಯೋಗದ ಖಾತೆಗೆ ತುಂಬುವಂತೆ ಕೋಲಾರ ಸಹಾಯಕ ಆಯುಕ್ತರು ಹಾಗೂ ಕೋಲಾರ ಜಿಲ್ಲಾಧಿಕಾರಿ ಅವರಿಗೆ ನಿರ್ದೇಶನ ನೀಡಿದ್ದಾರೆ. ಮಾಲೂರು ತಾಲೂಕಿನ ಬೈರತ್ನಹಳ್ಳಿಯ ಬಿ.ಎಂ.ವಿಜಯಕುಮಾರ್ ಅವರು ಬ್ಯಾಟರಾಯನಹಳ್ಳಿ ಗ್ರಾಮದ ಸರ್ವೆ ನಂ. 5 ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಕೋರಿ ದ್ದರು. ಆದರೆ ಮಾಲೂರು ತಹಸೀಲ್ದಾರ್ ರೂಪ ಅವರು ಯಾವುದೇ ದಾಖಲೆಗಳನ್ನು ನೀಡದೇ ಆಯೋಗದ ಆದೇಶವನ್ನು ಗಾಳಿಗೆ ತೂರಿದ್ದರಿಂದ 25 ಸಾವಿರ ರು. ದಂಡ ಹಾಕಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಮಾಲೂರು ತಾಲೂಕಿನ ಪುರುಷನಹಳ್ಳಿ ಗ್ರಾಮದ ಕೆ.ರಮೇಶ್ ಅವರು ತಮ್ಮ ಜಮೀನು ಸರ್ವೆ ನಂ.78 ಪೋಡಿ ಆಗಿದ್ದು ಹೊಸ ಸರ್ವೆ ನಂಬರ್ ಪ್ರಕಾರ ಆಕಾರ್ ಬಂದ್, ಹಿಸ್ಸಾ ಟಿಪ್ಪಣಿ ಹಾಗೂ ಇತರೆ ದಾಖಲೆಗಳನ್ನು ಕೋರಿದ್ದರು. ಆದರೆ ಯಾವುದೇ ಮಾಹಿತಿ ನೀಡಿರಲಿಲ್ಲ. ಆಯೋಗದಿಂದ ಕಾರಣ ಕೇಳಿ ನೋಟಿಸ್ ಜಾರಿಯಾಗಿದ್ದರೂ ಮೂರು ವಿಚಾರಣೆಗೆ ಸತತ ಗೈರು ಹಾಜರಾಗಿದ್ದರು. ಆದ್ದರಿಂದ ಈ ಪ್ರಕರಣದಲ್ಲಿ 25 ಸಾವಿರ ರು. ದಂಡ ವಿಧಿಸಲಾಗಿದೆ.

ವಿಚಾರಣೆಗೆ ಗೈರು: 10 ಸಾವಿರ ದಂಡ

ಬೆಂಗಳೂರು ಕಾಮಾಕ್ಷಿಪಾಳ್ಯದ ಮಂಜುನಾಥ್ ಟಿ. ನಾಯಕ್ ಅವರು ಮಾಲೂರು ತಾಲೂಕಿನ ಚನ್ನಿಗರಾಯಪುರದ ಸರ್ವೆ ನಂ.6 ರ ಸಾಗುವಳಿ ಚೀಟಿ ಹಾಕು ಇತರೆ ದಾಖಲೆ ಕೋರಿದ್ದರು. ಈ ಪ್ರಕರಣದಲ್ಲಿಯೂ ಯಾವುದೇ ದಾಖಲೆ ನೀಡದೆ ವಿಚಾರಣೆಗೂ ಗೈರು ಹಾಜರಾಗಿದ್ದರಿಂದ 10 ಸಾವಿರ ರು. ದಂಡ ವಿಧಿಸಿ ಆದೇಶ ಮಾಡಲಾಗಿದೆ.

ಬೇರೆ ಬೇಡಿಕೆ ಬಂದಾಗ ವಿವೇಚನೆ ಮಾಡಿ | ಯಾವುದೇ ಕಾರಣಕ್ಕೂ ಸಿಸಿಎಲ್ ರಜೆ ನಿರಾಕರಿಸುವಂತಿಲ್ಲ

ಮಕ್ಕಳ ಆರೈಕೆ ರಜೆ ಮಗುವಿನ ಹಕ್ಕು: ಹೈಕೋರ್ಟ್

ಬೆಂಗಳೂರು: ಮಕ್ಕಳ ಆರೈಕೆ ರಜೆ (ಸಿಸಿಎಲ್) ಮಗುವಿನ ಹಕ್ಕಾಗಿದ್ದು, ಈ ರಜೆಯ ಕೋರಿಕೆ ಬಂದಾಗ ಅದನ್ನು ನಿರಾಕರಿಸದೆ, ಆದ್ಯತೆ ಮೇರೆಗೆ ರಜೆ ಮಂಜೂರು ಮಾಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ನೌಕರರಿಂದ ಬೇರೆ ರಜೆಗಳಿಗೆ ಬೇಡಿಕೆ ಬಂದಾಗ ಮಂಜೂರು ಮಾಡಲು ವಿವೇಚನಾ ಅಧಿಕಾರ ಉದ್ಯೋಗದಾ ತರಿಗಿರಲಿದೆ. ಆದರೆ ಸಿಸಿಎಲ್ ರಜೆಯನ್ನು ನಿರಾಕರಿಸುವಂತಿಲ್ಲ ಎಂದು ತಿಳಿಸಿರುವ ಹೈಕೋರ್ಟ್, ಕೇಂದ್ರ ಸರಕಾರದ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಧೀನದಲ್ಲಿರುವ ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್‌ನಲ್ಲಿ ಆಡಳಿತಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕವಿತಾ ವಡ್ಡೆ ಅವರಿಗೆ ಫೆ.6ರಿಂದ ಮೇ 20ರವರೆಗೆ ಚೈಲ್ಡ್ ಕೇರ್ ಲೀವ್ ನೀಡಲು ನಿರ್ದೇಶನ ನೀಡಿದೆ.

ರಜೆ ನೀಡುವಂತೆ ಕೇಂದ್ರಿಯ ಆಡಳಿತ ನ್ಯಾಯಮಂಡಳಿ(ಸಿಎಟಿ) ಫೆ.5ರಂದು ಆದೇಶ ನೀಡಿತ್ತು. ಅದನ್ನು ಪ್ರಶ್ನಿಸಿ ಕೇಂದ್ರ ಸರಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ಹೈಕೋರ್ಟ್ ವಿಭಾಗೀಯ ಪೀಠ, ಈ ಆದೇಶ ನೀಡಿದ್ದು, ಮೇಲ್ಮನವಿ ವಜಾಗೊಳಿಸಿದೆ. ಅಲ್ಲದೆ, ತಾಯಿಯ ರಜೆ ನಿರಾಕರಿಸಿದರೆ ಅದು ಮಕ್ಕಳ ಮೇಲೆ ಒತ್ತಡವಾಗಬಹುದು. ಹಾಗಾಗಿ, ಸಿಸಿಎಲ್ ರಜೆ ಮಗುವಿನ ಹಕ್ಕು ಎಂದು ಅಭಿಪ್ರಾಯಪಟ್ಟು ಸಿಎಟಿ ಆದೇಶ ಎತ್ತಿಹಿಡಿದಿದೆ.

ಸಿಸಿಎಲ್‌ನಲ್ಲಿ ವಿವೇಚನೆ ಪ್ರಶ್ನೆ ಇಲ್ಲ

ಸಿಎಟಿ ರಜೆ ಮಂಜೂರು ಮಾಡಬೇಕೆಂದು ನೀಡಿರುವ ಕಾರಣಗಳನ್ನು ಉಲ್ಲೇಖಿಸಿರುವ ನ್ಯಾಯಪೀಠ, ಎಲ್ಲಾ ರಜೆಗಳನ್ನು ಮಂಜೂರು ಮಾಡುವುದು ಅಥವಾ ಬಿಡುವುದು ಉದ್ಯೋಗದಾತರ ವಿವೇಚನೆಗೆ ಬಿಟ್ಟಿದ್ದು. ಆದರೆ ಸಿಸಿಎಲ್ ವಿಚಾರ ಬಂದಾಗ ಅದರಲ್ಲಿ ವಿವೇಚನೆ ಅಧಿಕಾರದ ಪ್ರಶ್ನೆಯೇ ಇಲ್ಲ. ಅದು ಮಕ್ಕಳ ಆರೈಕೆಗೆಂದೇ ಮೀಸಲಿರುವುದರಿಂದ ಅದನ್ನು ನೀಡಲೇಬೇಕಾಗುತ್ತದೆ. ಮಕ್ಕಳಿಗೆ ತಾಯಿಯ ಆರೈಕೆ ಬೇಕಾಗುತ್ತದೆ. ಹಾಗಾಗಿ ತಾಯಿ ಸಿಸಿಎಲ್ ಅನ್ನು ತನ್ನ ಹಕ್ಕನ್ನಾಗಿ ಕೋರಬಹುದು ಎಂದು ಆದೇಶಿಸಿದೆ.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,
ಬೆಳಗಾವಿ ವಿಭಾಗ, ಬೆಳಗಾವಿ-590 016.
Phone No.: 0831-2467103 E-Mail: eepwdbgm01@gmail.com
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2025-26/7880 ದಿನಾಂಕ: 25-02-2026

ಟೆಂಡರ್ ಅಧಿಸೂಚನೆ (ಕೆ.ಪಿ.ಪಿ.ಪಿ. ನಲ್ಲಿ)

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1, 2, 3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025-26 ನೇ ಸಾಲಿನ 5054 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಟವಾಳ ವೆಚ್ಚ, 4059 SCP/TSP ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು, 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ, 3054-ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 3054- ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ 4059- ಇಲಾಖಾ ಕಟ್ಟಡಗಳು ನಿರ್ಮಾಣ, 8443 ಠೇವಣಿ ವಂತಿಕೆ, ಹಾಗೂ 2059 ವಿವಿಧ ಇಲಾಖಾ ಕಟ್ಟಡಗಳ ದುರಸ್ಥಿ ಹಾಗೂ ನಿರ್ವಹಣೆ ಅಡಿಯಲ್ಲಿ ಸೇರಿ ಒಟ್ಟು 27 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ **ರೂ. 7.99 ಲಕ್ಷಗಳು** ಹಾಗೂ **ರೂ. 397.86 ಲಕ್ಷಗಳು** ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ **ರೂ. 15,000/- ಹಾಗೂ ರೂ. 5,96,800/-** ಇರುತ್ತದೆ. ಭಾಗ-1: ಟೆಂಡರ್ ಸ್ವೀಕರಿಸುವ **ದಿನಾಂಕ 06.03.2026 ರ ಸಂಜೆ 4.30 ಗಂಟೆಯರೆಗೆ,** ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 07.03.2026 ರ ಸಂಜೆ 4.45 ಗಂಟೆ ನಂತರ** ಭಾಗ-2: ಟೆಂಡರ್ ಸ್ವೀಕರಿಸುವ **ದಿನಾಂಕ 16.03.2026 ರ ಸಂಜೆ 4.30 ಗಂಟೆಯರೆಗೆ,** ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 17.03.2026 ರ ಸಂಜೆ 4.45 ಗಂಟೆ** ನಂತರ, ಭಾಗ-3: ಟೆಂಡರ್ ಸ್ವೀಕರಿಸುವ **ದಿನಾಂಕ 20.03.2026 ರ ಸಂಜೆ 4.30 ಗಂಟೆಯರೆಗೆ,** ಟೆಂಡರ್ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 23.03.2026 ರ ಸಂಜೆ 4.45 ಗಂಟೆ ನಂತರ,** ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ **www.kppp.karnataka.gov.in** ರಲ್ಲಿ ದಿನಾಂಕ: **25.02.2026** ರ ನಂತರ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ
ವಾ.ಸಾ.ಇ./ಬೆಳಗಾವಿ/1936/ 2025-26/ದೇಶಪಾಂಡೆಪಬ್ಲಿಸಿಟಿ

ಮೈಸೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು-570005

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
http://kppp.karnataka.gov.in

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ಅಧ್ಯಯನ ವಿಭಾಗಗಳು/ಕಾಲೇಜುಗಳಿಗೆ ವಾರ್ಷಿಕ ದರ ಒಪ್ಪಂದದ ಪ್ರಕಾರ ಒಂದು ವರ್ಷದ ಅವಧಿಗೆ ಲೇಖನ ಸಾಮಾಗ್ರಿಗಳನ್ನು ಖರೀದಿಸಲು ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ e-procurement portal ಮಾತ್ರ ಸಲ್ಲಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಇಂಡೆಂಟ್ ಸಂಖ್ಯೆ: UOM/2025-26/IND0064 ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿ: 16.03.2026 ಸಂಜೆ 5:30ರವರೆಗೆ, ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗ, ಕ್ರಾಫರ್ಡ್ ಭವನ, ಮೈಸೂರು 570005 ಇಲ್ಲಿ ಖುದ್ದಾಗಿ ಭೇಟಿ ನೀಡಿ ಅಥವಾ 0821-2419209/512 ರಲ್ಲಿ ಸಂಪರ್ಕಿಸಬಹುದಾಗಿದೆ.

DIPR/DDMYS/1726/KSMCA/977/2025-26 ಸಹಿ/-ಕುಲಸಚಿವ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ,
ವಿಜಯನಗರ.
ಸಂಖ್ಯೆ:ಕಾ.ಅ/ಗ್ರಾ.ನೀ.ಸ&ನೈವಿ/ಹೊ/ತಾಂಶಾ/ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/2025-26/1156 ದಿನಾಂಕ:20-02-2026.

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ-09/2025-26.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಹೊಸಪೇಟೆರವರು 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಅನುಮೋಧನೆಯಾದ ಹರಪನಹಳ್ಳಿ ತಾಲ್ಲೂಕಿನ 01 (2ನೇ ಕರೆ) ಕಾಮಗಾರಿಗೆ ರೂ.35.65 ಲಕ್ಷಗಳಿಗೆ ಹಾಗೂ ಓ&ಎಂ ಯೋಜನೆಯಡಿ ಹೊಸಪೇಟೆ ತಾಲ್ಲೂಕಿನ ರೂ.38.10 ಲಕ್ಷ 02 ಕಾಮಗಾರಿಗಳು ಹಾಗೂ ಹೂವಿನಹಡಗಲಿ ತಾಲ್ಲೂಕಿನ ರೂ.72.91 ಲಕ್ಷ 04 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು, ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಅವಧಿ ದಿನಾಂಕ:21-02-2026 ರಿಂದ 08-03-2026 ರ ಸಾಯಂಕಾಲ 5.00 ಗಂಟೆಯವರೆಗೆ, ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:09-03-2026 ರಂದು ಸಾಯಂಕಾಲ 5.05 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಖಾಲಿ ಟೆಂಡರ್ ಡಾಕ್ಯೂಮೆಂಟನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/- ಕಾರ್ಯಪಾಲಕ ಇಂಜನೀಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/549

ಜಿಲ್ಲಾ ಪಂಚಾಯತ್ ಕೋಲಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ-563101. ದೂರವಾಣಿ ಸಂಖ್ಯೆ: 08152-222570, ಇ-ಮೇಲ್ ವಿಳಾಸ: eepredkolar1@gmail.com

ಅಲ್ಪಾವದಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: 25/2025-26 ದಿ: 21.02.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-I ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ-ಪ್ರಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ ಏಕ-ಲಕೋಟೆ ಪದ್ಧತಿಯಲ್ಲಿ (Single Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆ, ಮುಳಬಾಗಿಲು & ಶ್ರೀನಿವಾಸಪುರ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು 07 ಸಂಖ್ಯೆ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಟೆಂಡರಗಿಟ್ಟ ಮೊತ್ತ ಸರಾಸರಿ ರೂ. 3.00 ಲಕ್ಷ ರಿಂದ 15.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ **https://kppp.karnataka.gov.in/** ಮುಖಾಂತರ ಇ-ಟೆಂಡರಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಕೆಪಿಪಿಪಿ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಫಾರಂಗಳನ್ನು ಆರೋಹಿಸಲು ಸಲ್ಲಿಸುವ **ಕೊನೆಯ ದಿನಾಂಕ: 21.02.2026 ರಿಂದ 07.03.2026 ರ ಸಂಜೆ 4.00 ರವರೆಗೆ (2)** ಟೆಂಡರಗಳನ್ನು ಕೆ.ಪಿ.ಪಿ-ಪ್ರೋಟಾಲ್‌ನಲ್ಲಿ ತೆರೆಯುವ **ದಿನಾಂಕ: 09.03.2026 ರಂದು ಬೆಳಗ್ಗೆ 11.00** ಗಂಟೆಗೆಂದು ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆಪಿಪಿಪಿ ಸಹಾಯವಾಣಿ **ದೂರವಾಣಿ ಸಂಖ್ಯೆ: 91 8046010000 & +91 8022631200, 080-22230960 & 22234115** ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:511/ಕೆಎಸ್‌ಎಂಸಿಎ/2025-26

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ-/ 2025-26 ದಿನಾಂಕ:21.02.2026

ಕೆ.ಪಿ.ಪಿ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ 1) ಸನ್ 2024-25 ನೇ ಸಾಲಿನ ಶೇ 5 ಪಾಲಿಕೆ ನಿಧಿಯಲ್ಲಿನ 01 ಕಾಮಗಾರಿ, 2) ಅಮೃತ 2.0 ಅನುದಾನದಲ್ಲಿನ 01 ಕಾಮಗಾರಿ ಹಾಗೂ 3) ಸನ್ 2025-26 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿನ 06 ಕಾಮಗಾರಿಗಳು ಟೆಂಡರ್ ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಕೆ.ಪಿ.ಪಿ. ಪೋರ್ಟಲ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ಮಾತ್ರ ನಮೂದಿಸಲಾಗುವುದು.
2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 05.03.2026**

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/738/ ಕೆಎಸ್‌ಎಂಸಿಎ/2025-26

ಕನಕ ದುರ್ಗಮ್ಮ ಸಿಡಿ ಬಂಡಿ ರಥೋತ್ಸವ ಸಂಪನ್ನ

ಬಳ್ಳಾರಿ: ಅಧಿದೇವತೆ ಕನಕ ದುರ್ಗಮ್ಮ ಸಿಡಿ ಬಂಡಿ ರಥೋತ್ಸವ ಬುಧವಾರ ಅದ್ದೂರಿಯಾಗಿ ನೆರವೇರಿತು.

ನಗರ ಶಾಸಕ ನಾರಾ ಭರತ್ ರೆಡ್ಡಿ, ವಿಶೇಷ ಪೂಜೆ ಸಲ್ಲಿಸಿ, ರಥೋತ್ಸವಕ್ಕೆ ಚಾಲನೆ ನೀಡಿದರು. ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಸೇರಿ ರಾಜ್ಯದ ಹಲವು ಜಿಲ್ಲೆಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಸಿಡಿ ಬಂಡಿ ರಥೋತ್ಸವದಲ್ಲಿ ಭಾಗಿಯಾಗಿ ಕಣ್ತುಂಬಿಕೊಂಡರು. ಭಕ್ತರು ಸಿಡಿ ಬಂಡಿಗೆ ಬಾಳೆ ಹಣ್ಣಿನ ಜೊತೆಗೆ ಜೀವಂತ ಕೋಳಿ ಎಸೆದರು. ಕನಕದುರ್ಗಮ್ಮ ಸಿಡಿ ಬಂಡಿ ರಥೋತ್ಸವಕ್ಕೆ ಕೋಳಿ ಎಸೆಯುವುದು ಸಂಪ್ರದಾಯ. ಹೀಗಾಗಿ ಭಕ್ತರು ಸಿಡಿ ಬಂಡಿ ರಥೋತ್ಸವಕ್ಕೆ ಜೀವಂತ ಕೋಳಿ ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಬಳ್ಳಾರಿಯಲ್ಲಿ ಅದ್ದೂರಿಯಾಗಿ ಜರುಗಿದ ಕನಕ ದುರ್ಗಮ್ಮ ಸಿಡಿ ಬಂಡಿ ರಥೋತ್ಸವ.

ನೀರಿನ ಗುಣಮಟ್ಟ ಪರೀಕ್ಷೆ ಹೆಚ್ಚಿನ ಪ್ರಾಮುಖ್ಯತೆ: ಪ್ರಿಯಾಂಕ್ ಖರ್ಗೆ

ಗ್ರಾಮೀಣ ಪ್ರದೇಶಕ್ಕೆ ಶುದ್ಧ ನೀರು ನಮ್ಮ ಆದ್ಯತೆ

ಬೆಂಗಳೂರು: ರಾಜ್ಯಾದ್ಯಂತ ಸ್ಥಾಪಿಸಲಾಗಿರುವ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ನಿರ್ವಹಣೆ ಪ್ರಯೋಗಾಲಯಗಳ ಮೂಲಕ ನೀರಿನ ಗುಣಮಟ್ಟ ಪರೀಕ್ಷೆಗಳನ್ನು ಕೈಗೊಳ್ಳಲು ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದ್ದು, ರಾಜ್ಯ ಸರಕಾರ 2024-25 ನೇ ಸಾಲಿನಲ್ಲಿ 23.52 ಕೋಟಿ ರು. ಮತ್ತು ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆವಿಗೂ 28.85 ಕೋಟಿ ರು. ವೆಚ್ಚ ಮಾಡಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕೇಂದ್ರ ಸರಕಾರ ಜಲ ಜೀವನ್ ಮಿಷನ್ ಯೋಜನೆಯಡಿ ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮಕ್ಕೆ ಶೇ.2ರಷ್ಟು ಅನುದಾನ ಬಿಡುಗಡೆಗೊಳಿಸಬೇಕಾಗಿದ್ದು, ಕಳೆದ ವರ್ಷ ಹಾಗೂ ಪ್ರಸಕ್ತ ವರ್ಷ ಕೇಂದ್ರ ಸರಕಾರ ತನ್ನ ಪಾಲಿನ ಅನುದಾನ ಬಿಡುಗಡೆಗೊಳಿಸದೇ ಇದ್ದರೂ, ಗ್ರಾಮೀಣ ಜನರಿಗೆ ಶುದ್ಧ ನೀರು ಸರಬರಾಜು ಮಾಡಬೇಕೆಂಬ ಸಂಕಲ್ಪದಿಂದ ರಾಜ್ಯ ಸರಕಾರವೇ ಈ ವೆಚ್ಚವನ್ನು ಭರಿಸಿದೆ. ರಾಜ್ಯದಲ್ಲಿ 2023-24ರಲ್ಲಿ ಲಕ್ಷ, 2025-25ರಲ್ಲಿ 3.90 ಲಕ್ಷ ಹಾಗೂ 2025-26ರಲ್ಲಿ 2.46 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಸಲಾಗಿದ್ದು, ಇವುಗಳಲ್ಲಿ 9.34 ಲಕ್ಷ ಮಾದರಿಗಳಲ್ಲಿ ರಾಸಾಯನಿಕಗಳು, 7244 ಮಾದರಿಗಳಲ್ಲಿ ಬ್ಯಾಕ್ಟೀರಿಯಾ ಪತ್ತೆಯಾಗಿದ್ದವು. ಈ ಪೈಕಿ ಕಲುಷಿತ ನೀರು ಎಂದು ಕಂಡು ಬಂದ 49,309 ನೀರಿನ ಮಾದರಿಗಳಿಗೆ ಪರ್ಯಾಯ ಕ್ರಮ ಕೈಗೊಂಡು ನೀರು ಪೂರೈಸಲಾಗಿದೆ. ನೀರಿನ ಮಾದರಿಯ ವರದಿಯು ಬಿಐಎಸ್: 10500-2012 ಗುಣಮಟ್ಟದ ಮಿತಿಗಿಂತ ಹೆಚ್ಚಾಗಿರುವುದು ಕಂಡುಬಂದ ಮಾದರಿಗಳನ್ನು ಮರು ಪರೀಕ್ಷೆಗೆ ಒಳಪಡಿಸಿ ಗುಣಮಟ್ಟ ಖಚಿತಪಡಿಸಿಕೊಂಡು ಕಲುಷಿತ ನೀರಿಗೆ ಪರ್ಯಾಯವಾಗಿ ಇತರೆ ಮೂಲಗಳಿಂದ ಕುಡಿಯುವ ನೀರು ಒದಗಿಸಲಾಗುತ್ತಿದೆ ಎಂದರು.

ಬೇಸಿಗೆ ಅವಧಿಯಲ್ಲಿ ಗ್ರಾಮೀಣ ಜನವಸತಿ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಸಿಇಓಗಳಿಗೆ ಮಾಹಿತಿ ನೀಡಲಾಗಿದ್ದು, ಎಲ್ಲಾ ನೀರಿನ ಶೇಖರಣಾ ಘಟಕಗಳನ್ನು ಕಾಲ-ಕಾಲಕ್ಕೆ ಸ್ವಚ್ಛಗೊಳಿಸಲು ಮತ್ತು ಕ್ಲೋರಿನೇಷನ್ ಕೈಗೊಳ್ಳುವಂತೆಯೂ ಸೂಚಿಸಲಾಗಿದೆ.
-ಪ್ರಿಯಾಂಕ್ ಖರ್ಗೆ, ಸಚಿವ

ಪಂಚಾಯಿತಿ ಚುನಾವಣೆಯಲ್ಲೂ ಕಮಲ ಮೈತ್ರಿಗೆ ಸಿದ್ಧ: ಎಚ್‌ಡಿಡಿ

← ಮೊದಲಪುಟದಿಂದ

ಜೆಡಿಎಸ್‌ನಲ್ಲಿ ಕುಟುಂಬದವರನ್ನು ಹೊರತುಪಡಿಸಿ ಬೇರೆಯವರಿಗೆ ಹುದ್ದೆ ಕೊಡುವುದಿಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ನನಗೆ ಪ್ರತಿಯೊಂದು ನೆನಪಿದೆ. ಪ್ರತಿಯೊಂದಕ್ಕೂ ಸಮಯ ಬಂದಾಗ ಪ್ರತಿಕ್ರಿಯಿಸುತ್ತೇನೆ. ಸಿದ್ದರಾಮಯ್ಯ ಅವರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯೆ ಕೊಡುವ ಅಗತ್ಯವಿಲ್ಲ ಎಂದು ಹೇಳಿದರು.

ವಿಜಯಪುರದಲ್ಲಿ ಫೆ.27 ರಂದು ಜೆಡಿಎಸ್ ಸಮಾವೇಶ ನಡೆಸಲಾಗುತ್ತದೆ. ಈಗಾಗಲೇ ಅದರ ಪೂರ್ವ ಸಿದ್ಧತೆಗಳು ಪ್ರಾರಂಭವಾಗಿವೆ. ಆ ಸಮಾವೇಶದಲ್ಲಿ ಪಾಲ್ಗೊಳ್ಳಲು ನನಗೂ ಆಹ್ವಾನ ನೀಡಿದ್ದಾರೆ. ರಾಜ್ಯಸಭೆಯಲ್ಲಿ ರಾಜ್ಯದ ನೀರಾವರಿ ವಿಚಾರ ಸೇರಿದಂತೆ ಏನು ಪ್ರಸ್ತಾಪ ಮಾಡಬೇಕೊ ಅದನ್ನು ಮಾಡುತ್ತೇನೆ. ನನ್ನ ರಾಜ್ಯಸಭಾ ಅವಧಿ ಮುಗಿದರೂ ಮಾಧ್ಯಮದವರನ್ನು ಭೇಟಿಯಾಗುತ್ತೇನೆ ಎಂದರು.

ನಡೆಯದ ಮೈತ್ರಿ ಸಭೆ

ರಾಜ್ಯದಲ್ಲಿ ಬಿಜೆಪಿ ಗತವೈಭವ ಮರುಕಳಿಸಲು 2028ರ ಚುನಾವಣೆಗೆ ಈಗಾಗಲೇ ಬಿಜೆಪಿ ಸಿದ್ಧತೆ ಮಾಡಿಕೊಂಡಿದೆ. ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೊಮ್ಮೆ ಗೆಲುವು ಸಾಧಿಸಬೇಕೆಂದು ಬಿಜೆಪಿ ಕಳೆದ ವಾರ ರಾಜ್ಯ ನಡೆಸಿದ ಕಾರ್ಯಕಾರಣಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಸೋಮಣ್ಣ, ಶೋಭಾ ಕರಂದ್ಲಾಜೆ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯ ಭಾಗವಹಿಸಿ ಚುನಾವಣಾ ತಂತ್ರದ ಬಗ್ಗೆ ಚರ್ಚೆ ನಡೆಸಿದ್ದಾರೆ. ಇದಲ್ಲದೆ ಗ್ರೇಟರ್ ಬೆಂಗಳೂರು ಚುನಾವಣೆ ಸಂಬಂಧ ಬಿಜೆಪಿ ಸರಣಿ ಸಭೆಗಳನ್ನು ಮಾಡಿದ್ದಲ್ಲದೆ ಕೇಂದ್ರದಿಂದ ಬಂದಿರುವ ಉಸ್ತುವಾರಿಗಳು ಸಭೆಗಳನ್ನು ನಡೆಸುತ್ತಿದ್ದಾರೆ. ಇದರ ನಡುವೆ ವಿಧಾನಸಭೆಯ ಎರಡು ಉಪ ಚುನಾವಣೆಗಳು ಬರಲಿದೆ. ಬಾಗೇಪಲ್ಲಿ ಉಪ ಚುನಾವಣೆಯೂ ಇದ್ದು, ಸರಣಿ ಚುನಾವಣೆಗಳು ಮುಂದಿನ ಆರೇಳು ತಿಂಗಳು ನಡೆಯಲಿವೆ. ಹೀಗಿದ್ದರೂ ರಾಜ್ಯದಲ್ಲಿ ಎರಡೂ ಪಕ್ಷದ ಮುಖಂಡರು ಮೈತ್ರಿ ಬಗ್ಗೆ ಯಾವುದೇ ಮಾತುಕತೆ ನಡೆಸಿಲ್ಲ.

ಸಮಾಚಾರ ಸಣ್ಣದಲ್ಲ

ಲಂಚ ಸ್ವೀಕರಿಸಿದ ನೌಕರನಿಗೆ ಜೈಲು

ಕಲಬುರಗಿ: ವಿದ್ಯಾರ್ಥಿಗಳ ಶಿಷ್ಯವೇತನ ಮಂಜೂರಾತಿಗಾಗಿ ಲಂಚಕ್ಕೆ ಬೇಡಿಕೆಯಿಟ್ಟಿದ್ದ ಇಲ್ಲಿನ ಸಮಾಜ ಕಲ್ಯಾಣ ಇಲಾಖೆಯ ದ್ವಿತೀಯ ದರ್ಜೆ ಸಹಾಯಕನಿಗೆ ನಗರದ ವಿಶೇಷ ನ್ಯಾಯಾಲಯವು ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ 20 ಸಾವಿರ ರು. ದಂಡ ವಿಧಿಸಿ ತೀರ್ಪು ನೀಡಿದೆ. 2020 ರಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್‌ಡಿಎ ಆಗಿದ್ದ ವೀರೇಶ ಬಡಿಗೇರ, ಶಿಕ್ಷಣ ಸಂಸ್ಥೆಯೊಂದರ ವಿದ್ಯಾರ್ಥಿಗಳ ಶಿಷ್ಯವೇತನ ಕಡತವನ್ನು ಮಂಡಿಸಲು 2,000 ರು. ಲಂಚದ ಬೇಡಿಕೆಯಿಟ್ಟಿದ್ದರು. ಈ ಕುರಿತು ರಾಜಶೇಖರ ಕಟ್ಟಿಮನಿ ನೀಡಿದ ದೂರಿನನ್ವಯ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ತನಿಖಾಧಿಕಾರಿ ಮಹಮ್ಮದ ಇಸ್ಮಾಯಿಲ ಅವರು ಸಲ್ಲಿಸಿದ ದೋಷಾರೋಪಣ ಪಟ್ಟಿಯನ್ನು ಆಧರಿಸಿ, ಪ್ರಧಾನ ಜಿಲ್ಲಾ ಮತ್ತು ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಜಿ.ಎಲ್. ಲಕ್ಷ್ಮೀನಾರಾಯಣ ಅವರು ವಿಚಾರಣೆ ನಡೆಸಿದರು.

ಯತ್ನಾಳ್ ವಿರುದ್ಧ ದ್ವೇಷ ಭಾಷಣ ಕೇಸ್

ಯಾದಗಿರಿ: ದ್ವೇಷ ಭಾಷಣಕ್ಕೆ ಸಂಬಂಧಿಸಿದಂತೆ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿರುದ್ಧ ಗುರುಮಠಕಲ್ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸೋಮವಾರ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ. ಪಟ್ಟಣದಲ್ಲಿ ಶನಿವಾರ (ಫೆ.21) ನಡೆದ ಶಿವಾಜಿ ಮಹಾರಾಜ ಜಯಂತಿ ಕಾರ್ಯಕ್ರಮ ದಲ್ಲಿ ಯತ್ನಾಳ್ ಅವರು ಭಾಷಣ ಮಾಡುತ್ತಿದ್ದ ವೇಳೆ ಮುಸ್ಲಿಂ ಸಮುದಾಯ, ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರೂ, ಟಿಪ್ಪು ಸುಲ್ತಾನ, ಔರಂಗಜೇಬ್ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇದು ಜಾಲತಾಣಗಳಲ್ಲಿ ಚರ್ಚೆ ಮತ್ತು ಆಕ್ಷೇಪಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭೂ ಒತ್ತುವರಿ ಕೇಸ್: ಮಾ.10ಕ್ಕೆ ವಿಚಾರಣೆ

ಕಲಬುರಗಿ: ಕೇತನಗಾನಹಳ್ಳಿ ಸರಕಾರಿ ಭೂಮಿ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ವಿರುದ್ಧ

ಗಂಭೀರ ಆರೋಪ ಕೇಳಿ ಬಂದಿದೆ. ಪ್ರಕರಣದ ತನಿಖೆಗಾಗಿ ರಾಜ್ಯ ಸರಕಾರ ವಿಶೇಷ ತನಿಖಾ ದಳ (ಎಸ್ಐಟಿ) ರಚಿಸಿ, ತಹಸೀಲ್ದಾರರ ಮೂಲಕ ನೋಟಿಸ್ ಜಾರಿಗೊಳಿಸಿದೆ. ನೋಟಿಸ್ ತಡೆ ಕೋರಿ ಕುಮಾರಸ್ವಾಮಿ ನ್ಯಾಯಾಲಯವನ್ನು ಸಂಪರ್ಕಿಸಿದ್ದು, ಕಲಬುರಗಿ ಹೈಕೋರ್ಟ್ ಹಾಲ್ ನಂ.4ರಲ್ಲಿ ನ್ಯಾಯಮೂರ್ತಿ ಇಂದಿರೇಶ್ ಅವರ ಮುಂದೆ ವಿಚಾರಣೆ ನಡೆಯಿತು. ಎರಡೂ ಪಕ್ಷಗಳ ವಾದಗಳನ್ನು ಆಲಿಸಿದ ನ್ಯಾಯಮೂರ್ತಿಗಳು ಪ್ರಕರಣದ ಮುಂದಿನ ವಿಚಾರಣೆಯನ್ನು ಮಾರ್ಚ್ 10ಕ್ಕೆ ಮುಂದೂಡಿದರು.

ರಾಜ್ಯ ಸರಕಾರ ಪತನ ಸಾಧ್ಯತೆ: ಯತ್ನಾಳ್

ರಾಯಚೂರು: ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ ಜಗಳದಿಂದ ಸರಕಾರ ಪತನವಾಗುವ ಸಾಧ್ಯತೆ ಹೆಚ್ಚಾಗಿದ್ದು, ಇವರ ಗಲಾಟೆಯಲ್ಲಿ ದಲಿತರಿಗೆ ಸಿಎಂಪಟ್ಟ ದೊರೆಯಲು ಸಾಧ್ಯವಿಲ್ಲ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು. ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸ್ಥಾನಕ್ಕಾಗಿ ಇಬ್ಬರು ಜಗಳ ಆಡುತ್ತಿದ್ದಾರೆ. ಸಿದ್ದರಾಮಯ್ಯ ಬಿಡೋದಿಲ್ಲ. ಡಿಕೆ ಶಿವಕುಮಾರ ಕೇಳೋದಿಲ್ಲ. ಇಬ್ಬರ ನ್ಯಾಯ ಮುಗಿಯುತಿಲ್ಲ. ಮೂರನೇ ನ್ಯಾಯ ಎಲ್ಲಿ ಕೊಡುತ್ತಾರೆ ಎಂದು ಪ್ರಶ್ನಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
26.02.2026
ಸಂಜೆ: 06.55 ರಿಂದ 08.05 ರವರೆಗೆ



ಗುರುವಾರದ ಸಂಚಿಕೆ
ಗುರುನಾಥ ರಾಜಗೀರಾ
ವಿಷಯ
ಬೀದರ್ ಪುಸ್ತಕ ಸಂತೆ
vishwavani.news

ದಿನ ವಿಶೇಷ

26 ಫೆಬ್ರವರಿ 2026 ಗುರುವಾರ

» ಸೂರ್ಯೋದಯ	: 06-39
» ಸೂರ್ಯಾಸ್ತ	: 06-29
» ತಿಥಿ	: ದಶಮಿ
» ನಕ್ಷತ್ರ	: ಮೃಗಶಿರಾ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಫಾಲ್ಗುಣ
» ಪಕ್ಷ	: ಶುಕ್ಲ ಪಕ್ಷ

ಈಗಾಗಲೇ ಭರ್ತಿ ಮಾಡಿರುವ ಹುದ್ದೆಗಳ ಕುರಿತು ಸಿಎಂಗೆ ವಿಜಯೇಂದ್ರ ಪ್ರಶ್ನೆ

40 ಸಾವಿರ ಹುದ್ದೆಗಳ ಭರ್ತಿ ದಾಖಲೆ ಬಿಡುಗಡೆ ಮಾಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ 40 ಸಾವಿರ ಸರಕಾರಿ ಹುದ್ದೆಗಳನ್ನು ಭರ್ತಿ ಮಾಡಿರುವುದಾಗಿ ಹೇಳಿದೆ. ಇದರ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಗಳನ್ನು ಏಕೆ ಬಿಡುಗಡೆ ಮಾಡಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನೆ ಮಾಡಿದ್ದಾರೆ.

ಮಲ್ಲೇಶ್ವರದ ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಅವರು ನಮ ಪಕ್ಷ ಅಧಿಕಾರಕ್ಕೆ ಬಂದ ನಂತರ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿದ್ದ 40 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ದಾಖಲೆಗಳನ್ನು ಬಿಡುಗಡೆ ಮಾಡಲು ಮೀನಾಮೇಷ ಏಕೆ ಎಂದು ಪ್ರಶ್ನಿಸಿದರು.

ಹೋರಾಟ ಗಂಭೀರವಾಗಿ ಪರಿಗಣಿಸಿ: ಧಾರವಾಡದಲ್ಲಿ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ಹಲವು ದಿನಗಳಿಂದ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಸರಕಾರ ಕುಂಬಕರ್ಣ ನಿದ್ದೆಯಲ್ಲಿರುವುದರಿಂದ ಇಂಥ ಸಮಸ್ಯೆಗಳು ಅವರ ಗಮನಕ್ಕೆ ಬಂದಿಲ್ಲ, ಅಲ್ಲದೆ ಅವರ ನಾಯಕರು ಕೂಡ ಮಾತನಾಡುತ್ತಿಲ್ಲ ಎಂದರು.

ಚುನಾವಣೆಗೂ ಮುನ್ನ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಒಂದೇ ವರ್ಷದಲ್ಲಿ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಯುವಜನತೆಗೆ ವಾಗ್ದಾನ ಕೊಟ್ಟು ಮತ ಪಡೆದರು. ಆದರೆ ಅಧಿಕಾರಕ್ಕೆ ಬಂದ ನಂತರ ಎಲ್ಲವನ್ನು ಮರೆತಿದ್ದಾರೆ. ಸಿಎಂ ಸಿದ್ದರಾಮಯ್ಯನವರನ್ನು ಬಿಟ್ಟು ಬಿಡಿ. ರಾಹುಲ್ ಗಾಂಧಿಗೂ ಇದು ಮರೆತು ಹೋಗಿರಬಹುದು. ಸಿಎಂ ಕುರ್ಚಿ ಕಿತ್ತಾಟದಿಂದ ಇಂಥ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ. ಅಧಿಕಾರಕ್ಕೆ ಬಂದು ಇಷ್ಟು ದಿನವಾದರೂ ಯುವಕರ ಜೊತೆ ಮಾತನಾಡಲು ಸಮಯ ಸಿಕ್ಕಿಲ್ಲ. ಪ್ರತಿಯೊಂದಕ್ಕೂ ನಮ್ಮ ಪಕ್ಷದ ಮೇಲೆ ಗೂಬೆ ಕೂರಿಸುತ್ತಿದ್ದೀರಿ ಎಂದು ಆರೋಪಿಸಿದರು.

24,300 ಹುದ್ದೆ ಭರ್ತಿ ಮಾಡಲು ನಾಲ್ಕೈದು ತಿಂಗಳ ಹಿಂದೆಯೇ ಭರ್ತಿ ಮಾಡಲು ಸರಕಾರ ಅನುಮತಿ ನೀಡಿದೆ. ಮೀಸಲಾತಿ ವಿಚಾರವಾಗಿ ಪ್ರಕರಣ ಇದೆ ಎಂದು ಹೇಳಿದ್ದಾರೆ. ಪ್ರಕರಣ ಇರುವುದು ಎಷ್ಟು ಸತ್ಯವೋ? ಹೆಚ್ಚುವರಿ ಇರುವ ಮೀಸಲಾತಿ ಬದಿಗಿಟ್ಟು ಉಳಿಕೆ ತುಂಬಿ ಎಂದು ಹೈಕೋರ್ಟ್ ಕೂಡ ಹೇಳಿದೆ. ಅದರ ಬಗ್ಗೆ ಅಫಿಡವಿಟ್ ಕೊಟ್ಟರೆ ಆಯಿತು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿ.ವೈ.ವಿಜಯೇಂದ್ರ ಮಾತನಾಡಿದರು.

> ಸಿಎಂ ವಾಸ್ತವವಾಗಿ ಸತ್ಯ ಒಪ್ಪಿಕೊಂಡು ರಾಜ್ಯದ ಜನರ ಕ್ಷಮೆ ಕೇಳಬೇಕು. ಐದು ಗ್ಯಾರಂಟಿಗಳ ಹೊರೆಯಾಗುತ್ತಿದೆ. ಅದನ್ನು ತೆಗೆಯಲು ಒಪ್ಪಿಕೊಳ್ಳುತ್ತಿಲ್ಲ. ಈಗಲೂ ಸುಳ್ಳು ಹೇಳುತ್ತಿದ್ದಾರೆ. ಆರೋಪ ಮಾಡೋದು ಬಿಟ್ಟು, ಪತ್ರಿಕಾ ಹೇಳಿಕೆ ನೀಡದೆ ನೇಮಕಾತಿ ಪ್ರಕ್ರಿಯೆ ಆರಂಭ ಮಾಡಬೇಕು. ಇಲ್ಲದೇ ಹೋದರೆ ಬಿಜೆಪಿ ಕೂಡ ಹೋರಾಟಕ್ಕೆ ಕರೆ ನೀಡಲಿದೆ.
>
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಿಎಂ, ಡಿಸಿಎಂ ಸುಳ್ಳಾಟ, ಕಳ್ಳಾಟ ನಿಲ್ಲಿಸಲಿ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಈ ಸುಳ್ಳಾಟ, ಕಳ್ಳಾಟ ನಿಲ್ಲಿಸಬೇಕು. 16 ಬಜೆಟ್ ಮಂಡಿಸಿ ದೇವರಾಜ ಅರಸು ಅವರ ದಾಖಲೆಯನ್ನು ಮುರಿದ ಅನುಭವಿ ಮುಖ್ಯಮಂತ್ರಿಗಳು ನಾಡಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕೊಡಬೇಕು. ಸುಳ್ಳು ಹೇಳುವುದು ಬಿಟ್ಟರೆ ಬೇರೇನನ್ನೂ ಮಾಡಲು ಇವರಿಗೆ ಸಾಧ್ಯವಾಗಿಲ್ಲ. ಕಾಂಗ್ರೆಸ್ ಸರಕಾರದ ಮನೆದೇವರೇ ಸುಳ್ಳು . 108 ಆಂಬುಲೆನ್ಸ ಸಿಬ್ಬಂದಿ ಮತ್ತು ವೈದ್ಯರು ಬೀದಿಗಿಳಿದು ಹೋರಾಡುವ ಪರಿಸ್ಥಿತಿಯನ್ನು ಸರಕಾರ ತಂದಿಟ್ಟಿದೆ. ಕಾಂಗ್ರೆಸ್ಸಿನವರು ಸಾವಿರ ದಿನಗಳ ಸಾಧನಾ ಸಮಾವೇಶ ಮಾಡುತ್ತಾರೆ. ಸಮಸ್ಯೆಗಳನ್ನು ಪರಿಹರಿಸುತ್ತಿಲ್ಲ. ಇವರ ಬೇಜವಾಬ್ದಾರಿಯಿಂದ ರಾಜ್ಯದ ಆರೋಗ್ಯ ಇಲಾಖೆಯೇ ಐ.ಸಿ.ಯುನಲ್ಲಿದೆ. ಔಷಧಿ ಕೊರತೆ ಕಾಡುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಜನಪ್ರಿಯತೆಯನ್ನು ಸಹಿಸಲಾಗದೇ, ಸರಕಾರಿ ಆಸ್ಪತ್ರೆಗಳ ಆವರಣದಲ್ಲಿದ್ದ ಜನೌಷಧಿ ಕೇಂದ್ರಗಳನ್ನು ಮುಚ್ಚಿ ಹಾಕುವ ಷಡ್ಯಂತ್ರ ಮಾಡಿದ್ದೇ ಇವರ ಘನಂದಾರಿ ಕೆಲಸ ಎಂದರು.

ಹಿಂದೆ ಉದ್ಯೋಗಳನ್ನು ತುಂಬಿದ್ದೇವೆ, ಈಗ ಮತ್ತೆ ತುಂಬುತ್ತಿದ್ದೇವೆ ಯುವಕರು ಧೈರ್ಯವಾಗಿರಿ, ಶೀಘ್ರದಲ್ಲಿ ಸಮಸ್ಯೆ ಬಗೆಹರಿಸುತ್ತೇವೆ

ಹಗರಣರಹಿತ ಹುದ್ದೆ ಭರ್ತಿಗೆ ಸರಕಾರ ಕ್ರಮ: ಡಿಸಿಎಂ ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರ ಹಗರಣ ರಹಿತವಾಗಿ ಖಾಲಿ ಹುದ್ದೆಗಳನ್ನು ತುಂಬಬೇಕು ಎಂದು ಕೆಲಸ ಮಾಡುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುವಕರು ಧೈರ್ಯವಾಗಿರಿ. ನಾವು ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆ. ಸದ್ಯದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಇದರ ಬಗ್ಗೆ ಚರ್ಚಿಸಿ ಶೀಘ್ರದಲ್ಲೇ ನಿಮಗೆ ಸಂದೇಶವನ್ನು ನೀಡುತ್ತೇವೆ. ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ, ಮಾಡುತ್ತೇವೆ, ಇದಕ್ಕೆ ಬದ್ಧವಾಗಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಸರಕಾರ ಅಧಿಕಾರದಲ್ಲಿ ಇದ್ದಾಗ ಖಾಲಿ ಹುದ್ದೆಗ ಳನ್ನು ಭರ್ತಿ ಮಾಡಿಕೊಳ್ಳಲು ಆಗಲಿಲ್ಲ. ಅವರ ಸಮಯದಲ್ಲಿ ಬಹಳಷ್ಟು ಹಗರಣಗಳಾದವು. ನಮಗೆ ಯುವಕರ ನೋವು ಅರ್ಥವಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ನಮ್ಮ ಸರಕಾರ ಕೆಲಸ ಮಾಡುತ್ತಿದೆ. ಇದು ನಮ್ಮ ಆದ್ಯತೆ. ಹುದ್ದೆಗಳ ಭರ್ತಿ ಕುರಿತು ಯೋಜನೆ ತಯಾರಿಸಿದ್ದೇವೆ. ಕೆಪಿಎಸ್‌ಸಿ ಸೇರಿದಂತೆ ಬೇರೆ ಸಂಸ್ಥೆಗಳಿಗೆ ಹುದ್ದೆ ಭರ್ತಿಗೆ ಜವಾಬ್ದಾರಿ ನೀಡಿದ್ದೇವೆ. ಶಿಕ್ಷಕರ ಹುದ್ದೆ, ಆರೋಗ್ಯ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳ ಲಾಗುತ್ತಿದೆ. ಒಳಮೀಸಲಾತಿ ವಿಚಾರಕ್ಕೆ ಒಂದಷ್ಟು ಅಡಚಣೆ ಗಳು ಬರುತ್ತಿದೆ. ನಿರುದ್ಯೋಗಿ ಯುವಕರಿಗೆ ಶಕ್ತಿ ಬರಲಿ ಎಂದೇ ಯುವನಿಧಿ ಯೋಜನೆ ಜಾರಿಗೆ ತಂದಿದ್ದೇವೆ ಎಂದು ತಿಳಿಸಿದರು.

> ಒಳಮೀಸಲು ವಿಷಯದಲ್ಲಿ ಸಮಸ್ಯೆಯಿದೆ. ನೇಮಕಾತಿ ಮಾಡಿಕೊಂಡರೆ ಕೆಲವರು ನ್ಯಾಯಾಲ ಯಕ್ಕೆ ಹೋಗಬ ಹುದು. ಹಾಗಾಗಿ ಎಲ್ಲದರ ಬಗ್ಗೆಯೂ ಚರ್ಚಿಸಿ ಹುದ್ದೆ ಭರ್ತಿ ತೀರ್ಮಾನಗಳನ್ನು ಮಾಡುತ್ತೇವೆ. ಈ ಹಿಂದೆ ಬಿಜೆಪಿ ಅವಧಿಯಲ್ಲಿ ವಿಧಾನಸೌಧ ವ್ಯಾಪಾರ ಸೌಧವಾಗಿತ್ತು. ಎಷ್ಟು ಹಗರಣಗಳು ನಡೆದಿವೆ ಎಂಬುದು ಗೊತ್ತಿದೆ. ಧಾರವಾಡದಲ್ಲಿ ಪ್ರತಿಭಟನೆ ಸಂದರ್ಭದಲ್ಲಿ ಬಿಜೆಪಿಯವರ ವಿರುದ್ಧವೂ ಆಕ್ರೋಶ ವ್ಯಕ್ತವಾಗಿದೆ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಒಂದೊಂದು ಹುದ್ದೆ ಎಷ್ಟಕ್ಕೆ ಮಾರಾಟ ಮಾಡಿದ್ದಾರೆ ಎಂಬುದು ಗೊತ್ತಿದೆ.
>
> –ಪ್ರಿಯಾಂಕ್ ಖರ್ಗೆ, ಸಚಿವ

ಖಾಲಿ ಹುದ್ದೆ ಭರ್ತಿಗೆ ಸಿದ್ಧ

ಇನ್ನು ಇದೇ ವಿಷಯವಾಗಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದ್ದು, ರಾಜ್ಯ ಸರಕಾರದಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ನಾವು ಸಿದ್ಧರಿದ್ದೇವೆ. ಯುವಕರ ಸಮಸ್ಯೆಗಳ ಅರಿವಿದೆ. ಈಗಾಗಲೇ 35 ರಿಂದ 40 ಸಾವಿರ ಹುದ್ದೆ ತುಂಬಿದ್ದೇವೆ. ಈಗ ಒಳ ಮೀಸಲಾತಿ ಸಮಸ್ಯೆ ಇದೆ. ಎಲ್ಲವನ್ನೂ ಸರಿಪಡಿಸಿಕೊಂಡು ಶೀಘ್ರದಲ್ಲೇ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದರು. ರಾಜ್ಯ ಸರಕಾರ ನೇಮಕಕ್ಕೆ ಸಂಬಂಧಿಸಿದಂತೆ ವಯೋಮಿತಿಯನ್ನು ಸಡಿಲ ಮಾಡಿದೆ. ಗುರುವಾರ ಸಚಿವ ಸಂಪುಟ ಸಭೆಯಿದ್ದು, ಈ ಸಭೆಯಲ್ಲಿ ನೇಮಕಾತಿ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ. ನೇಮಕಾತಿ ವಿಳಂಬಕ್ಕೆ ಆಗುತ್ತಿರುವ ಕಾನೂನು ತೊಡಕುಗಳು ಸೇರಿದಂತೆ ಎಲ್ಲದರ ಬಗ್ಗೆಯೂ ಚರ್ಚೆಯಾಗುತ್ತದೆ. ಈ ಹಿಂದೆ ಪ್ರತಿಪಕ್ಷದಲ್ಲಿದ್ದಾಗಲೂ ನಾವು ಯುವಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇವೆ. ನೇಮಕಾತಿಗೆ ಇರುವ ಗೊಂದಲಗಳನ್ನು ಸರಿಪಡಿಸಿಕೊಂಡು ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಲ್ಲಿಕಾರ್ಜುನ ವಿರುದ್ಧ ದೂರು ದಾಖಲು

ಯಾದಗಿರಿ: ಬಾಲಕಿಯೊಡನೆ ಅನುಚಿತವಾಗಿ ವರ್ತಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಶಹಾಪುರ

ತಾಲೂಕಿನ ಮಹಲ್ ರೋಜಾದ ಸ್ವಯಂ ಘೋಷಿತ ದೇವಮಾನವನೆಂದೇ ಖ್ಯಾತಿ ಪಡೆದ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂ ದೂರು ದಾಖಲಿಸಿಕೊಂಡಿದೆ. ಅಪ್ರಾಪ್ತ ಬಾಲಕಿಯ ಜತೆಗೆ ಅನುಚಿತ ವರ್ತನೆ ನಡೆಸಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಬೆನ್ನಲ್ಲೇ ಎಚ್ಚೆತ್ತ ಆಯೋಗ ಸ್ವಯಂ ದೂರು ದಾಖಲಿಸಿಕೊಂಡಿದೆ.ಸಾಮಾಜಿಕ ಜಾಲತಾಣದಲ್ಲಿ ವೈರ್‌ಆದ ವಿಡಿಯೊ ತುಣುಕುಗಳನ್ನು ಪರಿಶೀಲನೆ ನಡೆಸಿ, ಸೂಕ್ತ ಕ್ರಮದ ಬಗ್ಗೆ ಆಯೋಗಕ್ಕೆ ಮರು ಟಪಾಲಿನಲ್ಲಿ ಮಾಹಿತಿ ಸಲ್ಲಿಸುವಂತೆ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಯಾದಗಿರಿ ಜಿಲ್ಲಾ ಪೊಲೀಸ್ ಅಧಿಕ್ಷರಿಗೆ ಪತ್ರದಲ್ಲಿ ವಿವರಿಸಿದ್ದಾರೆ.

ವೈರಲ್ ವಿಡಿಯೊದಲ್ಲಿ ಏನಿದೆ?

ಅಪ್ರಾಪ್ತ ಬಾಲಕಿಯೋರ್ವಳ ಕುತ್ತಿಗೆ ಹಿಡಿದು ಎತ್ತಿ ಮಂಚದ ಮೇಲೆ ನಿಲ್ಲಿಸುವುದು ಸೇರಿದಂತೆ ಆಕೆಗೆ ಚಿವುಟುವವದರ ಜತೆಗೆ ಅಸಭ್ಯವಾಗಿ ವರ್ತಿಸಿರುವ ದೃಶ್ಯಗಳನ್ನು ವಿಡಿಯೋದಲ್ಲಿ ಕಾಣಬಹುದಾಗಿದೆ. ಇನ್ನು ಈ ಕ್ಲಿಪ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದೇ ತಡ ಮುತ್ಯಾ ನಡೆಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಘಟನೆ ಬಗ್ಗೆ ಪೊಲೀಸರು ಸುಮೋಟೋ ಪ್ರಕರಣ ದಾಖಲಿಸಿಕೊಂಡು ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬಿತ್ಯಾದಿ ಅಭಿಪ್ರಾಯಗಳು ಕೇಳಿಬಂದಿದ್ದವು. ಆ ಬೆನ್ನಲ್ಲೇ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿದೆ.

ಯಾರೀತ ಮುತ್ಯಾ?

ಕಳೆದ ನಾಲ್ಕು ವರ್ಷಗಗಳಿಂದ ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್, ಯೂಟ್ಯೂಬ್, ಫೇಸ್‌ಬುಕ್‌ನಲ್ಲಿ ಮುನ್ನೆಲೆಗೆ ಬಂದ 26 ರಿಂದ 27 ವರ್ಷದ ಯುವಕ ಮಲ್ಲಿಕಾರ್ಜುನ ದಿನ ಕಳೆದಂತೆ ಸ್ವಯಂ ಘೋಷಿತ ದೇವ ಮಾನವನಾಗಿ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡಿದ. ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲರೋಜಾ ಗ್ರಾಮದವರಾಗಿರುವ ಮಲ್ಲಿಕಾರ್ಜುನ ಮುತ್ಯಾ ಹೇಳಿದ್ದೇ ವೇದ ವಾಕ್ಯ. ಭಕ್ತರು ಮನಸ್ಸಿನಲ್ಲಿ ಅಂದುಕೊಂಡ ಮಾತನ್ನು ತಕ್ಷಣ ಮುಖದ ಮೇಲೆ ಹೇಳುವ ವಾಕ್ ಚಾತುರ್ಯದಿಂದ ಎಲ್ಲಿಲ್ಲದ ಜನಪ್ರಿಯ ಹೊಂದಿದ್ದ ಮಹಲರೋಜಾ ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ಈಗ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂ ದೂರು ದಾಖಲಿಸಿಕೊಂಡಿದೆ.

ಅಕಾಲಿಕ ಮಳೆಗೆ ಜೋಳ ಹಾನಿ

ರಾಯಚೂರು: ಜಿಲ್ಲೆಯಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಹಲವೆಡೆ ಸಜ್ಜೆ, ಜೋಳದ ಬೆಳೆ ಹಾಳಾಗಿದ್ದು, ರೈತರು ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸಿದ್ದಾರೆ. ಜಿಲ್ಲೆಯ ದೇವದುರ್ಗ ತಾಲೂಕಿನ ಎಚ್.ಸಿದ್ದಾಪುರ ಹಾಗೂ ಸುತ್ತಮುತ್ತಲ ಗ್ರಾಮ

ಗಳಲ್ಲಿ ಸುರಿದ ಅಕಾಲಿಕ ಮಳೆಯಿಂದಾಗಿ ಬೆಳೆಹಾನಿಯಾಗಿದೆ. ಎಚ್.ಸಿದ್ದಾಪುರ ಗ್ರಾಮದ ರೈತ ಕೃಷ್ಣಾಗೆ ಸೇರಿದ 7 ಎಕರೆ ಸಜ್ಜೆ ಬೆಳೆ ಸಂಪೂರ್ಣ ನೆಲಕ್ಕಚ್ಚಿದೆ. ಸಾವಿರಾರು ರು. ಖರ್ಚು ಮಾಡಿ ಬೆಳೆದಿದ್ದ ಬೆಳೆ ನಷ್ಟದಿಂದ ರೈತ ಕಂಗಾಲಾಗಿದ್ದಾರೆ. ನೆಲಕ್ಕಚ್ಚಿದ ಬೆಳೆಯನ್ನು ಎತ್ತಿನಿಲ್ಲಿಸಿ ಉಳಿಸಿಕೊಳ್ಳಲು ರೈತ ಹರಸಾಹಸ ಪಡುತ್ತಿದ್ದಾರೆ. ಗಾಳಿ ಹಾಗೂ ಮಳೆಗೆ ಜಿಲ್ಲೆಯ ಹಲವೆಡೆ ಭತ್ತ, ಜೋಳದ ಬೆಳೆಗಳಿಗೆ ಹಾನಿಯಾಗಿದೆ. ಕೂಡಲೇ ಬೆಳೆ ಪರಿಶೀಲನೆ ನಡೆಸಿ, ಪರಿಹಾರ ನೀಡುವಂತೆ ರೈತರು ಒತ್ತಾಯಿಸಿದ್ದಾರೆ. ಕಳೆದ ಎರಡು ದಿನಗಳಿಂದ ಅಕಾಲಿಕ ಮಳೆ ಸುರಿಯುತ್ತಿದ್ದು, ಜಿಲ್ಲೆಯ ರೈತರನ್ನು ಕಂಗೆಡಿಸಿದೆ. ಒಣಗಲು ಹಾಕಿದ್ದ ಮೆಣಸಿನಕಾಯಿಗೂ ಸಹ ಪರಿಣಾಮ ಬೀರಿದೆ. ಮೆಣಸಿನಕಾಯಿ ಒದ್ದೆಯಾಗಿದ್ದು, ರೈತರನ್ನು ಚಿಂತೆಗೀಡುಮಾಡಿದೆ.

ಪಂಜಾಬ್‌ನಲ್ಲಿನ ಸ್ಥಿತಿ ನಮಗೆ ಪಾಠವಾಗಲಿ

ಗಂಗಾವತಿ: ಪಂಚ ನದಿಗಳ ತವರು ಎಂದು ಕರೆಯಿಸಿಕೊಂಡಿದ್ದ ಪಂಜಾಬ್ ಇಂದು ದೇಶದ ಕ್ಯಾನ್ಸರ್ ಹಬ್ ಆಗುತ್ತಿದೆ. ಪಂಜಾಬ್ ನಮಗೊಂದು ಪಾಠವಾಗಬೇಕು ಎಂದು ಕೊಲ್ಹಾಪುರ ಜಿಲ್ಲೆಯ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.



ನಗರದ ಬನ್ನಿಗಿಡದ ಕ್ಯಾಂಪಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಂಜಾಬನ್‌ನಂತಹ ಚಿಕ್ಕ ರಾಜ್ಯದಲ್ಲಿ 300ಕ್ಕೂ ಹೆಚ್ಚು ಕ್ಯಾನ್ಸರ್ ಆಸ್ಪತ್ರೆಗಳಿವೆ. ಅಲ್ಲಿನ ಒಂದೊಂದು ಜಿಲ್ಲೆಯಲ್ಲಿ ಏಳರಿಂದ ಎಂಟು ಕ್ಯಾನ್ಸರ್ ಆಸ್ಪತ್ರೆಗಳಿವೆ. ಅಲ್ಲಿನ ಯಾವ ರೈತನ ಆರೋಗ್ಯವೂ ಚೆನ್ನಾಗಿಲ್ಲ. ಹೀಗಾಗಿ ಪಂಜಾಬ್‌ಗೆ ಯಾರೂ ಹೆಣ್ಣು ಕೊಡಲು ತಯಾರಿಲ್ಲ. ಅಲ್ಲಿನ ಜನ ದೇಶದ ಬೇರೆ ರಾಜ್ಯಗಳಿಗೆ ಬಂದು ಇಲ್ಲಿನ ಹೆಣ್ಣು ಮಕ್ಕಳನ್ನು ಮದುವೆಯಾಗಲು ಯತ್ನಿಸುತ್ತಿದ್ದಾರೆ. ಗೋಧಿಯನ್ನು ಅತಿ ಹೆಚ್ಚು ಬೆಳೆಯುವ ಉದ್ದೇಶಕ್ಕೆ ಅಲ್ಲಿ ನೈಸರ್ಗಿಕ ನಿಯಮಗಳನ್ನು ಮೀರಿ ಅತಿಯಾದ ಕ್ರಿಮಿನಾಶಕ ಬಳಸಿದ್ದರ ಪರಿಣಾಮ ಸಮಸ್ಯೆಯಾಗುತ್ತಿದೆ. ಆ ಹೆಣ್ಣು ಮಕ್ಕಳು ವಿಧವೆಯರಾದರು, ವಯಸ್ಸಲ್ಲಿ ಚಿಕ್ಕವರೋ–ದೊಡ್ಡವರಾದರೂ ಸರಿ. ಒಟ್ಟಾರೆ ಮದುವೆಯಾದರೆ ಸಾಕು ಎಂಬ ಸ್ಥಿತಿಗೆ ಪಂಜಾಬ್ ರಾಜ್ಯದ ಜನ ಬಂದಿದ್ದಾರೆ. ಆ ಸ್ಥಿತಿ ನಮಗೆ ಎದುರಾಗಬಾರದು ಎಂದರೆ ಈಗಲೇ ಎಚ್ಚೆತ್ತುಕೊಳ್ಳಬೇಕು. ಅದರಲ್ಲೂ ವಿಶೇಷವಾಗಿ ಭತ್ತದ ನಾಡು ಕಿಷ್ಕಿಂಧೆಯ ಜನ ಎಚ್ಚೆತ್ತುಕೊಳ್ಳಬೇಕು. ಗಂಗಾವತಿ, ಸಿಂಧನೂರು, ಸಿರುಗುಪ್ಪ ಭಾಗದ ಜನ ಪಂಜಾಬ್‌ನಿಂದ ಪಾಠ ಕಲಿಯಬೇಕು. ಸಾವಯವ ಪದಾರ್ಥಗಳನ್ನು ಕನಿಷ್ಠ ಪಕ್ಷ ನಮ್ಮ ಮನೆಗಳಿಗೆ ಸಾಲುವಷ್ಟಾದರೂ ಬೆಳೆದುಕೊಳ್ಳಬೇಕು. ಇದಕ್ಕೆ ಪ್ರಾಮಾಣಿಕ ಸಾವಯವ ರೈತರ ಸಮೂಹವನ್ನು ಸೃಷ್ಟಿಸುವ ಕೆಲಸ ಆಗಬೇಕು ಎಂದರು.

ಸಂಕೇತ್ ಪೋಷಕರಿಗೆ ಸಾಂತ್ವನ ಹೇಳಿದ ಸಂಸದ ರಾಘವೇಂದ್ರ

ಹತ್ಯೆಯಾದ ಶಿವಮೊಗ್ಗದ ವಿದ್ಯಾರ್ಥಿ ಸಂಕೇತ್ ಮನೆಗೆ ಸಂಸದ ಬಿ.ವೈ.ರಾಘವೇಂದ್ರ ಭೇಟಿ ನೀಡಿ ಮೃತನ ಪೋಷಕರಿಗೆ ಸಾಂತ್ವನ ಹೇಳಿದರು.

ಶಿವಮೊಗ್ಗ: ಅಪ್ರಪ್ತಾರಿಂದ ಶಿವಮೊಗ್ಗದಲ್ಲಿ ಹತ್ಯೆಯಾದ 10ನೇ ತರಗತಿ ವಿದ್ಯಾರ್ಥಿ ಸಂಕೇತ್ ಮನೆಗೆ ಸಂಸದ ಬಿ.ವೈ. ರಾಘವೇಂದ್ರ, ಭೇಟಿ ನೀಡಿ, ಮೃತನ ಪೋಷಕರಿಗೆ ಸಾಂತ್ವನ ಹೇಳಿದರು.

ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯ ಸರಕಾರದ ವಿರುದ್ಧ ಕಿಡಿಕಾರಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪೊಲೀಸರ ಮೇಲಿನ ಭಯ ಕಡಿಮೆ ಆಗಿದೆ. ಇದರಿಂದಲೇ ಅಪರಾಧ ಕೃತ್ಯಗಳು ಹೆಚ್ಚಳ ಆಗಿವೆ. ಸೂಳೆಬೈಲಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್ ಹತ್ಯೆ ಇದಕ್ಕೆ ನಿದರ್ಶನ.ನಶೆಯಲ್ಲಿದ್ದ ಮತಾಂಧ ಪುಂಡರು ಸಂಕೇತ್‌ನ ಅಮಾನುಷವಾಗಿ ಹಲ್ಲೆ ಮಾಡಿ ಕೊಲೆ ಮಾಡಿದ್ದು, ತುಂಬಾ ಬೇಸರ ತಂದಿದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ದುರ್ಘಟನೆಗೆ ಹೊಣೆಗಾರರಾ ದವರ ವಿರುದ್ಧ ತಕ್ಷಣ ಕಠಿಣ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರನ್ನು ಬಂಧಿಸಿ ಕಾನೂನಿನ ಅತ್ಯಂತ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಜತೆಗೆ, ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಸರಕಾರ ತಕ್ಷಣ ಪರಿಹಾರ ನೀಡಿ, ಅಗತ್ಯ ನೆರವು ಒದಗಿಸಬೇಕು ಎಂದು ಆಗ್ರಹಿಸಿದರು. ಜನರ ಭದ್ರತೆ ಸರಕಾರದ ಮೊದಲ ಆದ್ಯತೆಯಾಗಬೇಕು. ರಾಜ್ಯ ಸರಕಾರ ತಕ್ಷಣ ಎಚ್ಚೆತ್ತುಕೊಂಡು ಕಾನೂನು ಸುವ್ಯವಸ್ಥೆಯನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಮೋಹನ ರೆಡ್ಡಿ ಸೇರಿ ಇತರರಿದ್ದರು.

ಮೈಸೂರಿನಲ್ಲಿ ಮಾದಕ ಘಟಕ ಪತ್ತೆ ಪ್ರಕರಣ: ಐವರ ಬಂಧನ

ಮೈಸೂರು: ನಗರದ ಹೊರವಲಯದ ಮನೆಯೊಂದರಲ್ಲಿ ಅಕ್ರಮವಾಗಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆ ಹಚ್ಚಿರುವ ಜಿಲ್ಲಾ ಪೊಲೀಸರು, ಜಾಲದಲ್ಲಿದ್ದ ಐವರನ್ನು ಬಂಧಿಸಿದ್ದಾರೆ. ಬಂಧಿತರು ಗುಜರಾತ್‌ನವರಾಗಿದ್ದು, ತನಿಖೆ ನಡೆಯುತ್ತಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಇತ್ತೀಚಿಗೆ ಕಾರ್ಯಾಚರಣೆ ನಡೆಸಲಾಗಿತ್ತು. ದಾಳಿ ವೇಳೆ ಮನೆಯಲ್ಲಿ ಹಲವು ರಾಸಾಯನಿಕ ವಸ್ತುಗಳು ಹಾಗೂ 10 ಬ್ಯಾರಲ್ ರಾಸಾಯನಿಕ ದ್ರವ್ಯ ಪತ್ತೆಯಾಗಿತ್ತು. ಇವುಗಳ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಇದೀಗ ಎಫ್‌ಎಸ್‌ಎಲ್ ವರದಿ ಪೊಲೀಸರ ಕೈಸೇರಿದೆ. ಯಾಂದಳ್ಳಿ ಮನೆಯಲ್ಲಿ ದೊರೆತ ರಾಸಾಯನಿಕ ವಸ್ತುಗಳು ಡ್ರಗ್ಸ್ ಎಂದು ಪ್ರಯೋಗಾಲಯದ ವರದಿ ಖಚಿತಪಡಿಸಿದೆ. ಆ ಮನೆಯಲ್ಲಿ ದೊರೆತ ಒಂದು ಕೆ.ಜಿ.ಮಾದಕ ವಸ್ತು ಹಾಗೂ ಡ್ರಗ್ಸ್ ತಯಾರಿಕೆಗೆ ಅವಶ್ಯವಿರುವ ಕಚ್ಚಾ ರಾಸಾಯನಿಕವು ಡ್ರಗ್ಸ್ ತಯಾರಿಗೆ ಬಳಸುವ ವಸ್ತುಗಳೇ ಎಂದು ದೃಢಪಟ್ಟಿದೆ.

ಇದಕ್ಕೂ ಮುನ್ನ ಬೆಲವತ್ತ ಬಳಿ ಡ್ರಗ್ಸ್ ಫ್ಯಾಕ್ಟರಿ ಮತ್ತು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಡ್ರಗ್ಸ್ ಫ್ಯಾಕ್ಟರಿಯನ್ನು ನೆರೆ ರಾಜ್ಯದ ಪೊಲೀಸರು ಪತ್ತೆ ಮಾಡಿದ್ದರು. ಈಗ ಮೈಸೂರು ನಗರದ ಹೊರ ವಲಯದಲ್ಲಿಯೇ ಮತ್ತೊಂದು ಫ್ಯಾಕ್ಟರಿ ಪತ್ತೆಯಾಗಿರುವುದು ಪೊಲೀಸರಿಗೆ ಸವಾಲಾಗಿದೆ. ಮನೆಯಲ್ಲಿ ಮಾದಕ ವಸ್ತು ತಯಾರು ಮಾಡುತ್ತಿದ್ದ ಎಲ್ಲರೂ ಗುಜರಾತ್ ಮೂಲದವರಾಗಿದ್ದಾರೆ. ಈ ಸಂಬಂಧ ಗುಜರಾತ್‌ನಲ್ಲಿ ತನಿಖೆ ನಡೆಸುತ್ತಿರುವ ಮೈಸೂರು ಜಿಲ್ಲಾ ಪೊಲೀಸರ ತಂಡ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

> ನಮ್ಮ ಪೊಲೀಸ್ ತಂಡ ಇನ್ನೂ ಕೂಡ ಗುಜರಾತ್‌ನಲ್ಲೇ ಇದ್ದು, ಇನ್ನೂ ಹಲವು ಆರೋಪಿಗಳನ್ನು ಬಂಧಿಸಲು ಕಾರ್ಯಾಚರ ಣೆಯಲ್ಲಿ ತೊಡಗಿದ್ದಾರೆ. ಉಳಿದ ಆರೋಪಿ ಗಳ ಬಗ್ಗೆ ನಮ್ಮ ತಂಡಕ್ಕೆ ಸ್ಪಷ್ಟ ಸುಳಿವು ದೊರೆತಿದ್ದು, ಅವರನ್ನೂ ಕೂಡಲೇ ಬಂಧಿಸಲಾಗುವುದು.
>
> –ಮಲ್ಲಿಕಾರ್ಜುನ ಬಾಲದಂಡಿ, ಮೈಸೂರು ಎಸ್‌ಪಿ

ಜಸ್ಟ್‌ಪಾಸ್ ವಿದ್ಯಾರ್ಥಿಗಳಿಗೆ ಪ್ರವೇಶದಲ್ಲಿ ಆದ್ಯತೆ ನೀಡುತ್ತಿರುವುದು ವಿಶೇಷ

ಮಹಾಮಸ್ತಕಾಭಿಷೇಕಕ್ಕೆ ಸರಕಾರದಿಂದ ಸಹಕಾರ: ಸಿಎಂ

ಉಡುಪಿ: 2027ರ ಕಾರ್ಕಳ ಬಾಹುಬಲಿ ಮಹಾಮಸ್ತಕಾಭಿಷೇಕಕ್ಕೆ ಸರಕಾರದಿಂದ ಸರ್ವ ರೀತಿಯ ಸಹಕಾರ ನೀಡುವುದಾಗಿ ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.

ಕಾರ್ಕಳ ತಾಲೂಕು ಕುಕ್ಕುಂದೂರು ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆಯ 35ನೇ ವರ್ಷದ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಕಾರ್ಕಳದಲ್ಲಿ ಕಿಸಾನ್ ಸಭಾದ ಮೂಲಕ ಪ್ರೌಢಶಾಲೆ ಪ್ರಾರಂಭಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯಕ್ಕೆ ಮುಂದಾಗಿರುವ ಡಾ. ಎಂ. ವೀರಪ್ಪ ಮೊಯ್ಲಿ ಅವರ ಕಾರ್ಯ ಅಭಿನಂದನೀಯ. ಶೇ.35% ಅಂಕ ಪಡೆದಿರುವ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಪ್ರಥಮ ಆದ್ಯತೆ ನೀಡುತ್ತಿರುವುದು ವಿಶೇಷ. ಈ ಕಾರ್ಯವನ್ನು ಹರ್ಷ ಮೊಯ್ಲಿ ಮುಂದುವರಿಸಲಿ ಎಂದು ಆಶಿಸಿದರು.

ಶತಾಯುಷಿ ಆಶಯ: ಡಾ. ಎಂ. ವೀರಪ್ಪ ಮೊಯ್ಲಿ ಅವರು ನೂರು ವರ್ಷ ಬಾಳಬೇಕು. ಇನ್ನು 14 ವರ್ಷ ಬದುಕಿ ಶತಾಯುಷಿಯಾಗುವಿರಿ ಎಂದು ಸಿಎಂ ಆಶಿಸಿದರು. ಕಿಸಾನ್ ಸಭಾದ ನೂತನ ಸಭಾಂಗಣ, ಕಾಬೆಟ್ಟುವಿನಲ್ಲಿ ನಿರ್ಮಾಣವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆಗೊಳಿಸಿದರು.

ರೈತ ಬಾಂಧವರ ಕನಸಿನ ಗೋಪುರ: ಮೊಯ್ಲಿ: ರೈತರು ಸಂಘಟನೆಯಾಗಬೇಕೆಂದು ಕಿಸಾನ್ ಸಭಾ ಸ್ಥಾಪಿಸಿದೆವು. ಬಳಿಕ ಕಿಸಾನ್ ಸಭಾ ಟ್ರಸ್ಟ್ ಮೂಲಕ ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆ ಪ್ರಾರಂಭಿಸಿ ರೈತರು, ಹಿಂದುಳಿದವರಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಶೇ. 35 ಅಂಕ ಪಡೆದ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡು ಅವರು ಎಸ್ಸೆಸೆಲ್ಸಿಯಲ್ಲಿ ಉತ್ತಮ ಅಂಕ ಪಡೆದುಕೊಳ್ಳುವಂತೆ ಪ್ರೇರೆಪಿಸಲಾಗುತ್ತಿದೆ. ಪ್ರಸ್ತುತ ರಾಜ್ಯದ ವಿವಿಧ ಭಾಗಗಳ 104 ವಿದ್ಯಾರ್ಥಿಗಳು ಇಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಮಾಜಿ ಸಿಎಂ ಡಾ. ಎಂ.ವೀರಪ್ಪ ಮೊಯ್ಲಿ ಹೇಳಿದರು.



ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕುಕ್ಕುಂದೂರು ಮಹಾತ್ಮ ಗಾಂಧಿ ವಸತಿ ಪ್ರೌಢಶಾಲೆಯ 35ನೇ ವರ್ಷದ ಸಮಾರಂಭವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಮಾಜಿ ಸಿಎಂ ಎಂ.ವೀರಪ್ಪ ಮೊಯ್ಲಿ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಇದ್ದರು.

> ಬಿಜೆಪಿಯ ಅವಧಿಯಲ್ಲಿ ಅಂಬೇಡ್ಕರ್ ಭವನಕ್ಕೆ ಮಂಜೂರಾತಿ ದೊರಕಿತ್ತು. ಆ ವೇಳೆ 74 ಲಕ್ಷ ರು. ಬಿಡುಗಡೆಗೊಂಡಿತ್ತು. ಬಳಿಕ ಕಾಂಗ್ರೆಸ್ ಸರಕಾರದ ಅವಧಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಕಾರ್ಕಳ ಶಾಸಕ ಸುನಿಲ್ ಕುಮಾರ್ ಅವರ ಒತ್ತಡದಿಂದಾಗಿ ಅನುದಾನ ಮಂಜೂರು ಮಾಡಲಾಗಿದೆ.
>
> –ಎಚ್.ಸಿ.ಮಹದೇವಪ್ಪ, ಸಚಿವ

ಚಿಕ್ಕಮಗಳೂರು ನಗರ ಸಮೀಪ ಕಾಡಾನೆ ಹಿಂಡು ಕಂಡು ಆತಂಕ

ಚಿಕ್ಕಮಗಳೂರು: ಕಾಫಿನಾಡಲ್ಲಿ ಕಾಡಾನೆಗಳ ಹಾವಳಿ ಮಿತಿಮೀರಿದೆ. ಕಾಡಾನೆಗಳು ಚಿಕ್ಕಮಗಳೂರು ನಗರದಿಂದ ಕೇವಲ 5 ಕಿಮೀ ದೂರದ ಮತ್ತಾವರ ಗ್ರಾಮದ ಹಾಸುಪಾಸಿನಲ್ಲಿ ಬೀಡು ಬಿಟ್ಟಿರುವುದು ಚಿಕ್ಕಮಗಳೂರು ನಗರ ನಿವಾಸಿಗಳ ನಿದ್ದೆಗೆಡಿಸಿದೆ.

ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅಕ್ಷರಶಃ ಮಲೆನಾಡಿಗರ ನೆಮ್ಮದಿ ಕೆಡಿಸಿದೆ. ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಗಜಪಡೆಗಳ ಸಂಚಾರ ಮಿತಿಮೀರಿದ್ದು, ಕಾಫಿ ತೋಟದ ಕಾರ್ಮಿಕರು ಹಾಗೂ ಸ್ಥಳೀಯ ನಿವಾಸಿಗಳು ಪ್ರತಿ ಕ್ಷಣವೂ ಆತಂಕದಲ್ಲೇ ಬದುಕುವಂತಾಗಿದೆ. ಚಿಕ್ಕಮಗಳೂರು ನಗರಕ್ಕೆ ತೀರಾ ಸಮೀಪದಲ್ಲಿರುವ ಮತ್ತವರ ಮತ್ತು ನಲ್ಲೂರು ಗ್ರಾಮಗಳ ಸುತ್ತಮುತ್ತ 2 ಪುಂಡಾನೆಗಳು ಬೀಡುಬಿಟ್ಟಿವೆ. ಈ ಆನೆಗಳು ಎಸ್ಟೇಟ್‌ಗಳ ನಡುವೆ ಓಡಾಟ ನಡೆಸುತ್ತಿರುವುದರಿಂದ ತೋಟದ ಕೆಲಸಕ್ಕೆ ಹೋಗಲು ಕಾರ್ಮಿಕರು ಭಯಪಡುತ್ತಿದ್ದಾರೆ.

ಜತೆಗೆ ಭತ್ತದ ಪೈರನ್ನು ನಾಶ ಮಾಡಿವೆ. ಅತ್ತ ಚಿಕ್ಕಮಗಳೂರು ಮತ್ತು ಬೇಲೂರು ಗಡಿ ಭಾಗದ ಗ್ರಾಮವಾದ ಚೀಕನಹಳ್ಳಿಯ ಸುತ್ತಮುತ್ತ ಒಂಟಿ ಸಲಗವೊಂದು ಪ್ರತ್ಯಕ್ಷವಾಗಿದೆ. ಇನ್ನೂ ನರಸಿಂಹರಾಜಪುರ ತಾಲೂಕಿನ ಮಡಬೂರು ಗ್ರಾಮದ ಯಕ್ಕಡಬೈಲಿನ ಅರಣ್ಯ ಪ್ರದೇಶದಲ್ಲಿ ಆನೆಗಳ ಹಿಂಡೇ ಬೀಡುಬಿಟ್ಟಿದೆ. ಒಂಟಿ ಆನೆಗಳಷ್ಟೇ ಅಲ್ಲದೇ ಹಿಂಡು ಹಿಂಡಾಗಿ ಆನೆಗಳು ಕಾಣಿಸಿಕೊಳ್ಳುತ್ತಿರುವುದು ಕೃಷಿಕರ ನಿದ್ದೆಗೆಡಿಸಿದೆ. ಬೆಳೆ ಹಾನಿ ಭೀತಿಯ ಜತೆ ಜೀ ಭಯವೂ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಎಚ್ಚರಿಕೆ ನೀಡಿದ್ದು, ಸಾರ್ವಜನಿಕರು ಜಾಗರೂಕತೆಯಿಂದ ಇರಲು ಸೂಚಿಸಲಾಗಿದೆ.

ವಿಶ್ವವಾಣಿ

ಸಂಪಾದಕೀಯ

ಸರಕಾರವೇ ಹೀಗೆ ಮಾಡಿದರೆ ಸರಿಯೇ...

ಅದು ಸರಿಯಿಲ್ಲ, ಇದು ಸರಿಯಿಲ್ಲ, ಅದು ಸರಿಯಾಗಬೇಕು, ಇದು ಸರಿಯಾಗಬೇಕು ಎಂಬ ಕಾರಣಗಳನ್ನಿಟ್ಟುಕೊಂಡು ದೇಶದ ಮೂಲೆ ಮೂಲೆಗಳಲ್ಲಿ ಪ್ರತಿಭಟನೆಗಳು ನಡೆಯುತ್ತಲೇ ಇರುತ್ತವೆ. ಇಂತಹ ಪ್ರತಿಭಟನೆಗಳು ತಮ್ಮ ನಿರ್ದಿಷ್ಟ ಉದ್ದೇಶ ಸಾಧನೆ ಮಾಡುವುದು ಮಾತ್ರ ತೀರಾ ಅಪರೂಪ. ಬಹುತೇಕ ಹೋರಾಟಗಳನ್ನು ನಮ್ಮ ವಿವಿಧ ವ್ಯವಸ್ಥೆಗಳು ತಮ್ಮ ತಂತ್ರಗಾರಿಕೆ ಬಳಸಿ ವಿಫಲ ಮಾಡಿಸುತ್ತವೆ. ಈ ಹೋರಾಟಗಳು ಸಮಾಜದ ಅಗತ್ಯಗಳನ್ನು ಗಮನಿಸಿಯೇ ಮೇಲೆದ್ದಿರುತ್ತವೆ. ವ್ಯವಸ್ಥೆ ಅದನ್ನು ಸತತವಾಗಿ ನಿರ್ಲಕ್ಷಿಸಿದ್ದರಿಂದಲೇ ಒಂದು ಹಂತದಲ್ಲಿ ಜನ ಬೀದಿಗಿಳಿದು ಹೋರಾಟ ಮಾಡುತ್ತಾರೆ. ಇಂತಹ ಹೋರಾಟಗಳನ್ನು ತಮ್ಮ ತೋಳ್ಬಲ ಬಳಸಿ ಹತ್ತಿಕ್ಕುವ ಬದಲು, ಅವುಗಳನ್ನು ಪರಿಶೀಲಿಸಿ ಸರಿಪಡಿಸುವ ದಿಕ್ಕಿನಲ್ಲಿ ಹೆಜ್ಜೆಯಿಡಬೇಕು. ಧಾರವಾಡದಲ್ಲಿ ಸೋಮವಾರ ವಿದ್ಯಾರ್ಥಿ ಸಂಘಟನೆಗಳು 2.7 ಲಕ್ಷ ಖಾಲಿಯಿರುವ ಸರಕಾರಿ ಹುದ್ದೆಗಳನ್ನು ತುಂಬಿ ಎಂದು ದೊಡ್ಡ ಹೋರಾಟ ಮಾಡಿದರು. ಇಡೀ ಧಾರವಾಡ ನಗರವೇ ವಿದ್ಯಾರ್ಥಿಗಳಿಂದ ತುಂಬಿ ಸಂಚಾರ ಅಸ್ತವ್ಯಸ್ತವಾಗಿತ್ತು. ಅಂತಹುದ್ದೇ ಒಂದು ಹೋರಾಟ ಇತ್ತೀಚೆಗೆ ಚಿಕ್ಕಮಗಳೂರು ತಾಲೂಕಿನ ಕಡಬಗೆರೆಯಲ್ಲಿ ನಡೆಯಿತು. ನರಸಿಂಹರಾಜಪುರ ತಾಲೂಕಿನಲ್ಲಿ ಕಾಡಾನೆ ದಾಳಿಗೆ ಉತ್ತರ ಕರ್ನಾಟಕದ ಮಹಿಳೆಯೊಬ್ಬರು ಸಾವನ್ನಪ್ಪಿದ್ದ ಬೆನ್ನಲ್ಲೇ ಅಲ್ಲಿನ, ಆ ಭಾಗದ ಸ್ಥಳೀಯರು ರೊಚ್ಚಿಗೆದ್ದರು. ಅಲ್ಲಿನ ಕಾಡಾನೆ ದಾಳಿಯಿಂದ ಸಾಯುತ್ತಿರುವುದು ಹೊಸ ವಿದ್ಯಮಾನವೇನಲ್ಲ. ಮಾತ್ರವಲ್ಲ ಕಾಡಾನೆ, ಕಾಡುಹಂದಿ, ಕಾಡುಕೋಣ, ನವಿಲು, ಮಂಗಗಳ ನಿರಂತರ ಹಾವಳಿಯಿಂದ ರೈತರು ವರ್ಷವಿಡೀ ಕಷ್ಟಪಟ್ಟು ಬೆಳೆದಿದ್ದು ಕೆಲವೇ ಗಂಟೆಗಳಲ್ಲಿ ನೆಲಸಮವಾಗುತ್ತಿದೆ. ಒಂದು ಕಡೆ ರೋಗಗಳು, ಇನ್ನೊಂದು ಕಡೆ ಪರಿಶ್ರಮಕ್ಕೆ ತಕ್ಕ ಲಾಭವಿಲ್ಲದ ಬೇಸರ, ಇನ್ನೊಂದು ಕಡೆ ಸರಕಾರದ ಲೆಕ್ಕಾಚಾರವೇ ಇಲ್ಲದ, ಜನರಿಗೆ ನಿಜಕ್ಕೂ ಉಪಯೋಗಕ್ಕೆ ಬರದ ನೀತಿಗಳು, ಇನ್ನೊಂದು ಕಡೆ ನಿರಂತರವಾಗಿ ಪ್ರಾಣಿಗಳ ದಾಳಿಯಾಗುತ್ತಿದ್ದರೂ, ಅವುಗಳನ್ನು ನಿಗ್ರಹಿಸಲು ಅವಕಾಶವಿಲ್ಲದ ಸ್ಥಿತಿ. ಇದಕ್ಕೂ ಮೀರಿ ಕಾಡುಪ್ರಾಣಿಗಳಿಂದ ಜನ ಪ್ರಾಣವನ್ನೇ ಕಳೆದುಕೊಳ್ಳುತ್ತಿರುವುದು. ಕರ್ನಾಟಕದ ವಿವಿಧ ಭಾಗಗಳಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದರೂ, ಅವನ್ನು ವಿರೋಧಿಸಿ ಜನರು ಪ್ರಾಮಾಣಿಕವಾಗಿ ರಸ್ತೆಗಿಳಿದರೂ ಅದಕ್ಕೆ ರಾಜಕೀಯ ಬಣ್ಣ ಕಟ್ಟಿ, ಹೋರಾಟಗಾರರ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿ ನ್ಯಾಯಾಲಯಕ್ಕೆ ಅಲೆಸಲಾಗುತ್ತದೆ. ಇದರಿಂದ ಸರಕಾರವೊಂದು ಇದೆ, ಅದು ನಮ್ಮ ಗೋಳು ಕೇಳುತ್ತದೆ ಎಂಬ ಜನರ ನಂಬಿಕೆ ಹಾಳಾಗುವುದಿಲ್ಲವೇ? ಸರಕಾರದ ಅಸ್ತಿತ್ವದ ಉದ್ದೇಶವಾದರೂ ಏನು ಹಾಗಾದರೆ?

ಸೊಂಪಾದಕೀಯ

ಮಗು ಬಾಯಿಗೆ ಮೆಣಸಿನಕಾಯಿ ಇಟ್ಟಿದ್ಯಾರು?

ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ತೆರೆಮರೆಯಲ್ಲಿ ಕೈಚಳಕ, ಕಸರತ್ತು ನಡೆಯುತ್ತಲೇ ಇದೆ. ಅದು ನಿಮಗೆ ಗೊತ್ತೂ ಇದೆ. ಕೆಲವೊಮ್ಮೆ ಮಗು ಅಳುತ್ತಾ ಇರುತ್ತದೆ. ನಮಗೆ ತೊಟ್ಟಿಲು ತೂಗುತ್ತಿರುವ ಕೈ ಕಾಣುತ್ತಿರುತ್ತದೆ. ಇಲ್ಲಿಯವರೆಗೆ ತಣ್ಣಗಿದ್ದ ಮಗು ಈಗ ಕಿಟಾರನೆ ಕಿರುಚಿಕೊಂಡು ಅಳುತ್ತಿರುವುದೇಕೆಂದು ಮಾತ್ರ ಗೊತ್ತಾಗುವುದಿಲ್ಲ. ತೂಗುತ್ತಿರುವ ಕೈಗಳ ಶ್ರದ್ಧೆಯನ್ನು ನೋಡಿದರೆ, ಛೇ ಅದಂತೂ ಚಿವುಟಿರಲು ಸಾಧ್ಯವೇ ಇಲ್ಲ ಅನ್ನಿಸುತ್ತದೆ. ಆದರೆ ಬುದ್ಧಿ ಮಾತ್ರ, ಈಗ ತೂಗುತ್ತಿರುವ ಕೈಗಳೇ ಕೆಲವೇ ಕ್ಷಣಗಳ ಹಿಂದೆ ಚಿವುಟಿರುವುದು ಎಂದು ಮಾಹಿತಿ ನೀಡುತ್ತದೆ. ನೋಡುವ ಕಣ್ಣುಗಳು ಸಾಕ್ಷಾತ್ತಾಗಿ ಕಂಡಿಲ್ಲದೇ ಹೋದ್ದರಿಂದ, ಎಲ್ಲಕ್ಕಿಂತ ಮುಖ್ಯವಾಗಿ ಅದಕ್ಕೆ ಬಾಯಿಲ್ಲದೇ ಇರುವುದರಿಂದ ಅದು ಮಾತಾಡುವುದಿಲ್ಲ. ಬಾಯಿಗೆ ಮಾತು ಬಂದರೂ, ಅದಕ್ಕೆ ಕಣ್ಣಿರುವುದಿಲ್ಲ. ಅದು ಹೇಳಲು ಹೊರಟರೂ ನಾನು ನೋಡಿಲ್ಲವಲ್ಲ ಎಂದು ಸುಮ್ಮನಾಗುತ್ತದೆ. ಇಲ್ಲಿ ಎಲ್ಲದ್ದಕ್ಕೂ ಸಾಕ್ಷಿಯಾಗಿರುವುದು ಮಗು. ಆ ಮಗುವಿಗೆ ಅಳುವುದಕ್ಕೆ ಗೊತ್ತು, ನಗುವುದಕ್ಕೂ ಗೊತ್ತು. ಕಿತಾಪತಿಗಳನ್ನು ಮಾಡಿ, ಅರ್ಥ ಮಾಡಿಕೊಂಡು ಮಾತ್ರ ಗೊತ್ತಿರುವುದಿಲ್ಲ. ಅದು ಮೆಣಸಿನಕಾಯಿಯನ್ನೂ ಚಾಕೋಲೇಟ್‌ನಷ್ಟೇ ಪ್ರೀತಿಯಿಂದ ಬಾಯಿಗಿಟ್ಟುಕೊಳ್ಳುತ್ತದೆ. ಅವಕಾಶ ಸಿಕ್ಕರೆ ಬೇರೆ ಇನ್ನೂ ಬೇರೆ ಕಡೆ ಇಟ್ಟುಕೊಳ್ಳುತ್ತದೆ. ಅದಕ್ಕೆ ತಕ್ಕಂತೆ ಪರಿಣಾಮ ಗೊತ್ತಾಗುತ್ತದೆ. ಮುಖ್ಯವಾಗಿ ಅದಕ್ಕೆ ಹೇಳಿಕೊಳ್ಳಲು ಗೊತ್ತಾಗುವುದಿಲ್ಲ. ಅದಕ್ಕೆ ಗೊತ್ತಿರುವ ಒಂದೇ ಭಾಷೆ ಅಳುವುದು. ಈ ಭಾಷೆ ನಮಗೆ ಅರ್ಥವಾಗುವುದಿಲ್ಲವಲ್ಲ!

ಸಂಪಾದಕರ ಸದ್ಯಶೋಧನೆ

ಜೋಹಾನ್ಸ್‌ಬರ್ಗ್ ನಗರದ ಕುರಿತು

ಎರಡು ದಿನಗಳಿಂದ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್ ನಗರದಲ್ಲಿ ಸುತ್ತುತ್ತಿದ್ದೇನೆ. ಈ ನಗರದ ಬಗ್ಗೆ ಕೆಲವು ಸ್ವಾರಸ್ಯ ಸಂಗತಿಗಳನ್ನು ಹೇಳಬಹುದು. ಇದು ದಕ್ಷಿಣ ಆಫ್ರಿಕಾದ ಅತಿದೊಡ್ಡ ನಗರ ಮತ್ತು ಆರ್ಥಿಕ ಹೃದಯಭಾಗ. ಇದನ್ನು ಸ್ಥಳೀಯರು ಪ್ರೀತಿಯಿಂದ ‘ಜೋಬರ್ಗ್’ ಅಥವಾ ‘ಇಗೋಲಿ’ (ಬಂಗಾರದ ನಗರಿ) ಎಂದು ಕರೆಯುತ್ತಾರೆ. ಜೋಹಾನ್ಸ್‌ಬರ್ಗ್ ನಗರವನ್ನು ಆಕಾಶದಿಂದ ನೋಡಿದರೆ ಅದೊಂದು ಕಾಡಿನಂತೆ ಕಾಣುತ್ತದೆ. ಆದರೆ ಒಂದು ಕಾಲದಲ್ಲಿ ಈ ಪ್ರದೇಶವು ಕೇವಲ ಬಂಜರು ಹುಲ್ಲುಗಾವಲಾಗಿತ್ತು (ಸವನ್ನಾ). ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಇಲ್ಲಿ ಬಂಗಾರದ ಗಣಿಗಾರಿಕೆ ಆರಂಭವಾದಾಗ, ಗಣಿಗಳ ಒಳಗೆ ಆಧಾರ ನೀಡಲು ಮರದ ದಿಮ್ಮಿಗಳ ಅವಶ್ಯಕತೆ ಇತ್ತು. ಇದಕ್ಕಾಗಿ ಸಾವಿರಾರು ಮರಗಳನ್ನು ನೆಡಲು ಪ್ರಾರಂಭಿಸಲಾಯಿತು. ಇಂದು ಈ ನಗರದಲ್ಲಿ ಸುಮಾರು 1 ಕೋಟಿಗಿಂತಲೂ ಹೆಚ್ಚು ಮರಗಳಿವೆ. ಇವುಗಳಲ್ಲಿ ಹೆಚ್ಚಿನವುಗಳನ್ನು ಮನುಷ್ಯರೇ ಹಂತಹಂತವಾಗಿ ನೆಟ್ಟಿದ್ದರಿಂದ ಇದನ್ನು ‘ವಿಶ್ವದ ಅತಿದೊಡ್ಡ ಮಾನವ ನಿರ್ಮಿತ ಅರಣ್ಯ’ ಎಂದು ಕರೆಯಲಾಗುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ನಗರವು ನೇರಳೆ ಬಣ್ಣದ ‘ಜಾಕರಂಡಾ’ ಹೂವುಗಳಿಂದ ಕಂಗೊಳಿಸುತ್ತದೆ. ಈ ಮರಗಳು ಮೂಲತಃ ದಕ್ಷಿಣ ಅಮೆರಿಕದ್ದಾಗಿದ್ದರೂ, ಇಂದು ಜೋಹಾನ್ಸ್‌ಬರ್ಗ್‌ನ ಅಸ್ಮಿತೆಯಾಗಿವೆ. ಈ ಬೃಹತ್ ಹಸಿರು ಹೊದಿಕೆಯು ನಗರದ ಮಾಲಿನ್ಯವನ್ನು ತಡೆಗಟ್ಟುವುದಲ್ಲದೇ, ಇಲ್ಲಿನ ತಾಪಮಾನವನ್ನು ಸಮತೋಲನದಲ್ಲಿಡಲು ಸಹಕಾರಿಯಾಗಿದೆ. ಜಗತ್ತಿನ ಹೆಚ್ಚಿನ ಪ್ರಸಿದ್ಧ ನಗರಗಳನ್ನು ಗಮನಿಸಿ, ಲಂಡನ್ (ಥೇಮ್ಸ್ ನದಿ), ನ್ಯೂಯಾರ್ಕ್ (ಹಡ್ಸನ್ ನದಿ), ಮುಂಬೈ (ಅರಬ್ಬಿ ಸಮುದ್ರ) ಇವೆಲ್ಲವೂ ಜಲಮೂಲದ ಮೇಲೆ ಬೆಳೆದವುಗಳು. ಆದರೆ ಜೋಹಾನ್ಸ್‌ಬರ್ಗ್ ಈ ಸಾಲಿಗೆ ಸೇರುವುದಿಲ್ಲ. ಈ ನಗರದ ಹತ್ತಿರ ಯಾವುದೇ ದೊಡ್ಡ ಸಮುದ್ರವಿಲ್ಲ, ಅಷ್ಟೇ ಏಕೆ, ನಗರದ ಮಧ್ಯೆ ಹರಿಯುವ ಒಂದು ದೊಡ್ಡ ನದಿಯೂ ಇಲ್ಲ. ಆದರೂ ಇದು ಜಗತ್ತಿನ ಪ್ರಮುಖ ಮೆಟ್ರೋಪಾಲಿಟನ್ ನಗರವಾಗಿ ಬೆಳೆದಿದ್ದು ಒಂದು ಪವಾಡವೇ ಸರಿ. ನೀರಿಲ್ಲದಿದ್ದರೂ ಇಲ್ಲಿ ಜನವಸತಿ ಹೆಚ್ಚಾಗಲು ಕಾರಣ ಚಿನ್ನ. 1886ರಲ್ಲಿ ಇಲ್ಲಿ ಚಿನ್ನದ ಅದಿರು ಪತ್ತೆಯಾದಾಗ, ಇಡೀ ಜಗತ್ತು ಇಲ್ಲಿಗೆ ಧಾವಿಸಿತು. ಸಮುದ್ರದ ದಾರಿ ಇಲ್ಲದಿದ್ದರೂ ಹಳಿಗಳನ್ನು ನಿರ್ಮಿಸಿ, ರಸ್ತೆಗಳನ್ನು ಮಾಡಿ ಈ ನಗರವನ್ನು ಕಟ್ಟಲಾಯಿತು. ಇದು ಮನುಷ್ಯನ ಹಠ ಮತ್ತು ಸಂಪತ್ತಿನ ವ್ಯಾಮೋಹವು ಭೌಗೋಳಿಕ ಮಿತಿಗಳನ್ನೂ ಹೇಗೆ ಮೀರಿಸಬಲ್ಲದು ಎಂಬುದಕ್ಕೆ ಸಾಕ್ಷಿ. ಜೋಹಾನ್ಸ್‌ಬರ್ಗ್ ಸಮುದ್ರ ಮಟ್ಟದಿಂದ ಸುಮಾರು 1,753 ಮೀಟರ್ ಎತ್ತರದಲ್ಲಿದೆ. ಇದು ಭಾರತದ ಪ್ರಸಿದ್ಧ ಗಿರಿಧಾಮವಾದ ಊಟಿಗಿಂತಲೂ ಎತ್ತರದಲ್ಲಿದೆ ಎಂದರೆ ಆಶ್ಚರ್ಯವಾಗಬಹುದು! ಎತ್ತರ ಹೆಚ್ಚಾದಂತೆ ಗಾಳಿಯಲ್ಲಿನ ಆಮ್ಲಜನಕದ ಸಾಂದ್ರತೆ ಕಡಿಮೆಯಾಗುತ್ತದೆ. ಇದು ಇಲ್ಲಿಗೆ ಬರುವ ಪ್ರವಾಸಿಗರಿಗೆ ಮತ್ತು ಕ್ರೀಡಾಪಟುಗಳಿಗೆ ತಕ್ಷಣವೇ ಅರಿವಾಗುತ್ತದೆ. ಇಲ್ಲಿ ಉಸಿರಾಟದಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರಬಹುದು. ಇಲ್ಲಿ ಕ್ರಿಕೆಟ್ ಅಥವಾ ಫುಟ್ಬಾಲ್ ಆಡುವಾಗ ಚೆಂಡು ಗಾಳಿಯಲ್ಲಿ ಅತಿ ವೇಗವಾಗಿ ಚಲಿಸುತ್ತದೆ ಮತ್ತು ಹೆಚ್ಚು ದೂರ ಹೋಗುತ್ತದೆ. ಅದಕ್ಕಾಗಿಯೇ ಜೋಹಾನ್ಸ್‌ಬರ್ಗ್ ವಾಂಡರರ್ಸ್ ಮೈದಾನದಲ್ಲಿ ಸಿಕ್ಸರ್‌ಗಳ ಸುರಿಮಳೆಯಾಗುತ್ತದೆ. ಇಲ್ಲಿನ ಎತ್ತರದ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಹೊರಗಿನಿಂದ ಬರುವ ಕ್ರೀಡಾಪಟುಗಳಿಗೆ ಒಂದು ಸವಾಲು. ಜೋಹಾನ್ಸ್‌ಬರ್ಗ್‌ನ ಹವಾಮಾನವು ನಾಟಕೀಯ ಬದಲಾವಣೆಗಳಿಗೆ ಹೆಸರುವಾಸಿ. ಇಲ್ಲಿನ ಬೇಸಿಗೆಯ ಸಂಜೆಗಳು ಅದ್ಭುತ ಮತ್ತು ಭಯಾನಕ ಎರಡೂ ಹೌದು. ಇಲ್ಲಿ ವಿಶ್ವದ ಅತಿ ಹೆಚ್ಚು ಸಿಡಿಲುಗಳು ಬಡಿಯುತ್ತವೆ. ಬೇಸಿಗೆಯಲ್ಲಿ ಮಧ್ಯಾಹ್ನದ ವರೆಗೆ ಸುಡುವ ಬಿಸಿಲಿದ್ದರೆ, ಸಂಜೆಯಾಗುತ್ತಿದ್ದಂತೆ ದಿಢೀರನೆ ಕಪ್ಪು ಮೋಡಗಳು ಕವಿಯುತ್ತವೆ. ಆಗಿನ ಮಿಂಚು ಮತ್ತು ಗುಡುಗು ಎಷ್ಟು ಶಕ್ತಿಯುತವಾಗಿರುತ್ತದೆ ಎಂದರೆ, ಅದು ನಗರದ ವಿದ್ಯುತ್ ವ್ಯವಸ್ಥೆಯನ್ನೇ ಅಲುಗಾಡಿಸಬಹುದು. ಇಲ್ಲಿನ ಸಿಡಿಲುಗಳ ಬಗ್ಗೆ ಅಧ್ಯಯನ ನಡೆಸಲು ಜಗತ್ತಿನಾದ್ಯಂತ ವಿಜ್ಞಾನಿಗಳು ಬರುತ್ತಾರೆ. ಈ ಸಿಡಿಲುಗಳು ನಗರದ ಎತ್ತರದ ಕಟ್ಟಡಗಳ ಮೇಲೆ ಬೀಳುವ ದೃಶ್ಯ ಫೋಟೋಗ್ರಾಫರ್‌ಗಳಿಗೆ ಹಬ್ಬವನ್ನೇ ಉಂಟುಮಾಡುತ್ತದೆ. ಪ್ರತಿ ಚದರ ಕಿಲೋಮೀಟರ್‌ಗು ಇಲ್ಲಿ ಬೀಳುವ ಸಿಡಿಲುಗಳ ಸಂಖ್ಯೆ ಜಗತ್ತಿನ ಸರಾಸರಿಗಿಂತ ಬಹಳ ಹೆಚ್ಚು. ಬಂಜರು ಭೂಮಿಯನ್ನು ಕಾಡನ್ನಾಗಿ ಮಾಡಿದ್ದು, ಸಮುದ್ರವಿಲ್ಲದಿದ್ದರೂ ಆರ್ಥಿಕ ಕೇಂದ್ರವಾಗಿ ಬೆಳೆದದ್ದು ಮತ್ತು ಸಿಡಿಲು–ಗುಡುಗುಗಳ ನಡುವೆಯೂ ಎತ್ತರದ ಶಿಖರದಂತೆ ನಿಂತಿರುವುದು ಈ ನಗರದ ವೈಶಿಷ್ಟ್ಯ.

ನ್ಯಾಯಾಧೀಶನ ಮಾತು ‘ಶಾಸನ’ವಾಗಬೇಕೇ ಹೊರತು ‘ಹರಿಕಥೆ’ ಆಗಬಾರದು!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಒಬ್ಬ ವ್ಯಕ್ತಿ ಬೇಕೋ, ಬೇಡವೋ, ಜನರು ತನ್ನ ಮಾತನ್ನು ಕೇಳುತ್ತಾರೋ, ಇಲ್ಲವೋ, ಆ ಸಂದರ್ಭಕ್ಕೆ ಅಗತ್ಯವಿದೆಯೋ, ಇಲ್ಲವೋ ಎಂಬುದನ್ನು ಅರಿಯದೇ, ಓತಪ್ರೋತವಾಗಿ ಬಾಯಿಗೆ ಬಂದದ್ದನ್ನು ಮಾತಾಡುತ್ತಿದ್ದರೆ ನಾವು ಅಂಥವರಿಗೆ ‘ಬಾಯಿಬಡುಕ’, ‘ವಾಚಾಳಿ’, ‘ಹರಟೆಮಲ್ಲ’, ‘ಬುರುಡೆದಾಸ’ ಎನ್ನುತ್ತೇವೆ. ಅವರು ಹೇಳುವುದು ಸರಿಯೇ ಇರಬಹುದು, ಆದರೆ ಅನಗತ್ಯವಾಗಿ, ಸಂದರ್ಭ–ಸನ್ನಿವೇಶ ನೋಡದೇ ಮಾತಾಡುವವರನ್ನು ಸಹಿಸಿಕೊಳ್ಳುವುದು ಕಷ್ಟ. ಇಂಗ್ಲಿಷ್‌ನಲ್ಲಿ ಇಂಥವರಿಗೆ ಬಳಸುವ ಒಂದು ಅರ್ಥಪೂರ್ಣ ಪದವೆಂದರೆ 'Loose Cannon' (ತುಪುತುಪು ತುಪಾಕಿ). ಕನ್ನಡದ ಸೊಗಡಿನಲ್ಲಿ ಹೇಳುವುದಾದರೆ, ‘ಇದು ಹಗ್ಗವಿಲ್ಲದ ಹೋರಿ’ ಅಥವಾ ‘ಲಗಾಮಿಲ್ಲದ ಕುದುರೆ’.

ಅತಿಯಾಗಿ ಮಾತಾಡುವವರಿಗೆ ‘ಲೂಸ್ ಕ್ಯಾನನ್’ ಎಂದು ಏಕೆ ಕರೆಯುತ್ತಾರೆ? ಇದಕ್ಕೆ ಹಿನ್ನೆಲೆಯಿದೆ. ಈ ಪದವು ಹದಿನೇಳನೇ ಮತ್ತು ಹದಿನೆಂಟನೇ ಶತಮಾನದ ನೌಕಾಯಾನದ ಹಿನ್ನೆಲೆಯಿಂದ ಬಂದಿದೆ. ಅಂದಿನ ಕಾಲದಲ್ಲಿ ಯುದ್ಧನೌಕೆಗಳಲ್ಲಿ ಭಾರವಾದ ಕಬ್ಬಿಣದ ಫಿರಂಗಿಗಳನ್ನು ಇರಿಸಲಾಗುತ್ತಿತ್ತು. ಇವುಗಳನ್ನು ಬಲವಾದ ಹಗ್ಗಗಳಿಂದ ಹಡಗಿನ ಪಕ್ಕದ ಗೋಡೆಗಳಿಗೆ ಬಿಗಿದು ಕಟ್ಟಲಾಗುತ್ತಿತ್ತು. ಯಾವಾಗಲಾದರೂ ಚಂಡಮಾರುತ ಬಂದಾಗ ಅಥವಾ ಯುದ್ಧದ ಅಬ್ಬರಕ್ಕೆ ಈ ಹಗ್ಗಗಳು ಕಳಚಿಕೊಂಡರೆ, ಆ ಫಿರಂಗಿಯು ಹಡಗಿನ ಡೆಕ್ ಮೇಲೆ ಅತ್ತಿತ್ತ ಉರುಳಲು ಶುರು ಮಾಡುತ್ತಿತ್ತು. ಒಮ್ಮೆ ಈ ‘ಫಿರಂಗಿ’ ಕಟ್ಟುಗಳಿಂದ ಮುಕ್ತವಾಗಿ (Loose) ಉರುಳಲು ಶುರುಮಾಡಿದರೆ, ಅದನ್ನು ನಿಯಂತ್ರಿಸುವುದು ಅಸಾಧ್ಯವಾಗಿತ್ತು. ಅದು ಹಡಗಿನ ಗೋಡೆಗಳನ್ನು ಜಖಂ ಮಾಡುವುದು ಮಾತ್ರವಲ್ಲದೇ, ತನ್ನದೇ ಸೈನಿಕರನ್ನು ತುಳಿದು ಸಾಯಿಸುತ್ತಿತ್ತು. ಹೀಗೆ, ತನ್ನದೇ ಜನರಿಗೆ ಮತ್ತು ಹಡಗಿಗೆ ಮಾರಕವಾಗುವ ಈ ಫಿರಂಗಿಯನ್ನು ‘ಲೂಸ್ ಕ್ಯಾನನ್’ ಎಂದು ಕರೆಯಲಾಗುತ್ತಿತ್ತು. ಕಾಲಕ್ರಮೇಣ, ಈ ಪದವು ಸಮಾಜದಲ್ಲಿ ಅತಿಯಾಗಿ ಮಾತನಾಡುವ, ಗುಟ್ಟುಗಳನ್ನು ರಕ್ಷಿಸಲಾಗದ ಮತ್ತು ತನ್ನ ಮಾತುಗಳಿಂದ ತನಗೇ ಮುಜುಗರ ತಂದುಕೊಳ್ಳುವ ವ್ಯಕ್ತಿಗಳಿಗೆ ಅನ್ವಯವಾಗಲು ಶುರುವಾಯಿತು.

ಈ ಪರಿಕಲ್ಪನೆಯನ್ನು ಸಾಹಿತ್ಯಲೋಕಕ್ಕೆ ಅನ್ವಯಿಸಿದವರು ಪ್ರಸಿದ್ಧ ಫ್ರೆಂಚ್ ಲೇಖಕ ವಿಕ್ಟರ್ ಹ್ಯೂಗೋ. ಅವರು ತಮ್ಮ 'Ninety-Three' (1874) ಎಂಬ ಕಾದಂಬರಿಯಲ್ಲಿ, ಹಡಗಿನ ಮೇಲಿನ ಈ ಲೂಸ್ ಕ್ಯಾನನ್ ಹೇಗೆ ಅನಾಹುತ ಸೃಷ್ಟಿಸುತ್ತದೆ ಎಂಬುದನ್ನು ಅದ್ಭುತವಾಗಿ ವರ್ಣಿಸಿದ್ದಾರೆ. ಅಲ್ಲಿಂದ ಮುಂದೆ ಇದು ಮನುಷ್ಯನ ನಡೆವಳಿಕೆಗೆ ಒಂದು ರೂಪಕವಾಗಿ ಬಳಕೆಯಾಗಲು ಶುರು ಮಾಡಿತು. ಇಂದು ನಾವು ಈ ಪದವನ್ನು ಯಾವುದೇ ವ್ಯಕ್ತಿಯ ಸ್ವಭಾವವನ್ನು ವರ್ಣಿಸಲು ಬಳಸುತ್ತೇವೆ. ಯಾರಾದರೂ ಸಾರ್ವಜನಿಕವಾಗಿ ಏನು ಮಾತನಾಡುತ್ತಾರೆ ಅಥವಾ ಹೇಗೆ ವರ್ತಿಸುತ್ತಾರೆ ಎಂದು ಊಹಿಸಲು ಸಾಧ್ಯವಿಲ್ಲದಿದ್ದಾಗ ಅವರನ್ನು ಲೂಸ್ ಕ್ಯಾನನ್ ಎನ್ನಲಾಗುತ್ತದೆ. ಸಂಸತ್ತಿರಬಹುದು, ನ್ಯಾಯಾಲಯವಿರಬಹುದು, ಸಾರ್ವಜನಿಕ ವೇದಿಕೆಯಿರಬಹುದು, ಸಂದರ್ಭದ ಔಚಿತ್ಯ ಗೊತ್ತಿಲ್ಲದೇ ಯದ್ವಾತದ್ವಾ ಮಾತಾಡುವವರಿಗೆ ‘ತುಪುತುಪು ತುಪಾಕಿ’ ಎಂದು ಗೇಲಿ ಮಾಡುತ್ತಾರೆ. ಬುದ್ಧಿವಂತಿಕೆಯಿದ್ದೂ, ಮಾತು ಬಲ್ಲಿದನಾಗಿಯೂ ಜನರಿಂದ ಗೇಲಿಗೊಳಗಾಗುವವನೇ ಈ ವಾಚಾಳಿ. ಆತನಿಗೆ ಗೊತ್ತಿರದ ಸಂಗತಿಯೇನೆಂದರೆ, ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳದೇ ಮಾತಾಡುವುದು.

‘ಮಾತು ಬೆಳ್ಳಿ, ಮೌನ ಬಂಗಾರ’ ಎಂಬ ಗಾದೆ ಇವರಿಗೆ ಅನ್ವಯಿಸುವುದೇ ಇಲ್ಲ. ಈ ಲೂಸ್ ಕ್ಯಾನನ್‌ಗಳಿಗೆ ಕೆಲವು ವಿಶಿಷ್ಟ ಗುಣಗಳಿರುತ್ತವೆ. ಇವರ ಮಾತಿಗೆ ಫಿಲ್ಟರ್ ಇರುವುದಿಲ್ಲ. ಮಿದುಳಿನಲ್ಲಿ ಒಂದು ಆಲೋಚನೆ ಬಂದರೆ ಅದು ತಕ್ಷಣ ನಾಲಿಗೆಯ ಮೂಲಕ ಹೊರಬರಲೇಬೇಕು. ಅದು ಯಾರಿಗೆ ನೋವು ನೀಡುತ್ತದೆ ಅಥವಾ ಸಂದರ್ಭಕ್ಕೆ ಸರಿ ಹೊಂದುತ್ತದೆಯೇ, ಇಲ್ಲವೇ ಎಂಬುದನ್ನು ಸಹ ಇವರು ಯೋಚಿಸುವುದಿಲ್ಲ. ಇವರು ‘ಯಾರಿಗೂ ಹೇಳ್ಬೇಡ ಅಂತ ಅವರು ಹೇಳಿದ್ರು...’ ಎಂದು ಶುರುಮಾಡಿ ಇಡೀ ಊರಿಗೆ ರಹಸ್ಯವನ್ನು ಸಾರುತ್ತಾರೆ. ಸಣ್ಣ ವಿಷಯವನ್ನು ಬೆಟ್ಟದಷ್ಟು ದೊಡ್ಡದು ಮಾಡಿ ಹೇಳುವುದು ಇವರ ಹವ್ಯಾಸ. ಎಲ್ಲರೂ ತಮ್ಮನ್ನೇ ಗಮನಿಸಬೇಕು ಎಂಬ ಹಂಬಲದಿಂದ ಅನಗತ್ಯ ವಿಷಯಗಳನ್ನು, ಬಾಯಿಭೇದಿಯಾದವರಂತೆ ಹರಟುತ್ತಾ ಹೋಗುತ್ತಾರೆ.

ಪ್ರಜಾಪ್ರಭುತ್ವದ ಅಂತಿಮ ಆಸರೆ ಆಗಿರುವ ನ್ಯಾಯಾಧೀಶರು ಅಂದಾಕ್ಷಣ ನಮ್ಮ ಕಣ್ಣ ಮುಂದೆ ಬರುವುದು ಗಂಭೀರತೆ, ಮಿತಭಾಷಿ ಮತ್ತು ನಿಷ್ಪಕ್ಷಪಾತ ಧೋರಣೆ. ಆದರೆ, ಒಬ್ಬ ನ್ಯಾಯಾಧೀಶರು ‘ಲೂಸ್ ಕ್ಯಾನನ್’ ಆದರೆ ಏನಾಗಬಹುದು ಎಂಬುದು ಅತ್ಯಂತ ಚರ್ಚಾಸ್ಪದ ಮತ್ತು ಗಂಭೀರ ವಿಷಯ. ಒಬ್ಬ ನ್ಯಾಯಾಧೀಶರು ತಮ್ಮ ಮಿತಿಯನ್ನು ಮೀರಿ, ಅನಗತ್ಯವಾಗಿ ಮಾತನಾಡಿದರೆ ಅದು ಇಡೀ ನ್ಯಾಯದಾನ ವ್ಯವಸ್ಥೆಯ ಘನತೆಯನ್ನು ಮೂರಾಬಟ್ಟೆ ಮಾಡಿದಂತಾಗುತ್ತದೆ. ನ್ಯಾಯಾಲಯದಲ್ಲಿ ನ್ಯಾಯಾಧೀಶರ ಪ್ರತಿಯೊಂದು ಶಬ್ದಕ್ಕೂ ಕಾನೂನಿನ ಬಲವಿರುತ್ತದೆ. ಅವರು ಲೂಸ್ ಕ್ಯಾನನ್‌ನಂತೆ ವರ್ತಿಸಿದರೆ ಏನೆಲ್ಲ ಅನಾಹುತಗಳಾಗಬಹುದು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ನ್ಯಾಯಾಧೀಶರು ವಿಚಾರಣೆ ನಡೆಯುತ್ತಿರುವಾಗಲೇ ಯಾವುದೋ ಒಂದು ಪಕ್ಷದ ಪರ ಅಥವಾ ವಿರುದ್ಧವಾಗಿ ಕಠಿಣವಾದ ಅಥವಾ ಲೇವಡಿ ಮಾತುಗಳನ್ನು ಆಡಿದರೆ, ಅಲ್ಲಿ ‘ನ್ಯಾಯಸಮ್ಮತ ವಿಚಾರಣೆ’ ನಡೆಯುತ್ತಿಲ್ಲ ಎಂಬ ಭಾವನೆ ಮೂಡುತ್ತದೆ. ನ್ಯಾಯಾಲಯವು ಭಾವನೆಗಳಿಗಿಂತ ಹೆಚ್ಚಾಗಿ ಸಾಕ್ಷ್ಯಾಧಾರಗಳ ಮೇಲೆ ನಡೆಯಬೇಕು. ನ್ಯಾಯಾಧೀಶರು ರೇಗಾಡುವುದು ಅಥವಾ ವೈಯಕ್ತಿಕ ಅಭಿಪ್ರಾಯಗಳನ್ನು ತೀರ್ಪಿನಂತೆ ಹೇಳುವುದು ನ್ಯಾಯಾಂಗದ ಪಾವಿತ್ರ್ಯವನ್ನು ಕುಗ್ಗಿಸುತ್ತದೆ. ನ್ಯಾಯಾಧೀಶರ ಅತಿಯಾದ ಮಾತುಗಳನ್ನೇ ಅಸ್ತ್ರವಾಗಿ ಬಳಸಿಕೊಂಡು, ಸೋತ ಪಕ್ಷವು ಮೇಲಿನ ನ್ಯಾಯಾಲಯದಲ್ಲಿ ನ್ಯಾಯಾಧೀಶರು ಮೊದಲೇ ‘ಪೂರ್ವಗ್ರಹ ಪೀಡಿತರಾಗಿದ್ದರು’ ಎಂದು ವಾದಿಸಿ ತಡೆಯಾಜ್ಞೆ ತರಬಹುದು. ಜನಸಾಮಾನ್ಯರು ನ್ಯಾಯಾಂಗದ ಮೇಲೆ ಇಟ್ಟಿರುವ ನಂಬಿಕೆಯು ನ್ಯಾಯಾಧೀಶರ ಸಂಯಮದ ಮೇಲೆ ನಿಂತಿರುತ್ತದೆ. ಲೂಸ್ ಕ್ಯಾನನ್ ನ್ಯಾಯಾಧೀಶರು ಈ ನಂಬಿಕೆಯನ್ನು ಕ್ಷಣಮಾತ್ರದಲ್ಲಿ ಧೂಳೀಪಟ ಮಾಡಬಲ್ಲರು.

ವಿಚಾರಣೆ ವೇಳೆ ನ್ಯಾಯಾಧೀಶರು ನೀಡುವ ಲಘು ಟಿಪ್ಪಣಿಗಳು ಅಥವಾ ಮಾತುಗಳು ಅಂತಿಮ ತೀರ್ಪಿನ ಭಾಗವಾಗಿರುವುದಿಲ್ಲ. ಆದರೆ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿಯ ಚಾರಿತ್ರ್ಯದ ಬಗ್ಗೆ ಅಥವಾ ರಾಜಕಾರಣಿಗಳ ಬಗ್ಗೆ ಅನಗತ್ಯವಾಗಿ ಕಟುವಾದ ಶಬ್ದಗಳನ್ನು ಬಳಸುವುದು. ಕೆಲವೊಮ್ಮೆ ನ್ಯಾಯಾಧೀಶರು ಕಾರ್ಯನಿರ್ವಾಹಕ ವ್ಯವಸ್ಥೆ ಅಥವಾ ಶಾಸಕಾಂಗದ ಕೆಲಸಗಳಲ್ಲಿ ಹಸ್ತಕ್ಷೇಪ ಮಾಡುತ್ತಾ, ತಮಗೆ



ಸಂಬಂಧವಿಲ್ಲದ ವಿಷಯಗಳ ಬಗ್ಗೆ ಸುದೀರ್ಘ ಭಾಷಣ ಅಥವಾ ಟೀಕೆಗಳನ್ನು ಮಾಡುತ್ತಾರೆ. ಕೆಲವು ಗಂಭೀರ ಪ್ರಕರಣಗಳಲ್ಲಿ (ಉದಾಹರಣೆಗೆ ಅತ್ಯಾಚಾರ ಅಥವಾ ಕೌಟುಂಬಿಕ ದೌರ್ಜನ್ಯ) ಸಂತ್ರಸ್ತೆಯ ಬಗ್ಗೆ ಅಥವಾ ಸಮಾಜದ ಬಗ್ಗೆ ತಪ್ಪು ಅರ್ಥ ಬರುವಂತೆ ಮಾತನಾಡುವುದು ದೊಡ್ಡ ವಿವಾದಕ್ಕೆ ಕಾರಣವಾಗುತ್ತದೆ.

ಭಾರತೀಯ ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯಾಧೀಶರು ಹೇಗೆ ವರ್ತಿಸಬೇಕು ಎಂಬುದಕ್ಕೆ ಕೆಲವು ಮಾರ್ಗಸೂಚಿಗಳಿವೆ. ನ್ಯಾಯಾಧೀಶರು ತಮ್ಮ ವೈಯಕ್ತಿಕ ನಂಬಿಕೆಗಳನ್ನು ಮರೆತು ಸಂವಿಧಾನದ ಚೌಕಟ್ಟಿನೊಳಗೆ ಮಾತನಾಡಬೇಕು. ನ್ಯಾಯಾಧೀಶರು ಮಾತನಾಡುವುದು ಅವರ ಬಾಯಿಂದಲ್ಲ, ಬದಲಿಗೆ ಅವರು ಬರೆಯುವ ‘ತೀರ್ಪು’ಗಳ ಮೂಲಕ. ತೀರ್ಪಿನ ಹೊರಗಿನ ಮಾತುಗಳಿಗೆ ಕಾನೂನಿನಲ್ಲಿ ಬೆಲೆಯಿಲ್ಲದಿದ್ದರೂ, ಅವು ಸಮಾಜದ ಮೇಲೆ ಕೆಟ್ಟ ಪ್ರಭಾವ ಬೀರುತ್ತವೆ. ಇತ್ತೀಚಿನ ದಿನಗಳಲ್ಲಿ ಲೈವ್ ಸ್ಟ್ರೀಮಿಂಗ್ ಇರುವುದರಿಂದ ನ್ಯಾಯಾಧೀಶರ ಪ್ರತಿಯೊಂದು ಮಾತು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಕೆಲವು ನ್ಯಾಯಾಧೀಶರು ವಕೀಲರನ್ನು ತರಾಟೆಗೆ ತೆಗೆದುಕೊಳ್ಳುವ ವಿಡಿಯೋಗಳು ಜನರಿಗೆ ‘ಸಿಂಗಂ’ ಸ್ಟೈಲ್‌ನಲ್ಲಿ ಖುಷಿ ಕೊಡಬಹುದು. ಆದರೆ ನ್ಯಾಯಾಧೀಶರು ಹೀಗೆ ‘ಪಬ್ಲಿಕ್ ಹೀರೋ’ ಆಗಲು ಹವಣಿಸುವುದು ಅಥವಾ ಲೂಸ್ ಕ್ಯಾನನ್ ಆಗಿ ವರ್ತಿಸುವುದು ನ್ಯಾಯದಾನದ ಪ್ರಕ್ರಿಯೆಗೆ ಮಾರಕ. ಉನ್ನತ ನ್ಯಾಯಾಲಯಗಳು ಇಂಥ ಸಂದರ್ಭಗಳಲ್ಲಿ ಮಧ್ಯಪ್ರವೇಶಿಸಿ, ನ್ಯಾಯಾಧೀಶರು ತಮ್ಮ ಮೌಖಿಕ ಅವಲೋಕನಗಳಲ್ಲಿ ‘ಸಂಯಮ ಹೊಂದಿರಬೇಕು’ ಎಂದು ಹಲವು ಬಾರಿ ಎಚ್ಚರಿಸಿವೆ.

ಬ್ರಿಟಿಷ್ ನ್ಯಾಯಾಂಗದ ಇತಿಹಾಸದಲ್ಲಿ ಲೂಸ್ ಕ್ಯಾನನ್’ ಎನ್ನಬಹುದಾದ ನ್ಯಾಯಾಧೀಶರ ಬಗ್ಗೆ ಚರ್ಚಿಸುವಾಗ ಪ್ರಮುಖವಾಗಿ ನೆನಪಿಗೆ ಬರುವ ಹೆಸರು ಲಾರ್ಡ್ ಡೆನ್ನಿಂಗ್. ಇವರನ್ನು ಇಂಗ್ಲಿಷ್ ನ್ಯಾಯಾಂಗದ ಇತಿಹಾಸದ ಅತ್ಯಂತ ಪ್ರಭಾವಶಾಲಿ ಮತ್ತು ವಿವಾದಾತ್ಮಕ ನ್ಯಾಯಾಧೀಶರಲ್ಲಿ ಒಬ್ಬರೆಂದು ಪರಿಗಣಿಸಲಾಗುತ್ತದೆ.

ಲಾರ್ಡ್ ಡೆನ್ನಿಂಗ್ ಅವರ ಮಾತುಗಳು ಮತ್ತು ತೀರ್ಪುಗಳ ಶೈಲಿಯು ಎಷ್ಟು ವಿಶಿಷ್ಟವಾಗಿತ್ತೆಂದರೆ, ಅವು ಅವರನ್ನು ಜನಪ್ರಿಯಗೊಳಿಸಿದವು ಮತ್ತು ಅಂತಿಮವಾಗಿ ಅವರ ವೃತ್ತಿಜೀವನದ ಅಂತ್ಯಕ್ಕೂ ಕಾರಣವಾದವು. ಲಾರ್ಡ್ ಡೆನ್ನಿಂಗ್ (1899–1999) ಅವರು ಬ್ರಿಟಿಷ್ ಮೇಲ್ಮನವಿ ನ್ಯಾಯಾಲಯದ (Court of Appeal) ‘ಮಾಸ್ಟರ್ ಆಫ್ ದಿ ರೋಲ್’ ಆಗಿ ದಶಕಗಳ ಕಾಲ ಸೇವೆ ಸಲ್ಲಿಸಿದವರು. ಇವರನ್ನು ‘ಜನರ ನ್ಯಾಯಾಧೀಶ’ ಎಂದು ಕರೆಯಲಾಗುತ್ತಿತ್ತು, ಏಕೆಂದರೆ ಇವರು ಕಾನೂನಿನ ತಾಂತ್ರಿಕತೆಗಿಂತ ‘ನ್ಯಾಯ’ಕ್ಕೆ ಹೆಚ್ಚು ಒತ್ತು ನೀಡುತ್ತಿದ್ದರು. ಆದರೆ, ಇವರ ಅತಿಯಾದ ಮಾತು ಮತ್ತು ಮುಕ್ತವಾಗಿ ಅಭಿಪ್ರಾಯ ಹಂಚಿಕೊಳ್ಳುವ ಹವ್ಯಾಸವು ಇವರನ್ನು ಹಲವು ಬಾರಿ ಸಂಕಷ್ಟಕ್ಕೆ ಸಿಲುಕಿಸಿತ್ತು.

ಇವರು ತೀರ್ಪುಗಳನ್ನು ಸಾಮಾನ್ಯ ಕಾನೂನು ಭಾಷೆಯಲ್ಲಿ ಬರೆಯುತ್ತಿರಲಿಲ್ಲ. ಬದಲಿಗೆ ಒಂದು ಕಾದಂಬರಿಯಂತೆ ಆರಂಭಿಸುತ್ತಿದ್ದರು. ಉದಾಹರಣೆಗೆ, ಅವರ ಒಂದು ಪ್ರಸಿದ್ಧ ತೀರ್ಪಿನ ಆರಂಭ ಹೀಗಿತ್ತು – ‘ಅದು ಬೇಸಿಗೆಯ ಸಂಜೆ, ಹಕ್ಕಿಗಳು ಗೂಡು ಸೇರುವ ಹೊತ್ತು. ಹಳ್ಳಿಯ ಮೈದಾನದಲ್ಲಿ ಕ್ರಿಕೆಟ್ ಆಡಲಾಗುತ್ತಿತ್ತು...’ ಇಂಥ ಶೈಲಿಯು ಕಾನೂನು ಪಂಡಿತರಿಗೇ ಅಚ್ಚರಿ ತರುತ್ತಿತ್ತು. ಲಾರ್ಡ್ ಡೆನ್ನಿಂಗ್ ಅವರು ನ್ಯಾಯಾಲಯದ ಒಳಗೂ–ಹೊರಗೂ ತಮ್ಮ ಅಭಿಪ್ರಾಯಗಳನ್ನು ಮುಚ್ಚುಮರೆಯಿಲ್ಲದೇ ಹೇಳುತ್ತಿದ್ದರು. ಇದು ಹಲವು ಬಾರಿ ಜನಾಂಗೀಯ ಅಥವಾ ಲಿಂಗ ತಾರತಮ್ಯದಂತೆ ಭಾಸವಾಗುತ್ತಿತ್ತು. ಅವರ ಅತಿಯಾದ ಮಾತುಗಳು ಬ್ರಿಟಿಷ್ ಸರಕಾರ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಮುಜುಗರ ತರುತ್ತಿದ್ದವು. ‘ಲಾರ್ಡ್ ಡೆನ್ನಿಂಗ್ ಮಾತಾಡಿದರೆ, ಥೇಮ್ಸ್ ನದಿ ಹರಿದಂತೆ’ ಎಂದು ಜನ ತಮಾಷೆ ಮಾಡುತ್ತಿದ್ದರು. ಕೋರ್ಟ್ ಹಾಲಿನಲ್ಲಿ ಅವರು ವಕೀಲರಿಗೆ ಮಾತಾಡಲು ಆಸ್ಪದ ನೀಡುತ್ತಿರಲಿಲ್ಲ. ಆ ಪರಿ ಮಾತಾಡುತ್ತಿದ್ದರು. ಕೆಲವೊಮ್ಮೆ ತಾಸುಗಟ್ಟಲೆ ಮಾತಾಡುತ್ತಿದ್ದರು. ಅದರಲ್ಲೂ ಕೋರ್ಟಿನಲ್ಲಿದ್ದವರೆಲ್ಲ ತನ್ನ ಮಾತನ್ನು ಕೇಳಲು ಬಂದಿದ್ದಾರೆಂದೇ ಭಾವಿಸುತ್ತಿದ್ದರು. ಇದು ಕೋತಿಗೆ ಮದ್ಯ ಕುಡಿಸಿದಂತಾಗುತ್ತಿತ್ತು. ಕೋರ್ಟ್ ಹಾಲ್‌ನಲ್ಲಿದ್ದವರೆಲ್ಲ ತಲೆತಲೆ ಚಚ್ಚಿಕೊಳ್ಳುತ್ತಿದ್ದರು. ಆದರೆ ಲಾರ್ಡ್ ಡೆನ್ನಿಂಗ್ ‘ಕೊರೆತ’ ನಿಲ್ಲುತ್ತಿರಲಿಲ್ಲ. ಎಷ್ಟೆಂದರೂ ಜಡ್ಜ್ ತಾನೇ ಎಂದು ಸುಮ್ಮನಾಗುತ್ತಿದ್ದರು. ಆದರೆ ಎಲ್ಲರೂ ತನ್ನ ಬುದ್ಧಿವಂತಿಕೆಯನ್ನು ಪ್ರಶಂಸಿಸುತ್ತಿದ್ದಾರೆ ಎಂದು ಅವರು ತಮ್ಮಷ್ಟಕ್ಕೇ ಉಬ್ಬಿಹೋಗುತ್ತಿದ್ದರು. ಆದರೆ ಅಲ್ಲಿದ್ದವರೆಲ್ಲ ತಮಗೆ ಹಿಡಿಶಾಪ ಹಾಕುತ್ತಿದ್ದಾರೆ ಎಂಬ ಕನಿಷ್ಠ ಪ್ರಜ್ಞೆಯೂ ಅವರಲ್ಲಿ ಇರುತ್ತಿರಲಿಲ್ಲ.

ಲಾರ್ಡ್ ಡೆನ್ನಿಂಗ್ ಅವರ ‘ಲೂಸ್ ಕ್ಯಾನನ್’ ಸ್ವಭಾವವು ಅವರ ನಿವೃತ್ತಿಗೆ ಕಾರಣವಾಯಿತು. 1982ರಲ್ಲಿ ಅವರು ‘What Next in the Law’ ಎಂಬ ಪುಸ್ತಕವನ್ನು ಬರೆದರು. ಈ ಪುಸ್ತಕದಲ್ಲಿ ಅವರು ಬ್ರಿಟಿಷ್ ಜ್ಯೂರಿ ವ್ಯವಸ್ಥೆಯ ಬಗ್ಗೆ ಬರೆಯುತ್ತಾ, ಕಪ್ಪುವರ್ಣೀಯರು ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆಯ ಜ್ಯೂರಿಗಳಲ್ಲಿ ಇರಬಾರದು, ಏಕೆಂದರೆ ಅವರು ಬ್ರಿಟಿಷ್ ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ ಮತ್ತು ‘ಪೂರ್ವಗ್ರಹಪೀಡಿತರಾಗಿರುತ್ತಾರೆ’ ಎಂಬ ಅತ್ಯಂತ ವಿವಾದಾತ್ಮಕ ಹೇಳಿಕೆ ನೀಡಿಬಿಟ್ಟರು. ಈ ಒಂದು ಹೇಳಿಕೆಯು ಇಡೀ ಬ್ರಿಟನ್‌ನಲ್ಲಿ ಸಂಚಲನವನ್ನೇ ಮೂಡಿಸಿತು. ವಕೀಲರ ಸಂಘಗಳು ಮತ್ತು ಸಾರ್ವಜನಿಕರು ಅವರ ವಿರುದ್ಧ ತಿರುಗಿಬಿದ್ದರು. ಅವರ ಈ ‘ಫಿಲ್ಟರ್ ಇಲ್ಲದ’ ಮಾತುಗಳು ಜನಾಂಗೀಯ ದ್ವೇಷವನ್ನು ಪ್ರಚೋದಿಸುತ್ತವೆ ಎಂಬ ಆರೋಪ ಕೇಳಿಬಂತು. ಇದರಿಂದಾಗಿ ಅವರು ತಮ್ಮ ಎಂಬತ್ತಮೂರನೇ ವಯಸ್ಸಿನಲ್ಲಿ ಅನಿವಾರ್ಯವಾಗಿ ನಿವೃತ್ತಿ ಘೋಷಿಸಬೇಕಾಯಿತು.

ಇದೇ ಸಂದರ್ಭದಲ್ಲಿ ನೆನಪಾಗುವ ಮತ್ತೊಬ್ಬ ಬ್ರಿಟಿಷ್ ಮಾಜಿ ಮುಖ್ಯ ನ್ಯಾಯಾಧೀಶರೆಂದರೆ, ಲಾರ್ಡ್ ಪಾರ್ಕರ್. ಇವರನ್ನೂ ಜನ ‘ಲೂಸ್ ಕ್ಯಾನನ್’ ಎನ್ನುತ್ತಿದ್ದರು. ವಿಚಾರಣೆ ನಡೆಯುವಾಗ ವಕೀಲರಿಗೆ ಸರಿಯಾಗಿ ಮಾತನಾಡಲು ಬಿಡದೇ, ಸಂಬಂಧ–ಸೂತ್ರಗಳಿಲ್ಲದ ಮಾತಾಡಿ, ಪ್ರತಿಹಂತದಲ್ಲೂ ಮಧ್ಯಪ್ರವೇಶಿಸಿ ತಾವೇ ಹೆಚ್ಚು ಮಾತನಾಡುತ್ತಿದ್ದರು. ಬ್ರಿಟಿಷ್ ನ್ಯಾಯಾಂಗದಲ್ಲಿ ಒಂದು ಪ್ರಸಿದ್ಧ ಮಾತಿದೆ – ‘ಒಬ್ಬ ನ್ಯಾಯಾಧೀಶನು ಮಧ್ಯಪ್ರವೇಶಿಸಿ ಅತಿಯಾಗಿ ಮಾತನಾಡುತ್ತಿದ್ದರೆ, ಅವನು ನ್ಯಾಯದ ದಾರಿಗೆ ಮಾರಕ.’ ಬ್ರಿಟಿಷ್ ನ್ಯಾಯಾಂಗವು ಇಂಥ ಪರಿಸ್ಥಿತಿಗಳನ್ನು ನಿಭಾಯಿಸಲು ‘Judicial Conduct Investigations Office’ ಎಂಬ ವ್ಯವಸ್ಥೆಯನ್ನು ಹೊಂದಿದೆ. ಯಾವುದೇ ನ್ಯಾಯಾಧೀಶರು ಲೂಸ್ ಕ್ಯಾನನ್‌ನಂತೆ ವರ್ತಿಸಿದರೆ ಅಥವಾ ಅಸಂಬದ್ಧವಾಗಿ ಮಾತನಾಡಿದರೆ, ಅವರ ವಿರುದ್ಧ ದೂರು ನೀಡಬಹುದು. ಲಾರ್ಡ್ ಡೆನ್ನಿಂಗ್ ಅವರಂಥ ದಿಗ್ಗಜರೇ ತಮ್ಮ ಮಾತಿನಿಂದಾಗಿ ಅಧಿಕಾರ ಕಳೆದುಕೊಳ್ಳಬೇಕಾಯಿತು ಎಂದರೆ, ಬ್ರಿಟಿಷ್ ವ್ಯವಸ್ಥೆಯಲ್ಲಿ ಮಾತಿನ ಸಂಯಮ’ಕ್ಕೆ ಎಷ್ಟು ಬೆಲೆ ಇದೆ ಎಂದು ಅರ್ಥವಾಗುತ್ತದೆ. ಲಾರ್ಡ್ ಡೆನ್ನಿಂಗ್ ಅವರು ಜಗತ್ತಿನ ಶ್ರೇಷ್ಠ ನ್ಯಾಯಾಧೀಶರಲ್ಲಿ ಒಬ್ಬರಾಗಿದ್ದರೂ, ಅವರ ಅತಿಯಾದ ಮಾತು’ ಮತ್ತು ನಿರ್ಭಯ ಅಭಿಪ್ರಾಯ’ಗಳು ಅವರನ್ನು ಒಬ್ಬ ‘ಲೂಸ್ ಕ್ಯಾನನ್’ ಎಂಬಂತೆ ಬಿಂಬಿಸಿದವು. ಇದು ನಮಗೆ ಕಲಿಸುವ ಪಾಠವೇನೆಂದರೆ, ಅಧಿಕಾರ ದೊಡ್ಡದಾದಷ್ಟೂ, ನಾಲಿಗೆಯ ಮೇಲಿನ ಹತೋಟಿ ಅಷ್ಟೇ ಬಿಗಿಯಾಗಿರಬೇಕು.

1920 ಮತ್ತು 30ರ ದಶಕದಲ್ಲಿ ಇಂಗ್ಲೆಂಡ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ‘ಲಾರ್ಡ್ ಹ್ಯೂವಾರ್ಟ್ ಕೂಡ ಪರಮವಾಚಾಳಿ’ ಎಂಬ ಗೇಲಿಗೆ ಪಾತ್ರರಾಗಿದ್ದರು. ಇವರು ವಿಚಾರಣೆ ನಡೆಯುವಾಗ ವಕೀಲರಿಗೆ ವಾದ ಮಂಡಿಸಲು ಬಿಡದೆ ಸದಾ ಮಧ್ಯಪ್ರವೇಶಿಸುತ್ತಿದ್ದರು. ಒಮ್ಮೆ ಒಬ್ಬ ವಕೀಲರು ವಾದ ಮಂಡಿಸುವಾಗ ಹ್ಯೂವಾರ್ಟ್ ಸತತವಾಗಿ ಪ್ರಶ್ನೆಗಳನ್ನು ಕೇಳಿ ಅಡ್ಡಿಪಡಿಸಿದರು. ಆಗ ವಕೀಲರು ಬೇಸತ್ತು, ‘ಸ್ವಾಮಿ, ನೀವು ನ್ಯಾಯಾಧೀಶರಾಗಿ ಕೇಳಿಸಿಕೊಳ್ಳುವ ಕೆಲಸ ಮಾಡಬೇಕು, ವಕೀಲರಾಗಿ ವಾದಿಸುವ ಕೆಲಸವನ್ನಲ್ಲ’ ಎಂದು ಮುಖಕ್ಕೆ ಹೊಡೆದಂತೆ ಹೇಳಿದರು. ಅಷ್ಟಾಗಿಯೂ ಅವರಿಗೆ ಅರ್ಥವಾಗಲಿಲ್ಲ. ಲಾರ್ಡ್ ಹ್ಯೂವಾರ್ಟ್ ವಾಚಾಳಿತನ ಮುಂದುವರಿದಾಗ, ವಕೀಲರೊಬ್ಬರು ಕೋರ್ಟ್ ಹಾಲ್‌ನಲ್ಲಿ ಜೋರಾಗಿ ಎಲ್ಲರಿಗೂ ಕೇಳಿಸುವ ಹಾಗೆ ಆಕಳಿಸಿಬಿಟ್ಟಿದ್ದರು.

ಅಮೆರಿಕದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧವಾದ ಪ್ರಕರಣವನ್ನು ಹೇಳಬೇಕು. ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿದ್ದ ಸ್ಯಾಮ್ಯುಯೆಲ್ ಚೇಸ್‌ಗೂ ಬಾಯಿಭೇದಿ. ಮಾತಾಡಲಾರಂಭಿಸಿದರೆ ಯಾವಾಗ ನಿಲ್ಲಿಸುತ್ತಾರೆ ಎಂಬುದು ಗೊತ್ತಾಗುತ್ತಿರಲಿಲ್ಲ. ಸ್ಯಾಮ್ಯುಯೆಲ್ ಚೇಸ್ ಮಾತಾಡಲಾರಂಭಿಸಿದರೆ, He is literally chasing us ಎಂದು ಜನ ಅಪಹಾಸ್ಯ ಮಾಡುತ್ತಿದ್ದರು. 1803ರಲ್ಲಿ ಚೇಸ್ ಅವರು ಗ್ರ್ಯಾಂಡ್ ಜೂರಿಯ ಮುಂದೆ ಸುದೀರ್ಘವಾದ ರಾಜಕೀಯ ಭಾಷಣ ಮಾಡಿದರು. ಅವರು ಅಂದಿನ ಸರಕಾರದ ನೀತಿಗಳನ್ನು ತೀವ್ರವಾಗಿ ಟೀಕಿಸಿದರು. ಅಷ್ಟೇ ಅಲ್ಲ, ನ್ಯಾಯಪೀಠದ ಮೇಲೆ ಕುಳಿತು ಒಬ್ಬ ಸಾಮಾನ್ಯ ರಾಜಕಾರಣಿಯಂತೆ ಲೂಸ್ ಕ್ಯಾನನ್ ಆಗಿ ವರ್ತಿಸಿದರು. ಅಮೆರಿಕದ ಇತಿಹಾಸದಲ್ಲಿ ಇಂಪೀಚ್‌ಮೆಂಟ್ ಎದುರಿಸಿದ ಏಕೈಕ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ಇವರೇ. ನ್ಯಾಯಾಧೀಶರು ‘ಪಕ್ಷಪಾತ’ವಿಲ್ಲದ ವ್ಯಕ್ತಿಯಾಗಿರಬೇಕು ಎಂಬ ತತ್ವವನ್ನು ಇವರು ಗಾಳಿಗೆ ತೂರಿದ್ದರು.

ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಇತಿಹಾಸದಲ್ಲೂ ‘ಅತಿಯಾಗಿ ಮಾತನಾಡುವ’ ಅಥವಾ ತಮ್ಮ ವಿವಾದಾತ್ಮಕ ಹೇಳಿಕೆಗಳಿಂದಲೇ ಸುದ್ದಿಯಾದ ಅನೇಕ ನ್ಯಾಯಾಧೀಶರಿದ್ದಾರೆ. ಇವರನ್ನು ಕೆಲವರು ‘ಧೈರ್ಯವಂತ’ರು ಎಂದು ಕರೆದರೆ, ಕಾನೂನು ತಜ್ಞರು ಇವರನ್ನು ‘ಲೂಸ್ ಕ್ಯಾನನ್’ ಅಥವಾ ಸಂಯಮವಿಲ್ಲದ ನ್ಯಾಯಾಧೀಶರು ಎಂದು ಟೀಕಿಸಿದ್ದಾರೆ. ಭಾರತೀಯ ನ್ಯಾಯಾಂಗ ಇತಿಹಾಸದಲ್ಲಿ ಅತ್ಯಂತ ದೊಡ್ಡ ‘ಲೂಸ್ ಕ್ಯಾನನ್’ ಎಂದರೆ ಜಸ್ಟಿಸ್ ಕರ್ಣನ್. ಇವರು ಕಲ್ಕತ್ತಾ ಮತ್ತು ಮದ್ರಾಸ್ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದರು. ಇವರು ತಮ್ಮ ಸಹೋದ್ಯೋಗಿ ನ್ಯಾಯಾಧೀಶರ ಮೇಲೆಯೇ ಭ್ರಷ್ಟಾಚಾರದ ಆರೋಪ ಹೊರಿಸಿದರು. ಅಷ್ಟೇ ಅಲ್ಲ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಿಗೇ ತಮ್ಮ ಮನೆಯಿಂದಲೇ ‘ಜೈಲು ಶಿಕ್ಷೆ’ ವಿಧಿಸಿ ಆದೇಶ ಹೊರಡಿಸಿದ್ದರು! ಇವರ ನಿಯಂತ್ರಣವಿಲ್ಲದ ಮಾತು ಮತ್ತು ನಡೆವಳಿಕೆಯಿಂದಾಗಿ ಇತಿಹಾಸದಲ್ಲೇ ಮೊದಲ ಬಾರಿಗೆ ಸುಪ್ರೀಂ ಕೋರ್ಟ್ ಒಬ್ಬ ಹಾಲಿ ನ್ಯಾಯಾಧೀಶರಿಗೆ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿತು. ಇವರು ನ್ಯಾಯಾಂಗದ ಘನತೆಗೆ ಧಕ್ಕೆ ತಂದ ಲೂಸ್ ಕ್ಯಾನನ್ ಆಗಿ ಗುರುತಿಸಿಕೊಂಡರು.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರಾದ ಜಸ್ಟಿಸ್ ಮಾರ್ಕಂಡೇಯ ಕಟ್ಜು ಬಾಯಿಬಡಕತನಕ್ಕೆ ಹೆಸರುವಾಸಿ. ‘ಶೇ.ತೊಂಬತ್ತರಷ್ಟು ಭಾರತೀಯರು ಮೂರ್ಖರು’, ‘ಮಹಾತ್ಮ ಗಾಂಧಿ ಬ್ರಿಟಿಷ್ ಏಜೆಂಟ್’ ಎಂಬಂಥ ಹೇಳಿಕೆಗಳು ಅವರ ಲೂಸ್ ಕ್ಯಾನನ್ ಗುಣಕ್ಕೆ ನಿದರ್ಶನ. ಹಾಗೆ ರಾಜಸ್ಥಾನ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಮಹೇಶ್ ಚಂದ್ರ ಶರ್ಮ ತಮ್ಮ ನಿವೃತ್ತಿಯ ದಿನ ನೀಡಿದ ಒಂದು ಹೇಳಿಕೆ ಇಡೀ ದೇಶದಲ್ಲಿ ನಗೆಪಾಟಲಿಗೀಡಾಯಿತು. ‘ನವಿಲುಗಳು ಲೈಂಗಿಕ ಸಂಪರ್ಕ ಬೆಳೆಸುವುದಿಲ್ಲ, ಬದಲಿಗೆ ಗಂಡು ನವಿಲಿನ ಕಣ್ಣೀರನ್ನು ಕುಡಿಯುವ ಮೂಲಕ ಹೆಣ್ಣು ನವಿಲು ಗರ್ಭಧರಿಸುತ್ತದೆ’ ಎಂದು ಅವರು ರಾಷ್ಟ್ರೀಯ ವಾಹಿನಿಯೊಂದರಲ್ಲಿ ಹೇಳಿದರು. ವಿಜ್ಞಾನಕ್ಕೆ ವಿರುದ್ಧವಾದ ಇಂಥ ಮಾತುಗಳನ್ನು ಒಬ್ಬ ಜವಾಬ್ದಾರಿಯುತ ನ್ಯಾಯಾಧೀಶರು ಆಡುವುದು ಅವರ ಬೌದ್ಧಿಕ ಸಂಯಮದ ಕೊರತೆಯನ್ನು ಎತ್ತಿ ತೋರಿಸಿತು. ಅವರ ಬಾಯಿಚಟವೇ ಅವರಿಗೆ ಮುಳುವಾಯಿತು.

‘ನ್ಯಾಯಾಧೀಶರ ಮಾತು ಶಾಸನ’ವಾಗಬೇಕೇ ಹೊರತು, ಶಬ್ದಮಾಲಿನ್ಯ’ವಾಗಬಾರದು. ಭಾರತದಂಥ ದೊಡ್ಡ ಪ್ರಜಾಪ್ರಭುತ್ವದಲ್ಲಿ ನ್ಯಾಯಾಧೀಶರು ಲೂಸ್ ಕ್ಯಾನನ್ ಆದರೆ, ಜನಸಾಮಾನ್ಯರಿಗೆ ಕಾನೂನಿನ ಮೇಲಿರುವ ಭಯ ಮತ್ತು ಭಕ್ತಿ ಎರಡೂ ಕಡಿಮೆಯಾಗುತ್ತದೆ. ಅತಿಯಾಗಿ ಮಾತಾಡುವ ನ್ಯಾಯಮೂರ್ತಿಗಳನ್ನು ‘ಅವರು ಜಾಸ್ತಿ ಮಾತಾಡಬಹುದು, ಆದರೆ ಬುದ್ಧಿವಂತ ಕಣ್ರೀ’ ಎಂದು ಹೇಳುವುದನ್ನು ಕೇಳುತ್ತೇವೆ. ನ್ಯಾಯಮೂರ್ತಿಯೊಬ್ಬ ಅತಿಯಾಗಿ ಮಾತಾಡುವುದು, ಭಯೋತ್ಪಾದಕನೊಬ್ಬ ತನ್ನಲ್ಲಿರುವ ಬಂದೂಕಿನಲ್ಲಿ ಗುಂಡುಗಳಿವೆ ಎಂದು ಮನಸ್ಸಿಗೆ ಬಂದಂತೆ ಹಾರಿಸುವುದು ಎರಡೂ ಒಂದೇ! ಕಳೆದ ಮೂರು ದಶಕಗಳಿಂದ ನೂರಾರು ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಎಡತಾಕಿರುವ ನಾನು, ಮೊನ್ನೆ ಅಂಥದ್ದೇ ಪ್ರಕರಣ ಸಂಬಂಧ ಧಾರವಾಡ ಹೈಕೋರ್ಟಿಗೆ ಹೋಗಿದ್ದೆ. ವಾಪಸ್ ಬರುವಾಗ ಈ ಎಲ್ಲ ಸಂಗತಿಗಳು ನೆನಪಾದವು.

ಪ್ರಗತಿಪರರಿಗೂ ಪ್ರೇರಣೆ ಸ್ವಾತಂತ್ರ್ಯವೀರ ಸಾವರ್ಕರ್

ತನ್ನಿಮಿತ್ತ

ಲಕ್ಷ್ಮಣ ಆರ್.ನಿರಾಣಿ
vveditoped@gmail.com

ವಿನಾಯಕ ದಾಮೋದರ ಸಾವರ್ಕರರು ‘ಸ್ವಾತಂತ್ರ್ಯವೀರ ’ಎಂಬ ಮಹಾನ್ ಗೌರದಿಂದ ಭಾರತೀಯರ ಹೃದಯದಲ್ಲಿ ನೆಲೆಸಿದ್ದಾರೆ. ಅವರು ಉಗ್ರ ಹಿಂದುತ್ವದ ಪ್ರತಿಪಾದಕರಾಗಿದ್ದರು ಎಂದು ಹೆಸರಾಗಿದ್ದಾರೆ. ಆದರೆ ಅವರು ಹಿಂದೂ ಧರ್ಮದಲ್ಲಿಯ ಅಸ್ಪೃಶ್ಯತೆಯ ಆಚರಣೆ ಹಾಗೂ ಅಂಧಶ್ರದ್ಧೆಗಳ ಕಡು ವಿರೋಧಿಯಾಗಿದ್ದರು ಎಂಬುದು ಹೆಚ್ಚು ಮುನ್ನೆಲೆಗೆ ಬಂದಿಲ್ಲ ಎಂಬುದು ನೋವಿನ ಸಂಗತಿ. ಅವರ ವಿಶಾಲ ಮತ್ತು ವೈವಿಧ್ಯಮಯ ಚಿಂತನೆಗಳನ್ನು ಪರಿಚಯಿಸುವ ಕೆಲಸ ವ್ಯಾಪಕವಾಗಿ ನಡೆಯುವುದು ಬಹಳ ಅವಶ್ಯವಿದೆ. ಅವರ ಅರವತ್ತನೆಯ ಸ್ಮರಣೆ ದಿನ ಫೆಬ್ರವರಿ 26ರಂದು (ಮೇ 28, 1883– 26 ಫೆಬ್ರವರಿ 1966) ದೇಶದ ತುಂಬಾ ನಡೆಯಲಿದೆ.

ಮಠ, ಮಂದಿರ, ಧಾರ್ಮಿಕ ಸ್ಥಳಗಳು ಎಲ್ಲರ ಪ್ರವೇಶಕ್ಕೆ ಮುಕ್ತವಾಗಿರಬೇಕು. ಅಸ್ಪೃಶ್ಯತೆ ಆಚರಣೆ ಹಿಂದೂ ಧರ್ಮಕ್ಕೆ ಅಂಟಿರುವ ಕಳಂಕ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಮೇಲ್ಜಾತಿಯವರು ತಳ ಸಮುದಾಯದವರಿಗೆ ಮಂದಿರಗಳ ಪ್ರವೇಶ ನಿರಾಕರಿಸುತ್ತಿದ್ದರು. ಇದು ಸಾವರ್ಕರ್‌ಗೆ ನೋವನ್ನುಂಟು ಮಾಡಿತ್ತು. ಅವರು ಇದಕ್ಕೆ ಪರ್ಯಾಯವಾಗಿ ಎಲ್ಲರಿಗೂ ಪ್ರವೇಶವಿರುವ ‘ಪತಿತ ಪಾವನ ಮಂದಿರ’ವನ್ನು ಮಹಾರಾಷ್ಟ್ರದ ರತ್ನಗಿರಿಯಲ್ಲಿ 1931ರಷ್ಟು ಹಿಂದೆಯೇ ನಿರ್ಮಿಸಿದ್ದಾರೆ. ಇದು ಅವರ ವೈಚಾರಿಕ ನಿಲುವಿಗೆ ಗಟ್ಟಿ ಸಾಕ್ಷಿಯಾಗಿ ನಿಂತಿದೆ. ಇದರ ವಾಸ್ತುಶಿಲ್ಪ ಸರಳವಾಗಿದ್ದು, ಯಾವುದೇ ಆಡಂಬರವಿಲ್ಲದೆ ಸಾಮಾಜಿಕ ಅಸಮಾನತೆಗಳ ವಿರುದ್ಧದ ನಿಲುವನ್ನು ಸಂಕೇತಿಸುವಂತೆ ರಚಿಸಲಾಗಿದೆ.

ಈ ಮಂದಿರಕ್ಕೆ ಬೇರೆ ಬೇರೆ ತಳ ಸಮುದಾಯಕ್ಕೆ ಸೇರಿದ ಯುವಕರನ್ನು ಅರ್ಚಕರನ್ನಾಗಿ ಅವರು ನೇಮಿಸಿದ್ದರು. ಈಗಲೂ ಆ ವಿಧಾನ ಮುಂದುವರೆದಿದೆ. ಮಂದಿರದ ವಿಶಾಲ ಆವರಣದಲ್ಲಿ ಸಾವರ್ಕರ್ ಅವರ ಸ್ವಾತಂತ್ರ್ಯ ಹೋರಾಟದ ಮ್ಯೂಸಿಯಂ ಕೂಡ ನಿರ್ಮಿಸಲಾಗಿದೆ. ಮಂದಿರದಲ್ಲಿಯೇ ‘ರೋಟಿ ಬಂದಿ’ ಸಹ ಭೋಜನ ಕಾರ್ಯಕ್ರಮವನ್ನು ಅವರು ಆರಂಭಿಸಿದರು. ಪ್ರಥಮ ಸಹಭೋಜನ ಮಹಿಳೆಯರಿಗಾಗಿ ಏರ್ಪಡಿಸಿದ್ದು ವಿಶೇಷವಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಸಮಾಜದ 75 ಮಹಿಳೆಯರು ಪಾಲ್ಗೊಂಡಿದ್ದು ಆಗ ದೊಡ್ಡ ಸಂಚಲನವನ್ನುಂಟು ಮಾಡಿತ್ತು.

ಮಹಾರಾಷ್ಟ್ರದಲ್ಲಿ ಗಣಪತಿ ಉತ್ಸವ ತುಂಬಾ ಪ್ರಸಿದ್ಧ. ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ಲೋಕಮಾನ್ಯ ತಿಲಕರು ಇದನ್ನು ಆರಂಭಿಸಿದ್ದರು. ಆದರೆ ಈ ಉತ್ಸವದಲ್ಲಿಯೂ ತಳ ವರ್ಗದವರಿಗೆ ಮುಕ್ತ ಪ್ರವೇಶವಿರಲಿಲ್ಲ. 1933ರಲ್ಲಿ ಸಾವರ್ಕರ್ ಅವರು ಎಲ್ಲರ ಪ್ರವೇಶಕ್ಕೆ ಮುಕ್ತವಾದ ಗಣಪತಿ ಉತ್ಸವ ಏರ್ಪಡಿಸುವ ಮೂಲಕ ದೇಶದ ಗಮನ ಸೆಳೆದರು.

ಜಗತ್ತು ದೇವತೆಗಳ ಇಚ್ಛೆಯಂತೆ ನಡೆಯುವ ಜಾಗವಲ್ಲ, ಬದಲಾಗಿ, ಇದು ಕೆಲವು ನಿರ್ದಿಷ್ಟ ನಿಯಮಗಳಂತೆ ನಡೆಯುವ ಒಂದು ವ್ಯವಸ್ಥಿತ ವಿಶ್ವ. ವಿಶಾಲವಾದ ಈ ಬ್ರಹ್ಮಾಂಡದಲ್ಲಿ, ನನ್ನ ಸ್ಥಾನ ಎಲ್ಲಿದೆ ಎಂಬುದು ಅರ್ಥವಾದರೆ ನಮ್ಮ ನಡುವಿನ ಜಗಳಗಳು, ಯುದ್ಧಗಳು ಎಷ್ಟು ಅರ್ಥಹೀನ ಎಂಬುದು ನಮಗೆ ಅರ್ಥವಾಗುತ್ತದೆ. ಪ್ರತಿವ್ಯಕ್ತಿ, ಪ್ರತಿ ಜೀವಿ ಅಕ್ಷರ ಅಕ್ಷರಶಃ ತನ್ನನ್ನು ತಾನೇ ಅನುಭವಿಸುತ್ತಿರುವ ಒಂದು ರೂಪ ಮಾತ್ರ. ಧರ್ಮಗ್ರಂಥದಲ್ಲಿ ಇದೆ ಎನ್ನುವ ಮಾತ್ರಕ್ಕೆ ಎಲ್ಲವನ್ನು ನಂಬಬಾರದು. ನೋಡಿ ಪರಿಶೀಲಿಸಬೇಕು ಮುಂತಾದ ಸತ್ಯಶೋಧನೆಯ ವಿಚಾರಗಳನ್ನು ಅವರು ಸದಾ ಹೇಳುತ್ತಿದ್ದರು.

ನಿಜ ಹೇಳಬೇಕೆಂದರೆ ಇವತ್ತಿನ ‘ಪ್ರಗತಿಪರ ಗುಂಪು’ಗಳಿಗೆ ಸಾವರ್ಕರ್ ಹೆಚ್ಚು ಹಿಡಿಸಬೇಕು. ಅವರು ಜಾತಿಯ ಮೇಲಾಟಗಳನ್ನು ಉಗ್ರವಾಗಿ ನಿರಾಕರಿಸಿದ್ದರು. ಅಸ್ಪೃಶ್ಯತೆ ನಿವಾರಣೆಗೆ ಪಣತೊಟ್ಟಿದ್ದರು. ದಲಿತರಿಗಾಗಿ ಶಾಲೆ, ದೇವಸ್ಥಾನಗಳನ್ನು ಕಟ್ಟಿದರು. ಎಲ್ಲರೂ ಸೇನೆಗೆ ಸೇರಬೇಕೆಂದು, ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕೆಂದು ನಿರಂತರವಾಗಿ ಹೇಳುತ್ತಿದ್ದರು. ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಆಗ್ರಹಿಸುತ್ತಿದ್ದರು. ಶೋಷಿತ ಜನಾಂಗದ ಮಹಾಡ ಜಾತಿಯ ದಂಪತಿಗಳ ಪಾದಪೂಜೆ ಮಾಡಿದರು. ಮತಾಂತರಗೊಂಡು ಹೋಗಿದ್ದ ಹಿಂದೂಗಳನ್ನು ಮತ್ತೆ ಮಾತ್ರ ಧರ್ಮಕ್ಕೆ ಕರೆತಂದರು ಜಾತಿಪದ್ಧತಿಯ ನಿರ್ಮೂಲನೆಗೆಂದು ಅಂತರ್ಜಾತೀಯ ಭೋಜನ ಕೂಟಗಳನ್ನು ಏರ್ಪಡಿಸುತ್ತಿದ್ದರು. ಅಂತರ್ಜಾತೀಯ ಮದುವೆಗಳೊಂದಿಗೆ ಅಂತರ ಪ್ರಾಂತೀಯ ವಿವಾಹಗಳನ್ನು ಅವರು ಪ್ರೋತ್ಸಾಹಿಸುತ್ತಿದ್ದರು.

ತಮ್ಮ ಮಗನ ಉಪನಯನವನ್ನೇ ಮಾಡದ ಅವರು, ತಮ್ಮ ಪತ್ನಿಯ ಅಂತ್ಯಸಂಸ್ಕಾರವನ್ನು ತೀರಾ ಸರಳವಾಗಿ ನೆರವೇರಿಸಿದರು. ಉತ್ತರ ಕ್ರಿಯೆಗಳನ್ನು ಮಾಡಲೇ ಇಲ್ಲ. ಇಷ್ಟೇ ಅಲ್ಲ ಸ್ವತಃ ಅವರ ಅಂತಿಮ ಸಂಸ್ಕಾರದಲ್ಲಿ ಧಾರ್ಮಿಕ ವಿಧಿಗಳು ಇರಲಿಲ್ಲ.

ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ದೀನನಾಥ್ ಮಂಗೇಶ್ಕರ್ ಮೇಲಿಂದ ಮೇಲೆ ಸಾವರ್ಕರ್ ಸದನಕ್ಕೆ ಭೇಟಿ ಕೊಡುತ್ತಿದ್ದರು. ಎರಡು ಕುಟುಂಬಗಳ ನಡುವೆ ಹ್ಯಾಪಿ ಸ್ನೇಹವಿತ್ತು. ದೀನನಾಥ್ ಅವರೊಂದಿಗೆ ಸಾವರ್ಕರರು ರಾಜಕೀಯ ಕಲೆ ಸಂಸ್ಕೃತಿ ಧಾರ್ಮಿಕ ವಿಚಾರಗಳ ಕುರಿತು ಚರ್ಚಿಸುತ್ತಿದ್ದರು. ಸಾವರ್ಕರ್‌ರ ಪ್ರೇರಣೆಯಿಂದ ಮಂಗೇಶ್ಕರ್ ಕುಟುಂಬದವರು ಸಾಮೂಹಿಕ ಊಟ ಮತ್ತು ಮೂಢನಂಬಿಕೆ ವಿರೋಧಿ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು. ಸಾವರ್ಕರ್‌ರ ಸಾರ್ವಜನಿಕ ಸೇವೆಯನ್ನು ಗಮನಿಸಿದ ಗಾಯಕಿ ಲತಾ ಮಂಗೇಶ್ಕರ್ ದೇಶದ ಹಿತಕ್ಕೋಸ್ಕರ ನಿಮ್ಮೊಂದಿಗೆ ಸೇರಿ ಕೆಲಸ ಮಾಡಬೇಕೆಂಬ ಆಸೆ ನನಗೆ ತೀವ್ರವಾಗಿದೆ. ಇದಕ್ಕಾಗಿ ನಾನು ಗಾಯನವನ್ನು ಬೇಕಾದರೂ ಬಿಡಲು ಸಿದ್ಧ ಎಂದು ಹೇಳಿದರಂತೆ. ನೀನು ಹಾಗೆಲ್ಲ ಮಾಡುಕೂಡದು. ನಿನಗೆ ಒಲಿದಿರುವ ಗಾಯನವನ್ನು ನೀನು ಸಂಪೂರ್ಣವಾಗಿ ಬಳಸಿಕೊಳ್ಳುವುದು ಕೂಡ ಭಾರತಮಾತೆಯ ಸೇವೆ ಆಗಲಿದೆ. ಆದ್ದರಿಂದ ನೀನು ನಿನ್ನ ಕ್ಷೇತ್ರದಲ್ಲಿ ಮುಂದುವರಿ ಎಂದು ಹೇಳಿದ್ದರು. ಸಾವರ್ಕರ್‌ರ ಕಾವ್ಯ ಕೂಡ ಬಹಳ ಶಕ್ತಿಶಾಲಿಯಾದದ್ದು. ಈ ಗೀತೆಗಳು ಯುವಕರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳಗುತ್ತವೆ.

ಭಟ್ಟರ್ ಸ್ಕಾಚ್

- **ಚಂದ್ರು, ಬಾಣಸವಾಡಿ**
ಭಟ್ರೇ, ಫೇಸ್‌ಬುಕ್ ಮತ್ತು ರಿಯಲ್ ಲೈಫ್‌ಗೆ ಇರುವ ವ್ಯತ್ಯಾಸವೇನು?
– **ಫೇಸ್‌ಬುಕ್‌ನಲ್ಲಿ ಎಲ್ಲರೂ 'ಹ್ಯಾಪಿ', ರಿಯಲ್ ಲೈಫ್‌ನಲ್ಲಿ ಎಲ್ಲರೂ 'ಕಾಪಿ-ಪೇಸ್ಟ್'!**

- **ರವಿ ಹಾದಿಮನಿ, ಗುಬ್ಬಿ**
ಭಟ್ರೇ, ಅಡುಗೆ ಮನೆಯಲ್ಲಿ ಗಂಡನಿಗಿರುವ ಸ್ಥಾನವೇನು?
– **ಪಾತ್ರೆ ತೊಳೆಯುವ 'ಚೀಫ್ ಎಕ್ಸಿಕ್ಯೂಟಿವ್ ಆಫೀಸರ್'!**

- **ನೂತನ್, (ಇಮೇಲ್ ಮೂಲಕ)**
ಭಟ್ರೇ, ಅನುಭವ ಅಂದರೇನು?
– **ತಪ್ಪುಗಳನ್ನು ಮಾಡಿದ ಮೇಲೆ ಸಿಗುವ ಜ್ಞಾನ, ಆದರೆ ಆ ತಪ್ಪು ಮಾಡುವಾಗ ಅದು ಕೈಗೆ ಸಿಗುವುದಿಲ್ಲ!**

- **ರಾಮನಾರಾಯಣ ಹೆಗಡೆ, ಶಿರಸಿ**
ಭಟ್ರೇ, ಸ್ಮೈಲ್ ನ ಬೆಲೆ ಎಷ್ಟು?
– **ಫೋಟೋ ತೆಗೆಸಿಕೊಳ್ಳುವಾಗ ಫ್ರೀ, ಆದರೆ ಹೆಂಡತಿ ನಕ್ಕಾಗ ಗಂಡನ ಜೇಬಿಗೆ ಕತ್ತರಿ!**

- **ಸರೋಜಾ ಪಾಟೀಲ, ಧಾರವಾಡ**
ಸೋಮವಾರದ ವಿಶೇಷತೆ ಏನು?
– **ರವಿವಾರದ ಹ್ಯಾಂಗೋವರ್ ಇಳಿಸುವ ಉಪಾಯ!**

- **ಅರುಣ ಸಿ ನಾಯ್ಡು, (ಇಮೇಲ್ ಮೂಲಕ)**
ಭಟ್ರೇ, ಮದುವೆಗೂ, ಮೊಬೈಲ್‌ಗೂ ಇರುವ ವ್ಯತ್ಯಾಸ ಏನು?
– **ಮೊಬೈಲ್ ಹ್ಯಾಂಗ್ ಆದ್ರೆ 'ರಿಸೆಟ್' ಮಾಡಬಹುದು, ಆದ್ರೆ ಮದುವೆ ಹ್ಯಾಂಗ್ ಆದ್ರೆ 'ಅಪ್ಸೆಟ್' ಆಗಲೇಬೇಕು!**

- **ನವೀನ ಭಟ್, ಹೊನ್ನಾವರ**
ಭಟ್ರೇ, ಸ್ಕೂಲ್‌ನಲ್ಲಿ ಬೆಲ್ ಯಾಕೆ ಹೊಡೆಯುತ್ತಾರೆ?
– **ಯಾಕಂದ್ರೆ, ಪಾಪ ಆ ಬೆಲ್‌ಗೆ ತನ್ನಷ್ಟಕ್ಕೆ ತಾನು ಕೂಗಿಕೊಳ್ಳಲು ಬರಲ್ಲ!**

- **ಸೂರ್ಯ, ಕಾಗಿನೆಲೆ**
ಭಟ್ರೇ, ಕೊನೆವರೆಗೂ ನಮ್ಮ ಜತೆ ಇರುವ ಪ್ರೀತಿ ಯಾವುದು?
– **'ಶಾಪಿಂಗ್' ಮೇಲೆ ನಮಗಿರುವ ಪ್ರೀತಿ!**

- **ಬಸವರಾಜ ಹೊನ್ನಳ್ಳಿ, ಗದಗ**
ಭಟ್ರೇ, ಸಾಲ ಕೊಡುವವರಿಗೂ, ಸಾಲ ಪಡೆಯುವವವರಿಗೂ ವ್ಯತ್ಯಾಸ ಏನು?
– **ಸಾಲ ಕೊಟ್ಟವನಿಗೆ ನೆನಪು ಜಾಸ್ತಿ, ಸಾಲ ಪಡೆದವನಿಗೆ ಮರೆವು ಜಾಸ್ತಿ!**

- **ಶಂಕರ ಪಾಟೀಲ, ಹುಬ್ಬಳ್ಳಿ**
ಬ್ರಹ್ಮಚಾರಿಗಳಿಗೂ, ವಿವಾಹಿತರಿಗೂ ಇರುವ ವ್ಯತ್ಯಾಸ ಏನು?
– **ಬ್ರಹ್ಮಚಾರಿಗಳು ಹೋಟೆಲ್‌ನಲ್ಲಿ ತಿಂದು ಮನೆಯಲ್ಲಿ ನಿದ್ದೆ ಮಾಡ್ತಾರೆ, ವಿವಾಹಿತರು ಮನೆಯಲ್ಲಿ ತಿಂದು ಹೋಟೆಲ್‌ನಲ್ಲಿ ನಿದ್ದೆ ಮಾಡುವ ಕನಸು ಕಾಣ್ತಾರೆ!**

- **ರಘು, ಕುಣಿಗಲ್**
ಭಟ್ರೇ, ಪರೀಕ್ಷೆ ಅಂದ್ರೆ ಏನು?
– **ಓದಿದ್ದು ನೆನಪಿದೆಯಾ ಅಂತ ಚೆಕ್ ಮಾಡೋದಲ್ಲ, ಎಷ್ಟು ಹೊತ್ತು ನಿದ್ದೆ ತಡೆದುಕೊಳ್ಳಬಹುದು ಅಂತ ಚೆಕ್ ಮಾಡೋದು!**

ರಬ್ಬರ್: ಅಬ್ಬರ ಮತ್ತು ಅವನತಿ

ರಬ್ಬರ್ ಮೊದಲು ಬಂದುದು ದಕ್ಷಿಣ ಕನ್ನಡದ ಸುಳ್ಯ ತಾಲೂಕಿಗೆ. ಇಲ್ಲಿನ ದೊಡ್ಡತೋಟ, ದುಗಲಡ್ಕ, ನೆಲ್ಯಾಡಿ ಭಾಗದಲ್ಲಿ ವ್ಯಾಪಕವಾಗಿ ಕಾಡು ಕಡಿದು ಸರಕಾರವೇ ನೆಡುತೋಪುಗಳನ್ನು ಸೃಷ್ಟಿಸಿತು. ನಂತರ ಬೆಳ್ತಂಗಡಿಯ ಹಲವು ಭಾಗಗಳಲ್ಲಿ ರಬ್ಬರ್ ತೋಟಗಳು ಸೃಷ್ಟಿಯಾದವು. ಕಾರ್ಕಳ, ಪುತ್ತೂರು, ಹೀಗೆ ಎಲ್ಲ ತಾಲೂಕುಗಳೂ ರಬ್ಬರ್‌ಮಯವಾದವು. ಈ ನೂರಾರು ಎಕರೆ ರಬ್ಬರು ಕೂಪುಗಳಿಗೆ ಎಲೆ ಉದುರು ರೋಗ, ಕಪ್ಪು ಚುಕ್ಕೆ ರೋಗ ಅಮರಿಕೊಳ್ಳುತ್ತಿದ್ದವು.

ಕಾಡುದಾರಿ
ಹರೀಶ್ ಕೇರ
vveditoped@gmail.com

ಎಪ್ಪತ್ತರ ದಶಕದವರೆಗೂ ದಕ್ಷಿಣ ಕನ್ನಡ ಜಿಲ್ಲೆ ಭತ್ತದ ಗದ್ದೆಗಳಿಂದ ಕಂಗೊಳಿಸುತ್ತಿತ್ತು. ನಂತರ ಅಡಿಕೆ, ತೆಂಗಿನ ತೋಟಗಳು, ಅವುಗಳ ನಡುವೆ ಕಾಳುಮೆಣಸು ಬಳ್ಳಿ, ಕಾಫಿ, ಕೋಕೋ ಗಿಡಗಳು ಬಂದವು. ಅಲ್ಲಲ್ಲಿ ತರಕಾರಿ, ಹಣ್ಣು ಮತ್ತು ಮಲ್ಲಿಗೆ ಹೂವು. ಬೆರಳೆಣಿಕೆಯಷ್ಟು ಮಾವಿನ ತೋಪುಗಳು. ಎಂಬತ್ತರ ದಶಕದಲ್ಲಿ ಇಲ್ಲಿ ಗದ್ದೆ ಬೇಸಾಯ ಕಡಿಮೆಯಾಗತೊಡಗಿತು. ಹೊಸ ಬೆಳೆಯೊಂದು ಇಲ್ಲಿಗೆ ಆಗಮಿಸಿತು– ರಬ್ಬರ್. ಅದು ದಕ್ಷಿಣದ ಕೇರಳದ ಕಡೆಯಿಂದ ಯಶಸ್ವಿ ಅನ್ನಿಸಿಕೊಂಡು ಬಂತು. ಕೇರಳದ ಹಾಗೂ ತಮಿಳುನಾಡಿನ ಕ್ರಿಶ್ಚಿಯನ್ನರು ಈ ಬೆಳೆಯ ಹೊಣೆ ಹೊತ್ತಿದ್ದರು. ಅವರನ್ನು ನಾವು ಕೊಚ್ಚಿ ಕ್ರಿಶ್ಚಿಯನ್ಸ್ ಎಂದು ಕರೆಯುತ್ತಿದ್ದೆವು. ವಿಚಿತ್ರವೆಂದರೆ ಕ್ರೈಸ್ತರಲ್ಲದವರೂ ಈ ಗುಂಪಿನಲ್ಲಿದ್ದರು. ವಿರುದ್ದಾಸಲಂ, ಉದಯಮುತ್ತು, ಯೇಸುಮಗನ್, ಅರುಳ್ದಾಸ್, ಇನಿಯನ್ ಎಂಬುದೆಲ್ಲ ಆಗ ನಮಗೆ ವಿಚಿತ್ರ ಹೆಸರುಗಳು.

ರಬ್ಬರ್ ಮೊದಲು ಬಂದುದು ದಕ್ಷಿಣ ಕನ್ನಡದ ಸುಳ್ಯ ತಾಲೂಕಿಗೆ. ಇಲ್ಲಿನ ದೊಡ್ಡತೋಟ, ದುಗಲಡ್ಕ, ನೆಲ್ಯಾಡಿ ಭಾಗದಲ್ಲಿ ವ್ಯಾಪಕವಾಗಿ ಕಾಡು ಕಡಿದು ಸರಕಾರವೇ ನೆಡುತೋಪುಗಳನ್ನು ಸೃಷ್ಟಿಸಿತು. ನಂತರ ಬೆಳ್ತಂಗಡಿಯ ಹಲವು ಭಾಗಗಳಲ್ಲಿ ರಬ್ಬರ್ ತೋಟಗಳು ಸೃಷ್ಟಿಯಾದವು. ಕಾರ್ಕಳ, ಪುತ್ತೂರು, ಹೀಗೆ ಎಲ್ಲ ತಾಲೂಕುಗಳೂ ರಬ್ಬರ್‌ಮಯವಾದವು. ಈ ನೂರಾರು ಎಕರೆ ವಿಸ್ತೀರ್ಣದ ರಬ್ಬರು ಕೂಪುಗಳಿಗೆ ಎಲೆ ಉದುರು ರೋಗ, ಕಪ್ಪು ಚುಕ್ಕೆ ರೋಗಗಳೆಲ್ಲ ಅಮರಿಕೊಳ್ಳುತ್ತಿದ್ದವು. ಆಗ ಮಳೆಗಾಲದ ಮೊದಲು ಮರಗಳ ಮೇಲಿನಿಂದ ಕೀಟನಾಶಕ ದ್ರಾವಣ ಸಿಂಪಡಿಸಲಾಗುತ್ತಿತ್ತು. ಆಗಿನ ಚಿಕ್ಕ ಮಕ್ಕಳಿಗೆ ಅದೊಂದು ಅದ್ಭುತ ದೃಶ್ಯ. ಹೆಲಿಕಾಪ್ಟರ್‌ನಿಂದ ತಂದು ಸಿಂಪಡಿಸಲಾಗುತ್ತಿತ್ತು. ಆಗ ತಾಲೂಕು ಕೇಂದ್ರದಲ್ಲಿ ಮಾತ್ರ ಇದ್ದ ಹೆಲಿಪ್ಯಾಡ್‌ಗಳಲ್ಲಿ ಕೀಟನಾಶಕ ತುಂಬಿಕೊಂಡು ಹೆಲಿಕಾಪ್ಟರ್‌ಗಳು ಕೂಪುಗಳಿದ್ದ ಕಡೆಗೆ ಬೊರೋಂ ಎಂದು ಸದ್ದು ಮಾಡುತ್ತ ಬಂದು ಸುತ್ತು ಹಾಕುತ್ತ ತುಂತುರು ಮಳೆ ಸುರಿದಂತೆ ಬೋರ್ಡೋ ಮಿಕ್ಸ್ ಮತ್ತಿತರ ಮದ್ದು ಸಿಂಪಡಿಸಿ ಹೊರಟುಹೋಗುತ್ತಿದ್ದವು. ಅಷ್ಟು ಹತ್ತಿರದಿಂದ ನಮಗೆಲ್ಲ ಹೆಲಿಕಾಪ್ಟರ್ ಕಾಣಲು ಸಿಕ್ಕಿದ್ದು ಅದೇ ಮೊದಲು.

ಆಗ ಅಡಿಕೆ ತೆಂಗಿಗೆ ತೃಪ್ತಿಪಟ್ಟುಕೊಂಡಿದ್ದ ಕೃಷಿಕರನ್ನು 'ನೀವೂ ರಬ್ಬರ್ ಪ್ರಯತ್ನಿಸಿ' ಎಂದು ಪುಸಲಾಯಿಸಿದರು. ಮೊದಮೊದಲು ರಬ್ಬರ್ ಬೆಳೆಯಲು ಕೃಷಿಕರಲ್ಲಿ ಅಷ್ಟೊಂದು ಉತ್ಸಾಹ ಇರಲಿಲ್ಲ. ಯಾಕೆಂದರೆ ರಬ್ಬರ್‌ಗೆ ಆಗಿನ್ನೂ ಸ್ಥಳೀಯ ಮಾರುಕಟ್ಟೆ ಸೃಷ್ಟಿಯಾಗಿರಲಿಲ್ಲ. ಅಡಿಕೆ ಮಧ್ಯೆ ಕೋಕೋ – ಕಾಳುಮೆಣಸು ಬೆಳೆದಂತೆ ಎಡೆಬೆಳೆಯನ್ನು ರಬ್ಬರ್ ಗಿಡಗಳ ನಡುವೆ ಬೆಳೆಯಲಾಗುವುದಿಲ್ಲ. ಆಮೇಲೆ, ಅದು ಮಣ್ಣಿನ ಜೀವಸತ್ವವನ್ನೆಲ್ಲ ಹೀರಿಕೊಳ್ಳುತ್ತದೆ ಎಂಬ ಭಯ. ನಿಧಾನವಾಗಿ ಈ ಆತಂಕಗಳೆಲ್ಲ ಮಾಯವಾಗಿ, ಆ ಜಾಗದಲ್ಲಿ ಅದು ತರುವ ಹಣದ ಚಿತ್ರಣ ಮೂಡತೊಡಗಿತು. ಅಡಿಕೆ ತೋಟಗಳ ಸುತ್ತಮುತ್ತ ಖಾಲಿ ಜಾಗ ಇದ್ದ ಎಲ್ಲರೂ ರಬ್ಬರ್ ಗಿಡ ಹಾಕಿದರು. ಅದು ಬೆಳೆದು ಲ್ಯಾಟೆಕ್ಸ್ ನೀಡಲು ಐದಾರು ವರ್ಷ ತೆಗೆದುಕೊಳ್ಳುತ್ತದೆ. ನಂತರ ಇಪ್ಪತ್ತು ವರ್ಷ ಇಳುವರಿ ನೀಡುತ್ತದೆ. ಆರಂಭದ ಐದು ವರ್ಷ ನೀರು, ಮದ್ದು ಕೊಟ್ಟು ಸಾಕಿದರೆ ಸಾಕು. ನಂತರ ಮೇಂಟೆನೆನ್ಸ್ ಎಂಬುದೇನೂ ಇಲ್ಲ. ಮಳೆಗಾಲದಲ್ಲಿ ಲ್ಯಾಟೆಕ್ಸ್ ಸಂಗ್ರಹಿಸುವ ಭಾಗಕ್ಕೆ ಪ್ಲಾಸ್ಟಿಕ್ ಆವರಣ ಕಟ್ಟುವುದೊಂದು ಹೊರತುಪಡಿಸಿದರೆ ಇನ್ನೇನೂ ಖರ್ಚಿಲ್ಲ ಎಂಬುದು ಇದರ ಆಕರ್ಷಕ ಭಾಗ.

ಎಂಬತ್ತು ತೊಂಬತ್ತರ ದಶಕಗಳು ದಕ್ಷಿಣ ಕನ್ನಡದಲ್ಲಿ ರಬ್ಬರ್‌ನ ವಿಜೃಂಭಣೆಯ ದಿನಗಳು. ರಬ್ಬರ್ ಮರದ ನಡುಭಾಗದಲ್ಲಿ ಗೀರು ಮಾಡಿ, ಅದರಿಂದ ಹೊರಸೂಸುವ ಲ್ಯಾಟೆಕ್ಸ್ (ಹಾಲು) ಒಂದು ಕರಟದಲ್ಲಿ ಸಂಗ್ರಹಿಸಲಾಗುತ್ತದೆ. ಅದನ್ನು ಒಂದೆರಡು ಗಂಟೆಗಳಲ್ಲಿ ತೆಗೆಯದಿದ್ದರೆ ಗಟ್ಟಿಯಾಗಿ ಬಿಡುತ್ತದೆ. ಹಾಲನ್ನು ಸಂಗ್ರಹಿಸಿ ಡ್ರಮ್‌ಗಳಲ್ಲಿ ಹಾಕಿ ಅದಕ್ಕೆ ಅಮೋನಿಯಾ ಹಾಕಿಟ್ಟರೆ, ಒಂದು ತಿಂಗಳವರೆಗೂ ಕೆಡುವುದಿಲ್ಲ. ಹಾಲನ್ನು ಟಂಬ್ಲರ್‌ಗಳಲ್ಲಿ ಸುರಿದು ಆಸಿಡ್ ಹಾಕಿದರೆ ಮರುದಿನಕ್ಕೆ ಮೆತ್ತನೆಯ ಹಾಳೆಯಾಗುತ್ತದೆ. ಆ ಹಾಳೆಯನ್ನು ಕಬ್ಬಿನ ಹಾಲು ತೆಗೆಯುವ ಮೆಶಿನ್‌ನಂಥ ಯಂತ್ರದಲ್ಲಿ ತುರುಕಿ ತೆಗೆದರೆ ಅಚ್ಚುಗಳುಳ್ಳ ರಬ್ಬರ್ ಶೀಟ್ ಸಿದ್ಧ. ಅದು ಹತ್ತು ದಿನ ಬಿಸಿಲಲ್ಲಿ ಅಥವಾ ಹೊಗೆಗೂಡಿನಲ್ಲಿ ಒಣಗಿ ಜೇನಿನ ಬಣ್ಣಕ್ಕೆ ಬಂದರೆ ಫಸ್ಟ್ ಕ್ಲಾಸ್ ಮೊದಲ ದರ್ಜೆ ರಬ್ಬರ್. ತೊಂಬತ್ತರ ದಶಕದಲ್ಲಿ ಇದರ ಕ್ರಯ ಕಿಲೋಗೆ ಮುನ್ನೂರರವರೆಗೂ ಹೋಯಿತು. ಹಾಲನ್ನೂ ಕೊಡುವವರಿದ್ದಾರೆ– ಅದರ ದರ ಬೇರೆ. ಹಾಲು ಕರಟದಿಂದ ತೆಗೆಯದಿದ್ದರೆ, ಅಥವಾ ತೆಗೆದ ಮೇಲೂ ಉಳಿದು ಗಟ್ಟಿಯಾದರೆ ಆ ಸ್ಕ್ರೇಪ್‌ಗೆ ಬೇರೆಯೇ ದರ.

ಈಗ ರಬ್ಬರು ಮಲೆನಾಡು– ಪಶ್ಚಿಮಘಟ್ಟದ ಬಹುತೇಕ ಜಿಲ್ಲೆಗಳನ್ನು ಆಕ್ರಮಿಸಿತು. ಒಂದೆರಡು ಎಕರೆ ಜಮೀನು ಹೊಂದಿದ ಸಣ್ಣ ರೈತರು ಕೂಡ ಮನೆ ಪಕ್ಕದಲ್ಲಿ ಹತ್ತಾರು ರಬ್ಬರ್ ಗಿಡ ನೆಟ್ಟು ತಾವೇ ಹಾಲು ತೆಗೆದು ಸ್ವಾಭಿಮಾನಿ ಬದುಕು ಬಾಳತೊಡಗಿದರು. ಅಡಿಕೆಗೆ ದರ ಕುಸಿದಾಗ ರಬ್ಬರ್, ರಬ್ಬರ್‌ಗೆ ಬೆಲೆ ಇಳಿದಾಗ ಅಡಿಕೆ ರೈತರನ್ನು ಮೇಲೆತ್ತಿ ಹಿಡಿಯಿತು. ಹೀಗಾಗಿ ದಕ್ಷಿಣ ಕನ್ನಡದ ಕೃಷಿಕರು ಎಂದಿಗೂ ಸಾಮೂಹಿಕವಾಗಿ ಬೆಳೆನಾಶ– ಬೆಲೆಕುಸಿತದ ದುರ್ಭರ ದಿನಗಳನ್ನು ಎದುರಿಸಲಿಲ್ಲ. ಸಣ್ಣ ಮನೆಗಳಲ್ಲಿ ಬೈಕುಗಳು, ಜೀಪುಗಳು, ದೊಡ್ಡವರ ಮನೆಗಳಲ್ಲಿ ಎಸ್‌ಯುವಿಗಳು ರಾರಾಜಿಸಿದವು. ಮದುವೆ ಮುಂಜಿ ಉಪನಯನಗಳೆಲ್ಲ ಬಹಳ ಗೌಜಿಯಾಗಿ ನಡೆಯತೊಡಗಿದವು. ಊರೊಟ್ಟಿನ ಜಾತ್ರೆ, ಕಂಬಳ, ಗುಡಿ ಬ್ರಹ್ಮಕಲಶ, ಹೊಸ ಶಾಲೆಗಳ ನಿರ್ಮಾಣ, ಭಜನಾ ಮಂದಿರ ಕಟ್ಟೋಣಗಳೆಲ್ಲ ಹೊಸ ರಂಗು ಪಡೆದುಕೊಳ್ಳತೊಡಗಿದವು. ಕೈಯಲ್ಲಿ ಸ್ವಲ್ಪ ಕಾಸು ಆಡತೊಡಗಿತು. ಕೃಷಿ ದಿನಗೂಲಿ ಮೌಲ್ಯ ಹೆಚ್ಚಿತು. ಇಂದು ರಾಜ್ಯದಲ್ಲೇ ಅತಿ ಹೆಚ್ಚು ಕೃಷಿ ದಿನಗೂಲಿ ನೀಡುವ ಜಿಲ್ಲೆ ದಕ, ಉಡುಪಿ. ವಿದ್ಯಾವಂತ ಮಕ್ಕಳು ರಾಜಧಾನಿ ಸೇರಿಕೊಂಡರೆ, ಅಷ್ಟೇನೂ ವಿದ್ಯೆ ಕಲಿಯದವರೆಲ್ಲ ತಮ್ಮೂರಿನಲ್ಲೇ ಒಂದೊಂದು ಗುಂಪು ಕಟ್ಟಿಕೊಂಡರು. ಕೆಲವರು ಕೇಸರಿ, ಕೆಲವರು ಹಸಿರು. ಗುಂಪು ಚಕಮಕಿಗಳು ಹೆಚ್ಚಾಗತೊಡಗಿದವು.

ಎಪ್ಪತ್ತರ ದಶಕದಲ್ಲೇ ದಕ್ಷಿಣ ಕನ್ನಡದ ಸುಳ್ಯ, ನೆಲ್ಯಾಡಿ, ಬೆಳ್ತಂಗಡಿಯ ಹಲವು ಕಡೆಗಳಲ್ಲಿ ಕೇರಳ– ತಮಿಳುನಾಡಿನ ಸಾವಿರಾರು ಜನರು ಬಂದು ಕಾಲನಿಗಳನ್ನು ಕಟ್ಟಿಕೊಂಡರು. ಇವರಲ್ಲಿ ಹೆಚ್ಚಿನವರು ಕ್ರೈಸ್ತರು ಹಾಗೂ ರಬ್ಬರ್ ಲ್ಯಾಟೆಕ್ಸ್ ತೆಗೆಯುವ ಕೆಲಸ ಮಾಡುತ್ತಿದ್ದವರು. ಇದೀಗ ಇವರ ಮೂರನೇ ತಲೆಮಾರು ಕೆಲಸ ಮಾಡುತ್ತಿದೆ. ಅಂದು ನೂರು ರೂಪಾಯಿ ದಿನಗೂಲಿ ಪಡೆದು ಹಾಲು ತೆಗೆಯುತ್ತಿದ್ದ ಇವರಿಗೆ ಈಗ ಸಿಕ್ಕಾಪಟ್ಟೆ ಬೇಡಿಕೆ. ಮುಂಜಾನೆ ಐದು ಗಂಟೆಯಿಂದ ಹತ್ತರವರೆಗೆ ಮಾತ್ರ ಕೆಲಸ. ಕಾರಣ ಬಿಸಿಲೇರುವ ಮೊದಲೇ ಹಾಲು ತೆಗೆಯಬೇಕು. ಹೀಗೆ ಬಂದವರು ಒಂದಾಗಿ ಬದುಕಿದರು. ಇಲ್ಲಿನ ಜನಜೀವನದೊಂದಿಗೂ ಹಾಲು ಜೇನಿನಂತೆ ಒಂದಾದರು. ತಮ್ಮದೇ ಪುಟ್ಟ ಚರ್ಚು, ಮಾರಿಗುಡಿ ಇತ್ಯಾದಿ ಕಟ್ಟಿಕೊಂಡರು. ನಿಧಾನವಾಗಿ ಇತರ ಉದ್ಯಮಗಳನ್ನು ಕಟ್ಟಿಕೊಂಡು ಹಣ ಮಾಡಿದವರೂ ಇದ್ದಾರೆ. ಆದರೆ ಎಂದೂ ಮೂಲನಿವಾಸಿಗಳನ್ನು ತಡಕಿಕೊಂಡು ತಗಾದೆ ಸೃಷ್ಟಿಸಲಿಲ್ಲ. ಅಕ್ಕಪಕ್ಕದ ಜಿಲ್ಲೆಗಳ ಕಾಫಿ– ಟೀ ತೋಟಗಳಿಗೆ ಬಂದ ಬಿಹಾರಿ– ಉಪ್ರ– ಮಪ್ರದವರಿಗೆ ಹೋಲಿಸಿದರೆ ಇವರಲ್ಲಿ ಕ್ರೈಮ್ ರೇಟ್ ಬಹಳಷ್ಟು ಕಡಿಮೆ. ಇವರ ಬದುಕಿನ ರೀತಿ, ಹಬ್ಬ ಹರಿದಿನಗಳೆಲ್ಲ ನಮಗಿಂತ ಭಿನ್ನವಾಗಿದ್ದವು. ಅದು ನಮಗೆ ಎದುರಾದ ಪುಟ್ಟದೊಂದು ಕಲ್ಚರ್ ಶಾಕ್. ಇಂದು ಅದೆಲ್ಲ ಸಾಮಾನ್ಯ ಸಂಗತಿ.

ವರ್ಷದ ಹಲವು ಋತುಗಳಲ್ಲಿ ನಾನಾ ಬಗೆಯಲ್ಲಿ ಅವತಾರ ತಾಳುವ ರಬ್ಬರ್ ತೋಟಗಳಲ್ಲಿ ಓಡಾಡುವುದೇ ಒಂದು ಆನಂದದ ಸಂಗತಿ. ಕೃಷಿಕರಲ್ಲದವರಿಗೆ ಅದರ ಆನಂದ ಗೊತ್ತಾಗಲಾರದು. ಬೇಸಿಗೆಯಲ್ಲಿ ಮರಗಳೆಲ್ಲ ಎಲೆಗಳನ್ನು ಉದುರಿಸಿ ಭೂಮಿಯಿಂದ ಹೀರಿದ ನೀರನ್ನು ಕಾಂಡಗಳಿಗಾಗಿ ಇಟ್ಟುಕೊಂಡಿರುತ್ತವೆ. ಆಗ ಹಾಲಿನ ಇಳುವರಿ ಕಡಿಮೆ. ಮಳೆಗಾಲದಲ್ಲಿ ಹಾಲು– ನೀರು ಮಿಕ್ಸ್ ಆಗಿಬಿಡುವ ಸಂಭವ ಹೆಚ್ಚು– ಹೀಗಾಗಿ ಕರಟಗಳಿಗೆ ಪ್ಲಾಸ್ಟಿಕ್ ಹೊದಿಕೆ. ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಮರಗಳೆಲ್ಲ ತಲೆತುಂಬ ಎಲೆಗಳನ್ನು ದಟ್ಟವಾಗಿ ಧರಿಸಿಕೊಂಡು, ದಟ್ಟ ಕಾಡಿನ ಒಳಗೆ ಹೊಕ್ಕ ಅನುಭವ ನೀಡುತ್ತವೆ. ಲ್ಯಾಟೆಕ್ಸ್‌ನ ಪರಿಮಳ ವಿಶಿಷ್ಟವಾದದ್ದು. ಅದು ರಬ್ಬರ್ ತೋಟ ಇಲ್ಲಿದೆ ಎಂದು ಕಾಲು ಕಿಲೋಮೀಟರ್ ದೂರದಿಂದಲೇ ನಮ್ಮ ಮೂಗಿಗೆ ಅರಿವು ಮೂಡಿಸುತ್ತದೆ. ಮರದ ಕಾಂಡಕ್ಕೆ ಗೀರೆಳೆದು ಹಾಲು ಇಳಿಸುವುದೊಂದು ಬಲು ನಾಜೂಕಾದ ಕಾಯಕ. ಅದು ಹೆಚ್ಚು ಆಳವೂ ಮೇಲುಮೇಲಿನದೂ ಆಗಬಾರದು. ಮರವನ್ನು ಗೀರಿ ತೆಗೆದ ಕಾಂಡದ ಸಿಪ್ಪೆಗಳು, ಶಾರ್ಪ್‌ನರ್‌ನಲ್ಲಿ ಪೆನ್ಸಿಲ್ ಅನ್ನು ಹೆರೆದು ಮೊನಚು ಮಾಡುವಾಗ ಎದ್ದು ಬರುವ ಸಿಪ್ಪೆಯಂತೆಯೇ ಸೊಗಸು. ಅದನ್ನೇ ಸಂಗ್ರಹಿಸಿ ಒಲೆಗೆ ಒಟ್ಟುವವರೂ ಇದ್ದಾರೆ.

ರಬ್ಬರ್ ಬೀಜಗಳು ಆರಂಭದಲ್ಲಿ ನಮಗೆ ಗಾಬರಿ ಹುಟ್ಟಿಸಿದ್ದವು. ಒಂದೊಂದು ಮರದಲ್ಲೂ ನೂರಾರು ಕಾಯಿ ಬಿಡುತ್ತಿದ್ದವು. ಇವು ತ್ರಿದಳ ಧಾನ್ಯದಂತೆ ಮೂರು ವಿಭಾಗದ್ದು. ಒಂದೊಂದರಲ್ಲೂ ಒಂದೊಂದು ಬೀಜ. ಬೇಸಿಗೆಯಲ್ಲಿ ಇವು ಒಣಗಿ, ನಡುಹಗಲಲ್ಲಿ ಫಟ್ಟನೆ ಸಿಡಿದುಬಿಡುತ್ತಿದ್ದವು. ಹಾಗೆ ಒಂದು ಮರದಿಂದ ಸಿಡಿದಾಗ ಇನ್ನೊಂದು ಮರಕ್ಕೋ ಬೀಜಕ್ಕೋ ತಾಕಿ, ಅದೂ ಫಟ್ಟೆಂದು ಸಿಡಿದು, ಅದು ಇನ್ನೊಂದಕ್ಕೆ ಬಡಿದು ಇಡೀ ತೋಟ ಫಟ್‌ಫಟ್ ಶಬ್ದಮಯವಾಗಿಬಿಡುತ್ತದೆ. ಕೆಲವೊಮ್ಮೆ ರಾತ್ರಿಯಲ್ಲೂ ಹೀಗೆ ಸಿಡಿಯುವುದಿದೆ. ನಮಗಿದೆಲ್ಲ ಗೊತ್ತಿಲ್ಲದ ಆರಂಭ ಕಾಲದಲ್ಲಿ, ಮಲೆನಾಡಿನ ಕಾಡಿನ ನಡುವೆ, ನಡುರಾತ್ರಿ ಇದ್ದಕ್ಕಿದ್ದಂತೆ ಇಡೀ ತೋಟ ಫಟ್‌ಫಟ್ ಎಂದು ಸದ್ದು ಮಾಡತೊಡಗಿದರೆ ಹೇಗಾಗಬೇಡ? ಇಲ್ಲದ ದೆವ್ವ ಪಿಶಾಚಿಗಳೆಲ್ಲಾ ತಲೆಯಲ್ಲಿ ಪ್ರತ್ಯಕ್ಷವಾಗಿಬಿಡುತ್ತಿದ್ದವು.

ಏನನ್ನೋ ಬರೆಯಬೇಕಾಗಿತ್ತು. ನೆನಪುಗಳು ನುಗ್ಗಿ ಬಂದವು. ಹೇಳಬೇಕಾಗಿದ್ದುದು ಇದು– 2010–20ರ ನಡುವೆ ರಬ್ಬರ್ ಬೆಲೆ ಸಮೃದ್ಧಿ ಮುಟ್ಟಿತ್ತು. ಈಗ ಅದರ ಅರ್ಧ ದರಕ್ಕೆ ಇಳಿದಿದೆ. ಕಾರಣ, ಇಂಡೋನೇಷ್ಯಾ, ವಿಯೆಟ್ನಾಮ್, ಥಾಯ್ಲೆಂಡ್‌ಗಳಿಂದ ರಬ್ಬರ್ ಆಮದು ಮಾಡಿಕೊಳ್ಳಲಾಗುತ್ತಿದೆ. ಕಿಲೋಗೆ ಕನಿಷ್ಠ 258 ರು. ಆದರೂ ಬೆಂಬಲ ಬೆಲೆ ನೀಡಬೇಕು ಎಂಬುದು ಬೆಳೆಗಾರರ ಬೇಡಿಕೆ. ಕುಶಲಿ ಕೆಲಸಗಾರರೂ ಈಗ ಕಡಿಮೆ. ಇರುವವರಿಗೆ ಬಹಳ ಬೇಡಿಕೆ ಮತ್ತು ದುಬಾರಿ ದರ. ಕೆಲವೆಡೆ 60:40 ದರ. ಅಂದರೆ ಹಾಲು ತೆಗೆದುಕೊಟ್ಟು ಹೋಗುವವನಿಗೆ ಅದರ 60 ಶೇಕಡ, ರಬ್ಬರ್ ಬೆಳೆದ ಮಾಲೀಕನಿಗೆ 40 ಶೇಕಡ ದುಡ್ಡು. ಇಂಥ ಅವೈಜ್ಞಾನಿಕ ಪರಿಸ್ಥಿತಿ ಬೇರೆ ಎಲ್ಲೂ ಇರಲಿಕ್ಕಿಲ್ಲ. ದೇಶದಲ್ಲಿ ಕರ್ನಾಟಕವೇ ರಬ್ಬರ್ ಬೆಳೆಗೆ ತೃತೀಯ ಸ್ಥಾನಿ, ರಾಜ್ಯದಲ್ಲಿ ದಕ್ಷಿಣ ಕನ್ನಡವೇ ಮೊದಲ ಸ್ಥಾನಿ. ಎತ್ತರ ತಲುಪಿದ ಒಂದು ಬೆಳೆ, ಬೆಲೆ ಬೀಳುವುದು ಎಂದರೆ ಒಂದು ಸಮಾಜ, ಸಮುದಾಯ, ಜನಜೀವನ ಎಲ್ಲ ಹಳ್ಳ ಹಿಡಿಯುವುದೆಂದೇ ಅರ್ಥ. ಇನ್ನಷ್ಟು ಈ ಬಗ್ಗೆ ಹೇಳಲಿದೆ– ಅದೆಲ್ಲ ಇನ್ನೊಮ್ಮೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ತರಕಾರಿಗಳಲ್ಲಿ ಅಪಾಯಕಾರಿ ಅಂಶ: ವಿಶ್ವವಾಣಿ ವರದಿ ಮಾಹಿತಿ ಪೂರ್ಣ

ವಿಶ್ವವಾಣಿಯ ಫೆ.25ರ ಸಂಚಿಕೆಯಲ್ಲಿ ಪ್ರಕಟವಾದ 'ತರಕಾರಿಗಳಲ್ಲಿ ಅಪಾಯಕಾರಿ ಅಂಶ' ಎಂಬ ತಲೆಬರಹದ ಬಂದ ಸುದ್ದಿ ಮಾಹಿತಿಪೂರ್ಣವಾಗಿದೆ ಹಾಗೂ ಗಾಬರಿ ಹುಟ್ಟಿಸುವಂತಿದೆ. ಮೊದಲೆಲ್ಲ ಸಾವಯವ ಕೃಷಿಯಿಂದಾಗಿ ಆರೋಗ್ಯಕರ ತರಕಾರಿ, ಅಕ್ಕಿ, ಬೇಳೆ, ಮುಂತಾದ ಸಾಮಾನುಗಳು ಸಿಗುತ್ತಿದ್ದವು. ಆದರೆ ಹಸಿರು ಕ್ರಾಂತಿ, ಬಿಳಿಕ್ರಾಂತಿ, ಮುಂತಾದ ಹೆಸರಿನಲ್ಲಿ ಎಲ್ಲಾ ರೀತಿಯ ಬೆಳೆಗಳು ಬೆಳೆಯುವುದಕ್ಕೆ ಮಿತಿಯಿಲ್ಲದೆ, ರಾಸಾಯನಿಕ ಗೊಬ್ಬರ ಉಪಯೋಗಿಸಿ ಮಣ್ಣು, ಜಲ, ಎಲ್ಲವನ್ನು ಅಶುದ್ಧಗೊಳಿಸಲಾಗಿದೆ. ಅದೇ ರೀತಿ ಹಸು ಎಮ್ಮೆಗಳು ಶುದ್ಧವಾದ ಹಾಲನ್ನು ಕೊಡುತ್ತಿದ್ದವು. ಆದರೆ ಹಾಲಿನ ಉತ್ಪಾದನೆ ಜಾಸ್ತಿ ಮಾಡಲು ನಾವು ಮಾಡಿದ್ದೇನು? ಅವುಗಳಿಗೆ ಹಾರ್ಮೋನ್ ಚುಚ್ಚುಮದ್ದನ್ನು ಕೊಟ್ಟು, ಅವು ಕೊಡುತ್ತಿದ್ದ ಹಾಲನ್ನು ಕಲುಷಿತಗೊಳಿಸಿದ್ದೇವೆ. ಇವೆಲ್ಲಾ ಸರಕಾರಿ ಪ್ರಾಯೋಜಿತವಾಗಿದ್ದರಿಂದ ಪ್ರಜೆಗಳು ಅದರ ಧನಾತ್ಮಕ ಅಥವ ಋಣಾತ್ಮಕ ಅಂಶಗಳನ್ನು ಪರಿಗಣಿಸದೆ ಒಪ್ಪಿಕೊಂಡು ಅಳವಡಿಸಿಕೊಂಡಿದ್ದರಿಂದ ನಾವು ಈಗ ಅಪಾಯಕಾರಿ ಹಂತ ತಲುಪಿದ್ದೇವೆ. ಇನ್ನೊಂದು ವಿಷಯ, ಮಣ್ಣು, ನೀರು, ಎಲ್ಲಾ ಕಲುಷಿತವಾಗಿರುವಾಗ ಸಾವಯವ ತರಕಾರಿ, ಬೇಳೆ, ಹಾಲು, ಎಂದು ಮಾರಾಟ ಆಗುತ್ತಿರುವ ಸಾಮಾನುಗಳು ನಿಜವಾಗಲೂ ಎಷ್ಟರಮಟ್ಟಿಗೆ ಅಪಾಯಕಾರಿ ಅಲ್ಲ ಎಂದು ಸರಕಾರ ಪತ್ತೆಮಾಡಿಸಿ ವರದಿ ಬಹಿರಂಗಪಡಿಸಿದರೆ ಸಾರ್ವಜನಿಕರಿಗೆ ಅನುಕೂಲ ಆಗುತ್ತದೆ. ಸರಕಾರ ಈ ಕಡೆ ಆದಷ್ಟು ಬೇಗ ಗಮನ ಹರಿಸುತ್ತದೆ ಎಂದು ನಂಬೋಣವೇ? ಹಾಗೂ ಈ ಅಪಾಯಕಾರಿ ವಸ್ತು ಸ್ಥಿತಿಯಿಂದ ಹೊರಬರಲು ಸರಕಾರ (ಕೇಂದ್ರ/ರಾಜ್ಯ) ಕ್ರಮಗೊಳ್ಳಲೇ ಬೇಕು ಎಂದು ಈ ಮೂಲಕ ಆಗ್ರಹಿಸುತ್ತೇನೆ.

–ಮುಕುಂದ ದಾವಣಗೆರೆ

ಮುಖ್ಯಮಂತ್ರಿಗಳೇ ಹುದ್ದೆ ಭರ್ತಿ ಮಾಡಿ

ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 2.84 ಲಕ್ಷಕ್ಕೂ ಹೆಚ್ಚು ಹುದ್ದೆಗಳಿದ್ದು ನಾನಾ ಕಾರಣಗಳಿಗೆ ನೇಮಕಾತಿ ವಿಳಂಬವಾಗುತ್ತಿರುವ ಕಾರಣ ಸಾವಿರಾರು ಅಭ್ಯರ್ಥಿಗಳು ಈಗಾಗಲೇ ಸಾಕಷ್ಟು ಬಾರಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಅದರ ಮುಂದುವರಿದು ಸರ್ಕಾರದಿಂದ ಯಾವುದೇ ರೀತಿಯ ಸಕಾರಾತ್ಮಕ ಸ್ಪಂದನೆ ಸಿಗದ ಕಾರಣ ಮತ್ತೊಮ್ಮೆ ವಿದ್ಯಾರ್ಥಿಗಳು ತಾಳ್ಮೆ ಕಳೆದುಕೊಂಡು ಹಿಂದಿಗಿಂತಲೂ ದೊಡ್ಡ ಮಟ್ಟದಲ್ಲಿ ವಿದ್ಯಾಕಾಶಿ ಧಾರವಾಡದಲ್ಲಿ ಅನಿರೀಕ್ಷಿತವಾಗಿ ಪ್ರತಿಭಟನೆ ಮಾಡಬೇಕಾಯ್ತು. ಧಾರವಾಡ, ವಿಜಯಪುರ ಹಾಗೂ ಬೆಂಗಳೂರಿನಂತಹ ನಗರಗಳಲ್ಲಿ ಹಲವಾರು ವರ್ಷಗಳಿಂದ ತಮ್ಮ ಪೋಷಕರು ಹಾಗೂ ಕುಟುಂಬದವರನ್ನು ಬಿಟ್ಟು ಸಾಲಸೂಲ ಮಾಡಿ ಓದುತ್ತಿದ್ದಾರೆ. ಸಾಲದಕ್ಕೆ ಸ್ವಿಗ್ಗಿ, ಝೊಮ್ಯಾಟೋ ಹಾಗೂ ಹೋಟೆಲ್‌ಗಳಲ್ಲಿ ಕೆಲಸ ಮಾಡುವುದರ ಜೊತೆಗೆ ದಿನಗಳನ್ನು ಕಳೆಯುತ್ತಿದ್ದಾರೆ. ಇತ್ತ ತಂದೆ ತಾಯಿಗಳಿಗೆ ಏನ್ ಹೇಳಬೇಕೆಂದು ಗೊತ್ತಾಗದೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಪರಿತಪಿಸುವಂತಾಗಿದೆ. ತಮ್ಮ ಮೊದಲ 2013–18ರ ಆಡಳಿತ ಅವಧಿಯಲ್ಲಿ ಅತೀ ಹೆಚ್ಚು ನೇಮಕಾತಿಗಳನ್ನು ಮಾಡಿಕೊಂಡಿರುವ ಶ್ರೇಯಸ್ಸು ತಮಗೆ ಸಲ್ಲುತ್ತದೆ. ಆದ್ದರಿಂದ, ಮಾನ್ಯಮುಖ್ಯಮಂತ್ರಿಗಳು ರಾಜ್ಯದ ಲಕ್ಷಾಂತರ ಯುವ ಸಮುದಾಯದ ಹಿತದೃಷ್ಟಿಯಿಂದ ಪಕ್ಷಾತೀತವಾಗಿ ಎಲ್ಲ ಸಮುದಾಯಗಳ ಮುಖಂಡರನ್ನು ವಿಶ್ವಾಸಕ್ಕೆ ಪಡೆದು ಮೀಸಲಾತಿಗೆ ಸಂಬಂಧಿಸಿದ ಎಲ್ಲ ಕಾನೂನು ತೊಡಕುಗಳು ಅಂತಿಮವಾಗಿ ಇತ್ಯಾರ್ಥವಾಗುವರೆಗೂ, ಹಳೆಯ 50% ಮೀಸಲಾತಿ ಮತ್ತು ರೋಸ್ಟರ್‌ನಡಿಯಲ್ಲೇ ನೇಮಕಾತಿಗಳನ್ನು ಪ್ರಾರಂಭಿಸುವಂತಾದರೆ ಆಡಳಿತವು ಸುಗಮವಾಗಿ ನಡೆಯುವುದಲ್ಲದೆ ಸ್ವಲ್ಪ ಮಟ್ಟಿಗೆ ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ.

–ಶಿವರಾಜ್ ನಡಗೇರಿ, ಕಲಬುರಗಿ.

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ನಾಗರಿಕ ಸೇವಾ ಸುಧಾರಣೆ: ಮರುರಚನೆಗೆ ಕಾಲ ಬಂದಿದೆಯೇ?

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದ ಆಡಳಿತಯಂತ್ರದ ಬೆನ್ನೆಲುಬು ಎಂದರೆ ನಾಗರಿಕ ಸೇವೆಗಳು. ಬ್ರಿಟಿಷರ ಕಾಲದಲ್ಲಿ ರೂಪುಗೊಂಡ ಆಡಳಿತ ಮಾದರಿ, ಸ್ವಾತಂತ್ರ್ಯಾನಂತರ ಭಾರತೀಯ ಸಂವಿಧಾನದ ಆವರಣದಲ್ಲಿ ಹೊಸ ರೂಪ ಪಡೆದುಕೊಂಡಿತು. ಭಾರತೀಯ ಆಡಳಿತ ಸೇವೆ, ಭಾರತೀಯ ಪೊಲೀಸ್ ಸೇವೆ, ಭಾರತೀಯ ವಿದೇಶಾಂಗ ಸೇವೆ ಸೇರಿದಂತೆ ಕೇಂದ್ರ ಮತ್ತು ರಾಜ್ಯಗಳ ವಿವಿಧ ಸೇವೆಗಳು ದೇಶದ ನೀತಿ ರೂಪಿಸುವುದರಿಂದ ಹಿಡಿದು ಜಾರಿಗೊಳಿಸುವ ತನಕ ಪ್ರಮುಖ ಪಾತ್ರವಹಿಸುತ್ತಿವೆ. 21ನೇ ಶತಮಾನದ ಭಾರತಕ್ಕೆ 19ನೇ ಶತಮಾನದ ಆಡಳಿತ ರಚನೆ ಸಾಕ್ಷಿಯಾಗಬಹುದೇ? ಸಿವಿಲ್ ಸರ್ವೀಸ್ ರಿಫಾರ್ಮ್ ಬರೀ ಚರ್ಚೆಯ ವಿಷಯವಲ್ಲ; ಇಂದಿನ ಅವಶ್ಯಕತೆಯ ಅವಿಭಾಜ್ಯ ಅಂಗವಾಗಿದೆ.

ಬ್ರಿಟಿಷರ ಕಾಲದಲ್ಲಿ ಐಸಿಎಸ್ ಅನ್ನು ಸ್ಟೀಲ್ ಫ್ರೇಮ್ ಆಫ್ ಇಂಡಿಯಾ ಎಂದು ಕರೆಯಲಾಗುತ್ತಿತ್ತು. ಉದ್ದೇಶ ಆಡಳಿತದ ನಿಯಂತ್ರಣ. ಸ್ವಾತಂತ್ರ್ಯಾನಂತರ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಾಗರಿಕ ಸೇವೆಗಳನ್ನು ರಾಷ್ಟ್ರೀಯ ಏಕತೆಯ ಸಾಧನವೆಂದು ಕರೆದರು. ಆದರೆ ಇಂದಿನ ಭಾರತದಲ್ಲಿ ಆಡಳಿತದ ಗುರಿ ನಿಯಂತ್ರಣವಲ್ಲ; ಸೇವೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ. ತಂತ್ರಜ್ಞಾನ, ಡಿಜಿಟಲ್ ಆರ್ಥಿಕತೆ, ನಾಗರಿಕರ ಹೆಚ್ಚಿದ ಜಾಗೃತಿ–ಇವೆಲ್ಲವೂ ಆಡಳಿತದಿಂದ ಹೊಸ ರೀತಿಯ ಕಾರ್ಯಕ್ಷಮತೆಯನ್ನು ಬೇಡುತ್ತಿವೆ.

ನಾಗರಿಕ ಸೇವೆಗಳ ಪ್ರವೇಶದ್ವಾರವಾದ ಯುನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ ನಡೆಸುವ ಪರೀಕ್ಷೆ ದೇಶದ ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು. ಜ್ಞಾನ, ವಿಶ್ಲೇಷಣಾ ಸಾಮರ್ಥ್ಯ ಮತ್ತು ವ್ಯಕ್ತಿತ್ವ ಪರೀಕ್ಷೆ – ಈ ಮೂರು ಹಂತಗಳ ಮೂಲಕ ಆಯ್ಕೆ ನಡೆಯುತ್ತದೆ. ಪ್ರಶ್ನೆ ಏನೆಂದರೆ, ಇಂದಿನ ಸವಾಲುಗಳಿಗೆ ಬೇಕಾದ ಕೌಶಲ್ಯಗಳು ಇದೇ ಪರೀಕ್ಷಾ ಮಾದರಿಯಿಂದ ಅಳೆಯಲ್ಪಡುತ್ತಿವೆಯೇ?

ಆಡಳಿತಕ್ಕೆ ಈಗ ಬೇಕಾಗಿರುವುದು ಡೇಟಾ ವಿಶ್ಲೇಷಣೆ, ಸಾರ್ವಜನಿಕ ಹಣಕಾಸಿನ ತಿಳಿವು, ತಂತ್ರಜ್ಞಾನ ಬಳಕೆ, ಸಂವಹನ ಕೌಶಲ್ಯ ಮತ್ತು ಸಾಮಾಜಿಕ ಸಂವೇದನೆ. ಪರೀಕ್ಷಾ ಮಾದರಿಯಲ್ಲಿ ಈ ಅಂಶಗಳ ತೂಕ ಹೆಚ್ಚಬೇಕೆಂಬ ವಾದ ಇದೆ. ಒಮ್ಮೆ ಆಯ್ಕೆಯಾದರೆ ಜೀವನಪೂರ್ತಿ ಭದ್ರತೆ ಎಂಬ ಮನೋಭಾವವನ್ನು ಬದಲಾಯಿಸುವಂತೆ, ನಿರಂತರ ಕೌಶಲ್ಯಾಭಿವೃದ್ಧಿ ಮತ್ತು ಕಾರ್ಯಕ್ಷಮತಾ ಮೌಲ್ಯಮಾಪನ ವ್ಯವಸ್ಥೆ ಬಲವಾಗಬೇಕು.

ಇಂದಿನ ಮೌಲ್ಯಮಾಪನ ಪದ್ಧತಿ ಬಹುತೇಕ ಆಂತರಿಕ ವರದಿ ಆಧಾರಿತ. ಪದೋನ್ನತಿ ಹಿರಿತನ ಆಧಾರಿತವಾಗಿರುವುದು ಸಾಮಾನ್ಯ. ಫಲಿತಾಂಶದ ಆಧಾರದ ಮೇಲೆ ಮೌಲ್ಯಮಾಪನ (Outcome-based appraisal) ಇನ್ನೂ ಸಂಪೂರ್ಣವಾಗಿ ಜಾರಿಯಾಗಿಲ್ಲ. ಒಂದು ಜಿಲ್ಲೆಯಲ್ಲಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಹೂಡಿಕೆ ಆಕರ್ಷಣೆ ಇವುಗಳಲ್ಲಿ ಕಂಡುಬರುವ ಸುಧಾರಣೆಗಳಿಗೆ ಅಧಿಕಾರಿಗಳ ಕಾರ್ಯಕ್ಷಮತೆ ಮಾನದಂಡವಾಗಬೇಕು. ಇಲ್ಲದಿದ್ದರೆ, ಸ್ಥಾನಾಂತರವೇ ಏಕೈಕ ಪ್ರತಿಕ್ರಿಯೆಯಾಗುತ್ತದೆ.

ಕೇಂದ್ರ ಸರ್ಕಾರವು ಕೆಲವು ವರ್ಷಗಳಿಂದ ಲ್ಯಾಟರಲ್ ಎಂಟ್ರಿ ಮೂಲಕ ಖಾಸಗಿ ಕ್ಷೇತ್ರದ ತಜ್ಞರನ್ನು ಸಂಯುಕ್ತ ಕಾರ್ಯದರ್ಶಿ ಮಟ್ಟದಲ್ಲಿ ನೇಮಕ ಮಾಡುತ್ತಿದೆ. ಆಧುನಿಕ ನೀತಿ ನಿರ್ಮಾಣಕ್ಕೆ ತಜ್ಞ ಜ್ಞಾನ ಅಗತ್ಯ ಎಂಬುದು ಬೆಂಬಲಿಗರ ವಾದವಾಗಿದ್ದರೆ, ಇದು ಸೇವಾ ಮನೋಭಾವ ಮತ್ತು ನಿರಪೇಕ್ಷತೆಯನ್ನು ದುರ್ಬಲಗೊಳಿಸಬಹುದೇ? ವಿರೋಧಿಗಳ ಆತಂಕವಾಗಿದೆ.

ಸತ್ಯ ಏನೆಂದರೆ, ಆಡಳಿತದಲ್ಲಿ ಸಾಮಾನ್ಯಜ್ಞ (generalist) ಮತ್ತು ತಜ್ಞ (specialist)ರ ಸಮತೋಲನ ಅಗತ್ಯ. ಹವಾಮಾನ ಬದಲಾವಣೆ, ಸೈಬರ್ ಸುರಕ್ಷತೆ, ಹಣಕಾಸು ತಂತ್ರಜ್ಞಾನ ಇವುಗಳಲ್ಲಿ ತಜ್ಞತೆ ಅನಿವಾರ್ಯ. ಆದ್ದರಿಂದ ಲ್ಯಾಟರಲ್ ಎಂಟ್ರಿ ಎಂಬುದು ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಮೌಲ್ಯಾಧಾರಿತವಾಗಿರಬೇಕು. ಭಾರತದ ಸಂಯುಕ್ತ ವ್ಯವಸ್ಥೆಯಲ್ಲಿ ಅಧಿಕಾರಿಗಳ ಪಾತ್ರ ರಾಜಕೀಯ ನಾಯಕರಿಗೆ ಸಲಹೆ ನೀಡುವುದು ಮತ್ತು ನೀತಿಗಳನ್ನು ಜಾರಿಗೊಳಿಸುವುದು. ಆದರೆ ಕೆಲವೊಮ್ಮೆ ರಾಜಕೀಯ ಹಸ್ತಕ್ಷೇಪದ ಆರೋಪಗಳು ಕೇಳಿಬರುತ್ತವೆ. ಪದೇ ಪದೇ ವರ್ಗಾವಣೆ, ನಿರ್ಧಾರ ಸ್ವಾತಂತ್ರ್ಯದ ಕೊರತೆ ಇವು ಕಾರ್ಯಕ್ಷಮತೆಯನ್ನು ದುರ್ಬಲಗೊಳಿಸುತ್ತವೆ. ಆಡಳಿತದ ನಿರಪೇಕ್ಷತೆಯನ್ನು ಕಾಪಾಡಲು ನಿಶ್ಚಿತ ಅವಧಿಯ ಹುದ್ದೆಗಳು (fixed tenure) ಕಟ್ಟುನಿಟ್ಟಾಗಿ ಜಾರಿಯಾಗಬೇಕು.

ಡಿಜಿಟಲ್ ಇಂಡಿಯಾ ಯುಗದಲ್ಲಿ ನಾಗರಿಕ ಸೇವೆಗಳು ಕಾಗದಪತ್ರ ಆಡಳಿತದಿಂದ ಡೇಟಾ ಚಾಲಿತ ಆಡಳಿತಕ್ಕೆ ಪರಿವರ್ತನೆಗೊಳ್ಳಬೇಕು. ಸೇವಾ ವಿತರಣೆಯಲ್ಲಿ ವಿಳಂಬ, ಮಧ್ಯವರ್ತಿಗಳ ಪ್ರಭಾವ, ಭ್ರಷ್ಟಾಚಾರ ಇವುಗಳನ್ನು ತಂತ್ರಜ್ಞಾನದಿಂದ ಕಡಿಮೆ ಮಾಡಬಹುದು. ಆದರೆ ತಂತ್ರಜ್ಞಾನ ಬಳಸಲು ಕೌಶಲ್ಯವೂ ಅಗತ್ಯ. ಪ್ರತಿಯೊಬ್ಬ ಅಧಿಕಾರಿಗೂ ಡಿಜಿಟಲ್ ಆಡಳಿತ ತರಬೇತಿ ಕಡ್ಡಾಯವಾಗಬೇಕು. ನಾಗರಿಕ ಸೇವೆಗಳ ಮೇಲಿನ ಸಾರ್ವಜನಿಕ ನಂಬಿಕೆ ಅವರ ನೈತಿಕತೆ ಮೇಲೆ ನಿಂತಿದೆ. ಭ್ರಷ್ಟಾಚಾರ ಪ್ರಕರಣಗಳು ಬೆಳಕಿಗೆ ಬಂದಾಗ, ಅದು ಸಂಪೂರ್ಣ ವ್ಯವಸ್ಥೆಯ ಮೇಲೆ ಪ್ರಶ್ನೆ ಎತ್ತುತ್ತದೆ. ದಂಡಾತ್ಮಕ ಕ್ರಮಗಳ ಜೊತೆಗೆ ನೈತಿಕ ತರಬೇತಿ, ಪಾರದರ್ಶಕ ಆಸ್ತಿ ಘೋಷಣೆ ಮತ್ತು ಸಾರ್ವಜನಿಕ ಪರಿಶೀಲನೆ ವ್ಯವಸ್ಥೆ ಬಲವಾಗಬೇಕು.

ಭಾರತೀಯ ಸಂವಿಧಾನದ ಭಾಗ XIV ನಾಗರಿಕ ಸೇವೆಗಳ ಕುರಿತು ಸ್ಪಷ್ಟ ನಿರ್ದೇಶನ ನೀಡುತ್ತದೆ. ಕೇಂದ್ರ ಮತ್ತು ರಾಜ್ಯ ಸಾರ್ವಜನಿಕ ಸೇವಾ ಆಯೋಗಗಳು ಈ ವ್ಯವಸ್ಥೆಯ ಭಾಗ. ಸಂವಿಧಾನ ರಚನಾಕಾರರು ಆಡಳಿತದ ಸ್ಥಿರತೆ ಮತ್ತು ನಿರಪೇಕ್ಷತೆಯನ್ನು ಗಮನದಲ್ಲಿಟ್ಟುಕೊಂಡಿದ್ದರು. ಆದರೆ ಮೂಲಭೂತ ರಚನೆಯ ಭಾಗವಾದ ಪ್ರಜಾಸತ್ತಾತ್ಮಕತೆ ಮತ್ತು ಹೊಣೆಗಾರಿಕೆ ಇಂದಿನ ಕಾಲದಲ್ಲಿ ಹೆಚ್ಚಿನ ಅರ್ಥ ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ, ಯಾವುದೇ ಸುಧಾರಣೆಗಳು ಸಂಯುಕ್ತ ವ್ಯವಸ್ಥೆಗೆ ಧಕ್ಕೆಯಾಗದಂತೆ, ರಾಜ್ಯಗಳ ಪಾತ್ರವನ್ನು ಗೌರವಿಸುವಂತೆ ರೂಪಿಸಬೇಕು. ಕೇಂದ್ರ ಸೇವೆಗಳು ಮತ್ತು ರಾಜ್ಯ ಸೇವೆಗಳ ನಡುವೆ ಸಮನ್ವಯ ಮತ್ತು ಗೌರವದ ಸಂಬಂಧ ಅಗತ್ಯ.

ಸಿಂಗಪುರ, ಯುಕೆ, ಆಸ್ಟ್ರೇಲಿಯಾ ಇಂತಹ ದೇಶಗಳಲ್ಲಿ ನಾಗರಿಕ ಸೇವೆಗಳು ಫಲಿತಾಂಶ ಆಧಾರಿತ, ಗುರಿ ನಿರ್ದಿಷ್ಟ ಮತ್ತು ಪಾರದರ್ಶಕವಾಗಿವೆ. ತರಬೇತಿ ನಿರಂತರ, ಕಾರ್ಯಕ್ಷಮತೆ ಅಳೆಯುವ ಮಾನದಂಡ ಸ್ಪಷ್ಟ. ಭಾರತದಲ್ಲಿ ತರಬೇತಿ ಸಂಸ್ಥೆಗಳಿದ್ದರೂ, ತರಬೇತಿಯ ನಂತರದ ನಿರಂತರ ಮೌಲ್ಯಮಾಪನ ವ್ಯವಸ್ಥೆ ದುರ್ಬಲವಾಗಿದೆ. ಇಂದಿನ ಯುವಜನತೆ ವೇಗ, ಪಾರದರ್ಶಕತೆ ಮತ್ತು ಜವಾಬ್ದಾರಿತ್ವವನ್ನು ನಿರೀಕ್ಷಿಸುತ್ತಿದೆ. ಫೈಲ್ ಮುಂದುವರಿಯುತ್ತಿದೆ ಎಂಬ ಉತ್ತರ ಈಗ ಸಾಕಾಗುವುದಿಲ್ಲ. ಉದ್ಯಮ ಸ್ಥಾಪನೆ, ಭೂ ನೋಂದಣಿ, ಪೊಲೀಸ್ ಸೇವೆ, ಕಲ್ಯಾಣ ಯೋಜನೆ ಇವೆಲ್ಲವೂ ಸಮಯಬದ್ಧ ಸೇವೆಯಾಗಬೇಕು. ನಾಗರಿಕ ಸೇವೆಗಳು ಸೇವಾ ಮನೋಭಾವವನ್ನು ಪುನರುಜ್ಜೀವನಗೊಳಿಸಬೇಕು.

ಮರುರಚನೆಗೆ ಮಾರ್ಗಸೂಚಿಗಳು ಪರಿಗಣಿಸಲ್ಪಟ್ಟಲ್ಲಿ;

1. ಪರಿಣಾಮ ಆಧಾರಿತ ಮೌಲ್ಯಮಾಪನ, ಜಿಲ್ಲಾವಾರು ಸೂಚ್ಯಂಕ ಆಧಾರದಲ್ಲಿ ಕಾರ್ಯಕ್ಷಮತೆ ಅಳೆಯುವುದು.
2. ನಿಶ್ಚಿತ ಅವಧಿ ನಿಯಮ – ರಾಜಕೀಯ ಒತ್ತಡ ಕಡಿಮೆ ಮಾಡಲು.
3. ಲ್ಯಾಟರಲ್ ಎಂಟ್ರಿ ಪಾರದರ್ಶಕತೆ – ಸ್ಪಷ್ಟ ಮಾನದಂಡಗಳು.
4. ಡಿಜಿಟಲ್ ಕೌಶಲ್ಯ ತರಬೇತಿ – ಪ್ರತಿಯೊಬ್ಬ ಅಧಿಕಾರಿಗೂ ಕಡ್ಡಾಯ.
5. ನೈತಿಕತಾ ಕೋಡ್ ಬಲಪಡಿಕೆ – ಆಸ್ತಿ ಘೋಷಣೆ, ಸಾರ್ವಜನಿಕ ಪರಿಶೀಲನೆ.
6. ರಾಜ್ಯ–ಕೇಂದ್ರ ಸಮನ್ವಯ ವೇದಿಕೆ – ಸಂಯುಕ್ತ ಗೌರವ ಉಳಿಸಲು.

ನಾಗರಿಕ ಸೇವೆಗಳು ಭಾರತದ ಅಭಿವೃದ್ಧಿಯ ವೇಗವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಸುಧಾರಣೆ ಎಂದರೆ ವ್ಯವಸ್ಥೆಯನ್ನು ದುರ್ಬಲಗೊಳಿಸುವುದಲ್ಲ; ಅದನ್ನು ಕಾಲಾನುಸಾರ ಬಲಪಡಿಸುವುದು. ಸ್ಟೀಲ್ ಫ್ರೇಮ್ ಎಂಬುದು ಈಗ ಜನಕೇಂದ್ರಿತ, ಪಾರದರ್ಶಕ, ಫಲಿತಾಂಶ ಮೂಲಕ ಸರ್ವೀಸ್ ಫ್ರೇಮ್ ಆಗಬೇಕು.



ನಾವು ಇನ್ನೂ ವಸಾಹತುಶಾಹಿಯ ಆಡಳಿತ ನೆರಳಿನಲ್ಲಿ ಬದುಕಬೇಕೇ? ಅಥವಾ ನವಭಾರತದ ಆತ್ಮಕ್ಕೆ ತಕ್ಕಂತೆ ನಾಗರಿಕ ಸೇವೆಗಳನ್ನು ಮರುರಚಿಸಬೇಕೇ? ಎಂಬುದೇ ಈಗಿನ ಪ್ರಶ್ನೆಯಾಗಿದೆ. ಭಾರತೀಯ ನಾಗರಿಕ ಸೇವೆಗಳ ಮೂಲವನ್ನು ನೋಡಿದರೆ ಅದು ಬ್ರಿಟಿಷರ ಕಾಲದ ಭಾರತೀಯ ನಾಗರಿಕ ಸೇವೆ (ICS) ನಲ್ಲಿ ಕಂಡುಬರುತ್ತದೆ. ಲಾರ್ಡ್ ಕರ್ಝನ್ ಕಾಲದಲ್ಲಿ ಇದನ್ನು ಸ್ಟೀಲ್ ಫ್ರೇಮ್ ಆಫ್ ಇಂಡಿಯಾ ಎಂದು ಕರೆದರು. ಇದರ ಉದ್ದೇಶ ಪ್ರಜೆಗಳ ಕಲ್ಯಾಣವಲ್ಲ; ಸಾಮ್ರಾಜ್ಯದ ಹಿತಾಸಕ್ತಿ. ಸ್ವಾತಂತ್ರ್ಯಾನಂತರ ಸರ್ದಾರ್ ಪಟೇಲರು ಸಂವಿಧಾನ ಸಭೆಯಲ್ಲಿ ನಾಗರಿಕ ಸೇವೆಗಳ ಮಹತ್ವವನ್ನು ವಿವರಿಸಿ, ನೀವು ಈ ಸ್ಟೀಲ್ ಫ್ರೇಮ್ ಅನ್ನು ತೆಗೆದರೆ ದೇಶವೇ ಕುಸಿಯುತ್ತದೆ ಎಂದು ಎಚ್ಚರಿಸಿದ್ದರು. ಆದರೆ ಅವರು ಕಲ್ಪಿಸಿದ ಸ್ಟೀಲ್ ಫ್ರೇಮ್ ಎಂದರೆ ರಾಷ್ಟ್ರೀಯ ಏಕತೆಯ ಸಾಧನ.

ಇಂದಿನ ಸವಾಲು ಬೇರೆ. ಆಡಳಿತದ ಗುರಿ ನಿಯಂತ್ರಣದಿಂದ ಸೇವೆಗೆ ಬದಲಾಗಬೇಕು. ಅಧಿಕಾರ ಕೇಂದ್ರಿತ ಆಡಳಿತದಿಂದ ನಾಗರಿಕ ಕೇಂದ್ರಿತ ಆಡಳಿತಕ್ಕೆ ಪರಿವರ್ತನೆ ಆಗಬೇಕಾಗಿದೆ. ಯುಪಿಎಸ್‌ಸಿ ನಡೆಸುವ ಪರೀಕ್ಷೆ ವಿಶ್ವದ ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು. ಆದರೆ ಸದ್ಯ ಪ್ರಶ್ನೆ ಎದ್ದಿರುವುದು ಈ ಪರೀಕ್ಷೆಗಳು ಭವಿಷ್ಯದ ಆಡಳಿತ ನಾಯಕರನ್ನು ತಯಾರಿಸುತ್ತಿದೆಯೇ? ಎಂಬುದಾಗಿದೆ. ಭವಿಷ್ಯದ ಅಧಿಕಾರಿಗಳು ಕೇವಲ ಪರೀಕ್ಷಾ ಚಾಂಪಿಯನ್‌ಗಳಾಗದೆ, ಸಮಸ್ಯೆ ಪರಿಹಾರಕರಾಗಬೇಕು. ಭಾರತೀಯ ಆಡಳಿತ ವ್ಯವಸ್ಥೆ ಸಾಮಾನ್ಯಜ್ಞರ ಮೇಲೆ ನಿರ್ಮಿತವಾಗಿದೆ. ಐಎಎಸ್ ಅಧಿಕಾರಿಗಳು ಕೃಷಿ ಇಲಾಖೆಯಿಂದ ಹಿಡಿದು ಹಣಕಾಸು ಇಲಾಖೆವರೆಗೆ ವರ್ಗಾವಣೆ ಆಗುತ್ತಾರೆ. ಆದರೆ ಹವಾಮಾನ ಬದಲಾವಣೆ, ಡಿಜಿಟಲ್ ಆರ್ಥಿಕತೆ, ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ ಇವು ತಜ್ಞತೆಯನ್ನು ಬೇಡುತ್ತವೆ.

ಕೇಂದ್ರ ಸರ್ಕಾರವು ಸಂಯುಕ್ತ ಕಾರ್ಯದರ್ಶಿ ಮಟ್ಟದಲ್ಲಿ ಲ್ಯಾಟರಲ್ ಎಂಟ್ರಿ ಆರಂಭಿಸಿದೆ. ಇದು ವ್ಯವಸ್ಥೆಗೆ ತಜ್ಞತೆಯನ್ನು ತರಬಹುದು. ಆದರೆ ಪಾರದರ್ಶಕತೆ ಮತ್ತು ಮೌಲ್ಯಾಧಾರಿತ ಆಯ್ಕೆ ಇಲ್ಲದಿದ್ದರೆ ಅದು ವಿಶ್ವಾಸ ಕುಗ್ಗಿಸಬಹುದು. ಆದ್ದರಿಂದ, ಲ್ಯಾಟರಲ್ ನೇಮಕಾತಿಗೆ ಸಂವಿಧಾನಾತ್ಮಕ ಮೇಲ್ವಿಚಾರಣೆ, ಸ್ಪಷ್ಟ ಅರ್ಹತಾ ಮಾನದಂಡ, ಕಾರ್ಯಕ್ಷಮತೆ ಆಧಾರಿತ ಒಪ್ಪಂದ ನಿಯೋಜನೆ ಬಹಳ ಮುಖ್ಯ.

ಇಂದಿನ ವಾರ್ಷಿಕ ಕಾನ್ಫಿಡೆನ್ಷಿಯಲ್ ವರದಿ(ACR) ಪದ್ಧತಿ ಬಹುತೇಕ ಆಂತರಿಕವಾಗಿದೆ. ಸಾರ್ವಜನಿಕ ಪರಿಶೀಲನೆ ಇಲ್ಲ. ಇದಕ್ಕೆ ಹೊಸ ದಿಕ್ಕು ನೀಡಲು, ಜಿಲ್ಲಾ ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದಲ್ಲಿ ಮೌಲ್ಯಮಾಪನ, ಸಮಯಬದ್ಧ ಸೇವಾ ವಿತರಣಾ ಸೂಚ್ಯಂಕ, ಹೂಡಿಕೆ ಆಕರ್ಷಣೆ ಮತ್ತು ಉದ್ಯೋಗ ಸೃಷ್ಟಿ ಸೂಚ್ಯಂಕ, ಶಿಕ್ಷಣ ಮತ್ತು ಆರೋಗ್ಯ ಸುಧಾರಣೆ ಮಾನದಂಡ ಇತ್ಯಾದಿಗಳು ಒಬ್ಬ ಜಿಲ್ಲಾಧಿಕಾರಿಯ ಕಾರ್ಯಕ್ಷಮತೆ ಆ ಜಿಲ್ಲೆಯ ಅಭಿವೃದ್ಧಿಯಲ್ಲಿ ಗೋಚರಿಸಬೇಕು.

ಪದೇಪದೇ ವರ್ಗಾವಣೆ ಆಡಳಿತದ ಗಂಭೀರ ಸಮಸ್ಯೆ. ಒಂದು ಅಧಿಕಾರಿಗೆ ಯೋಜನೆ ರೂಪಿಸಲು ಕನಿಷ್ಠ 2–3 ವರ್ಷ ಬೇಕು. ಆದರೆ 6 ತಿಂಗಳಲ್ಲೇ ವರ್ಗಾವಣೆ ಆಗುವುದರಿಂದ ದೀರ್ಘಾವಧಿ ಯೋಜನೆ ಅಸಾಧ್ಯ. ಹಾಗಾಗಿ, ವರ್ಗಾವಣೆ ಪಾರದರ್ಶಕ ಪೋರ್ಟಲ್‌ನಂತಹ ವ್ಯವಸ್ಥೆ ಅತ್ಯಗತ್ಯ ಎನ್ನಬಹುದು.

ಸೆಂಟ್ರಲ್ ವಿಜಿಲೆನ್ಸ್ ಕಮಿಷನ್ ಮತ್ತು ಸಿಬಿಐ ಇದ್ದರೂ, ಪ್ರಕರಣಗಳ ದೀರ್ಘಾವಧಿ ವಿಚಾರಣೆ ಸಾರ್ವಜನಿಕರ ವಿಶ್ವಾಸವನ್ನು ಕುಗ್ಗಿಸುತ್ತದೆ. ಇದಕ್ಕಾಗಿ ಅಗತ್ಯ ಸುಧಾರಣೆಗಳಂತಹ ವೇಗವಾದ ದಂಡಾತ್ಮಕ ಕ್ರಮ, ಸಾರ್ವಜನಿಕ ಆಸ್ತಿ ಘೋಷಣೆ, ಡಿಜಿಟಲ್ ಟ್ರ್ಯಾಕಿಂಗ್, ಸಾಮಾಜಿಕ ಪರಿಶೀಲನೆ ಹಾಗೂ ನೈತಿಕ ತರಬೇತಿ ಕಡ್ಡಾಯವಾಗಬೇಕು. ಆಡಳಿತದಲ್ಲಿ ಮಾನವೀಯತೆ ಮೇಳೈಸಬೇಕು. ಸಂಖ್ಯೆಗಳು ಮತ್ತು ಡೇಟಾ ಮುಖ್ಯ. ಆದರೆ ಆಡಳಿತದ ಹೃದಯ ಮಾನವೀಯತೆಯಾಗಿರಬೇಕಾದುದು ಇಂದಿನ ಸಮಾಜಕ್ಕೆ ಅವಶ್ಯವಾಗಿದೆ. ಪೌಷ್ಟಿಕತೆ ಕೊರತೆಯ ಮಗುವಿಗೆ, ಹಕ್ಕು ಸಿಗದ ರೈತನಿಗೆ, ನ್ಯಾಯಕ್ಕಾಗಿ ಕಾಯುತ್ತಿರುವ ಮಹಿಳೆಗೆ ಆಡಳಿತ ಸ್ಪಂದಿಸಬೇಕು.

ಸುಧಾರಣೆ ಎಂದರೆ ಪರಂಪರೆಯನ್ನು ತಿರಸ್ಕರಿಸುವುದಲ್ಲ. ವ್ಯವಸ್ಥೆಯನ್ನು ಕಾಲದ ಅವಶ್ಯಕತೆಗೆ ಅನುಗುಣವಾಗಿ ಬಲಪಡಿಸುವುದು. ನಾಗರಿಕ ಸೇವೆಗಳು ಭಯದ ಆಡಳಿತದಿಂದ ವಿಶ್ವಾಸದ ಆಡಳಿತಕ್ಕೆ, ನಿಯಂತ್ರಣದಿಂದ ಸಹಕಾರಕ್ಕೆ, ಅಧಿಕಾರದಿಂದ ಹೊಣೆಗಾರಿಕೆಗೆ ರೂಪಾಂತರಗೊಳ್ಳಬೇಕು.

ಬಹುತೇಕರು ಉತ್ತರ ಭಾಗದವರೇ ಹೆಚ್ಚಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗಿರಲು ಕಾರಣ, ಅವರ ಬಡತನದ ಜೊತೆಗೆ, 'ಲಾಲ್ ಬತ್ತಿ ಗಾಡಿ' ಎಂಬ ಉಮೇದುವಾರಿಕೆ ಅವರನ್ನು ನಾಗರಿಕ ಸೇವೆಯಲ್ಲಿ ತೊಡಗುವಂತೆ ಮಾಡುತ್ತಿದೆ. ಇದು, ಸಮಾಜ ಸೇವೆಗೆ, ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವಲ್ಲಿ ಸಕರಾತ್ಮಕವಾಗಿ ಹೊಂದಿಕೊಳ್ಳಬೇಕು. ಇಲ್ಲವಾದಲ್ಲಿ, ಯಾರನ್ನೋ ಮೆಚ್ಚಿಸಲೋ, ಸಮಾಜದಲ್ಲಿ ಪ್ರತಿಷ್ಠೆ ಗಳಿಸಲು, ಸರ್ಕಾರಿ ಸೌಲಭ್ಯ ಸಿಗುತ್ತದೆಯೆಂದಷ್ಟೇ ಐಎಎಸ್, ಐಪಿಎಸ್‌ಗಳನ್ನು ಪಾಸು ಮಾಡುತ್ತಿದ್ದರೆ, ಇದರ ನೈಜ ಕಾರಣವೇ ಸತ್ತುಹೋಗುತ್ತದೆ. ಸೇವಾಕಾರಕವೆಂಬುದು ಆತ್ಮವಿಲ್ಲದ ನೌಕರಿಯಂತಾಗುತ್ತದೆ. ಹಾಗಾಗಿ, ಇಂದಿನ ಯುವಜನತೆ ಇದನ್ನು ಇನ್ನಷ್ಟು ಸಮರ್ಪಕವಾಗಿ ಬಳಸಿಕೊಳ್ಳಲು ಉತ್ತೇಜಿತರಾಗಬೇಕು. ವ್ಯವಸ್ಥೆಯೂ ಬದಲಾಗಲಿ, ಕಾಲಕ್ಕೆ ತಕ್ಕಂತೆ ಪರಿವರ್ತನೆ ಈ ಜಗದ ನಿಯಮವಾಗಿದ್ದು, ನಾವೂ ಹೊಸತನ್ನು ಅಪ್ಪಿಕೊಳ್ಳಲು ಮುಕ್ತವಾಗಿರೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 42

ಸಮಾಚಾರ ಸಣ್ಣದಲ್ಲ

ಹೊಸ ಪಕ್ಷ ಸ್ಥಾಪನೆ: ಶಶಿಕಲಾ ಘೋಷಣೆ

ಮಧುರೈ: ಎಐಎಡಿಎಂಕೆ ಪಕ್ಷದಿಂದ ಉಚ್ಚಾಟನೆಗೊಂಡಿರುವ, ಒಂದು ಕಾಲದ ಜಯಲಲಿತಾ ಅವರ ಆಪ್ತೆ, ಜೈಲು ಶಿಕ್ಷೆ ಅನುಭವಿಸಿದ ವಿ.ಕೆ. ಶಶಿಕಲಾ ಹೊಸ ರಾಜಕೀಯ ಪಕ್ಷ ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಮಂಗಳವಾರ ಸಾರ್ವಜನಿಕ ಸಭೆಯಲ್ಲಿ ಅವರು ಹೊಸ ಪಕ್ಷದ ಧ್ವಜವನ್ನು ಅನಾವರಣಗೊಳಿಸಿದರು. ಆ ಮೂಲಕ ನಂತರ ಸಕ್ರಿಯ ರಾಜಕೀಯಕ್ಕೆ ಮರುಪ್ರವೇಶ ಮಾಡಿದ್ದಾರೆ. ಮಾಜಿ ಸಿಎಂ ಜೆ.ಜಯಲಲಿತಾ ಜನ್ಮ ವಾರ್ಷಿಕೋತ್ಸವ ದಿನವೇ ಪಸುಂಪನ್ ಬಳಿಯ ಕೊಟ್ಟೈಮೇಡುವಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿ.ಎನ್.ಅಣ್ಣಾದೊರೈ, ಎಂಜಿಆರ್ ಮತ್ತು ಜಯಲಲಿತಾ ಭಾವಚಿತ್ರಗಳಿರುವ, ಕಪ್ಪು-ಬಿಳಿ-ಕೆಂಪು ಬಣ್ಣಗಳ ಧ್ವಜವನ್ನು ಶಶಿಕಲಾ ಅನಾವರಣಗೊಳಿಸಿದರು. ಪಕ್ಷವು ದ್ರಾವಿಡ ದಿಗ್ಗಜರ ಸೈದ್ಧಾಂತಿಕ ಮಾರ್ಗ ಅನುಸರಿಸುತ್ತದೆ ಎಂದು ಹೇಳಿದರು.

ಅಶ್ಲೀಲತೆ: 5 ಒಟಿಟಿ ನಿರ್ಬಂಧಿಸಿದ ಕೇಂದ್ರ

ದೆಹಲಿ: ಅಶ್ಲೀಲತೆ ಮತ್ತು ಆಕ್ಷೇಪಾರ್ಹ ಅಂಶಗಳನ್ನು ಪ್ರಸಾರ ಮಾಡುವ 5 ಒಟಿಟಿ ವೇದಿಕೆಗಳ ವಿರುದ್ಧ ಕೇಂದ್ರ ಸರಕಾರ ಕ್ರಮ ಕೈಗೊಂಡಿದ್ದು, ಪ್ರಸಾರ ನಿರ್ಬಂಧಕ್ಕೆ ಆದೇಶಿಸಿದೆ. ಮೂಡ್‌ಎಕ್ಸ್ ವಿಐಪಿ, ಕೋಯಿಲ್ ಪ್ಲೇಪ್ರೊ, ಡಿಜಿ ಮೂವಿಪ್ಲೆಕ್ಸ್, ಫೀಲ್ ಅಂಡ್ ಜುಗ್ನು ಎಂಬ 5 ಒಟಿಟಿ ಪ್ಲಾಟ್‌ಫಾರ್ಮ್‌ಗಳ ಪ್ರಸಾರವನ್ನು ನಿರ್ಬಂಧಿಸಲಾಗಿದೆ. ಮಾಹಿತಿ ತಂತ್ರಜ್ಞಾನ ನಿಯಮ-2021 ಹಾಗೂ ಮಾಹಿತಿ ತಂತ್ರಜ್ಞಾನ ಕಾಯಿದೆ-2000ರ ಸೆಕ್ಷನ್ 69ಎ ಮತ್ತು 'ಅಶ್ಲೀಲತೆ ತಡೆ ಕಾನೂನಿನಡಿ'ಯೇ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

26/11 ರೀತಿಯಲ್ಲೇ ಮತ್ತೊಂದು ದಾಳಿ

ಇಸ್ಲಾಮಾಬಾದ್: ಭಾರತದ ಮೇಲೆ 26/11 ರೀತಿಯಲ್ಲೇ(2008ರ ನ.26) ಮತ್ತೊಂದು ದಾಳಿ ಮಾಡಲಾಗುವುದು ಎಂದು ಪಾಕಿಸ್ತಾನದ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಉಪ ಮುಖ್ಯಸ್ಥ ಸೈಫುಲ್ಲಾ ಕಸೂರಿ ಬೆದರಿಕೆ ಹಾಕಿದ್ದಾನೆ. ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ 2025ರ ಏ.22ರಂದು ಪ್ರವಾಸಿಗರ ಗುಂಪಿನ ಮೇಲೆ ದಾಳಿ ನಡೆಸಿ 25 ಮುಸ್ಲಿಮೇತರರನ್ನು ಹುಡುಕಿ ಕೊಂದಿದ್ದ ಪಾಕ್ ಮೂಲದ ಮೂವರು ಭಯೋತ್ಪಾದಕರ ದಾಳಿಯ ಹಿಂದಿನ ಮುಖ್ಯ ಸೂತ್ರದಾರ ಸೈಫುಲ್ಲಾ ಎಂಬುದು ದೃಢಪಟ್ಟಿದೆ. ಈಗ ಆತ ವಿಡಿಯೊವೊಂದನ್ನು ಮಂಗಳವಾರ ಬಿಡುಗಡೆ ಮಾಡಿದ್ದು, ಭೂಮಿ, ಆಕಾಶ, ಸಮುದ್ರ ಯಾವುದೇ ಮಾರ್ಗದಲ್ಲೂ ಭಾರತಕ್ಕೆ ಜಾಗ ಉಳಿಯದಂತೆ ಮಾಡುತ್ತೇವೆ ಎಂದು ಬೆದರಿಸಿದ್ದಾನೆ. ಅಲ್ಲಾಹ್‌ನ ಇಚ್ಛೆಯಂತೆಯೆ 2026ರಲ್ಲಿ ಸಮುದ್ರ ಮಾರ್ಗದಲ್ಲಿ ದಾಳಿ ನಡೆಸುತ್ತೇವೆ. ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಉಪ ಮುಖ್ಯಸ್ಥ ಸೈಫುಲ್ಲಾನ ಈ ಬೆದರಿಕೆ ನೈಜವಾಗಿದೆ. ಉಗ್ರ ದಾಳಿಯ ಸ್ಪಷ್ಟ ಮುನ್ಸೂಚನೆಯಾಗಿದೆ ಎಂದು ಭಾರತದ ಗುಪ್ತಚರ ಮೂಲಗಳು ಹೇಳಿವೆ.

ಟರ್ಕಿ ವಾಯುಪಡೆಯ ಎಫ್-16 ಜೆಟ್ ಪತನ

ಅಂಕಾರ: ಅಮೆರಿಕದಲ್ಲಿ ತಯಾರಾಗುವ ಯುದ್ಧ ವಿಮಾನ 'ಎಫ್-16' ದಾಳಿ ವಿಚಾರದಲ್ಲಿ ಭಾರೀ ಶಕ್ತಿಶಾಲಿ. ಅಲ್ಲದೇ, ವಿಶ್ವದಲ್ಲೇ ಹೆಸರುವಾಸಿ ಹಾಗೂ ಬಹು ಬೇಡಿಕೆಯ, ದುಬಾರಿ ಬೆಲೆಯ ಯುದ್ಧವಿಮಾನ. ಆದರೆ, ಟರ್ಕಿ ವಾಯುಪಡೆಗೆ ಸೇರಿದ ಎಫ್-16 ಜೆಟ್ ಫ್ಲೈಟ್ ಟರ್ಕಿ ದೇಶದ ಬಲಿಕೇರ್‌ಸಿ ನಗರದಲ್ಲಿ ಪತನಗೊಂಡು, ಪೈಲಟ್ ಸಾವಿಗೆ ಕಾರಣವಾಗಿರುವ ಘಟನೆ ತಡವಾಗಿ ವರದಿಯಾಗಿದೆ. ಟರ್ಕಿ ವಾಯುಪಡೆಯ ಬಲಿಕೇರ್‌ಸಿಯ 9ನೇ ಮುಖ್ಯ ಜೆಟ್ ಬೇಸ್ ಕಮಾಂಡ್ ಸ್ಕ್ವಾಡ್ರನ್‌ಗೆ ಎಫ್-16 ಯುದ್ಧ ವಿಮಾನ ಫೆ.23ರ ನಸುಕಿನ 12.56ರಲ್ಲಿ ಬಲಿಕೇರ್‌ಸಿ ನಗರದ ಬುರ್ಸಾ-ಇಜ್ಮಿರ್ ಹೆದ್ದಾರಿಯಲ್ಲಿಯೇ ಪತನವಾಗಿದೆ. ಮಾಹಿತಿ ತಿಳಿಯುತ್ತಲೇ ಸ್ಥಳೀಯ ಪೊಲೀಸರು ಆಂಬುಲೆನ್ಸ್ ಜತೆ ಸ್ಥಳಕ್ಕೆ ದೌಡಾಯಿಸಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಪೈಲಟ್ ಸಜೀವ ದಹನವಾಗಿದ್ದಾರೆ. 'ವಿಮಾನ ಪತನಕ್ಕೆ ಕಾರಣವೇನು ಎಂಬುದು ತನಿಖೆ ನಂತರ ತಿಳಿದುಬರಬೇಕಿದೆ' ಎಂದು ಟರ್ಕಿ ಗವರ್ನರ್ ಇಸ್ಮಾಯಿಲ್ ಉಸ್ತಾವೋಗ್ಲು ಹೇಳಿಕೆ ಬಿಡುಗಡೆ ಮಾಡಿದ್ದಾರೆ. ವಿಮಾನ ಪತನ ಸಂದರ್ಭದ ವಿಡಿಯೋ ವೈರಲ್ ಆಗಿದೆ.

{ ಬ್ರಜೇಶ್ ಪಾಠಕ್ } ಉ.ಪ್ರ. ಡಿಸಿಎಂ

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ದೇಶ ವಿರೋಧಿ ಶಕ್ತಿಗಳ ರಾಷ್ಟ್ರೀಯ ವಕ್ತಾರರಾಗಿದ್ದಾರೆ. ರಾಜಕೀಯ ಮೌಲ್ಯ ಕಳೆದುಕೊಂಡಿದ್ದಾರೆ. ರಾಹುಲ್ ಮತ್ತು ಕಾಂಗ್ರೆಸ್ ಸುಳ್ಳು ಹೇಳುವುದರಲ್ಲಿ ದಾಖಲೆ ಮಾಡುತ್ತಿವೆ. ಪ್ರಧಾನಿ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಾ, ಸಾಮಾಜಿಕ ಮಾಧ್ಯಮದಲ್ಲಿ ವಿಷ ಕಕ್ಕುತ್ತಿವೆ.



ದಿ ಜೆರುಸಲೇಂ ಪೋಸ್ಟ್ ಪತ್ರಿಕೆಯ ಇಡೀ ಮುಖಪುಟ ಆವರಿಸಿಕೊಂಡಿರುವ ಮೋದಿ | ಉಳಿದ ಮಾಧ್ಯಮಗಳಲ್ಲೂ ಮೋದಿ ಭೇಟಿ ಸುದ್ದಿ-ಚಿತ್ರ

ಪ್ರಧಾನಿ ಮೋದಿ ಭೇಟಿಗೆ ಇಸ್ರೇಲ್ ಸಂಭ್ರಮ

THE JERUSALEM POST

WEDNESDAY, FEBRUARY 25, 2026

नमस्ते שלום

Two ancient nations open a new chapter

Welcome, Modi

THE MODI DOCTRINE
New Delhi's burgeoning partnership with Jerusalem

FROM BREAKTHROUGH TO PILLAR:
The maturing of ties between Israel and India

Envoy: Modi visit set to open 'new phase' in ties

ಜೆರುಸಲೇಂ: ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ 9 ವರ್ಷಗಳ ನಂತರದ ಭೇಟಿಗಾಗಿ ಇಡೀ ಇಸ್ರೇಲ್ ಕಾತರಿಸುತ್ತಿದ್ದ, ದೇಶದಲ್ಲಿ ಭಾರೀ ಸಂಭ್ರಮ ಮನೆ ಮಾಡಿದೆ. ಜೆರುಸಲೇಂನ ಮಾಧ್ಯಮಗಳೆಲ್ಲವೂ ತಮ್ಮ ಮುಖಪುಟಗಳನ್ನು ಮೋದಿ ಅವರ ಅಪರೂಪದ ಭೇಟಿಯ ಸುದ್ದಿ ಪ್ರಕಟಿಸಲೇ ಮೀಸಲಿಟ್ಟಿವೆ.

ಜೆರುಸಲೇಂನ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಭಾರತ, ರಾಷ್ಟ್ರಧ್ವಜ ತಿರಂಗ, ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರಗಳೇ ರಾರಾಜಿಸುತ್ತಿವೆ.

ಇಸ್ರೇಲ್‌ನ ಪ್ರಮುಖ ಮಾಧ್ಯಮ 'ದಿ ಜೆರುಸಲೇಂ ಪೋಸ್ಟ್' ಪತ್ರಿಕೆಯಂತೂ ಇಡೀ ಮುಖಪುಟದಲ್ಲಿ ಮೋದಿ ಅವರ ದೊಡ್ಡದಾದ ಚಿತ್ರ ಪ್ರಕಟಿಸಿದೆ. ಜತೆಗೆ 'ನಮಸ್ತೆ' ಪದವನ್ನು ಹಿಂದಿ ಮತ್ತು ಹೀಬ್ರೂ ಭಾಷೆಗಳಲ್ಲಿ ದೊಡ್ಡದಾಗಿ ಮುದ್ರಿಸಿದೆ. ಅಲ್ಲದೇ, '2 ಪ್ರಾಚೀನ ದೇಶಗಳು ಹೊಸ ಅಧ್ಯಾಯವನ್ನು ತೆರೆಯಲಿವೆ' ಎಂದೂ ಅಡಿಬರಹ ಮುದ್ರಿಸಲಾಗಿದೆ. ಅದಲ್ಲದೇ, 'ವೆಲ್‌ಕಂ ಮೋದಿ' ಎಂಬ ಶೀರ್ಷಿಕೆಯಡಿ 1 ಸುದ್ದಿಯನ್ನು ಚಿಕ್ಕದಾಗಿ ಪ್ರಕಟಿಸಿ ಮುಂದುವರಿದ ಭಾಗವನ್ನು ಪುಟ 9ರಲ್ಲಿ ಜೋಡಿಸಲಾಗಿದೆ.

ಅದಲ್ಲದೇ, ಮೋದಿ ಫೋಟೊದ ತಳಭಾಗದಲ್ಲಿ 'ದಿ ಮೋದಿ ಡಾಕ್ಟ್ರಿನ್: ನ್ಯೂಡೆಲ್ಲೀಸ್ ಬಾರ್ಗೈನಿಂಗ್ ಪಾರ್ಟನರ್‌ಷಿಪ್ ವಿತ್ ಜೆರುಸಲೇಂ' ಎಂದು ವಿಶೇಷ ವರದಿ, 'ಫ್ರಂ ಬ್ರೇಕ್‌ಥ್ರೂ ಟು ಪಿಲ್ಲರ್: ದಿ ಮೆಚ್ಯುರಿಂಗ್ ಆಫ್ ಟೈಸ್ ಬಿಟ್‌ವೀನ್ ಇಸ್ರೇಲಕ್ ಅಂಡ್ ಇಂಡಿಯ' ಎಂಬ ವಿಶ್ಲೇಷಣಾತ್ಮಕ ಬರಹ ಹಾಗೂ 'ಎನ್ವಾಯ್: ಮೋದಿ ವಿಸಿಟ್ ಸೆಟ್ ಟು ಓಪನ್ 'ನ್ಯೂ ಪೇಸ್' ಇನ್ ಟೈಸ್' ಶೀರ್ಷಿಕೆಯಲ್ಲಿ ಮತ್ತೊಂದು ವಿಶೇಷ ವರದಿ ಪ್ರಕಟಿಸಲಾಗಿದೆ. ಇಸ್ರೇಲ್‌ನ ಪ್ರಮುಖ ಪತ್ರಿಕೆಯ ಇಡೀ ಮುಖಪುಟವನ್ನು ಮೋದಿ ಅವರೇ ಆವರಿಸಿಕೊಂಡಿದ್ದಾರೆ. ಇದು ಪ್ರಧಾನಿ ಮೋದಿ ಅವರ 9 ವರ್ಷಗಳ ನಂತರದ ಭೇಟಿಗೆ ಇಸ್ರೇಲ್ ದೇಶ ಮತ್ತು ಅಲ್ಲಿನ ಮಾಧ್ಯಮ ಎಷ್ಟೊಂದು ಪ್ರಾಮುಖ್ಯತೆ ಕೊಡುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೇ, 'ದಿ ಜೆರುಸಲೇಂ ಪೋಸ್ಟ್' ಮಾಧ್ಯಮದ ಅಂತರ್ಜಾಲ ಆವೃತ್ತಿಯಲ್ಲಿಯೂ ಪ್ರಧಾನಿ ಮೋದಿ ಅವರು ಭಾಷಣ ಮಾಡುತ್ತಿರುವ ದೊಡ್ಡ ಫೋಟೊ ಪ್ರಕಟಿಸಲಾಗಿದೆ. ಮತ್ತೊಂದೆಡೆ ಪ್ರಧಾನಿದ್ವಯರಾದ ಮೋದಿ-ಬೆಂಜಮಿನ್ ಜತೆಯಾಗಿ ವೇದಿಕೆಯತ್ತ ಸಾಗುತ್ತಿರುವ ಫೋಟೊ ಲಗತ್ತಿಸಲಾಗಿದೆ. 'ಬೆನ್-ಗುರಿಯೋನ್ ಟು ಯಾದ್ ವಾಶೆಮ್: ವಾಟ್ ಟು ಎಕ್ಸ್‌ಪೆಕ್ಟ್ ಫ್ರಂ ಇಂಡಿಯನ್ ಪಿಎಂ ಮೋದಿ'ಸ್ ಹಿಸ್ಟಾರಿಲ್ 2 ಡೇಸ್ ವಿಸಿಟ್ ಟು ಇಸ್ರೇಲ್' ಶೀರ್ಷಿಕೆಯಡಿ ದೊಡ್ಡದಾಗಿ ಸುದ್ದಿ ಪ್ರಕಟಿಸಲಾಗಿದೆ. ಪಕ್ಕದಲ್ಲೇ 'ದಿ ಮೋದಿ ಡಾಕ್ಟ್ರಿನ್ ಅಂಡ್ ಇಂಡಿಯಾಸ್ ಗ್ರೋಯಿಂದ ಪಾರ್ಟನರ್‌ಷಿಪ್ ವಿತ್ ಇಸ್ರೇಲ್' ಎಂದು ಮತ್ತೊಂದು ಲೇಖನ ಪ್ರಕಟಿಸಲಾಗಿದೆ.ಅಲ್ಲದೇ, 'ಸ್ಕೇಲಿಂಗ್ ಸಮ್ಮಿಟ್: ವೈ ಮೋದೀಸ್ ವಿ ಮಸ್ಟ್ ಟರ್ನ್ ಬೈಲ್ಯಾಟರಲ್ ಟ್ರಸ್ಟ್ ಇನ್‌ಟು ಸ್ಟ್ರಾಟೆಜಿಕ್ ಪವರ್‌ಹೌಸ್' ಎಂಬ ವಿಶ್ಲೇಷಣಾತ್ಮಕ ಬರಹವೂ ಇದೆ.

ಪ್ರಧಾನಿ ಮೋದಿ ಅವರಿಗೆ ಗೌರವ ಸೂಚಿಸಲೆಂದೇ ಸಂಸತ್ತಿಗೆ ತ್ರಿವರ್ಣ ದೀಪಾಲಂಕಾರ: ಸ್ಪೀಕರ್

ತ್ರಿವರ್ಣ ವಿದ್ಯುತ್ ದೀಪಗಳಿಂದ ಅಲಂಕೃತವಾದ ಇಸ್ರೇಲ್ ಸಂಸತ್



ಜೆರುಸಲೇಂ: ಇಸ್ರೇಲ್‌ನ ಸಂಸತ್ ನೆಸೆಟ್‌ನಲ್ಲಿ ಇದೇ ಮೊದಲ ಬಾರಿಗೆ ಭಾರತದ ಪ್ರಧಾನಿಯೊಬ್ಬರು ಭಾಷಣ ಮಾಡಲಿದ್ದಾರೆ. ಆ ದಾಖಲೆ ಪ್ರಧಾನಿ ನರೇಂದ್ರ ಮೋದಿ ಅವರಿಂದಾಗಲಿದೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಆಹ್ವಾನದ ಮೇರೆಗೆ ಇಸ್ರೇಲ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಫೆ.26ರ ಗುರುವಾರ ಸಂಸತ್ ಉದ್ದೇಶಿಸಿ ಮಾತನಾಡಲಿದ್ದಾರೆ.

ಈ ಹಿಂದೆ 2015ರಲ್ಲಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಇಸ್ರೇಲ್ ಸಂಸತ್ ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಆದರೆ ಭಾರತದ ಪ್ರಧಾನಿಯಾದವರು ಈವರೆಗೂ ಇಸ್ರೇಲ್ ಸಂಸತ್ತಿನಲ್ಲಿ ಭಾಷಣ ಮಾಡಿಲ್ಲ. ಭಾರತದ ಪ್ರಧಾನಿಯಾಗಿ ಮೋದಿ ಅವರು ಇಸ್ರೇಲ್ ಸಂಸತ್‌ನಲ್ಲಿ ಭಾಷಣ ಮಾಡುವ ಮೊದಲಿಗರಾಗಲಿದ್ದಾರೆ. ಅದೇ ಕಾರಣವಾಗಿ, ಇಡೀ ಸಂಸತ್ ಭವನವನ್ನು 4 ಬಣ್ಣಗಳ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಭಾರತದ ರಾಷ್ಟ್ರಧ್ವಜದಲ್ಲಿರುವ ಕೇಸರಿ-ಬಿಳಿ-ಹಸಿರು ಮತ್ತು ನೀಲಿ(ಧ್ವಜದಲ್ಲಿನ ಚಕ್ರದ ಬಣ್ಣ) ವರ್ಣಗಳಿಂದ ಇಸ್ರೇಲ್‌ನ ಸಂಸತ್ ಭವನ ಝುಗಮಗಿಸುತ್ತಿದೆ.

ಇದರ ಫೋಟೊವನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಇಸ್ರೇಲ್ ಸಂಸತ್ತಿನ ಸ್ಪೀಕರ್ ಅಮೀರ್ ಒಹಾನಾ, 'ವಿದ್ಯುತ್ ದೀಪಗಳಿಂದ ಅಲಂಕೃತವಾಗಿರುವ 'ನೆಸ್ಸೆಟ್'(ಸಂಸತ್ ಭವನ) ಫೋಟೋವನ್ನು ಹಂಚಿಕೊಂಡು, 'ಇಂದು ರಾತ್ರಿ ನೆಸ್ಸೆಟ್ ಅನ್ನು ಭಾರತದ ತ್ರಿವರ್ಣ ಧ್ವಜದ ಬಣ್ಣಗಳಲ್ಲಿ ಬೆಳಗಿಸಲಾಗಿದೆ. ಪ್ರಧಾನಿ ಮೋದಿ ಅವರ ಸ್ವಾಗತಕ್ಕೆ ನಾವು ಕೊಡುತ್ತಿರುವ ಗೌರವ ಇದು' ಎಂದು ಸಂದೇಶದಲ್ಲಿ ಬರೆದಿದ್ದಾರೆ.

ಇಸ್ರೇಲ್ ಸಂಸತ್ತನ್ನು 'ನೆಸ್ಸೆಟ್' ಎಂದು ಕರೆಯಲಾಗುತ್ತದೆ. ನೆಸ್ಸೆಟ್ ಅರ್ಥ 'ಸಭೆ' ಎಂದಾಗಿದೆ. ನೆಸ್ಸೆಟ್ ಪದ ಪ್ರಾಚೀನ ಹೀಬ್ರೂ ಭಾಷೆಯ ಪದ 'ಹಾಗ್ದೋಲಾ'ದಿಂದ ಬಂದಿದೆ. ಹಾಗ್ದೋಲಾದ ಅರ್ಥ ಯಹೂದಿಯಲ್ಲಿ 'ಮಹಾಸಭೆ'. ಇದನ್ನು 120 ವಿದ್ವಾಂಸರು, ಚಿಂತಕರು ಮತ್ತು ಪ್ರವಾದಿಗಳ ಸಭೆ ಎಂದೂ ಪರಿಗಣಿಸಲಾಗಿದೆ.

ಮಿತ್ರ ದೇಶಗಳ ಷಡ್‌ಭುಜ ಕೂಟ

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಇಸ್ರೇಲ್ ಭೇಟಿಯು ಹೊಸ ಮೈತ್ರಿಕೂಟ ರೂಪಿಸಲು ಪ್ರೇರಣೆಯಾಗಲಿದೆ ಎಂದು ಘೋಷಿಸಿದ್ದಾರೆ. ಇಸ್ಲಾಮಿಕ್ ಉಗ್ರವಾದದ ವಿರುದ್ಧ ಮಧ್ಯಪ್ರಾಚ್ಯದ ಸುತ್ತಲೂ ಇರುವ ಮಿತ್ರರಾಷ್ಟ್ರಗಳನ್ನು ಒಳಗೊಂಡ-6 ಅಂಶಗಳಿಗೆ ಆದ್ಯತೆ ನೀಡುವ 'ಹೆಕ್ಸಗನ್ ಆಫ್ ಅಲಯನ್ಸ್'(ಷಡ್‌ಭುಜ ಮಿತ್ರಕೂಟ) ರಚಿಸುವುದಾಗಿ ಬೆಂಜಮಿನ್ ನೆತನ್ಯಾಹು ಮಂಗಳವಾರ ಘೋಷಿಸಿದ್ದಾರೆ. ಭಾರತ ದೇಶ ಜಾಗತಿಕ ಶಕ್ತಿಯಾಗಿದೆ. ಭಾರತ-ಇಸ್ರೇಲ್ ಎರಡೂ ದೇಶಗಳ ನಡುವಿನ ಸಂಬಂಧ ಬಲಿಷ್ಠವಾಗಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ನನ್ನ ಆತ್ಮೀಯ ಸ್ನೇಹಿತರಾಗಿದ್ದಾರೆ ಎಂದೂ ನೆತನ್ಯಾಹು ಇದೇ ವೇಳೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಷಡ್‌ಭುಜ ಕೂಟ: ಇಸ್ಲಾಮಿಕ್ ಉಗ್ರವಾದ ವಿರುದ್ಧದ 'ಷಡ್‌ಭುಜ ಕೂಟ'ದಲ್ಲಿ ಇಸ್ರೇಲ್, ಭಾರತ, ಮೆಡಿಟರೇನಿಯನ್ ರಾಷ್ಟ್ರಗಳಾದ ಗ್ರೀಸ್ ಮತ್ತು ಸೈಪ್ರಸ್ ಹಾಗೂ ಅರಬ್ ರಾಷ್ಟ್ರಗಳು, ಆಫ್ರಿಕನ್ ರಾಷ್ಟ್ರಗಳು ಮತ್ತು ಏಷ್ಯಾದ ಇತರೆ ರಾಷ್ಟ್ರಗಳು ಸೇರಿಕೊಳ್ಳಲಿವೆ ಎಂದು ಬೆಂಜಮಿನ್ ಹೇಳಿದ್ದಾರೆ. ಈ ಕೂಟ ಪರಸ್ಪರ ಸಂಪರ್ಕ ಬೆಳೆಸುವ ಮೂಲಕ ಆರ್ಥಿಕ ಅಭಿವೃದ್ಧಿ ವೇಗ ಹೆಚ್ಚಿಸುವ ಗುರಿ ಹೊಂದಿದೆ ಎಂದು ಬೆಂಜಮಿನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಚೆನ್ನೈ ವಿ.ನಿಲ್ದಾಣ: ಬೆಳಗ್ಗೆ 6.30-ಮಧ್ಯಾಹ್ನ 12ವರೆಗೆ ಪ್ರಹಸನ

ಇಂಡಿಗೊ ಅವ್ಯವಸ್ಥೆ: 200 ಪ್ರಯಾಣಿಕರ ದುರವಸ್ಥೆ

ಚೆನ್ನೈ: ಇಂಡಿಗೊ ವಿಮಾನಯಾನ ಸಂಸ್ಥೆ ಮತ್ತೆ ಪ್ರಯಾಣಿಕರನ್ನು ಸತಾಯಿಸಿದೆ. ಇಂಡಿಗೊ ವಿಮಾನಯಾನ ಸಂಸ್ಥೆಯ ವಿಮಾನ (ಸಂಖ್ಯೆ 6ಇ1025) ಮಂಗಳವಾರ ಬೆಳಗ್ಗೆ 7.30ಕ್ಕೆ ಚೆನ್ನೈನಿಂದ ಸಿಂಗಪುರಕ್ಕೆ ತೆರಳಬೇಕಿತ್ತು. ಪೂರ್ವ ನಿರ್ಧರಿತ ನಿಯಮದಂತೆಯೇ 200ಕ್ಕೂ ಅಧಿಕ ಪ್ರಯಾಣಿಕರಿಗೆ 6.30ರ ನಂತರ ವಿಮಾನವೇರಿ ಆಸೀನರಾಗಲು ಅವಕಾಶ ನೀಡಲಾಗಿತ್ತು. ಪ್ರಯಾಣಿಕರೂ ವಿಮಾನದಲ್ಲಿ ಆಸೀನರಾಗಿ, ಸೊಂಟಕ್ಕೆ ಬೆಲ್ಟ್ ಕೂಡಾ ಬಿಗಿದುಕೊಂಡಿದ್ದರು. ಆದರೆ, ವಿಮಾನ ಇನ್ನೇನು ಕೆಲವೇ ಕ್ಷಣಗಳಲ್ಲಿ ಹೊರಡಲಿದೆ ಎಂಬ ಪ್ರಕಟಣೆ ಬರುತ್ತಿತ್ತೇ ಹೊರತು, ಹಾರಾಟವಂತೂ ಆರಂಭಗೊಳ್ಳಲೇ ಇಲ್ಲ. ಹೀಗೆ ವಿಮಾನದೊಳಗೆ ಕೂಡಿಹಾಕಿದಂತೆ ಕೂತಲ್ಲೇ ಕೂತ 200ಕ್ಕೂ ಅಧಿಕ ಪ್ರಯಾಣಿಕರು 5 ಗಂಟೆಗಳ ಕಾಲ ನರಳಾಡುವಂತಾಗಿದೆ. ಪ್ರಯಾಣಿಕರ ಸಂಕಷ್ಟವನ್ನು ಕೇಳುವವರೇ ಇಲ್ಲವಾಗಿದ್ದರು. ಕೊನೆಗೆ ಉಸಿರಾಟ ನಡೆಸುವುದೂ ಕಷ್ಟ ಎನಿಸುವಂತಹ ಪರಿಸ್ಥಿತಿ ಉಂಟಾಗಿದೆ. ಪುಟ್ಟ ಮಕ್ಕಳು ಉಸಿರಾಟ ಕಷ್ಟವಾಗಿ ಅಳಲಾರಂಭಿಸಿದ್ದಾರೆ. ಕೆಲವು ವೃದ್ಧರಿಗೂ ಒಂದೇ ಕಡೆ 5 ಗಂಟೆ ಕುಳಿತಿದ್ದರಿಂದ ಅಸ್ವಸ್ಥತೆ ಉಂಟಾಗಿದೆ. ಆಗ ಸಹನೆ ಕಳೆದುಕೊಂಡ ಪ್ರಯಾಣಿಕರಲ್ಲಿ ಕೆಲವರು ವಿಮಾನದಿಂದ ಕೆಳಕ್ಕಿಳಿದು ವಿಮಾನದ ಗ್ರೌಂಡ್ ಸಿಬ್ಬಂದಿ ಜತೆ ಜಗಳಕ್ಕಿಳಿದಿದ್ದಾರೆ.

ಆ ಬಳಿಕವಷ್ಟೇ ಇಂಡಿಗೊ ವಿಮಾನಯಾನ ಸಂಸ್ಥೆಯ ಅಧಿಕಾರಿಗಳು ಹಾರಾಟ ವಿಳಂಬಕ್ಕೆ ಕಾರಣ ವಿವರಿಸಿದ್ದಾರೆ. 'ಕ್ಯಾಬಿನ್‌ನಲ್ಲಿನ ತಾಪಮಾನ ಸಾಮಾನ್ಯಕ್ಕಿಂತ ಅಧಿಕ ಪ್ರಮಾಣದಲ್ಲಿದ್ದುದನ್ನು ಪೈಲಟ್ ಗುರುತಿಸಿದ್ದಾರೆ. ಈ ಕುರಿತು ವಿಮಾನಯಾನ ಸಂಸ್ಥೆಯ ಅಧಿಕಾರಿಗಳಿಗೆ ಪೈಲಟ್ ಮಾಹಿತಿ ರವಾನಿಸಿದ್ದಾರೆ. ಸಂಸ್ಥೆಯು ಸಮಸ್ಯೆ ಪರಿಹರಿಸಲು ಇಂಜಿನಿಯರ್‌ಗಳಿಗೆ ಸೂಚಿಸಿದೆ. ಇಂಜಿನಿಯರ್‌ಗಳ ತಂಡ ಬಂದು ತಾಪಮಾನದ ಸಮಸ್ಯೆ ಪರಿಹರಿಸುವ ವೇಳೆಗೆ ಪೈಲಟ್ ಸೇರಿದಂತೆ ಕಾಕ್‌ಪಿಟ್ ಸಿಬ್ಬಂದಿಗಳ ಕೆಲಸದ ಅವಧಿ ಮುಗಿದಿದೆ. ಹಾಗಾಗಿ ಅವರು ವಿಮಾನದಿಂದ ನಿರ್ಗಮಿಸಿದ್ದಾರೆ. ಹಾಗಾಗಿ ವಿಮಾನದ ಹಾರಾಟ 5 ಗಂಟೆಗಳಷ್ಟು ತಡವಾಗಿದೆ. ಪ್ರಯಾಣಿಕರು ವಿಮಾನದಿಂದಿಳಿದು ಗ್ರೌಂಡ್ ಸಿಬ್ಬಂದಿಗಳ ಜತೆ ಕದನಕ್ಕಿಳಿದಿರುವ ಸಂದರ್ಭದ 1 ನಿಮಿಷದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ.

ಮಧ್ಯಾಹ್ನ 12ಕ್ಕೆ ಹೊರಟ ವಿಮಾನ

ಸಮಸ್ಯೆಯ ತೀವ್ರತೆ ಮನವರಿಕೆ ಆದ ಬಳಿಕ ಬೇರೆಯದೇ ಪೈಲಟ್ ಮತ್ತು ಪರ್ಯಾಯ ಕಾಕ್‌ಪಿಟ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಇಂಡಿಗೊ ಅಧಿಕಾರಿಗಳು ಪ್ರಯಾಣಿಕರಿಗೆ ಸಮಜಾಯಿಷಿ ನೀಡಿದ್ದಾರೆ. ಆ ಬಳಿಕ ಬೇರೊಬ್ಬ ಪೈಲಟ್ ಬಂದು ವಿಮಾನವೇರಿದ್ದಾರೆ. ಅಷ್ಟೆಲ್ಲಾ ಆಗುವ ವೇಳೆ ಒಟ್ಟು 5 ಗಂಟೆಗಳಷ್ಟು ತಡವಾಗಿದೆ. ಮಧ್ಯಾಹ್ನ 12 ಗಂಟೆ ಬಳಿಕ ವಿಮಾನ ಸಂಚಾರ ಆರಂಭಿಸಿದೆ.

ಅಮೆರಿಕ ವ್ಯಾಪಾರ ಒಪ್ಪಂದ ತಕ್ಷಣ ರದ್ದುಮಾಡಿ

ಭೋಪಾಲ್: ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಭಾರತ ಸರಕಾರ ಸಹಿ ಹಾಕುವ ಮೂಲಕ ದೇಶವನ್ನು ಅಮೆರಿಕಕ್ಕೆ ಮಾರಾಟ ಮಾಡಲಾಗಿದೆ ಎಂದು ಪುನರುಚ್ಚರಿಸಿರುವ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ತಕ್ಷಣವೇ ಒಪ್ಪಂದ ರದ್ದುಪಡಿಸಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಕಾಂಗ್ರೆಸ್ ಪಕ್ಷದ ಕಿಸಾನ್ ಮಹಾಚೌಪಾಲ್ ಕಾರ್ಯಕ್ರಮದಲ್ಲಿ ಮಾತನಾಡಿ, ಅಮೆರಿಕ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾದ ನಂತರ ಕೆಲ ದೇಶಗಳು ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದ ರದ್ದುಗೊಳಿಸಿವೆ, ಕೆಲ ದೇಶಗಳು ಮರುಪರಿಶೀಲಿಸುತ್ತಿವೆ. ಮೋದಿ ಅವರಿಗೆ ಧೈರ್ಯವಿದ್ದರೆ ವ್ಯಾಪಾರ ಒಪ್ಪಂದ ರದ್ದುಪಡಿಸಲಿ ಎಂದು ಸವಾಲೆಸೆದರು. ಆದರೆ ಮೋದಿ ಹಾಗೆ ಮಾಡುವುದಿಲ್ಲ. ಏಕೆಂದರೆ ಅಧ್ಯಕ್ಷ ಟ್ರಂಪ್‌ರಿಂದ ಒತ್ತಡದಲ್ಲಿದ್ದಾರೆ. ಜತೆಗೆ ಎಪ್‌ಸ್ಟೀನ್ ಫೈಲ್ಸ್‌ನಲ್ಲಿ ಉದ್ಯಮಿ ಮಿತ್ರ ಗೌತಮ್ ಅದಾನಿ ಹೆಸರಿರುವುದರಿಂದ ಮೋದಿ ಹೆದರಿದ್ದಾರೆ. ಅವರ ತಲೆ ಮೇಲೆ ಕತ್ತಿ ತೂಗುತ್ತಿದೆ ಎಂದು ಛೇಡಿಸಿದರು.ರಾಜಕೀಯ ಭವಿಷ್ಯ ಉಳಿಸಿಕೊಳ್ಳಲು ದೇಶದ ರೈತರು, ವಸ್ತ್ರೋದ್ಯಮ ಮತ್ತು ಗಾರ್ಮೆಂಟ್ ಕ್ಷೇತ್ರಗಳ ಹಿತಾಸಕ್ತಿ ಬಲಿಕೊಟ್ಟಿದ್ದಾರೆ. ಮಾಸಾರಂಭದಲ್ಲಿ ಲೋಕಸಭೆ ಕಲಾಪದಿಂದ ಥಟ್ಟನೆ ಹೊರನಡೆದ ಮೋದಿ, ಟ್ರಂಪ್‌ಗೆ ಕರೆ ಮಾಡಿ, ಅಮೆರಿಕ ಹೇಳುವ ಷರತ್ತುಗಳಿಗೆ ಒಪ್ಪಿ ಒಪ್ಪಂದಕ್ಕೆ ಸಹಿ ಮಾಡುವುದಾಗಿ ಹೇಳಿದ್ದಾರೆ ಎಂದು ರಾಹುಲ್ ಆರೋಪಿಸಿದರು.

ಹೆಸರು ಬದಲಿಗಿಂತ ಅನುದಾನ ಹೆಚ್ಚಿಸಿ

ದೆಹಲಿ: ಕೇರಳ ರಾಜ್ಯದ ಹೆಸರನ್ನು 'ಕೇರಳಂ' ಎಂದು ಬದಲಾಯಿಸಲು ಕೇಂದ್ರ ಸಚಿವ ಸಂಪುಟ ಅನುಮೋದಿಸಿರುವುದಕ್ಕೆ ರಾಜ್ಯ ಸಂಭ್ರಮಿಸುತ್ತಿದೆ. ಆದರೆ ತಿರುವನಂತಪುರಂ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಸಂಸದ ಶಶಿ ತರೂರ್ ಮಾತ್ರ, ಈ ಹೆಸರು ಬದಲಾವಣೆ ಕ್ರಮವನ್ನು ವಿರೋಧಿಸಿದ್ದಾರೆ. ಈಗ ಕೇರಳ ಜನರನ್ನು ಇಂಗ್ಲಿಷ್ ಭಾಷಿಗರು 'ಕೇರಲೈಟ್' ಮತ್ತು 'ಕೇರಳನ್' ಎಂದು ಸಂಬೋಧಿಸುತ್ತಾರೆ. ರಾಜ್ಯದ ಹೆಸರು ಈಗ 'ಕೇರಳಂ' ಎಂದಾಗುವುದರಿಂದ ಆಗ ರಾಜ್ಯದ ನಿವಾಸಿಗಳನ್ನು ಏನೆಂದು ಕರೆಯಬೇಕು? 'ಕೇರಳಮೈಟ್' ಎಂದು ಕರೆಯಲಾಗುತ್ತದೆಯೇ? ಆ ಪದ ಸೂಕ್ಷ್ಮಜೀವಿಯ ಹೆಸರಂತೆ ಧ್ವನಿಸುತ್ತದೆ. ಅಂತೆಯೇ, 'ಕೇರಳಮೈನ್' ಪದ ಅಪರೂಪದ ಭೂ ಖನಿಜದ ಹೆಸರಂತೆ ಕೇಳಿಸುತ್ತದೆ ಎಂದು ತರೂರ್ ತಕರಾರು ತೆಗೆದಿದ್ದಾರೆ. ಅಷ್ಟೇ ಅಲ್ಲದೇ, ಚುನಾವಣೆ ಕಾರಣಕ್ಕಾಗಿ ಕೇರಳ ಮುಖ್ಯಮಂತ್ರಿ, ಹೊಸ ಪದದ ಸ್ಪರ್ಧೆ ಆರಂಭಿಸಿರಬಹುದು ಎಂದೂ ವ್ಯಂಗ್ಯವಾಡಿದ್ದಾರೆ.

ರಾಜ್ಯಕ್ಕೆ ಮರುನಾಮಕರಣದ ಬದಲು ಕೇಂದ್ರ ಸರಕಾರ ರಾಜ್ಯಕ್ಕೆ ಹೆಚ್ಚಿನ ಅನುದಾನ ಕೊಡಲಿ, ಅಧಿಕ ಪ್ರಯೋಜನಕಾರಿ ಯೋಜನೆಗಳನ್ನು ಘೋಷಿಸಲಿ. 'ಏಮ್ಸ್' ಆಸ್ಪತ್ರೆ-ವೈದ್ಯಕೀಯ ಕಾಲೇಜು ಸೇರಿದಂತೆ ಯಾವುದೇ ಹೊಸ ಸಂಸ್ಥೆಗಳನ್ನು ರಾಜ್ಯಕ್ಕೆ ಕೇಂದ್ರ ಸರಕಾರ ನೀಡಿಲ್ಲ. ಹೊಸ ಯೋಜನೆಗಳನ್ನು ನೀಡಿಲ್ಲ. ಆದರೆ ರಾಜ್ಯಕ್ಕೆ ಹೆಸರು ಬದಲಿಸಿದ್ದನ್ನೇ ದೊಡ್ಡ ಸಾಧನೆ ಎಂಬಂತೆ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ ಎಂದು ತರೂರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವೀರ್ ಸೋರೆನ್ ಶಂಕಾಸ್ಪದ ಸಾವು

ರಾಂಚಿ: ಜಾರ್ಖಂಡ್ ರಾಜ್ಯದ ಮಾಜಿ ಮುಖ್ಯಮಂತ್ರಿ ಚಂಪೈ ಸೋರೆನ್ ಅವರ ಮೊಮ್ಮಗ, ಬಾಬುಲಾಲ್ ಸೋರೆನ್ ಅವರ ಪುತ್ರ ವೀರ್ ಸೋರೆನ್(19) ಮನಾಲಿ ಪ್ರವಾಸದಲ್ಲಿದ್ದಾಗ ಸಂಶಯಾಸ್ಪದ ರೀತಿ ಸಾವಿಗೀಡಾಗಿದ್ದಾರೆ.

ವೀರ್ ಸೋರೆನ್ ಬೇರೆ ರಾಜ್ಯದಲ್ಲಿನ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಫೆ.22ರಂದು ಸ್ನೇಹಿತರೊಂದಿಗೆ ಉತ್ತರಾಖಂಡ ಪ್ರವಾಸಕ್ಕೆ ತೆರಳಿದ್ದರು. ಈ ವೇಳೆ ಸಿಮ್ಲಾದ ಹೋಟೆಲ್‌ನಲ್ಲಿ ತಂಗಿದ್ದರು. ಸ್ನೇಹಿತರ ಜತೆ ಫೆ.23 ರಂದು ಹಮ್ತಾ ಪಾಸ್ ಬಳಿಯ ಸೋಲಾಂಗ್ ಕಣಿವೆ ಮತ್ತು ಸೇಥನ್ ಗ್ರಾಮಕ್ಕೆ ಭೇಟಿ ನೀಡಿದ್ದರು. ಸಂಜೆ ಹೋಟೆಲ್‌ಗೆ ವಾಪಸಾದ ವೀರ್ ಅಸ್ವಸ್ಥರಾದರು. ಮಂಗಳವಾರ ಮಧ್ಯಾಹ್ನ 12.30ರಲ್ಲಿ ತೀವ್ರ ತಲೆನೋವು ಕಾಣಿಸಿಕೊಂಡಿದೆ. ಸ್ನೇಹಿತರು ಔಷಧ ತಂದುಕೊಟ್ಟಿದ್ದಾರೆ. ಮಧ್ಯಾಹ್ನ 2.30ರ ವೇಳೆ ವೀರ್ ಕೊಠಡಿಯಲ್ಲಿ ದೊಡ್ಡ ಶಬ್ದ ಕೇಳಿಸಿದೆ. ಸ್ನೇಹಿತರು ಓಡಿಬಂದು ನೋಡಿದರೆ ವೀರ್ ಹಾಸಿಗೆಯಲ್ಲೇ ಮಲಗಿಯೇ ಇದ್ದರು. ತಡರಾತ್ರಿ ಅವರ ಆರೋಗ್ಯ ಹದಗೆಟ್ಟಿದೆ. ಸ್ನೇಹಿತರು ತಕ್ಷಣ ಅವರನ್ನು ಮನಾಲಿಯ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ವೀರ್ ಬಾಯಿ ಯಿಂದ ನೊರೆ ಬರಲಾರಂಭಿಸಿದೆ ಎಂದು ಸ್ನೇಹಿತರು ತಿಳಿಸಿದ್ದಾರೆ.

ಹೃದಯಾಘಾತದ ಶಂಕೆಯಲ್ಲಿ ಆಸ್ಪತ್ರೆಯಲ್ಲಿ ವೈದ್ಯರು ದೀರ್ಘಕಾಲ 'ಸಿಪಿಆರ್' ಮಾಡಿದ್ದಾರೆ. ಯಾವುದೇ ಸ್ಪಂದನೆ ಬಾರದೇ ಇದ್ದಾಗ ವೀರ್ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದಾರೆ.

ಸಿಪಿಐ ನಲ್ಲಕಣ್ಣು ಇನ್ನಿಲ್ಲ

ದೆಹಲಿ: ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯ(ಸಿಪಿಐ)ನ ಹಿರಿಯ ನಾಯಕ, ಶತಾಯುಷಿ ಆರ್.ನಲ್ಲಕಣ್ಣು ವಯೋಸಹಜ ಕಾರಣಗಳಿಂದಾಗಿ ಬುಧವಾರ ನಿಧನರಾದರು. 101 ವರ್ಷಗಳಾಗಿದ್ದ ಆರ್.ನಲ್ಲುಕಣ್ಣು ಅವರು ಬಹು ಅಂಗಾಂಗಗಳ ವೈಫಲ್ಯಕ್ಕೆ ಒಳಗಾಗಿದ್ದರು.

ಹಾಗಾಗಿ ಅವರನ್ನು ಫೆ.1ರಂದು ದೆಹಲಿಯ ರಾಜೀವ್ ಗಾಂಧಿ ಸರಕಾರಿ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಅವರನ್ನು ವೈದ್ಯರು 'ಐಸಿಯು'ನಲ್ಲಿರಿಸಿ ಜೀವ ರಕ್ಷಕ ಸಾಧನಗಳನ್ನು ಅಳವಡಿಸಿ ಚಿಕಿತ್ಸೆ ನೀಡುತ್ತಿದ್ದರು. ಸೋಮವಾರ ಅವರ ಆರೋಗ್ಯ ತೀರಾ ಹದಗೆಟ್ಟಿತ್ತು. ವೈದ್ಯರ ಪ್ರಯತ್ನಗಳ ನಂತರವೂ ಹಿರಿಯ ಕಮ್ಯುನಿಸ್ಟ್ ನಾಯಕ ಬುಧವಾರ ಮಧ್ಯಾಹ್ನ ಕೊನೆಯುಸಿರೆಳೆದರು.ನಲ್ಲಕಣ್ಣು ಅವರ ದೇಹ ಬಹಳ ಜೀರ್ಣಾವಸ್ಥೆಯಲ್ಲಿದ್ದುದರಿಂದ ಅವರಿಗೆ ವೈದ್ಯರು ನೀಡುತ್ತಿದ್ದ ಚಿಕಿತ್ಸೆಗಳಿಗೆ ಸ್ಪಂದಿಸಲೂ ಆಗುತ್ತಿರಲಿಲ್ಲ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

'ಎನ್‌ಸಿಇಆರ್‌ಟಿ'ಯ ಪಠ್ಯಕ್ಕೆ ಸುಪ್ರೀಂ ಗರಂ



"Justice delayed is justice denied"

On account of multiple reasons, such as a lack of an adequate number of judges, complicated legal procedures, and poor infrastructure, the judicial system in our country has a massive backlog. Look at the data from the National Judicial Data Grid given below (as of March 2025):

Number of pending cases (approximate):	
Supreme Court	81,000
High Courts	62,40,000
District and other Subordinate Courts	4,70,00,000

Note: These numbers need not be memorised.

Corruption in the Judiciary

ದೆಹಲಿ: ಎನ್‌ಸಿಇಆರ್‌ಟಿ ಪಠ್ಯಕ್ರಮದ 8ನೇ ತರಗತಿಯ ಪುಸ್ತಕದ ಅಧ್ಯಾಯವೊಂದರಲ್ಲಿ ದೇಶದಲ್ಲಿನ ನ್ಯಾಯಾಂಗದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ವಿವರ ಇರುವುದಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಕಳವಳ ವ್ಯಕ್ತಪಡಿಸಿದೆ.

ಲಕ್ಷಾಂತರ ಪ್ರಕರಣಗಳು ನ್ಯಾಯಾಲಯಗಳಲ್ಲಿ ಬಾಕಿಯಾಗಿರುವ ಕುರಿತು ಪಠ್ಯಪುಸ್ತಕದಲ್ಲಿ 'ಜಸ್ಟೀಸ್ ಡಿಲೇಯ್ಡ್ ಜಸ್ಟೀಸ್ ಡಿನೈಡ್' ಮತ್ತು ನ್ಯಾಯಾಂಗದಲ್ಲಿನ ಭ್ರಷ್ಟಾಚಾರ 'ಕರಪ್ಷನ್ ಇನ್ ಜುಡಿಷಿಯರಿ' ಎಂಬ ಶೀರ್ಷಿಕೆಗಳಡಿ 2 ಪುಟಗಳಿಗೂ ವಿಸ್ತಾರವಾಗಿ ವಿಷಯವನ್ನು ಮುದ್ರಿಸಲಾಗಿದೆ. ಈ ಸುದ್ದಿ ಪತ್ರಿಕೆಗಳಲ್ಲಿ ಮಂಗಳವಾರ ಪ್ರಕಟವಾಗಿದೆ. ಇದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ನ್ಯಾಯಾಂಗಕ್ಕೆ ಕಳಂಕ ತರವಲ್ಲ. ಹಾಗಾಗಲು ಬಿಡುವುದೂ ಇಲ್ಲ. ಈ ವಿಚಾರದಲ್ಲಿ ಸುಪ್ರೀಂಕೋರ್ಟ್ ಸ್ವಯಂಪ್ರೇರಿತ ಕ್ರಮ ಜರುಗಿಸುವುದಾಗಿ ಹೇಳಿದ ಮುಖ್ಯ ನ್ಯಾಯಮೂರ್ತಿಗಳು, 'ಸ್ವಯಂಪ್ರೇರಿತ ಪ್ರಕರಣ' ದಾಖಲಿಸಿಕೊಳ್ಳಲು ರಿಜಿಸ್ಟ್ರಾರ್‌ಗೆ ನಿರ್ದೇಶನ ನೀಡಿದ್ದಾರೆ.ದೇಶದೆಲ್ಲೆಡೆಯ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು ಎನ್‌ಸಿಇಆರ್‌ಟಿ ಪಠ್ಯ ಕುರಿತು ಅಸಮಾಧಾನಗೊಂಡಿದ್ದಾರೆ.

ನಾನು ಈ ವಿಷಯವನ್ನು ವೈಯಕ್ತಿಕವಾಗಿ ಪರಿಶೀಲಿಸುತ್ತೇನೆ. ಸಂಸ್ಥೆಯನ್ನು ಕೆಣಕಲು ಯಾರಿಗೂ ಅವಕಾಶ ನೀಡುವುದಿಲ್ಲ. ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ.

ಗೆಳೆಯನೆದುರೇ ಮಹಿಳೆ ಮೇಲೆ 7 ಮಂದಿ ರೇಪ್

ಸಿಲ್ಚಾರ್: ಅಸ್ಸಾಂ ರಾಜ್ಯದ ಕಚಾರ್ ಜಿಲ್ಲೆಯ ಸಿಲ್ಚಾರ್ ಪಟ್ಟಣಕ್ಕೆ ಗೆಳೆಯನ ಜತೆ ಭೇಟಿ ನೀಡಿದ್ದ 28 ವರ್ಷದ ಮಹಿಳೆ ಮೇಲೆ 7 ಮಂದಿ ಅತ್ಯಾಚಾರ ನಡೆಸಿದ್ದಾರೆ. ಜತೆಗೆ ಸಂತ್ರಸ್ತೆಯಿಂದ 10 ಸಾವಿರ ರು.ಗಳನ್ನೂ ಸುಲಿಗೆ ಮಾಡಿದ್ದಾರೆ.ದುರ್ಘಟನೆ ಬಗ್ಗೆ ಸಂತ್ರಸ್ತೆ ಫೆ.19ರಂದೇ ದೂರು ದಾಖಲಿಸಿದ್ದರೂ ಪೊಲೀಸರು ನಿರ್ಲಕ್ಷ್ಯ ಮಾಡಿದ್ದರು. ಆದರೆ ಮಂಗಳವಾರ ಸಿಲ್ಚಾರ್‌ನ ಪತ್ರಕರ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪೊಲೀಸ್ ಠಾಣೆ ಬಳಿ ತಡೆದ ಆರೋಪಿಯೊಬ್ಬನ ಕುಟುಂಬ ಸದಸ್ಯರು ಹಲ್ಲೆ ನಡೆಸಿದರು. ಆನಂತರ ಸಾಮೂಹಿಕ ಅತ್ಯಾಚಾರದ ಸಂಗತಿ ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆಗೆ ಕಾರಣವಾಯಿತು.ಆ ಬಳಿಕ ಎಚ್ಚೆತ್ತ ಸಿಲ್ಚಾರ್ ಸದರ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿ ಕೊಂಡರು. ಸಂತ್ರಸ್ತೆ ಇಬ್ಬರು ಆರೋಪಿಗಳನ್ನು ಮೊದಲಿಗೆ ಗುರುತಿಸಿದ್ದು ಅವರನ್ನು ಬಂಧಿಸ ಲಾಗಿದೆ. ಉಳಿದ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆದಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ತೀವ್ರ ಜನಾಕ್ರೋಶ ವ್ಯಕ್ತವಾ ಗಿದ್ದು, ಸಂಸದೆ ಸುಶ್ಮಿತಾ ದೇವ್, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಅಮೆರಿಕವನ್ನು ಮತ್ತೆ ಶ್ರೇಷ್ಠಗೊಳಿಸುವ ವಾಗ್ದಾನ ನೆರವೇರಿದೆ | ದೇಶವೀಗ ಶ್ರೀಮಂತ-ಬಲಿಷ್ಠ: ಬೆನ್ನು ತಟ್ಟಿಕೊಂಡ ಟ್ರಂಪ್

ಅಮೆರಿಕ ಸಂಸತ್ತಿನಲ್ಲಿ ಡೊನಾಲ್ಡ್ ಟ್ರಂಪೆಟ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ರಾಷ್ಟ್ರವನ್ನು ಉದ್ದೇಶಿಸಿ 2ನೇ ಅಧ್ಯಕ್ಷ ಅವಧಿಯಲ್ಲಿನ ಮೊದಲ 'ಸ್ಟೇಟ್ ಆಫ್ ದ ಯೂನಿಯನ್' ಭಾಷಣ ಮಾಡಿದ್ದಾರೆ. ಆ ಭಾಷಣದಲ್ಲಿ 'ಮೇಕ್ ಅಮೆರಿಕ ಗ್ರೇಟ್ ಅಗೈನ್'(ಎಂಎಜಿಎ-ಮಗಾ) ಕಾರ್ಯಸೂಚಿಯನ್ನು ಕೇಂದ್ರೀಕರಿಸಿದ್ದಾರೆ.

ಟ್ರಂಪ್ 2ನೇ ಅವಧಿಯ ತಮ್ಮ ಅಧಿಕಾರದ ಮೊದಲ ವರ್ಷ ಪೂರ್ಣಗೊಂಡಿರುವ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಈ ಅವಧಿಯಲ್ಲಿ ದೇಶದ ಆರ್ಥಿಕತೆಯ ಪುನರುಜ್ಜೀವನಗೊಳಿಸುವುದು, ಗಡಿಭದ್ರತೆ ಕಠಿಣಗೊಳಿಸುವುದು ಮತ್ತು ಅಮೆರಿಕವನ್ನು ಮಹಾಶಕ್ತಿವಂತ ರಾಷ್ಟ್ರವಾಗಿ ಸ್ಥಾಪಿಸುವುದೇ ಮುಖ್ಯ ಆದ್ಯತೆಗಳಾಗಿವೆ ಎಂದಿದ್ದಾರೆ.

'ಈ ಮೊದಲು ದೇಶದಲ್ಲಿ ಆರ್ಥಿಕ ಪ್ರಗತಿ ಸ್ಥಗಿತಗೊಂಡಿತ್ತು, ಗಡಿಗಳು ಮುಕ್ತವಾಗಿದ್ದವು, ಪೊಲೀಸ್-ಸೇನೆಯಲ್ಲಿ ನೇಮಕ ಕಡಿಮೆಯಾಗಿ ದುಃಸ್ಥಿತಿಯಲ್ಲಿತ್ತು. ನಾನು ಎಲ್ಲವನ್ನೂ ಸರಿಪಡಿಸಿದೆ. ಈಗ ದೇಶದ ಆರ್ಥಿಕತೆ ವೇಗವಾಗಿ ಬೆಳೆಯುತ್ತಿದೆ, ಗಡಿಗಳು ಸುರಕ್ಷಿತವಾಗಿವೆ ಮತ್ತು ಪೊಲೀಸ್ ಪಡೆ ಹಿಂದೆಂದಿಗಿಂತಲೂ ಬಲಿಷ್ಠವಾಗಿದೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

ನನ್ನ ಅಧಿಕಾರಾವಧಿಯ ಕಳೆದ 9 ತಿಂಗಳಲ್ಲಿ ಅಕ್ರಮ ವಲಸಿಗರು ಒಬ್ಬರೂ ಅಮೆರಿಕ ಪ್ರವೇಶಿಸಿಲ್ಲ. ಕಾನೂನುಬದ್ಧ ದಾಖಲೆ ಹೊಂದಿದವರಷ್ಟೇ ಪ್ರವೇಶ ಪಡೆದಿದ್ದಾರೆ. ಪರಿಣಾಮವಾಗಿ ಇತಿಹಾಸದಲ್ಲೇ ಮೊದಲು ಬಾರಿಗೆ ಅಮೆರಿಕನ್ನರು ಹೆಚ್ಚು ಉದ್ಯೋಗಸ್ಥರಾಗಿದ್ದಾರೆ. ಖಾಸಗಿ ವಲಯದಲ್ಲಿಯೂ ಹೆಚ್ಚಿನ ಉದ್ಯೋಗಗಳ ಸೃಷ್ಟಿಯಾಗಿದೆ ಎಂದೂ ಟ್ರಂಪ್ ಹೇಳಿದ್ದಾರೆ.

ಡೆಮಾಕ್ರೆಟ್ ಪಕ್ಷದವರು ಹುಚ್ಚರು. ದೇಶವನ್ನು ಹಾಳು ಮಾಡುತ್ತಿದ್ದರು. ಸರಿಯಾದ ಸಮಯದಲ್ಲಿ ನನ್ನ ಆಡಳಿತ ಬಂದು ಅದನ್ನು ತಡೆದಿದೆ. ಅಮೆರಿಕದ ಚುನಾವಣೆಗಳಲ್ಲಿ ಅಕ್ರಮ ನಡೆಯುತ್ತಿದೆ. ಮತದಾನ ವೇಳೆ ಪೌರತ್ವ ದಾಖಲೆ ಮತ್ತು ಮತದಾರ ಗುರುತಿನ ಚೀಟಿ ಕಡ್ಡಾಯವಾಗಬೇಕು. ನನಗೆ 3ನೇ ಅವಧಿಗೂ ಅಧ್ಯಕ್ಷನಾಗುವ ಅವಕಾಶ ಸಿಗಬೇಕು.

ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ಇಂಧನ ಬೆಲೆ ಗ್ಯಾಲನ್‌ಗೆ 1.85 ಡಾಲರ್‌ಗೆ ತಗ್ಗಿದೆ. ಗೃಹ ಸಾಲ ವೆಚ್ಚ ವರ್ಷದಲ್ಲಿ 5,000 ಡಾಲರ್ ಕಡಿಮೆಯಾಗಿದೆ. ಷೇರುಪೇಟೆ ವರ್ಷದಲ್ಲಿ 53 ಬಾರಿ ಹೊಸ ದಾಖಲೆ ಬರೆದಿದೆ. 12 ತಿಂಗಳಲ್ಲಿ ವಿಶ್ವದೆಲ್ಲೆಡೆಯಿಂದ 18 ಲಕ್ಷ ಕೋಟಿ ಡಾಲರ್ ಹೂಡಿಕೆ ಹರಿದು ಬಂದಿದೆ. ವೆನೆಜುವೆಲಾದಿಂದ 8 ಕೋಟಿ ಡಾಲರ್ ಮೌಲ್ಯದ ಕಚ್ಚಾತೈಲ ಪಡೆದಿದ್ದೇವೆ. ಅಮೆರಿಕವನ್ನು ಮತ್ತೆ ಶ್ರೇಷ್ಠಗೊಳಿಸುವ ವಾಗ್ದಾನ ನೆರವೇರಿಸಿದ್ದೇನೆ. ಅಮೆರಿಕ ಮರಳಿ ಸುಸ್ಥಿತಿಗೆ ಬಂದಿದೆ. ಹಿಂದಿಗಿಂತಲೂ ಶ್ರೀಮಂತ-ಬಲಿಷ್ಠ ರಾಷ್ಟ್ರವಾಗಿದೆ. ಜು.4ರಂದು ಅಮೆರಿಕ ಸ್ವಾತಂತ್ರ್ಯದ 250ನೇ ವರ್ಷಾಚರಣೆ ನಡೆಯಲಿದೆ ಎಂದಿದ್ದಾರೆ.

ಶೆಹಬಾಜ್ ಸಾಯುತ್ತಿದ್ದರು

ಭಾರತ-ಪಾಕಿಸ್ತಾನ ಕದನ ವಿರಾಮಕ್ಕೆ ನಾನು ಮಧ್ಯಸ್ಥಿಕೆ ವಹಿಸಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ನನ್ನ ಹಸ್ತಕ್ಷೇಪದಿಂದ 2 ದೇಶಗಳ ಪರಮಾಣು ಸಂಘರ್ಷ ತಪ್ಪಿತು. ಇಲ್ಲವಾಗಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಸಾಯುತ್ತಿದ್ದರು. ಅಲ್ಲದೇ, 3.50 ಕೋಟಿ ಜನರ ಪ್ರಾಣವೂ ಉಳಿದಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಬ್ಯಾಂಕ್ ದರೋಡೆಗೆ ಯತ್ನ: ಆರೋಪಿ ಸೆರೆ

ಬೆಂಗಳೂರು: ನಗರದಲ್ಲಿ ಬ್ಯಾಂಕ್‌ನಲ್ಲಿ ಕಳ್ಳತನಕ್ಕೆ ಯತ್ನಿಸಿದ್ದ ಆರೋಪಿ ಒಬ್ಬನನ್ನು ಶೇಷಾದ್ರಿಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹಸನ್ ಸಾಬ್ ಬಂಧಿತ ಆರೋಪಿ. ಭಾನುವಾರ ರಾತ್ರಿ ಶೇಷಾದ್ರಿಪುರಂನಲ್ಲಿ ಬ್ಯಾಂಕ್ ಹಾಗೂ ಹಲಸೂರು ಗೇಟ್‌ನ ವ್ಯಾಪ್ತಿಯಲ್ಲಿ ಎಟಿಎಂವೊಂದರಲ್ಲಿ ಆರೋಪಿಯು ಕಳ್ಳತನಕ್ಕೆ ಯತ್ನಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಧಾರವಾಡ ಮೂಲದ ಆರೋಪಿ ಶೇಷಾದ್ರಿಪುರಂ ವ್ಯಾಪ್ತಿಯಲ್ಲಿ ವಾಸವಿದ್ದ. ಸಾಲ ಮಾಡಿಕೊಂಡಿದ್ದ ಆರೋಪಿ, ಅದನ್ನು ತೀರಿಸುವ ಉದ್ದೇಶದಿಂದ ಕೃತ್ಯಕ್ಕೆ ಯತ್ನಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಅದರೂ ಆತ ಒಬ್ಬನೇ ಕೃತ್ಯಕ್ಕೆ ಯತ್ನಿಸಿದ್ದನಾ ಅಥವಾ ಯಾರಾದರೂ ಸಹಚರರು ಇದ್ದರಾ ಎಂದು ಹೆಚ್ಚಿನ ತನಿಖೆ ನಡೆಸುತ್ತಿರುವುದಾಗಿ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ ಹಕೇ ತಿಳಿಸಿದ್ದಾರೆ. ಭಾನುವಾರ ರಾತ್ರಿ ಈ ಘಟನೆ ನಡೆದಿದ್ದು, ಬ್ಯಾಂಕ್ ಎಡಭಾಗ ದಲ್ಲಿದ್ದ ಕಿಟಕಿ ಗ್ರಿಲ್ ಮುರಿದು ನುಗ್ಗಿದ್ದ ಆರೋಪಿ, ಸಿಸಿಟಿವಿ ವೈರ್‌ಗಳನ್ನು ಕತ್ತರಿಸಲು ಯತ್ನಿಸಿದ್ದ. ಆಗ ಅಲಾರಾಂ ಮೊಳಗಿದ್ದರಿಂದ ಬಂದ ದಾರಿಯಲ್ಲೇ ಪರಾರಿಯಾಗಿದ್ದ. ಬ್ಯಾಂಕ್‌ನ ಭದ್ರತಾ ಸಿಬ್ಬಂದಿ ಅಲಾರಾಂ ಮೊಳಗಿದಾಗ ಪರಿಶೀಲಿಸಿದ್ದರೂ, ಕಿಟಕಿಯ ಬಳಿ ಹೋಗಿ ನೋಡದೆ ನಿರ್ಲಕ್ಷಿಸಿದ್ದರು. ಬೆಳಗ್ಗೆ ಬ್ಯಾಂಕ್ ಸಿಬ್ಬಂದಿ ಬಂದು ನೋಡಿದಾಗ ಕಳ್ಳತನಕ್ಕೆ ಯತ್ನಿಸಿರುವುದು ಬಯಲಾಗಿತ್ತು. ಮಾಹಿತಿ ಪಡೆದ ಶೇಷಾದ್ರಿಪುರಂ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದರು.

ಕಸ ಸಂಗ್ರಹಕಾರರ ಕಾಯಂಗೆ ಆಗ್ರಹಿಸಿ ಮಾ.4ಕ್ಕೆ ಪ್ರತಿಭಟನೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವ ಲೋಡರ್ಸ್, ವಾಹನ ಚಾಲಕರು, ಸಹಾಯಕರ ಸೇವೆಯನ್ನು ಕಾಯಂಗೊಳಿಸುವಂತೆ ಆಗ್ರಹಿಸಿ, ಮಾರ್ಚ್ 4ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ನವ ಕರ್ನಾಟಕ ನಿರ್ಮಾಣ ಆಂದೋಲನ ತಿಳಿಸಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಂದೋಲನ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್, ಮಾರಸಂದ್ರ ಮುನಿಯಪ್ಪ, ಆರ್. ಮೋಹನ ರಾಜ್, ಜಿಬಿಎ ವ್ಯಾಪ್ತಿಯಲ್ಲಿ ಕಸ ಸಾಗಾಣಿಕೆ, ಕಸ ಸಂಗ್ರಹಿಸುವ ಲೋಡರ್ಸ್, ಕ್ಲೀನರ್ಸ್, ಕಸದ ವಾಹನ ಚಲಾಯಿಸುವ ಚಾಲಕರು ಗುತ್ತಿಗೆ ಪದ್ಧತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲರ ಸೇವೆಯನ್ನೂ ಕಾಯಂಗೊಳಿಸಬೇಕು. ಗುತ್ತಿಗೆದಾರರು ಇವರನ್ನು ಜೀತ ಪದ್ಧತಿಯಲ್ಲಿ ದುಡಿಸಿಕೊಳ್ಳುತ್ತಿರುವುದು ಖಂಡನೀಯ ಎಂದು ತಿಳಿಸಿದರು. ಈ ಸ್ವಚ್ಛತಾ ಸಿಬ್ಬಂದಿಗೆ ಮಾಸ್ಕ್, ಗ್ಲೌಸ್, ಬೂಟ್ ಸೇರಿದಂತೆ ಯಾವುದೇ ರೀತಿಯ ಸೌಲಭ್ಯಗಳನ್ನು ನೀಡುತ್ತಿಲ್ಲ. ಇದರ ಜತೆಗೆ ಇಎಸ್‌ಐ ಸೌಲಭ್ಯವಿಲ್ಲ, ಕನಿಷ್ಠ ವೇತನವನ್ನು ನೀಡುತ್ತಿಲ್ಲ. ರಾಜ್ಯ ಸರಕಾರ ಕೂಡಲೇ ಇವರನ್ನು ಕಾಯಂಗೊಳಿಸಿ, ಆಧುನಿಕ ಜೀತಪದ್ಧತಿಯಿಂದ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನರಸಮ್ಮ ಕೋಂ ರಾಜೇಂದ್ರ ಪ್ರಸಾದ್ ರವರ ಮಾಲೀಕತ್ವದ ಸ್ವತ್ತಾದ ಇದೇ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕು ಮಾಲೂರು ಟೌನ್ ವೆಂಕಟೇಶ್ವರ ಬಡಾವಣೆ ರಲ್ಲಿರುವ ಖಾತೆ ಸಂಖ್ಯೆ 8300/7168/73, ಸೈಟ್ ಸಂಖ್ಯೆ 73 ರ ವಿಸ್ತೀರ್ಣ:- ಪೂರ್ವ-ಪಶ್ಚಿಮ 40 ಅಡಿಗಳು ಮತ್ತು ಉತ್ತರ-ದಕ್ಷಿಣ 16+15/2 ಅಡಿಗಳ ಸ್ವತ್ತಿಗೆ ಚಕ್ಕುಬಂಧಿ ಪೂರ್ವಕ್ಕೆ :ಸೈಟ್ ನಂ. 96, ಪಶ್ಚಿಮ 20 ಅಡಿ ರಸ್ತೆ, ಉತ್ತರ-ಖಾಸಗಿ ಆಸ್ತಿ, ದಕ್ಷಿಣ ಸೈಟ್ ಸಂಖ್ಯೆ 74 ರ ಶುದ್ಧ ಕ್ರಯ ಪತ್ರದ ದಾಖಲೆ ಸಂಖ್ಯೆ 04804 2012-13 ಮತ್ತು ಸಿಡಿ ಸಂಖ್ಯೆ ಒಐಖಆ 82 ದಿನಾಂಕ:- 19 ನವೆಂಬರ್ 2012 ರನ್ನು ಶ್ರೀಮತಿ ಅಮರಾವತಿ ಕೋಂ ವಿ.ಆರ್. ನಾರಾಯಣಪ್ಪ ಅವರಿಂದ ನರಸಮ್ಮ ಕೋಂ ರಾಜೇಂದ್ರ ಪ್ರಸಾದ್ ಆದ ನನಗೆ ಬರೆದುಕೊಟ್ಟಿದ್ದು, ಸದರಿ ಮೂಲ ದಾಖಲೆ ಪತ್ರ ಕಳೆದುಹೋಗಿರುತ್ತದೆ. ಹಾಗೂ ನಾನು ಮೂಲ ದಾಖಲೆಗಳನ್ನು ಹುಡುಕಲು ಆಗುತ್ತಿಲ್ಲ.
ಮೇಲೆ ತಿಳಿಸಿದ ಮೂಲ ದಾಖಲೆಯನ್ನು ಹೊಂದಿರುವ ಯಾವುದೇ ವ್ಯಕ್ತಿ/ಗಳು ಮೇಲೆ ತಿಳಿಸಿದ ದಾಖಲೆಗಳ ಆಸ್ತಿಯನ್ನು ಖರೀದಿಸುವ ವ್ಯಕ್ತಿಗೆ ಅದನ್ನು ಹಿಂತಿರುಗಿಸಬಹುದು. ಯಾವುದೇ ವ್ಯಕ್ತಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಸಹಕಾರಿ ಸಂಘದ ನಿಯಮಗಳಿಂದ ನಿಯಂತ್ರಿಸಲ್ಪಡುವ ಯಾವುದೇ ಹಣಕಾಸು ಸಂಸ್ಥೆಯ ವಿರುದ್ಧ ಯಾರಾದರೂ ಹಕ್ಕು ಹೊಂದಿದ್ದರೆ, ಈ ದಿನದಿಂದ 07 ದಿನಗಳಲ್ಲಿ ಕೆಳಗೆ ಉಲ್ಲೇಖಿಸಲಾದ ವಕೀಲರಿಗೆ ಲಿಖಿತವಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬಹುದು.
ಚಾಕನಹಳ್ಳಿ ಗ್ರಾಮ, ಅರಳೇರಿ ಪೋಸ್ಟ್, ಮಾಲೂರು ಕಸಬಾ ಹೋಬಳಿ, ಕೋಲಾರ ಜಿಲ್ಲೆ, ಪಿನ್ ಕೋಡ್ 563130.
+91 90363 27404 Narasamma

ಹೋಟೆಲ್ ಆವರಣದಲ್ಲಿ ಕಂಡುಬಂದ ತೀವ್ರ ಅಶುಚಿತ್ವ, ನಿಯಮಗಳ ಉಲ್ಲಂಘನೆಗಾಗಿ ದಂಡ
ಹೋಟೆಲ್‌ಗಳ ಮೇಲೆ ದಂಡ ಪ್ರಯೋಗ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಂಗಾರು ಸಿದ್ಧತೆಗಳ ಕುರಿತು ಅಪರ ಆಯುಕ್ತರ ನೇತೃತ್ವದಲ್ಲಿ ಮಹತ್ವದ ಪರಿಶೀಲನಾ ಸಭೆ ಹಾಗೂ ಘನ ತ್ಯಾಜ್ಯ ನಿರ್ವಹಣೆ ಮಾಡದ ಹೋಟೆಲ್‌ಗಳ ಮೇಲೆ ಪಾಲಿಕೆಯಿಂದ ಮುಂದುವರಿದ ದಂಡ ಪ್ರಯೋಗ ಮಾಡಲಾಯಿತು.

ಮುಂಬರುವ ಮುಂಗಾರು ಮಳೆಗಾಲವನ್ನು ಸಮರ್ಥವಾಗಿ ಎದುರಿಸಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ನವೀನ್ ಕುಮಾರ್ ರಾಜು ಅವರು ಕಾಮಗಾರಿ, ಅರಣ್ಯ, ತೋಟಗಾರಿಕೆ ಮತ್ತು ವಿಪತ್ತು ನಿರ್ವಹಣಾ ಸಮಾಲೋಚಕರೊಂದಿಗೆ ಮಹತ್ವದ ಸಭೆ ನಡೆಸಿ ನಗರದ ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮಳೆಯಿಂದಾಗುವ ಅನಾಹುತಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿದರು.

ಅಪಾಯಕಾರಿ ಸ್ಥಿತಿಯಲ್ಲಿರುವ ಒಣಗಿದ ಮರಗಳು ಮತ್ತು ಕೊಂಬೆಗಳನ್ನು ತಕ್ಷಣವೇ ಗುರುತಿಸಿ ತೆರವುಗೊಳಿಸಲು ಸೂಚಿಸಲಾಗಿದೆ. ವಾರ್ಡ್‌ವಾರು ಪ್ರಗತಿ ವರದಿಯನ್ನು ಸಲ್ಲಿಸಲು ಮತ್ತು ಮರ ಕತ್ತರಿಸುವ ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲು ನಿರ್ದೇಶನ ನೀಡಿದರು. ಉದ್ಯಾನವನಗಳಲ್ಲಿನ ಚರಂಡಿಗಳ ಹೂಳೆತ್ತುವುದು ಮತ್ತು ಮಳೆನೀರು ಸರಾಗವಾಗಿ ಹರಿದು ಹೋಗುವಂತೆ ನೋಡಿಕೊಳ್ಳುವುದು. ನೀರು ನಿಲ್ಲುವ ಸಂಭವನೀಯ ಸ್ಥಳಗಳನ್ನು ಗುರುತಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ವಿದ್ಯುತ್ ಸುರಕ್ಷತೆ: ಪಾರ್ಕ್‌ಗಳಲ್ಲಿನ ವಿದ್ಯುತ್ ಕಂಬಗಳು, ಕೇಬಲ್‌ಗಳು ಮತ್ತು ಜಂಕ್ಷನ್ ಬಾಕ್ಸ್‌ಗಳನ್ನು ತಪಾಸಣೆ ನಡೆಸಿ, ಎಲ್ಲೂ ವಯರ್‌ಗಳು ತೆರೆದಿಲ್ಲವೆಂದು ಖಚಿತಪಡಿಸಿಕೊಳ್ಳಲು ಸೂಚಿಸಿದರು. ಮಕ್ಕಳ ಆಟದ ಮೈದಾನಗಳಲ್ಲಿನ ಸ್ವಿಂಗ್‌ಗಳು, ಸ್ಲೈಡ್‌ಗಳು ಮತ್ತು ಜಿಮ್ ಉಪಕರಣಗಳ ಸುರಕ್ಷತಾ ಆಡಿಟ್ ನಡೆಸಿ, ಹಾನಿಗೊಳಗಾದ ವಸ್ತುಗಳನ್ನು ತಕ್ಷಣವೇ ದುರಸ್ತಿ ಮಾಡುವುದು. ತೋಟಗಾರಿಕೆ ಸಿದ್ಧತೆ: ಮುಂಗಾರು ಆರಂಭಕ್ಕೂ ಮುನ್ನ ಮರಗಳ ಸವರುವಿಕೆ ಪೂರ್ಣಗೊಳಿಸುವುದು ಹಾಗೂ ಹೊಸದಾಗಿ ನೆಟ್ಟ ಸಸಿಗಳ ರಕ್ಷಣೆಗೆ ಕ್ರಮ ಕೈಗೊಳ್ಳುವುದು. ಮಳೆ ಅನಾಹುತಗಳ ಸಮಯದಲ್ಲಿ ತಕ್ಷಣ ಸ್ಪಂದಿಸಲು ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಸಾರ್ವಜನಿಕ ದೂರುಗಳಿಗಾಗಿ ಸಹಾಯವಾಣಿ ಸಂಖ್ಯೆಗಳನ್ನು ಪ್ರಕಟಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು. ಈ ವೇಳೆ ಅರಣ್ಯ ಇಲಾಖೆ, ತೋಟಗಾರಿಕೆ ವಿಭಾಗ ಮತ್ತು ವಿಪತ್ತು ನಿರ್ವಹಣಾ ತಂಡದ ಹಿರಿಯ ಅಧಿಕಾರಿಗಳು, ತಾಂತ್ರಿಕ ಸಲಹೆಗಾರರು ಇದ್ದರು.

ಘನತ್ಯಾಜ್ಯ ನಿರ್ವಹಣೆ ಮಾಡದ ಹೋಟೆಲ್‌ಗಳಿಗೆ ದಂಡ ವಿಧಿಸಲಾಯಿತು.

ಉಲ್ಲಂಘನೆಗಳ ವಿವರ

ಅಶುಚಿತ್ವ: ಹೋಟೆಲ್ ಆವರಣ ಮತ್ತು ಅಡುಗೆ ಕೋಣೆಯಲ್ಲಿ ಸರಿಯಾದ ನೈರ್ಮಲ್ಯ ಕಾಪಾಡದಿರುವುದು.
ತ್ಯಾಜ್ಯ ವಿಂಗಡಣೆ ಲೋಪ: ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸದೆ ನಿಯಮ ಉಲ್ಲಂಘಿಸಿರುವುದು.
ನಿಷೇಧಿತ ಪ್ಲಾಸ್ಟಿಕ್ ಬಳಕೆ: ಸರಕಾರದಿಂದ ನಿಷೇಧಿಸಲ್ಪಟ್ಟ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಿರುವುದು.

75,000 ರು. ದಂಡ

ಪಾಲಿಕೆಯಿಂದ ಘನತ್ಯಾಜ್ಯ ನಿರ್ವಹಣೆ ಮಾಡದ ಹೋಟೆಲ್‌ಗಳ ಮೇಲೆ ಮುಂದುವರಿದ ದಂಡ ಪ್ರಯೋಗ, ಸಿ ಕ್ಲಬ್ ಶವಾಯಿ ಹೋಟೆಲ್‌ಗೆ 75,000 ರು. ದಂಡ. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಹೊಸ ಗುರಪ್ಪನ ಪಾಳ್ಯದಲ್ಲಿ ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಅಧಿಕಾರಿಗಳು ತಮ್ಮ ಕಾರ್ಯಾಚರಣೆಯನ್ನು ಬುಧವಾರ ಸಹ ಮುಂದುವರಿಸಿದ್ದು, ಅಧಿಕಾರಿಗಳಿಂದ ನಿಯಮ ಉಲ್ಲಂಘಿಸುವ ವಾಣಿಜ್ಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಹೊಸ ಗುರುಪ್ಪನಪಾಳ್ಯದಲ್ಲಿರುವ ಸಿ ಕ್ಲಬ್ ಶವಾಯಿ ಹೋಟೆಲ್ ಮೇಲೆ ದಾಳಿ ನಡೆಸಿದ ಅಧಿಕಾರಿಗಳು, ಹೋಟೆಲ್ ಆವರಣದಲ್ಲಿ ಕಂಡುಬಂದ ತೀವ್ರ ಅಶುಚಿತ್ವ ಮತ್ತು ನಿಯಮಗಳ ಉಲ್ಲಂಘನೆಗಾಗಿ ಒಟ್ಟು 75,000 ರು. ದಂಡ ವಿಧಿಸಿದ್ದಾರೆ.

ಪ್ರಮುಖ ರಸ್ತೆಗಳಲ್ಲಿ ಹೊಸ ಪಾರ್ಕಿಂಗ್ ನೀತಿ ಜಾರಿ?

ಬೆಂಗಳೂರು: ನಗರದಲ್ಲಿ ವಾಹನಗಳ ಅವೈಜ್ಞಾನಿಕ ಪಾರ್ಕಿಂಗ್‌ನಿಂದ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವ ಹಿನ್ನೆಲೆ ಪಾರ್ಕಿಂಗ್ ವ್ಯವಸ್ಥೆಯನ್ನು ಸರಿಪಡಿಸಲು ಜಿಬಿಎ ನಿರ್ಧಾರ ಮಾಡಿದೆ.

ಈ ನಿಟ್ಟಿನಲ್ಲಿ ಪ್ರಮುಖ ರಸ್ತೆಗಳಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಜಿಬಿಎ ಮುಂದಾಗಿದ್ದು, ನಗರದ ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕದ ನಿಯಮ ಜಾರಿಗೆ ತರಲು ಮುಂದಾಗಿದೆ. ಅದರಂತೆ ಜಯನಗರ ವಿಧಾನಸಭಾ ಕ್ಷೇತ್ರದ 42 ರಸ್ತೆಗಳಲ್ಲಿ ಶೀಘ್ರವೇ ಪಾರ್ಕಿಂಗ್ ಶುಲ್ಕ ನಿಯಮ ಜಾರಿಯಾಗಲಿದೆ. ಬೆಂಗಳೂರು ಕೇಂದ್ರ, ಉತ್ತರ, ಪೂರ್ವ ಹಾಗೂ ದಕ್ಷಿಣ ನಗರ ಪಾಲಿಕೆಗಳು ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಗೆ ಟೆಂಡರ್ ಕರೆದಿದ್ದು, ಕೇಂದ್ರ ನಗರ ಪಾಲಿಕೆಯ ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಕಸ್ತೂರಬಾ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಟೆಂಡರ್ ಆಹ್ವಾನಿಸಿತ್ತು. ಆದರೆ ಯಾವುದೇ ಬಿಡ್‌ದಾರರು ಭಾಗವಹಿಸದ ಹಿನ್ನೆಲೆ ಎರಡನೇ ಸಲ ಟೆಂಡರ್ ಆಹ್ವಾನಿಸಿದೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯು ವಿಧಾನಸಭಾ ಕ್ಷೇತ್ರವಾರು ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಗೆ ಟೆಂಡರ್ ಕರೆದಿದ್ದು, ಅನಿಯಂತ್ರಿತ ಪಾರ್ಕಿಂಗ್ ವ್ಯವಸ್ಥೆಯನ್ನು ಸರಿದಾರಿಗೆ ತರಲು ಮುಂದಾಗಿದೆ. ಸದ್ಯ ಜಯನಗರ ವಿಧಾನಸಭಾ ಕ್ಷೇತ್ರದ 42 ರಸ್ತೆಗಳಲ್ಲಿ ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರುತ್ತಿದೆ. ಆನಂತರ ಬಿಟಿಎಂ ಲೇಔಟ್, ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲೂ ಪಾರ್ಕಿಂಗ್ ವ್ಯವಸ್ಥೆಗೆ ಟೆಂಡರ್ ಕರೆಯಲು ತೀರ್ಮಾನಿಸಿದೆ.

914 ಕಾರು, 3,835 ದ್ವಿಚಕ್ರಗಳಿಗೆ ಅವಕಾಶ

ನಗರದ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಜಯನಗರದ ಬಹುತೇಕ ಎಲ್ಲ ರಸ್ತೆಗಳ ಬಹುಪಾಲು ಜಾಗವನ್ನು ವಾಹನಗಳು ಅತಿಕ್ರಮಿಸುತ್ತಿವೆ. ಇದರಿಂದಾಗಿ ಟ್ರಾಫಿಕ್ ಜಾಮ್ ಉಂಟಾಗುತ್ತಿದ್ದು, ಸಾಕಷ್ಟು ಸಮಸ್ಯೆಯಾಗುತ್ತಿದೆ. ವಾರಾಂತ್ಯದ ದಿನಗಳಲ್ಲಂತೂ ಈ ಸಮಸ್ಯೆ ಮತ್ತಷ್ಟು ಉಲ್ಬಣಿಸುತ್ತಿದೆ. ಹೀಗಾಗಿಯೇ ಕ್ಷೇತ್ರದ ಪ್ರಮುಖ 42 ರಸ್ತೆಗಳಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಒಟ್ಟು 31.7 ಕಿ.ಮೀ ಉದ್ದದ ರಸ್ತೆಗಳಲ್ಲಿ 914 ಕಾರುಗಳು ಹಾಗೂ 3,835 ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಬೆಂಗಳೂರಿನಾದ್ಯಂತ ಪೇ ಆ್ಯಂಡ್ ಪಾರ್ಕಿಂಗ್ ವ್ಯವಸ್ಥೆ ಜಾರಿಗೆ ತರಲು ಜಿಬಿಎ ಯೋಜನೆ ರೂಪಿಸುತ್ತಿದೆ.

ಕರ್ನಾಟಕ ಅಕೌಂಟೆಂಟ್ ಜನರಲ್ (ಲೆಕ್ಕಪರಿಶೋಧನೆ-1) ಕಚೇರಿಯಲ್ಲಿ ನಡೆದ ಕಾರ್ಯಾಗಾರದಲ್ಲಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾದ ಡಾ.ಟಿ.ನವೀನ್ ಅವರು ಕ್ಯಾನ್ಸರ್ ಕುರಿತು ಕಚೇರಿಯ ಸಿಬ್ಬಂದಿಗೆ ಅರಿವು ಮೂಡಿಸಿದರು. ಸಂಸ್ಥೆ ವೈದ್ಯರಾದ ಡಾ.ಯದುರಾಜ್, ಡಾ.ಮಹಾಂತೇಶ್, ಅಕೌಂಟೆಂಟ್ ಜನರಲ್ ಅಧಿಕಾರಿಗಳಾದ ಟಿ.ಎಂ.ಯಾಮಿನಿ, ವಿಜಯ್‌ಕುಮಾರ್, ಭಿವಾಪುರ್ಕರ್ ಅವರು ಇದ್ದರು.

ಬಿಸಿಲ ಬೇಗೆ ನಡುವೆಯೇ ಮಳೆರಾಯನ ಎಂಟ್ರಿ
ಮಾರ್ಚ್ 1ರಿಂದ ಬಿಸಿಲ ಧಗೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಬಿಸಿಲಿನ ವಾತಾವರಣದಿಂದಾಗಿ ಹಗಲಿನ ತಾಪಮಾನದಲ್ಲಿ ಏರಿಕೆಯಾಗುತ್ತಿದ್ದು, ಮಾರ್ಚ್1 ರಿಂದ ಅಧಿಕೃತವಾಗಿ ಬೇಸಿಗೆ ಕಾಲವು ಆರಂಭವಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆದರೆ ಈ ಬಾರಿ ಮಾರ್ಚ್ ಮಧ್ಯ ಭಾಗದಿಂದಲೇ ಹಗುರವಾದ ಮಳೆಯಾಗುವ ಸಾಧ್ಯತೆ ಇದ್ದು ನಗರದಲ್ಲಿ ಧಗೆ ವಿಪರೀತ ಮಟ್ಟಕ್ಕೆ ಹೋಗುವ ಸಾಧ್ಯತೆ ಇಲ್ಲ ಎಂದು ಇಲಾಖೆ ತಿಳಿಸಿದೆ.

ಫೆಬ್ರವರಿ ತಿಂಗಳಿನಲ್ಲಿ ಬೆಂಗಳೂರಿನ ಸರಾಸರಿ ತಾಪಮಾನವು 31 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದು, ಈ ವರ್ಷದ ಬೇಸಿಗೆಯಲ್ಲಿ ತಾಪಮಾನವು ಗರಿಷ್ಠ 39 ಡಿಗ್ರಿ ಸೆಲ್ಸಿಯಸ್‌ವರೆಗೆ ತಲುಪುವ ಸಾಧ್ಯತೆಯಿದೆ. ಮಂಗಳವಾರದಂದು ಹವಾಮಾನ ಇಲಾಖೆಯ ವೀಕ್ಷಣಾಲಯದಲ್ಲಿ ಗರಿಷ್ಠ ತಾಪಮಾನ 32.8 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ವಾಡಿಕೆಗಿಂತ ಹೆಚ್ಚು ಎನ್ನಲಾಗಿದೆ. ಮಾರ್ಚ್‌ನಲ್ಲಿ ತಾಪಮಾನವು 35-36 ಡಿಗ್ರಿ ಸೆಲ್ಸಿಯಸ್‌ವರೆಗೆ ಏರಿಕೆಯಾಗುವ ನಿರೀಕ್ಷೆಯಿದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಗರಿಷ್ಠ ತಾಪಮಾನವು 39 ಡಿಗ್ರಿ ಸೆಲ್ಸಿಯಸ್ ಮುಟ್ಟುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಮಾರ್ಚ್‌ನಿಂದಲೇ ಮಳೆ

ಮಾರ್ಚ್ 15ರಿಂದ ಹಗುರವಾದ ಮಳೆ ನಿರೀಕ್ಷಿಸಲಾಗಿದ್ದು, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಇದು ನಗರದ ಉಷ್ಣಾಂಶವನ್ನು ತಗ್ಗಿಸಲು ಸಹಕಾರಿಯಾಗಲಿದೆ. ಎಲ್ ನಿನೋ ಪ್ರಭಾವದಿಂದಾಗಿ ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಒಳನಾಡು ಮತ್ತು ಕರಾವಳಿ ಕರ್ನಾಟಕದಲ್ಲಿ ಈ ಬಾರಿ ವಾಡಿಕೆಗಿಂತ ಹೆಚ್ಚಿನ ಬೇಸಿಗೆ ಇರಲಿದೆ ಎಂದು ಹವಾಮಾನ ತಜ್ಞ ಸಿ.ಎಸ್.ಪಾಟೀಲ್ ಹೇಳಿದ್ದಾರೆ.

ತಾಪಮಾನ 40 ಡಿಗ್ರಿ ಸೆಲ್ಸಿಯಸ್ ಮೀರುವುದಿಲ್ಲ

2016ರಲ್ಲಿ ಬೆಂಗಳೂರಿನ ಇತಿಹಾಸದಲ್ಲೇ ಏಪ್ರಿಲ್ ತಿಂಗಳ ಗರಿಷ್ಠ ತಾಪಮಾನ 39.2 ಡಿಗ್ರಿ ಸೆಂಟಿಗ್ರೇಡ್ ಮತ್ತು 1931ರ ಮೇ ತಿಂಗಳಲ್ಲಿ ಗರಿಷ್ಠ 38.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಆದರೆ ಈ ವರ್ಷ ತಾಪಮಾನವು 40 ಡಿಗ್ರಿ ಸೆಲ್ಸಿಯಸ್ ತಲುಪುವ ಸಾಧ್ಯತೆ ಕಡಿಮೆ. ಬೆಂಗಳೂರು ನಗರಕ್ಕೆ ಒಂದು ಸಮಾಧಾನಕರ ಸುದ್ದಿಯೆಂದರೆ, ಇಲ್ಲಿ ಶಾಖದ ಅಲೆ ಉಂಟಾಗುವ ಸಾಧ್ಯತೆ ಇಲ್ಲ. ರಾಜ್ಯದ ಇತರ ಭಾಗಗಳಿಗಿಂತ ಮುಂಚಿತವಾಗಿಯೇ ಬೆಂಗಳೂರಿನಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ತಜ್ಞ ಸಿ.ಎಸ್.ಪಾಟೀಲ್ ಹೇಳಿದರು.

ಚಿಕ್ಕಪೇಟೆಯಲ್ಲಿ ಅಗ್ನಿ ದುರಂತ
20ಕ್ಕೂ ಹೆಚ್ಚು ಅಂಗಡಿಗಳು ಭಸ್ಮ

ಬೆಂಗಳೂರು: ಸಿಲಿಕಾನ್ ಸಿಟಿ ಬೆಂಗಳೂರಿನ ಅತ್ಯಂತ ಜನನಿಬಿಡ ಪ್ರದೇಶವಾದ ಚಿಕ್ಕಪೇಟೆಯ ಕುಂಬಾರಪೇಟೆಯಲ್ಲಿ ಭೀಕರ ಅಗ್ನಿ ದುರಂತ ಸಂಭವಿಸಿದೆ.

ಬುಧವಾರ (ಫೆ.25) ಕುಂಬಾರಪೇಟೆಯ ಹಾರ್ಡ್‌ವೇರ್ ಗೋದಾಮಿನಲ್ಲಿ ಮೊದಲು ಕಾಣಿಸಿಕೊಂಡ ಬೆಂಕಿ, ಅಲ್ಲಿ ಸಂಗ್ರಹಿಸಲಾಗಿದ್ದ ಪ್ಲಾಸ್ಟಿಕ್ ಪೈಪ್‌ಗಳು ಹಾಗೂ ಇತರೆ ದಹನಕಾರಿ ವಸ್ತುಗಳಿಂದಾಗಿ ವೇಗವಾಗಿ ಹರಡಿತು. ಪ್ಲಾಸ್ಟಿಕ್ ವಸ್ತುಗಳು ಉರಿಯುತ್ತಿರುವುದರಿಂದ ಇಡೀ ಪ್ರದೇಶದಲ್ಲಿ ದಟ್ಟವಾದ ಕಪ್ಪು ಹೊಗೆ ಆವರಿಸಿದ್ದು, ಸ್ಥಳೀಯರಿಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತು.

ವಿಷಯ ತಿಳಿದ ತಕ್ಷಣ ಸ್ಥಳಕ್ಕೆ 4 ಅಗ್ನಿಶಾಮಕ ವಾಹನಗಳು ಧಾವಿಸಿದ್ದು, ಬೆಂಕಿ ನಂದಿಸಲು ಸಿಬ್ಬಂದಿ ಸತತ ಪ್ರಯತ್ನ ನಡೆಸಿದರು. ಗೋದಾಮಿನಿಂದ ಆರಂಭವಾದ ಬೆಂಕಿ ಕೆಳಮಹಡಿಯ ಅಂಗಡಿಗಳಿಗೂ ಹರಡಿತ್ತು. ಸುಮಾರು 20ಕ್ಕೂ ಹೆಚ್ಚು ಅಂಗಡಿಗಳು ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಗುವ ಭೀತಿ ಎದುರಾಗಿತ್ತು. ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸರು ಕಟ್ಟಡದಲ್ಲಿದ್ದ ಜನರನ್ನು ಹಾಗೂ ಪಕ್ಕದ ಅಂಗಡಿಗಳ ವ್ಯಾಪಾರಿಗಳನ್ನು ತಕ್ಷಣವೇ ತೆರವುಗೊಳಿಸಿದರು. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಆದರೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿ ಹಾನಿಯಾಗಿರುವ ಶಂಕೆ ವ್ಯಕ್ತವಾಗಿದೆ.

ಶಾರ್ಟ್ ಸರ್ಕ್ಯೂಟ್ ಶಂಕೆ

ಕಳೆದ ಕೆಲವು ದಿನಗಳ ಹಿಂದಷ್ಟೇ ಇದೇ ಭಾಗದಲ್ಲಿ ನಡೆದ ಅಗ್ನಿ ಅವಘಡದಲ್ಲಿ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದರು. ಆ ಘಟನೆಯ ಭೀತಿ ಮಾಸುವ ಮುನ್ನವೇ ಮತ್ತೊಂದು ದೊಡ್ಡ ದುರಂತ ಸಂಭವಿಸಿರುವುದು ಸ್ಥಳೀಯ ನಿವಾಸಿಗಳಲ್ಲಿ ಆತಂಕ ಹೆಚ್ಚಿಸಿದೆ. ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣವೇನು ಎಂಬುದು ಇನ್ನೂ ತಿಳಿದುಬಂದಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದ ಈ ಅವಘಡ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ.

ಜಿಎಸ್‌ಟಿ ಅಧಿಕಾರಿಗಳ ಸೋಗಿನಲ್ಲಿ ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆಗಳ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ವ್ಯಾಪಾರಿಯನ್ನ ಬೆದರಿಸಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನ ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನಶಂಕರಿಯಲ್ಲಿರುವ ಸರಕು ಮತ್ತು ಸೇವಾ ತೆರಿಗೆಗಳ ಇಲಾಖೆಯ ಪ್ರಧಾನ ಆಯುಕ್ತರ ಕಚೇರಿಯಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದ ನಾಗರಾಜ್ ಹಾಗೂ ದಾದಾಪೀರ್ ಬಂಧಿತ ಆರೋಪಿಗಳು. ಆರೋಪಿಗಳು ನಕಲಿ ಐಡಿ ಕಾರ್ಡ್ ತೋರಿಸಿ ಗುಟ್ಕಾ ವ್ಯಾಪಾರಿಯಿಂದ 5 ಲಕ್ಷ ರು. ದೋಚಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬನಶಂಕರಿಯಲ್ಲಿರುವ ಜಿಎಸ್‌ಟಿ ಇಲಾಖೆಯ ಪ್ರಧಾನ ಆಯುಕ್ತರ ಕಚೇರಿಯಲ್ಲಿ ಇಬ್ಬರೂ ಆರೋಪಿಗಳು ಹೊರಗುತ್ತಿಗೆ ಆಧಾರದಲ್ಲಿ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು. ಸಿಎಲ್‌ಟಿಎಸ್ ಹಾಗೂ ಇಂಟಲಿಜೆನ್ಸ್ ಅಧಿಕಾರಿಗಳಂತೆ ನಕಲಿ ಐಡಿ ಕಾರ್ಡ್‌ಗಳನ್ನು ಮಾಡಿಸಿಕೊಂಡಿದ್ದ ಆರೋಪಿಗಳು, ಜನವರಿ 10ರಂದು ಪೀಣ್ಯದಲ್ಲಿ ಓರ್ವ ಗುಟ್ಕಾ ವ್ಯಾಪಾರಿಯನ್ನು ಬೆದರಿಸಿ 5 ಲಕ್ಷ ರು. ವಸೂಲಿ ಮಾಡಿದ್ದರು. ಆರೋಪಿತರ ಕಾರ್ಯವೈಖರಿ ಬಗ್ಗೆ ಅನುಮಾನಗೊಂಡ ಕಚೇರಿ ಅಧಿಕಾರಿಗಳು ಫೆ. 17ರಂದು ಅವರು ವಾಸವಿದ್ದ ಕಚೇರಿಯ ಕೊಠಡಿಯಲ್ಲಿ ತಪಾಸಣೆ ನಡೆಸಿದ್ದರು. ಪರಿಶೀಲನೆ ಸಂದರ್ಭದಲ್ಲಿ ನಕಲಿ ಐಡಿ ಕಾರ್ಡುಗಳು, ಸರ್ಚ್ ವಾರೆಂಟ್ ಪ್ರತಿಗಳು ಪತ್ತೆಯಾಗಿವೆ. ಕೂಡಲೇ ಜಿಎಸ್‌ಟಿ ಅಧಿಕಾರಿಗಳು ಬನಶಂಕರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಜಿಎಸ್‌ಟಿ ಅಧಿಕಾರಿಗಳು ನೀಡಿದ ದೂರಿನ ಆಧಾರದ ಮೇಲೆ ಇಬ್ಬರನ್ನೂ ಬಂಧಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 57/2026.

1. ಶ್ರೀಮತಿ ಮಂಚಮ್ಮ, ಬಿನ್. ಲೇಟ್ ಮಂಚಶೆಟ್ಟಿ, ವಯಸ್ಸು 81 ವರ್ಷ, ವಾಸ : ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು.
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ,
2. ಗ್ರಾಮ ಲೆಕ್ಕಿಗರು, ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
...ಎದುರುದಾರರು

ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1ನೇ ರಿಂದ 6ನೇ ಅರ್ಜಿದಾರರ ವಾರಸು ಸಹೋದರಿ ಮತ್ತು 4 ರಿಂದ 3ನೇ ಅರ್ಜಿದಾರರ ತಾಯಿಯವರಾದ ಶ್ರೀಮತಿ ಗೌರಮ್ಮ ಕೋಂ ಲೇಟ್ ಮಂಚಶೆಟ್ಟಿ ರವರು ದಿನಾಂಕ: 20.04.1990 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಮರಳೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 01.04.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 17ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.
ಅರ್ಜಿದಾರರ ಪರ ವಕೀಲರು:
ಎಸ್.ಆರ್. ಶಶಿಕುಮಾರ್, ವಕೀಲರು, ಕನಕಪುರ
ದಿನಾಂಕ : 17/02/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 58/2026.

1. ಶ್ರೀಮತಿ ಮಂಚಮ್ಮ, ಬಿನ್. ಲೇಟ್ ಮಂಚಶೆಟ್ಟಿ, ವಯಸ್ಸು 81 ವರ್ಷ, ವಾಸ : ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು.
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಿಗರು, ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
...ಎದುರುದಾರರು

ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1ನೇ ಮತ್ತು 9ನೇ ಅರ್ಜಿದಾರರ ತಾಯಿ, 3ನೇ ಅರ್ಜಿದಾರರ ಅತ್ತೆ ಮತ್ತು 4 ರಿಂದ 6ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ಚೌಡಮ್ಮ ಕೋಂ ಲೇಟ್ ಮಂಚಶೆಟ್ಟಿ ರವರು ದಿನಾಂಕ: 15.07.1988 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಮರಳೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 01.04.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 17ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.
ಅರ್ಜಿದಾರರ ಪರ ವಕೀಲರು:
ಎಸ್.ಆರ್. ಶಶಿಕುಮಾರ್, ವಕೀಲರು, ಕನಕಪುರ
ದಿನಾಂಕ : 17/02/2026

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶ ನಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ
ಸಿ.ಮಿಸ್ ನಂ : 59/2026.

1. ಶ್ರೀಮತಿ ಮಂಚಮ್ಮ, ಬಿನ್. ಲೇಟ್ ಮಂಚಶೆಟ್ಟಿ, ವಯಸ್ಸು 81 ವರ್ಷ, ವಾಸ : ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ, ಮತ್ತು ಇತರರು.
...ಅರ್ಜಿದಾರರು
ವಿರುದ್ಧ
1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಕನಕಪುರ, 2. ಗ್ರಾಮ ಲೆಕ್ಕಿಗರು, ಮರಳೆ ಗ್ರಾಮ, ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
...ಎದುರುದಾರರು

ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೇ, 1ನೇ ಮತ್ತು 9ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ಮಾವ ಮತ್ತು 4 ರಿಂದ 6ನೇ ಅರ್ಜಿದಾರರ ತಾತನವರಾದ ಶ್ರೀ ಮಂಚಶೆಟ್ಟಿ ಬಿನ್ ಲೇಟ್ ಮಂಚಶೆಟ್ಟಿ ರವರು ದಿನಾಂಕ: 14.08.1992 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿ, ಮರಳೆ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಇವರ ಮರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 01.04.2026 ರ ಬೆಳಗ್ಗೆ ಸರಿಯಾಗಿ 11:00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು
ದಿನಾಂಕ 17ನೇ ಫೆಬ್ರವರಿ 2026 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ.
ಅರ್ಜಿದಾರರ ಪರ ವಕೀಲರು:
ಎಸ್.ಆರ್. ಶಶಿಕುಮಾರ್, ವಕೀಲರು, ಕನಕಪುರ
ದಿನಾಂಕ : 17/02/2026

ಡಿಪಿಆರ್‌ಗೆ ಅನುಮೋದನೆ ದೊರೆಯುವ ಸಾಧ್ಯತೆ: ರಾಮ್ ಪ್ರಸಾತ್ ಮನೋಹರ್
ಕಾವೇರಿ 6ನೇ ಹಂತದ ಯೋಜನೆಗೆ ಸಿದ್ಧತೆ ಶುರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಜಲಮಂಡಳಿಯು ಕಾವೇರಿ 6ನೇ ಹಂತದ ಯೋಜನೆ ಜಾರಿಗೆ ಸಿದ್ಧತೆ ನಡೆಸಿದ್ದು, ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತ ಬಹುತೇಕ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ 6ನೇ ಹಂತದ ಯೋಜನೆ ಅನುಷ್ಠಾನಕ್ಕೆ ತೀರ್ಮಾನಿಸಲಾಗಿದೆ ಎಂದು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಆರನೇ ಹಂತದ ಯೋಜನೆ ಜಾರಿಗೆ ಸಿದ್ಧಪಡಿಸಿರುವ ಡಿಪಿಆರ್‌ಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆಯುವ ಸಾಧ್ಯತೆ ಇದೆ. ಈಗಾಗಲೇ 5ನೇ ಹಂತದ ಮೂಲಕ ನಗರಕ್ಕೆ ಒಟ್ಟು 2225 ಎಂಎಲ್‌ಡಿ ನೀರು ಪೂರೈಕೆ ಆಗುತ್ತಿದೆ. ಸುಮಾರು 1.50 ಕೋಟಿ ಜನರಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ, ಬಿಬಿಎಂಪಿಗೆ ಸೇರ್ಪಡೆಯಾದ ಹೊಸ ಪ್ರದೇಶಗಳ ಕುಡಿಯುವ ನೀರಿನ ಅಗತ್ಯವನ್ನು ಗಮನದಲ್ಲಿಟ್ಟು 6ನೇ ಹಂತ ರೂಪಿಸಲಾಗಿದೆ ಎಂದರು.

ಇವುಗಳಿಗೆ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಬೇಡಿಕೆಯಂತೆ ನೀರು ಹಂಚಿಕೆ ಮಾಡಲಾಗುತ್ತದೆ. ಕಟ್ಟೆರಿ ಗ್ರಾಮದ ಸಮೀಪ ನೀರು ಸಂಸ್ಕರಣಾ ಘಟಕದಲ್ಲಿ ಅಗತ್ಯ ನೀರು ಶೇಖರಣೆ ಗುರುತ್ವಾಕರ್ಷಣಾ ಬಲದಿಂದ ರಾಮನಗರದ ದೇವರ ಹೊಸಹಳ್ಳಿಗೆ ಹರಿವು ಬಳಿಕ ಕೆಂಗೇರಿ ಶೇಖರಣಾ ಸಂಗ್ರಹಗಾರಕ್ಕೆ ಪಂಪಿಂಗ್ ಮೂಲಕ ನೀರು ಶೇಖರಣೆ ಮಾಡಲಾಗುವುದು. ಅಲ್ಲಿಂದ ವಿವಿಧ ಬಡಾವಣೆಗಳಿಗೆ ಪೂರೈಕೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ನಗರ ಹೊರ ಭಾಗದಲ್ಲಿನ ನೀರಿನ ಸಮಸ್ಯೆ ನೀಗಿಸಲು ಕಾವೇರಿ 6ನೇ ಹಂತದ ಯೋಜನೆ ರೂಪಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆ ದೊರೆತತೆ ತಕ್ಷಣವೇ ಆರ್ಥಿಕ ನೆರವು ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳು ಆರಂಭವಾಗುವ ಸಾಧ್ಯತೆ ಇದೆ.
- ರಾಮ್ ಪ್ರಸಾತ್ ಮನೋಹರ್
ಜಲಮಂಡಳಿ ಅಧ್ಯಕ್ಷ

ಯೋಜನೆ ಪ್ರಮುಖಾಂಶ

- ಒಟ್ಟು 6 ಟಿಎಂಸಿ ನೀರು
- ಅಂದಾಜು ವೆಚ್ಚ - 6,939 ಕೋಟಿ.
- ಯೋಜನಾ ವೆಚ್ಚ-5,177 ಕೋಟಿ.
- ಭೂಸ್ವಾಧೀನ 130 ಎಕರೆ - 1,822 ಕೋಟಿ

ಯಾವ ಪ್ರದೇಶಗಳಿಗೆ ಲಾಭ

ನಾಡಪ್ರಭು ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆ, ದೇವನಹಳ್ಳಿ, ಹೊಸಕೋಟೆ, ಹುಣಸಮಾರನಹಳ್ಳಿ, ಮಾದನಾಯಕನಹಳ್ಳಿ, ನೆಲಮಂಗಲ, ಚಿಕ್ಕಬಾಣಾವಾರ ಪ್ರದೇಶಗಳಿಗೆ ಲಾಭವಾಗಲಿದೆ.

ಮರಕ್ಕೆ ಬೈಕ್ ಡಿಕ್ಕಿ ಇಬ್ಬರು ಸಾವು

ಬೆಂಗಳೂರು: ಬುಲೆಟ್ ಬೈಕ್‌ನಲ್ಲಿ ತ್ರಿಬಲ್ ರೈಡ್ ಹೋಗುತ್ತಿದ್ದಾಗ ಮರಕ್ಕೆ ಡಿಕ್ಕಿಯಾಗಿ ಇಬ್ಬರು ಸಾವನ್ನಪ್ಪಿರುವ ಘಟನೆ ಯಲಹಂಕ ನ್ಯೂ ಟೌನ್ ಉನ್ನಿಕೃಷ್ಣನ್ ಜಂಕ್ಷನ್ ಬಳಿ ನಡೆದಿದೆ.

ಕಿರಣ್ (25) ಮತ್ತು ಯಶವಂತ್ (25) ಮೃತರು. ಬೈಕ್‌ನಲ್ಲಿದ್ದ ಹಿಂಬದಿ ಸವಾರ ಗೌತಮ್ ಎಂಬುವವರು ಗಾಯಗೊಂಡಿದ್ದಾರೆ. ಮಂಗಳವಾರ (ಫೆ.24) ರಾತ್ರಿ 1 ಗಂಟೆ ಸುಮಾರಿಗೆ ಬುಲೆಟ್ ಬೈಕ್‌ನಲ್ಲಿ ಯುವಕರು ಹೆಲ್ಮೆಟ್ ಧರಿಸದೇ ತ್ರಿಬಲ್ ರೈಡಿಂಗ್ ಹೊರಟಿದ್ದರು. ಈ ವೇಳೆ ಮರಕ್ಕೆ ಡಿಕ್ಕಿಯಾಗಿ ಬೈಕ್ ಪಲ್ಟಿಯಾಗಿದೆ. ಪರಿಣಾಮ ಬುಲೆಟ್ ಬೈಕ್ ಓಡಿಸುತ್ತಿದ್ದ ಕಿರಣ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನೋರ್ವ ಯುವಕ ಯಶವಂತ್ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಮತ್ತೊಬ್ಬ ಯುವಕ ಗೌತಮ್ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಿದ್ದಾರೆ. ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯಲಹಂಕ ಸರಕಾರಿ ಆಸ್ಪತ್ರೆಗೆ ಮೃತದೇಹ ರವಾನಿಸಲಾಯಿತು.

ಸಮಾಚಾರ ಸಣ್ಣದಲ್ಲ

ಜಾರ್ ಆ್ಯಪ್ ಮೇಲೆ ಸಿಐಡಿ ಘಟಕ ದಾಳಿ

ಬೆಂಗಳೂರು: ಜನಪ್ರಿಯ ಡಿಜಿಟಲ್ ಚಿನ್ನದ ಹೂಡಿಕೆ ವೇದಿಕೆಯಾದ 'ಜಾರ್' ಆ್ಯಪ್ ಸಂಸ್ಥೆಯ ಮೇಲೆ ಕರ್ನಾಟಕದ ಸಿಐಡಿಯಲ್ಲಿ ಬರುವ 'ಠೇವಣಿ ವಂಚನೆ ತನಿಖಾ ಘಟಕ' ದಾಳಿ ನಡೆಸಿದೆ. ಕಂಪನಿಯು ಕೆಲವು ನಿಯಮಗಳನ್ನು ಉಲ್ಲಂಘಿಸಿ ರುವ ಸಾಧ್ಯತೆಯ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಗ್ರಾಹಕರು ಹೂಡಿಕೆ ಮಾಡುವ ಚಿನ್ನವನ್ನು ಕಂಪನಿಯು ಹೇಗೆ ಸಂಗ್ರಹಿಸಿಡುತ್ತಿದೆ. ಗ್ರಾಹಕರ ಹಿತರಕ್ಷಣೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಕಸ್ಟಡಿಯಲ್ ವ್ಯವಸ್ಥೆಗಳ ಬಗ್ಗೆ ಸ್ಪಷ್ಟತೆ ಪಡೆಯಲು ಸಿಐಡಿ ತನಿಖೆ ನಡೆಸುತ್ತಿದೆ. ತನ್ನಲ್ಲಿರುವ ಭೌತಿಕ ಚಿನ್ನವನ್ನು ಜಾಗತಿಕ ಭದ್ರತಾ ಸಂಸ್ಥೆಯಾದ 'ಬ್ರಿಂಕ್ಸ್' ನಿರ್ವಹಿಸುವ ಸುರಕ್ಷಿತ ವಾಲ್ಟ್ ಗಳಲ್ಲಿ ಇರಿಸಲಾಗಿದೆ. ಈ ಚಿನ್ನಕ್ಕೆ ಐಸಿಐಸಿಐ ಲೊಂಬಾರ್ಡ್ ವಿಮೆ ಒದಗಿಸಿದೆ ಎಂದು ಕಂಪನಿ ಈ ಹಿಂದೆ ತಿಳಿಸಿತ್ತು. ಈ ಪ್ರಕರಣ ಸದ್ಯ ನ್ಯಾಯಾಲಯದ ವ್ಯಾಪ್ತಿಯಲ್ಲಿರುವು ದರಿಂದ ಪ್ರತಿಕ್ರಿಯಿಸಲು ಕಂಪನಿ ನಿರಾಕರಿಸಿದೆ. ಬೆಂಗಳೂರು ಮೂಲದ ಈ ಸ್ಟಾರ್ಟ್‌ಅಪ್, ಗ್ರಾಹಕರಿಗೆ ಸಣ್ಣ ಮೊತ್ತದ ಮೂಲಕ ಡಿಜಿಟಲ್ ಚಿನ್ನದ ಮೇಲೆ ಹೂಡಿಕೆ ಮಾಡಲು ಅವಕಾಶ ನೀಡುತ್ತದೆ. ಡಿಜಿಟಲ್ ಚಿನ್ನದ ಮಾರಾಟವು ದೇಶದಲ್ಲಿ ಭಾರಿ ಜನಪ್ರಿಯತೆ ಗಳಿಸುತ್ತಿರುವ ಸಮಯದಲ್ಲಿ ಈ ದಾಳಿ ನಡೆದಿದೆ. 2026ರ ಜನವರಿಯಲ್ಲಿ ಯುಪಿಐ ಮೂಲಕ ಡಿಜಿಟಲ್ ಚಿನ್ನದ ಮಾರಾಟವು ದಾಖಲೆಯ ₹3,926 ಕೋಟಿಗೆ ತಲುಪಿದೆ. ಕಳೆದ ವರ್ಷಕ್ಕೆ (2025) ಹೋಲಿಸಿದರೆ ಇದು 4 ಪಟ್ಟು ಹೆಚ್ಚಳವಾಗಿದೆ.

ಮಂಡ್ಯದಲ್ಲಿ 1844 ಅಕ್ರಮ ಇ-ಖಾತಾ ವಿತರಣೆ ಬಯಲು

ಇ-ಖಾತಾ ಹಗರಣ: ನಾಲ್ವರ ಅಮಾನತು

ಬೆಂಗಳೂರು: ಇಂಡುವಾಳು ಗ್ರಾಮ ಪಂಚಾಯಿತಿಯಲ್ಲಿ 1,844 ಇ-ಖಾತಾಗಳನ್ನು ನಿಯಮಬಾಹಿರವಾಗಿ ವಿತರಿಸಿದ್ದಕ್ಕೆ ಮೂವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಎರಡನೇ ವಿಭಾಗದ ಸಹಾಯಕ ಸೇರಿದಂತೆ ನಾಲ್ವರು ಅಧಿಕಾರಿಗಳನ್ನು ಮಂಡ್ಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಮಾನತುಗೊಳಿಸಿದ್ದಾರೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ ವೀರಪ್ಪ ಅವರು ನೀಡಿದ ಆದೇಶದ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ. ವಿತರಣೆಯಾಗಿರುವ ಒಟ್ಟು 1,929 ಇ-ಖಾತಾಗಳ ಪೈಕಿ ಶೇ 4 ರಷ್ಟು ಅಂದರೆ ಕೇವಲ 85 ಇ-ಖಾತಾಗಳು ಮಾತ್ರ ಕಾನೂನುಬದ್ಧವಾಗಿದ್ದು, ಉಳಿದ ಶೇ 96 ರಷ್ಟು ಅಕ್ರಮವೆಂದು ಕಂಡುಬಂದಿದೆ. ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ಅಡಿಯಲ್ಲಿ ಸಿಇಒ ಇಂಡುವಾಳು ಗ್ರಾಮ ಪಂಚಾಯತಿಯ ಪಿಡಿಒಗಳನ್ನು ಅಮಾನತುಗೊಳಿಸಿದ್ದಾರೆ.

ಮೂವರು ಪಿಡಿಒಗಳಾದ ಎಎಸ್ ಸಿದ್ದರಾಜು, ದಯಾನಂದ ಮತ್ತು ಮರಿಲಿಂಗಯ್ಯ ಎಸ್, ವಿವಿಧ ಗ್ರಾಮ ಪಂಚಾಯತಿ ಗಳಲ್ಲಿ ಕೆಲಸ ಮಾಡುತ್ತಿದ್ದು, ದ್ವಿತೀಯ ದರ್ಜೆ ಲೆಕ್ಕ ಸಹಾಯಕಿ ರಾಣಿ ಎಚ್ ಆರ್ ಎಂಬುವವರು ಅಮಾನತುಗೊಂಡಿದ್ದಾರೆ. ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದೆ.

2021 ರಿಂದ 2025ರವರೆಗೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗಳಿಗೆ ಸೇರಿದ ಇಷ್ಟೊಂದು ಅಕ್ರಮ ಇ-ಖಾತಾಗಳನ್ನು ಹೇಗೆ ನೀಡಲಾಗಿದೆ ಎಂಬುದರ ವಿವರಗಳನ್ನು ಒದಗಿಸುವಂತೆ ನ್ಯಾಯಮೂರ್ತಿ ವೀರಪ್ಪ ಅವರು ಸಿಇಒಗೆ ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆಸಿ, ವರದಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ.

'ಸರ್ಕಾರದ ಅನುಮೋದನೆಯಿಲ್ಲದೆ ಸರ್ಕಾರಿ ಗೋಮಾಳಕ್ಕೆ ಸಂಬಂಧಿಸಿದಂತೆ ಎಷ್ಟು ಇ-ಖಾತಾಗಳನ್ನು ಮಾಡಲಾಗಿದೆ ಎಂಬುದರ ಕುರಿತು ಅಧಿಕಾರಿಗಳು ಪರಿಶೀಲಿಸಬೇಕು ಮತ್ತು ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸಬೇಕು' ಎಂದು ಅವರು ಆದೇಶಿಸಿದರು.

'1844 ಅಕ್ರಮ ಇ-ಖಾತಾಗಳನ್ನು ಸೃಷ್ಟಿಸಿದವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ಕೇವಲ ಅಮಾನತುಗೊಳಿಸಿದರೆ ಸಾಕಾಗುವುದಿಲ್ಲ. ಗಂಭೀರ ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಮಂಡ್ಯ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿ ಇದನ್ನು ಮಂಡ್ಯಾ ಜಿಲ್ಲಾ ಪಂಚಾಯಿತಿ ಸಿಇಒ ಗಮನಕ್ಕೆ ತರುವಂತೆ ಉಪ ಲೋಕಾಯುಕ್ತರು ತಮ್ಮ ಆದೇಶದಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

'ಕಿರಂಗದೂರು ಗ್ರಾಮದ ಸರ್ವೆ ನಂ.26ರಲ್ಲಿ 17 ಕುಂಟೆ ಗೋಮಾಳ ಜಮೀನಿದೆ. ಯಾವುದೇ ಮಂಜೂರಾತಿ ಇಲ್ಲದೆ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯಾಗದಿರುವ ಸರ್ಕಾರಿ ಜಮೀನಿನಲ್ಲಿ ಒಟ್ಟು 12 ನಿವೇಶನಗಳನ್ನು ವಿಜಯ್‌ಕುಮಾರ್ ಬಿನ್ ಚೆನ್ನಪ್ಪ ಎಂಬುವವರ ಹೆಸರಿಗೆ ಖಾತೆ ಮಾಡಲಾಗಿದೆ. ನಂತರ ಒಂದೇ ತಿಂಗಳಲ್ಲಿ ಬೇರೆಯವರಿಗೆ ಖಾತೆ ವರ್ಗಾವಣೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ಕಂದಾಯ ಭೂಮಿ ರಕ್ಷಿಸುವುದು ತಹಶೀಲ್ದಾರ್ ಹೊಣೆ. ಆದರೆ, ಕಿರಂಗದೂರು ಗ್ರಾಮದ ಸರ್ವೆ ಸಂಖ್ಯೆ 26 ರಲ್ಲಿರುವ ಗೋಮಾಳ ಭೂಮಿಯನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಶ್ರದ್ಧೆಯಿಂದ ವರ್ತಿಸಿಲ್ಲ ಎಂದು ಉಪ ಲೋಕಾಯುಕ್ತರು ಹೇಳಿದ್ದಾರೆ.

'ಮಂಡ್ಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಿಇಒ ಕೂಡ 12 ಅಕ್ರಮ ಖಾತಾಗಳ ರದ್ದತಿ ಬಗ್ಗೆ ವರದಿ ಮಾಡಿಲ್ಲ. ಪಂಚಾಯತ್ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಆ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಕಣ್ಣು ಮುಚ್ಚಿಕೊಂಡಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಸೆಕ್ಷನ್ 232 ರ ಅಡಿಯಲ್ಲಿ ಮಂಡ್ಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ನಿಷ್ಕ್ರಿಯತೆಯ ವಿರುದ್ಧ ಸಿಇಒ ಕ್ರಮ ಕೈಗೊಳ್ಳಬೇಕು' ಎಂದು ಉಪ ಲೋಕಾಯುಕ್ತರು ಸೂಚಿಸಿದ್ದಾರೆ.

'ಕಿರಂಗದೂರು ಗ್ರಾಮದ ಸರ್ವೆ ಸಂಖ್ಯೆ 26, 187 ಮತ್ತು 193 ಗೋಮಾಳ ಭೂಮಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಫಲಾನುಭವಿಗಳಿಗೆ ನೀಡಿದ ಮೂಲ ಭೂ ಮಂಜೂರಾತಿಗಳ ಬಗ್ಗೆ ಮತ್ತು ಇಂಡುವಾಳ ಗ್ರಾಮ ಪಂಚಾಯಿತಿಯಿಂದ ನೀಡಲಾದ ನಕಲಿ ಇ-ಖಾತಾಗಳ ಬಗ್ಗೆ ತಹಶೀಲ್ದಾರ್ ವಿವರವಾದ ವರದಿ ಸಲ್ಲಿಸಿಲ್ಲ. ಆದ್ದರಿಂದ, ಮಂಡ್ಯ ಜಿಲ್ಲಾಧಿಕಾರಿ ಸಹಾಯಕ ಆಯುಕ್ತರ ಹುದ್ದೆಗಿಂತ ಕಡಿಮೆಯಿಲ್ಲದ ಅಧಿಕಾರಿಯಿಂದ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು' ಎಂದು ಲೋಕ ಉಪಯುಕ್ತರು ಆದೇಶಿಸಿದ್ದಾರೆ.

ಉದ್ಯೋಗಾಂಕ್ಷಿಗಳು ಬಿಜೆಪಿ ಮಾತು ಕೇಳಿ ಎಫ್‌ಐಆರ್ ಹಾಕಿಸಿಕೊಳ್ಳಬೇಡಿ

ಬೆಂಗಳೂರು: ಉದ್ಯೋಗಾಂಕ್ಷಿಗಳು ಬಿಜೆಪಿಯವರ ಮಾತು ಕೇಳಿ ಎಫ್‌ಐಆರ್ ಹಾಕಿಸಿಕೊಂಡು ಕೋರ್ಟ್‌ಗೆ ಅಲೆದಾಟ ಮಾಡಬೇಡಿ ಎಂದು ಉದ್ಯೋಗಾಂಕ್ಷಿಗಳಿಗೆ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಕಿವಿಮಾತು ಹೇಳಿದ್ದಾರೆ.

ಧಾರವಾಡದಲ್ಲಿ ಮಂಗಳವಾರ ಉದ್ಯೋಗಾಂಕ್ಷಿಗಳ ಪ್ರತಿಭಟನೆ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ನಿನ್ನೆ ಯುವಕರು ಉದ್ಯೋಗಕ್ಕಾಗಿ ಪ್ರತಿಭಟನೆ ಮಾಡಿದ್ರು. ಕರ್ನಾಟಕದ ಯುವಕರಿಗೆ ವಿನಂತಿ ಮಾಡುತ್ತೇನೆ. ನಿಮ್ಮ ಪರವಾಗಿ ನಮ್ಮ ಸರಕಾರ ಇದೆ. ನಿಮ್ಮ ಭವಿಷ್ಯ ನಮಗೆ ಮುಖ್ಯ. ಇದಕ್ಕಾಗಿಯೇ ವಯಸ್ಸಿನ ಮಿತಿ ಜಾಸ್ತಿ ಮಾಡಿದ್ದೆವು. ಕಾನೂನಿನಲ್ಲಿ ಕೆಲವು ಪ್ರೊಸೀಜರ್ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಆದಷ್ಟು ಬೇಗ ನೇಮಕಾತಿ ಮಾಡುತ್ತೇವೆ ಅಂತ ಸಿಎಂ ಅವರು ಭರವಸೆ ಕೊಟ್ಟಿದ್ದಾರೆ. ಗೃಹ ಸಚಿವರೂ ಹೇಳಿದ್ದಾರೆ ಎಂದರು.

ನಿಮ್ಮ ಜತೆ ನಾವು ಇದ್ದೇವೆ. ಹೋರಾಟ ಮಾಡೋದು ತಪ್ಪು ಅಂತ ಹೇಳೋದಿಲ್ಲ. ಶಾಂತಿಯುತ ಹೋರಾಟ ಮಾಡಿ. ಅಗ್ರೆಸಿವ್ ಆಗಿ ಎಫ್‌ಐಆರ್ ದಾಖಲು ಮಾಡೋ ಹಂತಕ್ಕೆ ಹೋಗಬೇಡಿ. ಎಫ್ ಐಆರ್ ಆದ್ರೆ ನಾಳೆ ಕೆಲಸಕ್ಕೆ ತೊಂದರೆ ಆಗುತ್ತದೆ. ಶಾಂತಿಯುತವಾಗಿ ಪ್ರತಿಭಟನೆ ಮಾಡಿ. ಕೆಲಸ ಆಗೋ ಟೈಂನಲ್ಲಿ ಎಫ್ ಐಆರ್ ಹಾಕಿಸಿಕೊಂಡು ಕೋರ್ಟ್‌ಗೆ ಸುತ್ತಬೇಡಿ. ಶಾಂತಿಯುತ ಪ್ರತಿಭಟನೆ ಮಾಡಿ. ನಿಮ್ಮ ಜತೆ ನಾವು ಇದ್ದೇವೆ ಎಂದು ಹೇಳಿದರು.

ಬಿಜೆಪಿ ಅವರು ರಾಜಕೀಯ ಮಾಡುತ್ತಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಾಗ ಇದು ನೆನಪಿಗೆ ಬರಲಿಲ್ಲ. ಬೆಲ್ಲದ್ ಅವರು ಪ್ರತಿಭಟನೆಗೆ ಹೋಗುತ್ತಾರೆ. ಬೆಲ್ಲದ್ ಅವರೇ ನಿಮ್ಮ ಸರಕಾರ ಇದ್ದಾಗ ಯಾಕೆ ನೇಮಕಾತಿ ಮಾಡಿಕೊಂಡಿಲ್ಲ? ಯಡಿಯೂರಪ್ಪ, ಬೊಮ್ಮಾಯಿ ಇದ್ದಾಗ ಯಾಕೆ ನೇಮಕಾತಿ ಮಾಡಿಲ್ಲ. ಅಶೋಕಣ್ಣ ಒಬೆರಾಯನ ಕಾಲದಲ್ಲಿ ನೇಮಕಾತಿ ಮಾಡಿರೋದು ಮಾತಾಡಬೇಡಿ. 3-4 ವರ್ಷ ಇದ್ದಾಗ ಯಾಕೆ ನೇಮಕಾತಿ ಮಾಡಿಲ್ಲ. ನಾವು ಬಂದು 2.5 ವರ್ಷ ಆಯಿತು. ಬಿಜೆಪಿ ಅಧಿಕಾರದಲ್ಲಿ ಯಾಕೆ ಮಾಡಲಿಲ್ಲ? ಯುವಕರಿಗೆ ಕೇಳ್ತೀನಿ, ಇದರಲ್ಲಿ ರಾಜಕೀಯ ತರಬೇಡಿ. ವಿರೋಧ ಪಕ್ಷದವರ ನಿಮ್ಮನ್ನ ಎತ್ತಿಕಟ್ಟೋ ಕೆಲಸ ಮಾಡುತ್ತಾರೆ. ನಿಮಗೆ ಸಮಸ್ಯೆ ಆದ್ರೆ ಅಶೋಕ್, ಬೆಲ್ಲದ್ ಯಾರೂ ಬರಲ್ಲ. ಯುವಕರನ್ನ ಉದ್ವೇಗ ಮಾಡೋಕೆ ಬಿಜೆಪಿ ಯವರು ಹೇಳ್ತಾ ಇದ್ದಾರೆ. ಯುವಕರು ಅವರ ಮಾತು ನಂಬಬೇಡಿ ಎಂದರು.

ನಾವು ಹೊಸ ನೇಮಕ ಮಾಡಲ್ಲ ಅಂತ ಅಲ್ಲ. ಎಫ್‌ಡಿಗೆ ನೇಮಕಾತಿಗೆ ಕಳಿಸಿದ್ದೇವೆ.

5.7 ಕೋಟಿ ರೂ ಹಣ ಹಿಂದಿರುಗಿಸಿ: ಮಾಜಿ ಪತ್ನಿಗೆ ಕೋರ್ಟ್ ಸೂಚನೆ!

ಶಿಖರ್ ಧವನ್‌ಗೆ ಬಿಗ್ ಮನಿ ರಿಲೀಫ್

ದೆಹಲಿ: ಅಚ್ಚರಿ ಬೆಳವಣಿಗೆಯಲ್ಲಿ ಮಾಜಿ ಕ್ರಿಕೆಟಿಗ ಶಿಖರ್ ಧವನ್ ಅವರ ಮಾಜಿ ಪತ್ನಿ ಆಯೇಷಾ ಮುಖರ್ಜಿ ಅವರು 5.7 ಕೋಟಿ ರೂಪಾಯಿಗಳನ್ನು ಹಿಂದಿರುಗಿಸುವಂತೆ ಕೋರ್ಟ್ ಆದೇಶ ನೀಡಿದೆ.

ಖರ್ ಧವನ್ ಆಯೆಷಾಗೆ ವಿಚ್ಛೇದನದ ನಂತರ ಪರಿಹಾರವಾಗಿ ಈ ಹಣ ನೀಡಿದ್ದರು. ಆದರೆ ದೆಹಲಿಯ ಪಾಟಿಯಾಲಾ ಹೌಸ್ ಕೋರ್ಟ್ ಧವನ್ ಅವರು ಆಸ್ತಿ ವಸಾಹತು ರೂಪದಲ್ಲಿ ನೀಡಿದ ಈ ಮೊತ್ತವು ಭಾರತೀಯ ಕಾನೂನಿನ ಪ್ರಕಾರ ಸರಿಯಾಗಿಲ್ಲ ಎಂದು ತೀರ್ಪು ನೀಡಿದೆ. ಆಸ್ಟ್ರೇಲಿಯಾದ ಕುಟುಂಬ ನ್ಯಾಯಾಲಯದ ತೀರ್ಪು ಭಾರತಕ್ಕೆ ಅನ್ವಯಿಸುವುದಿಲ್ಲ ಎಂದು ಹೇಳಿ ಆ ಹಣವನ್ನು ಹಿಂದಿರುಗಿಸುವಂತೆ ಆದೇಶ ನೀಡಿದೆ.

ವರದಿಯ ಪ್ರಕಾರ, ಆಸ್ಟ್ರೇಲಿಯಾದ ನ್ಯಾಯಾಲಯದ ತೀರ್ಪಿನ ಪ್ರಕಾರ ದೆಹಲಿಯ ಕುಟುಂಬ ನ್ಯಾಯಾಲಯದ ನ್ಯಾಯಾಧೀಶ ದೇವೇಂದ್ರ ಕುಮಾರ್ ಗಾರ್ಗ್ ಅವರು ಶಿಖರ್

ಧವನ್ ಅವರಿಂದ ಆಯೇಷಾ 16.9 ಕೋಟಿ ರೂಪಾಯಿಗಳನ್ನು ಒತ್ತಾಯಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

1975 ರ ಭಾರತೀಯ ಕುಟುಂಬ ಕಾಯ್ದೆ, 1975 ರ ಅಡಿಯಲ್ಲಿ, ಆಸ್ತಿ ಇತ್ಯರ್ಥದ ನಿಯಮವು ಭಾರತೀಯ ವೈವಾಹಿಕ ಕಾನೂನು ಮತ್ತು ಹಿಂದೂ ವಿವಾಹ ಕಾಯ್ದೆ 1955 ರೊಂದಿಗೆ ಸೇರಿಕೊಳ್ಳುತ್ತದೆ. ಆದ್ದರಿಂದ, ಆಯೆಷಾ ಅವರು ತೆಗೆದುಕೊಂಡ ಆಸ್ತಿ ವಸಾಹತು ನಿಯಮಗಳ ಅಡಿಯಲ್ಲಿ 5.7 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿದ್ದಾರೆ. ಅದನ್ನು ಶಿಖರ್ ಧವನ್ಗೆ ಹಿಂದಿರುಗಿಸಬೇಕಾಗುತ್ತದೆ ಎಂದು ತೀರ್ಪು ನೀಡಿದೆ.

ಆಸ್ಟ್ರೇಲಿಯಾದ ಕಾನೂನಿನ ಪ್ರಕಾರ, ಎಲ್ಲಾ ಗಂಡನ ಆಸ್ತಿಯನ್ನು ಆಸ್ಟ್ರೇಲಿಯಾದ ಕಾನೂನಿನಡಿಯಲ್ಲಿ ಮರೈಟಲ್ ಪೂಲ್‌ನಲ್ಲಿ ಪರಿಗಣಿಸಲಾಗುತ್ತದೆ. ಅದೇ ಕಾನೂನಿನ ಪ್ರಕಾರ, ಆಸ್ಟ್ರೇಲಿಯಾದ ನ್ಯಾಯಾಲಯವು ಭಾರತ ಮತ್ತು ವಿದೇಶಗಳಲ್ಲಿನ ಎಲ್ಲಾ ಆಸ್ತಿಗಳಲ್ಲಿ ಶೇಕಡಾ 60 ರಷ್ಟು ಅವರ ಪತ್ನಿ ಆಯೆಷಾ ಅವರಿಗೆ ನೀಡಲು ಆದೇಶಿಸಿತ್ತು. ಆಸ್ಟ್ರೇಲಿಯಾದ ನ್ಯಾಯಾಲಯವು 1975 ರ ಕಾಯಿದೆಯ ಸೆಕ್ಷನ್ 79 ಅನ್ನು ಧವನ್ ಗಾಗಿ ಬಳಸಿತ್ತು ಮತ್ತು ಆಸ್ತಿಯನ್ನು ಮಾರಾಟ ಮಾಡಲು ಮತ್ತು 8.12 ಲಕ್ಷ ಆಸ್ಟ್ರೇಲಿಯನ್ ಡಾಲರ್ ಪಾವತಿಸಲು ಆದೇಶಿಸಿತ್ತು.

ಆಸ್ಟ್ರೇಲಿಯಾ ಆದೇಶ

ಆಸ್ಟ್ರೇಲಿಯಾ ಆದೇಶದ ಬಗ್ಗೆ ದೆಹಲಿ ನ್ಯಾಯಾಲಯ ಸೋಮವಾರ ತನ್ನ ತೀರ್ಪನ್ನು ಕಾಯ್ದಿರಿಸಿದ್ದು, ಆಯೆಷಾ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಮತ್ತು ಆಸ್ಟ್ರೇಲಿಯಾದ ನ್ಯಾಯಾಲಯವು ಧವನ್ ವಿರುದ್ಧ ಏಕಪಕ್ಷೀಯ ತೀರ್ಪು ನೀಡಿದೆ ಎಂದು ಹೇಳಿದೆ.

ಧವನ್ ಅವರು ತಮ್ಮ ಎಲ್ಲಾ ಆಸ್ತಿಗಳನ್ನು ಆಸ್ಟ್ರೇಲಿಯಾದಲ್ಲಿ ಮಾರಾಟ ಮಾಡಬೇಕು. ಅವರ ಪತ್ನಿ ಆಯೇಷಾ ಅವರಿಗೆ ಎಲ್ಲಾ ಹಣವನ್ನು ನೀಡಬೇಕು ಎಂದು ಆಸ್ಟ್ರೇಲಿಯಾ ನ್ಯಾಯಾಲಯ ಹೇಳಿತ್ತು. ಧವನ್ ಅವರು 82 ಸಾವಿರ ರೂಪಾಯಿಗಳನ್ನು ಬಲವಂತವಾಗಿ ಪಾವತಿಸಬೇಕಾಗಿತ್ತು ಎಂದು ದೆಹಲಿ ಕುಟುಂಬ ನ್ಯಾಯಾಲಯ ಕಂಡುಹಿಡಿದಿದೆ. ಆಯೆಷಾಗೆ ಆಸ್ತಿಯನ್ನು ಮಾರಾಟ ಮಾಡಿದ ನಂತರ ಧವನ್ ಅವರಿಗೆ 5.70 ಕೋಟಿ ರೂಪಾಯಿಗಳನ್ನು ಹಿಂದಿರುಗಿಸುವಂತೆ ನ್ಯಾಯಾಲಯ ಆದೇಶಿಸಿದೆ.

ಅಂಬಾನಿ ಕುಡಿಗೆ ಮತ್ತೊಂದು ಸಂಕಷ್ಟ, 'ಅಬೋಡ್' ಮೇಲೆ ಬಿತ್ತು ಇಡಿ ಕಣ್ಣು
ಇಡಿಯಿಂದ ಅನಿಲ್ ಅಂಬಾನಿ ಸಮೂಹದ 15000 ಕೋಟಿ ರು. ಆಸ್ತಿ ವಶ

ಅನಿಲ್ 3800 ಕೋಟಿ ರು. ಮನೆ ಮುಟ್ಟುಗೋಲು

ಮುಂಬೈ: ಮುಂಬೈನಿಂದ ದೇಶದ ವಾಣಿಜ್ಯ ವಲಯದ ಮಹತ್ವದ ಸುದ್ದಿ ಹೊರಬಂದಿದೆ. ಕೈಗಾರಿಕೋದ್ಯಮಿ ಅನಿಲ್ ಅಂಬಾನಿ ಅವರ ಮುಂಬೈನಲ್ಲಿರುವ 'ಅಬೋಡ್' ನಿವಾಸದ ಮೇಲೆ ಇಡಿ (ಜಾರಿ ನಿರ್ದೇಶನಾಲಯ) ತಾತ್ಕಾಲಿಕ ಮುಟ್ಟುಗೋಲು ಕ್ರಮ ಕೈಗೊಂಡಿದೆ. ಇಡಿ ಮೂಲಗಳ ಪ್ರಕಾರ, ವಶಪಡಿಸಿಕೊಂಡ ಮನೆಯ ಮೌಲ್ಯ 3,716 ಕೋಟಿ ರು. ಎಂದು ಅಂದಾಜಿಸಲಾಗಿದೆ. ಇಡಿ ಪ್ರಕಾರ, ಅನಿಲ್ ಅಂಬಾನಿ ಮತ್ತು ಅವರ ಗ್ರೂಪ್ ಕಂಪನಿಗಳ ವಿರುದ್ಧ ಇದುವರೆಗೆ ಒಟ್ಟು ಮುಟ್ಟುಗೋಲು ಕ್ರಮ 15,000 ಕೋಟಿ ರು. ಗಳಿಗಿಂತ ಹೆಚ್ಚು.

ಇಡಿ ಕ್ರಮ ಕೈಗೊಳ್ಳುವ ಮೊದಲು, ಬಾಂಬೇ ಹೈಕೋರ್ಟ್ ಸೋಮವಾರ ಅನಿಲ್ ಅಂಬಾನಿ ಕಂಪನಿಗಳಿಗೆ ದೊಡ್ಡ ಹೊಡೆತ ನೀಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದ ಏಕ ನ್ಯಾಯಾಧೀಶ ಪೀಠದ ಮಧ್ಯಂತರ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ. ರಿಲಯನ್ಸ್ ಕಮ್ಯುನಿಕೇಷನ್ಸ್ ಲಿಮಿಟೆಡ್‌ನ ಬ್ಯಾಂಕ್

ಖಾತೆಗಳನ್ನು ವಂಚನೆ ಎಂದು ವರ್ಗೀಕರಿಸುವ ಕ್ರಮವನ್ನು ಏಕ ನ್ಯಾಯಾಧೀಶ ಪೀಠ ತಡೆಹಿಡಿಯುವ ಆದೇಶ ನೀಡಿತ್ತು.

ಅಕ್ರಮ ಕಾಯ್ದೆಯಡಿ ಕ್ರಮ: ಮೂಲಗಳ ಪ್ರಕಾರ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಇಡಿ ಈ ಕ್ರಮ ಕೈಗೊಂಡಿದೆ. ಈ ಸಂಬಂಧ ಪಿಟಿಐ ನೀಡಿದ ಮಾಹಿತಿಯ ಪ್ರಕಾರ, ಇಡಿ ಈ ಪ್ರಕರಣದಲ್ಲಿ ತಾತ್ಕಾಲಿಕ ಮುಟ್ಟುಗೋಲು ಆದೇಶಗಳನ್ನು ಹೊರಡಿಸಿದೆ. ಮೂಲಗಳ ಪ್ರಕಾರ, ಈ ಪ್ರಕರಣವು ಅನಿಲ್ ಅಂಬಾನಿಯವರ ಕಂಪನಿ ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್ಕಾಮ್) ಗೆ ಸಂಬಂಧಿಸಿದ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದೆ.

ಇಡಿ ವಶಪಡಿಸಿಕೊಂಡ ಅನಿಲ್ ಅಂಬಾನಿ ಅವರ ಐಷಾರಾಮಿ ಮನೆ ಅಬೋಡ್ ಮುಂಬೈನ ಪಾಲಿ ಹಿಲ್ ಪ್ರದೇಶದಲ್ಲಿದೆ. ಈ ಕಟ್ಟಡವನ್ನು 'ಅಬೋಡ್' ಎಂದು ಪ್ರಖ್ಯಾತವಾಗಿ ಕರೆಯಲಾಗುತ್ತಿತ್ತು. ಇದು ಒಟ್ಟು 17 ಮಹಡಿಗಳನ್ನು ಹೊಂದಿದೆ. ಇಡಿ ನೀಡಿದ ಮಾಹಿತಿಯ ಪ್ರಕಾರ, ಅನಿಲ್ ಅಂಬಾನಿ ಮತ್ತು ಅವರ ಗ್ರೂಪ್ ಕಂಪನಿಗಳ ವಿರುದ್ಧ ಇಲ್ಲಿಯವರೆಗೆ ತೆಗೆದುಕೊಂಡ ಒಟ್ಟು ವಶಪಡಿಸಿಕೊಳ್ಳುವ ಕ್ರಮವು 15,000 ಕೋಟಿ ರು.ಗಳಿಗಿಂತ ಹೆಚ್ಚು. ಇದರ ನಡುವೆ, ಇಡಿ ಈ ಕ್ರಮವನ್ನು ತಾತ್ಕಾಲಿಕ ಆಧಾರದ ಮೇಲೆ ತೆಗೆದುಕೊಂಡಿದ್ದರೂ, ಇದು ಅನಿಲ್ ಅಂಬಾನಿ ಅವರ ಸಮಸ್ಯೆಗಳನ್ನು ಹೆಚ್ಚಿಸುವ ಸಾಧ್ಯತೆಯಿದೆ.

ಕಿರುತೆರೆಯಲ್ಲಿ ಕೃಷ್ಣವಂಶಿ ಪಯಣ

ಕಿರುತೆರೆಯಲ್ಲಿ ಈಗಾಗಲೇ ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಕಿರುತೆರೆ ಪ್ರಿಯರ ಮನಗೆಲ್ಲುತ್ತಿವೆ. ಆ ಸಾಲಿಗೆ ಕೃಷ್ಣವಂಶಿ ಧಾರಾವಾಹಿಯೂ ಸೇರ್ಪಡೆಯಾಗಲಿದೆ. ಈ ಧಾರಾವಾಹಿ ಪ್ರೇಕ್ಷಕರನ್ನು ಭಾವನಾತ್ಮಕ ಪ್ರಪಂಚಕ್ಕೆ ಕರೆದೊಯ್ಯಲು ಸಜ್ಜಾಗಿದೆ. ನಾಚಿಕೆ ಸ್ವಭಾವದ ಹುಡುಗ ಕೃಷ್ಣ ಹಾಗೂ ವಾಚಾಳಿ ಹುಡುಗಿ ವಂಶಿಯ ಮಧ್ಯೆ ಅರಳುವ ಪ್ರೇಮಕಥೆ ಇಲ್ಲಿದ್ದು, ಅದರ ಜತೆಗೆ ಕೌಟುಂಬಿಕ ಕಥೆಯೂ ಬೆರೆತಿದೆ. ವಂಶಿ ಮಾತಿನ ಮಲ್ಲಿ, ಗುಣದಲ್ಲಿ ಅಪರಂಜಿ. ಕೃಷ್ಣ ನಾಚಿಕೆ ಸ್ವಭಾವದ ಹುಡುಗ. ವಂಶಿಗೆ ಕೃಷ್ಣನ ನಾಚಿಕೆ ಸ್ವಭಾವವೇ ಇಷ್ಟವಾಗುತ್ತದೆ. ಕೃಷ್ಣನಿಗೂ ನಾಚಿಕೆಯ ನಡುವೆ ಪ್ರೀತಿ ಅರಳುತ್ತದೆ. ಇಬ್ಬರ ಪ್ರೀತಿಗೆ ಅನೇಕ ಸಲ ಅಗ್ನಿಪರೀಕ್ಷೆಗಳು ಎದುರಾಗುತ್ತವೆ. ಇತ್ತ ತಂದೆ ದೊರೆಸ್ವಾಮಿಗೆ ತನ್ನ ಮಗಳು ವಂಶಿಯೇ ಜೀವಾಳ. ಮಗಳು ಮದುವೆಯಾಗಿ ದೂರ ಹೋಗುವುದು ತಂದೆಗೆ ಇಷ್ಟವಿಲ್ಲ. ಹಾಗಾಗಿ ಮನೆ ಅಳಿಯನಾಗಲು ಒಪ್ಪುವಂಥ ಹುಡುಗನನ್ನೇ ಮಗಳು ಮದುವೆಯಾಗಲಿ ಎಂಬ ಆಸೆಯೂ ಇರುತ್ತದೆ. ಆದರೆ ವಂಶಿಯ ಕನಸು ಬೇರೆ ದಿಕ್ಕಿನಲ್ಲಿ ಸಾಗುತ್ತದೆ. ಅವಳು ಪ್ರೀತಿಯಿಂದ ಕೂಡಿದ ಅವಿಭಕ್ತ ಕುಟುಂಬದಲ್ಲಿ ಗಂಡನ ಜತೆಗೆ ಬದುಕುವ ಕನಸು

ಹೊತ್ತಿರುತ್ತಾಳೆ. ವಂಶಿಯ ಕನಸು ನನಸಾಗುತ್ತದೆಯೆ, ಕೃಷ್ಣ ಮತ್ತು ವಂಶಿಯರ ಪ್ರೀತಿ ಯಶಸ್ವಿಯಾಗುತ್ತದಾ ಎನ್ನುವುದೇ ಈ ಧಾರಾವಾಹಿಯ ಕಥಾ ಹಂದರ. ಕೃಷ್ಣನಾಗಿ ರೋಹನ್ ಹಾಗೂ ವಂಶಿಯಾಗಿ ಶಾರದಾ ಪುಂಡಿ ಅಭಿನಯಿಸುತ್ತಿದ್ದು, ಉಳಿದಂತೆ ಗಿರಿಜಾ ಲೋಕೇಶ್, ಹನುಮಂತೇಗೌಡ, ಹಂಸ, ವಿಜಯ್, ರಜಿನಿ, ಸಿದ್ದಾರ್ಥ, ಸಂದೀಪ್ ಪುಷ್ಪಾ ಅನಿಲ್‌ಕುಮಾರ್, ಸುಕೃತಾ ನಾಗ್ ಮುಂತಾದವರು ತಾರಾಗಣದಲ್ಲಿದ್ದಾರೆ. ಪರಿಣಿತ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ತೇಜಸ್ವಿನಿ ಭಾಸ್ಕರ್ ಮಂಗಾಡಹಳ್ಳಿ ನಿರ್ಮಾಣ ಮಾಡುತ್ತಿರುವ ಕೃಷ್ಣವಂಶಿ ಧಾರಾವಾಹಿವನ್ನು ಸುಬ್ರಹ್ಮಣ್ಯ ಪ್ರಸಾದ್ ನಿರ್ದೇಶನ ಮಾಡುತ್ತಿದ್ದಾರೆ. ಕೃಷ್ಣವಂಶಿ ಮಾರ್ಚ್ 2 ರಿಂದ ಉದಯ ಟಿ.ವಿಯಲ್ಲಿ ಪ್ರಸಾರವಾಗಲಿದೆ.

ಹಯಗ್ರೀವನ ಜತೆ ಬಂದ ಸಂಜನಾ ಆನಂದ

ಕೆಮಿಸ್ಟ್ರಿ ಆಫ್ ಕರಿಯಪ್ಪನ ಜತೆಗೆ ಬಂದು ಸಲಗನ ಜತೆಯಾದ ಸಂಜನಾ, ಬ್ಯಾಂಗಲ್ ಬಂಗಾರಿ ಅಂತ ಹಾಡಿ ಕುಣಿದು ಪ್ರೇಕ್ಷಕರನ್ನು ರಂಜಿಸಿದರು. ಸ್ಯಾಂಡಲ್ ವುಡ್‌ನ ಬೇಡಿಕೆಯ ನಟಿಯಾಗಿರುವ ಸಂಜನಾ ಈಗ ಹಯಗ್ರೀವನೊಂದಿಗೆ ಮಿಂಚಲು ಸಿದ್ಧವಾಗಿದ್ದಾರೆ. ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ಹಯಗ್ರೀವ ಚಿತ್ರದಲ್ಲಿ ನಿಮ್ಮ ಪಾತ್ರ?

ಸಂಜನಾ ಆನಂದ್ : ಹಯಗ್ರೀವ ಹೊಸ ಪರಿಕಲ್ಪನೆಯ ವಿಭಿನ್ನ ಕಥೆಯನ್ನು ಒಳಗೊಂಡಿದೆ. ನಾನು ಈ ಚಿತ್ರದಲ್ಲಿ ಎರಡು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ಒಂದು ಲುಕ್‌ನಲ್ಲಿ ಕಾಲೇಜ್ ವಿದ್ಯಾರ್ಥಿನಿಯಾಗಿ ಮತ್ತೊಂದರಲ್ಲಿ ವೈದ್ಯೆಯಾಗಿ ನಟಿಸಿದ್ದೇನೆ. ವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಸ್ಟೋರಿ ಇಲ್ಲಿದ್ದು, ಚಿತ್ರ ಗಂಭೀರವಾಗಿ ಸಾಗುತ್ತದೆ. ಕ್ರೈಂ ಮಿಸ್ಟರಿ, ಥ್ರಿಲ್ಲರ್ ಸ್ಟೋರಿ ಪ್ರೇಕ್ಷಕರನ್ನು ಹಿಡಿದು ಕೂರಿಸುತ್ತದೆ. ನಾನು ತುಂಟಾಟದ ಮೂಲಕ ಒಂದಷ್ಟು ನಗಿಸುತ್ತೇನೆ. ಹಾಗಂತ ನನ್ನದು ಹೀಗೆ ಬಂದು ಹೋಗುವ ಪಾತ್ರವಲ್ಲ. ನನ್ನ ಪಾತ್ರಕ್ಕೆ ತುಂಬಾ ಮಹತ್ವವಿದ್ದು, ಸಿನಿಮಾದುದ್ದಕ್ಕೂ ನನ್ನ ಪಾತ್ರ ಸಾಗುತ್ತದೆ.

> ನನಗೆ ಚಾಲೆಂಜಿಂಗ್ ಆಗಿರುವ ಪಾತ್ರಗಳಲ್ಲಿ ನಟಿಸುವಾಸೆ, ಹಾಗಂತ ಮಹಿಳಾ ಪ್ರಧಾನ ಕಥೆಗಳೇ ಬೇಕು ಅಂತೇನಲ್ಲ. ಕೆಜಿಎಫ್ ಚಿತ್ರದಲ್ಲಿ ಅರ್ಚನಾ ಜೋಯಿಸ್ ಅವರು ನಿರ್ವಹಿಸಿದಂತಹ ಪಾತ್ರದಲ್ಲಿ ಬಣ್ಣಹಚ್ಚಲು ಇಷ್ಟ.

ವೈದ್ಯೆಯಾಗಿ ನಟಿಸಿದ್ದು ಹೇಗನ್ನಿಸಿತು?

ಸಂಜನಾ : ಮೊದಲ ಬಾರಿಗೆ ವೈದ್ಯಳಾಗಿ ನಟಿಸಿದ್ದು ನಿಜಕ್ಕೂ ಖುಷಿಕೊಟ್ಟಿತು. ಬಿಳಿಕೋಟು ತೊಟ್ಟು ಸ್ಟೆಥಾಸ್ಕೋಪ್ ಹಿಡಿಯುವುದೇ ಖುಷಿ. ವೈದ್ಯರನ್ನು ದೇವರಿಗೆ ಹೋಲಿಸುತ್ತಾರೆ. ಅಂತಹ ಪಾತ್ರವನ್ನು ನಿರ್ವಹಿಸಿದ್ದು ಸಂತಸ ತಂದಿದೆ. ತುಂಬಾ ಶ್ರಮ ಹಾಕಿ ಇಷ್ಟಪಟ್ಟು ಮಾಡಿದ ಪಾತ್ರವಿದು. ನನ್ನ ಪಾತ್ರ ಪ್ರೇಕ್ಷಕರಿಗೆ ಹಿಡಿಸುತ್ತದೆ ಎಂಬ ನಂಬಿಕೆ ನನಗಿದೆ.

ಈ ಕಥೆಯನ್ನು ಒಪ್ಪಲು ಕಾರಣ?

ಸಂಜನಾ : ಇಲ್ಲಿ ಎಲ್ಲರಿಗೂ ಹೊಂದುವ ಕಥೆ ಇದೆ. ಅದಕ್ಕೂ ಮುಖ್ಯವಾಗಿ ನನ್ನ ಪಾತ್ರ ಸೇರಿದಂತೆ ಎಲ್ಲಾ ಪಾತ್ರಗಳಿಗೂ ಪ್ರಾಮುಖ್ಯತೆ ನೀಡಲಾಗಿದೆ. ಈ ಹಿಂದಿನ ಚಿತ್ರಗಳಲ್ಲಿ ನನ್ನ ಪಾತ್ರಕ್ಕೆ ಅಷ್ಟಾಗಿ ಸ್ಪೇಸ್ ಇರಲಿಲ್ಲ. ಹಯಗ್ರೀವ ಚಿತ್ರದಲ್ಲಿ ಚಿತ್ರದುದ್ದಕ್ಕೂ ನನ್ನ ಪಾತ್ರ ಸಾಗುತ್ತದೆ. ಹಾಗಾಗಿಯೇ ಈ ಕಥೆಯನ್ನು ಕೇಳಿ, ನಟಿಸಲು ಸಂತಸದಿಂದಲೇ ಸಮ್ಮತಿಸಿದೆ.

ನಿಮ್ಮ ಮುಂದಿನ ಸಿನಿಮಾಗಳು?

ಸಂಜನಾ : ಸದ್ಯ ವಿಕ್ರಮ್ ರವಿಚಂದ್ರನ್ ಅವರ ಜತೆಗೆ ಮುಧೋಳ್ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಇನ್ನು ಎರಡು, ಮೂರು ದಿನ ಆ ಚಿತ್ರದ ಚಿತ್ರೀಕರಣ ಬಾಕಿ ಇದೆ. ಶಿವರಾಜ ಕುಮಾರ್ ಸರ್ ಜತೆ ಬೇಲ್ ಚಿತ್ರದಲ್ಲಿ ಅಭಿನಯಿಸುತ್ತಿದ್ದೇನೆ. ಈ ಚಿತ್ರದಲ್ಲಿಯೂ ಒಳ್ಳೆಯ ಪಾತ್ರವೇ ಸಿಕ್ಕಿದೆ. ಶಿವಣ್ಣ ಅವರ ಜತೆಗೆ ನಟಿಸುತ್ತಿರುವುದು ನಿಜಕ್ಕೂ ಖುಷಿಕೊಟ್ಟಿದೆ.

ಅಬ್ಬರಿಸಲು ಸಿದ್ಧವಾದ ಶಿಖಂಡಿ

ಈ ಹಿಂದೆ ಮಾರಕಾಸ್ತ್ರ ಚಿತ್ರವನ್ನು ನಿರ್ದೇಶಿಸಿದ್ದ ವಿ.ಗುರುಮೂರ್ತಿ ಈಗ ಶಿಖಂಡಿಯನ್ನು ತೆರೆಗೆ ಕರೆತರುತ್ತಿದ್ದಾರೆ. ಮಹಾಭಾರತದಲ್ಲಿ ಬರುವ ಶಿಖಂಡಿಯ ವೃತ್ತಾಂತವನ್ನು ಹೋಲುವ ಕಥೆ ಇಲ್ಲಿದ್ದು, ಹಾಗಾಗಿಯೇ ಚಿತ್ರಕ್ಕೆ ಶಿಖಂಡಿ ಎಂಬ ಶೀರ್ಷಿಕೆ ಇಡಲಾಗಿದೆ. ಈ ಚಿತ್ರದ ಮೋಷನ್ ಪೋಸ್ಟರ್ ರಿಲೀಸ್ ಆಗಿದ್ದು ಗಮನಸೆಳೆಯುತ್ತಿದೆ. ಪೋಲಾ ಮೂವೀಸ್ ಬ್ಯಾನರ್‌ನಲ್ಲಿ ಪೋಲಾ ಪ್ರವೀಣ್ ಕುಮಾರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಯುವರಾಜ್ ಗೌಡ ನಾಯಕನಾಗಿ ನಟಿಸಿದ್ದು, ಖ್ಯಾತಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನಿಖಿತಾ ಸ್ವಾಮಿ, ಬಿಗ್‌ಬಾಸ್ ಖ್ಯಾತಿಯ ನೀತು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದು, ರಘು ರಾಮನಕೊಪ್ಪ, ದೀಪಕ್ ಶೆಟ್ಟಿ, ವಿಜಯ್ ಚಂಡೂರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮಹಾಭಾರತದಲ್ಲಿ ಬರುವ ಶಿಖಂಡಿ ಪಾತ್ರವೇ ನಮ್ಮ ಚಿತ್ರದ ಕಥೆಗೆ ಸ್ಫೂರ್ತಿ. ಮಹಾಭಾರತದಲ್ಲಿ ಶಿಖಂಡಿ ಪುನರ್ಜನ್ಮ ಪಡೆದು ತನ್ನ ಸೇಡನ್ನು ತೀರಿಸಿಕೊಳ್ಳುವುದನ್ನು ನಾವೆಲ್ಲಾ ಕೇಳಿದ್ದೇವೆ. ಈ ಅಂಶವನ್ನೇ ಪ್ರಧಾನವಾಗಿಟ್ಟುಕೊಂಡು ಶಿಖಂಡಿ ಚಿತ್ರದ ಕಥೆ ಹೆಣೆಯಲಾಗಿದೆ. ಸಸ್ಪೆನ್ಸ್, ಥ್ರಿಲ್ಲರ್, ಹಾರಾರ್, ಕಾಮಿಡಿ ಹೀಗೆ ಪ್ರೇಕ್ಷಕರಿಗೆ ಅಗತ್ಯವಾದ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ಈಗಾಗಲೇ ಸಂಪೂರ್ಣ ಚಿತ್ರೀಕರಣ ಮುಗಿಸಿದ್ದು, ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಯೋಜನೆ ಇದೆ ಎಂದು ನಿರ್ದೇಶಕ ಗುರುಮೂರ್ತಿ ಹೇಳಿದರು.

ಇದು ನನ್ನ ಮೊದಲ ನಿರ್ಮಾಣದ ಚಿತ್ರ. ಈ ಸಿನಿಮಾದ ಕಥೆ ಕೇಳಿ ಮನಸಿಗೆ ಹಿಡಿಸಿತು, ಹಾಗಾಗಿಯೇ ಸಿನಿಮಾ ನಿರ್ಮಾಣಕ್ಕೆ ಒಪ್ಪಿದೆ. ಚಿತ್ರದಲ್ಲಿ ಮನರಂಜನೆಯ ಜತೆಗೆ ಸಮಾಜಕ್ಕೆ ಒಳ್ಳೆಯ ಸಂದೇಶವೂ ಇದೆ ಎಂದು ನಿರ್ಮಾಪಕ ಪೋಲಾ ಪ್ರವೀಣ್ ಕುಮಾರ್ ಸಂತಸದಿಂದ ನುಡಿದರು. ನನಗೆ ಚಿತ್ರದ ಶೀರ್ಷಿಕೆ ಕೇಳಿದ ತಕ್ಷಣ ಆಶ್ಚರ್ಯವಾಯಿತು, ಆದರೆ ಕಥೆ ಕೇಳಿ ಸಂತೋಷವಾಯಿತು. ಈ ಚಿತ್ರದಲ್ಲಿ ನಾನು ಸೂರ್ಯ ಎಂಬ ಪಾತ್ರದಲ್ಲಿ ನಟಿಸಿದ್ದೇನೆ ಎಂದು ನಟ ಯುವರಾಜ್ ಗೌಡ ಹೇಳಿದರು. ಸ್ವಾಮಿ ಛಾಯಾಗ್ರಹಣ, ಮಂಜುಕವಿ ಸಂಗೀತ ನಿರ್ದೇಶನ, ಜಗ್ಗು ಮಾಸ್ಟರ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

ಚಿತ್ರೀಕರಣ ಮುಗಿಸಿದ ದೇವಸಸ್ಯ

ಸಿದ್ದಿ ಜನಾಂಗದ ಸಂಸ್ಕೃತಿ, ಆಚಾರ, ವಿಚಾರಗಳ ಕುರಿತು ಕಥೆಯನ್ನು ಆಧರಿಸಿ ದೇವಸಸ್ಯ ಚಿತ್ರ ಸಿದ್ಧವಾಗುತ್ತಿದೆ. ಕಾರ್ತಿಕ್ ಭಟ್ ಚಿತ್ರದ ಕಥೆ ಹೆಣೆದು ನಿರ್ದೇಶನ ಮಾಡುತ್ತಿದ್ದಾರೆ. ದೇವಸಸ್ಯ ಎಂಬ ಅಪರೂಪದ ಗಿಡವೊಂದರ ಸುತ್ತ ಈ ಚಿತ್ರಕಥೆ ಸಾಗಲಿದೆ. ಅನಂತ ಫಿಲಂಸ್‌ನಲ್ಲಿ ಅನಂತಮೂರ್ತಿ ಎಂ.ಹೆಗಡೆ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಚಿತ್ರೀಕರಣ ನಡೆಸಿದ್ದೇವೆ. ವಿಶೇಷವಾದ ಸಂಜೀವಿನಿ ಗಿಡವೇ ದೇವಸಸ್ಯ. ಅದರ ಸುತ್ತ ಚಿತ್ರಕಥೆ ಸಾಗುತ್ತದೆ. ಚಿತ್ರಕ್ಕಾಗಿಯೇ ಮೂವತ್ತು ವರ್ಷಗಳ ಹಿಂದಿದ್ದ ಊರನ್ನು ಮರುಸೃಷ್ಟಿ ಮಾಡಿದ್ದೇವೆ. ಇದು ಸಸ್ಯವೊಂದರ ಕುರಿತಂತೆ ಮಾಡಿರುವ ಕಥೆಯಾಗಿದ್ದರಿಂದ ಐದು ಭಾಷೆಗಳಲ್ಲಿ ನಿರ್ಮಿಸುತ್ತಿದ್ದೇವೆ ಎಂದು ನಿರ್ಮಾಪಕ ಅನಂತಮೂರ್ತಿ ಹೆಗಡೆ ಹೇಳಿದರು.

ದೇವಸಸ್ಯ ನಮ್ಮ ನೆಲದ ಕಥೆಯಾಗಿದೆ. ಇದು ಬರೀ ಕಥೆಯಲ್ಲ, ಹೊಸ ಜಗತ್ತು. ಸಿರ್ಸಿ ಸುತ್ತಮುತ್ತಲಿನ ಕಾಡು ಪ್ರದೇಶಗಳಲ್ಲಿ ವಾಸಿಸುವ ಸಿದ್ದಿ ಸಮುದಾಯಾದ ಕಲಾವಿದರು ಚಿತ್ರದಲ್ಲಿ

ತೊಂಬತ್ತರ ಕಾಲಘಟ್ಟದಲ್ಲಿ ನಡೆಯುವ ನಮ್ಮ ಮಣ್ಣಿನ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗುತ್ತಿದೆ. ಸಿದ್ಧಿ ಸಮುದಾಯದ ಯುವಕ ಸೆಲ್ವಿನ್ ದೇಸಾಯಿ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಆಹಾನ್ ಗೌಡ ಮತ್ತು ಬಿಂಬಿಕಾ ಜೆ.ರಾವ್, ಪ್ರಕಾಶ್ ಬೆಳವಾಡಿ, ಪ್ರಮೋದ್ ಶೆಟ್ಟಿ, ಅಯ್ಯಪ್ಪ ಶರ್ಮ, ಮಂಜುನಾಥ ಹೆಗಡೆ, ಗೀತಾ ಸಿದ್ಧಿ ಸೇರಿದಂತೆ ಮುಂತಾದವರು ತಾರಾಗಣದಲ್ಲಿದ್ದಾರೆ. ನೂರ ಐವತ್ತಕ್ಕೂ ಹೆಚ್ಚು ಮಂದಿ ಸಿದ್ಧಿ ಸಮುದಾಯದ ಕಲಾವಿದರು ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕಾಗಿ ತೊಂಬತ್ತರ ಕಾಲಘಟ್ಟದ ಹಳ್ಳಿಯೊಂದರ ಸೆಟ್ ಹಾಕಿ ಚಿತ್ರೀಕರಿಸಲಾಗಿದೆ.

ಕಳೆದ ಮಾರ್ಚ್‌ನಲ್ಲಿ ಶೂಟಿಂಗ್ ಆರಂಭಿಸಿ, ಉತ್ತರ ಕನ್ನಡದಲ್ಲೇ ಬಹುತೇಕ ನಟಿಸಿದ್ದಾರೆ. ಮೂರು ಊರುಗಳ ಮಧ್ಯೆ ನಡೆಯುವ ಕುತೂಹಲಭರಿತ ಸ್ಟೋರಿ ಇಲ್ಲಿದೆ ಎಂದು ನಿರ್ದೇಶಕ ಕಾರ್ತಿಕ್ ಭಟ್ ತಿಳಿಸಿದರು.

ನಟ ಅಹಾನ್ ಕುರ್ಮುಷ್ಠ ಎಂಬ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ನಾಯಕಿ ಬಿಂಬಿಕಾ ಮಾತಂಗಿ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಯಶವಂತ್ ಛಾಯಾಗ್ರಹಣ, ಹರಿ ಅಜಯ್ ಸಂಗೀತ ನಿರ್ದೇಶನ, ಶ್ರೀಕಾಂತ್ ಸಂಕಲನ ಈ ಚಿತ್ರಕ್ಕಿದೆ. ಉತ್ತರ ಕನ್ನಡ ಜಿಲ್ಲೆಯ ಅದ್ಭುತ ಪ್ರಾಕೃತಿಯ ತಾಣದಲ್ಲಿ ಚಿತ್ರದ ಹಾಡುಗಳನ್ನು ಸೆರೆಹಿಡಿಯಲಾಗಿದೆ. ದೇವಸಸ್ಯ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡ, ತೆಲುಗು, ಹಿಂದಿ ಸೇರಿದಂತೆ ಐದು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ.

ವಿಶ್ವವಾಣಿ 26-02-2026 ಗುರುವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತವಿಹಾರ

ಸಿಗ್ನಲ್‌ನಲ್ಲಿ ಸಾಲಲ್ಲಿ ನಿಂತ ಗೋವಿನ ಶಿಸ್ತು

• ಕೆ.ಎಸ್.ಸೋಮೇಶ್ವರ, ಬೆಂಗಳೂರು

ನಿಮಗೆಲ್ಲ ಪುಣ್ಯಕೋಟಿ ಗೋವಿನ ಕಥೆ, ಕಥೆಯಲ್ಲ ಜೀವನ ಎಂಬುವಂತೆ ತಿಳಿದಿದೆ. ಇಲ್ಲಿ ಹೇಳುತ್ತಿರುವುದು ಬೆಂಗಳೂರಿನಂಹ ಮಹಾ ನಗರಗಳ ಗೋವಿನ ಸಂಸಾರದ ರಸ್ತೆ ಪಯಣ. ಇಲ್ಲಿ ರಸ್ತೆ ದಾಟುವುದೆಂದರೆ ಸಪ್ತ ಮಹಾಸಾಗರಗಳನ್ನು ದಾಟಿದಷ್ಟು ಕಷ್ಟ. ಟ್ರಾಫಿಕ್ ಸಿಗ್ನಲ್ ಗಳಲ್ಲಿ ಹಸಿರು ನಿಶಾನೆಗೆ ಮೊದಲೇ ಒಂದಿಬ್ಬರು ದ್ವಿಚಕ್ರಿಗಳು ಝೂಮ್ ಅಂತ ಸಿಗ್ನಲ್ ದಾಟಿ ಬಿಡ್ತಾರೆ. ಬಿಳಿ ಪಟ್ಟಿಯ ಮೇಲಿರುವವರು ಮೂರಾಬಟ್ಟೆಯೇ ಸರಿ.

ಇದು ಒಂದು ಗೋವಿನ ಸಂಸಾರದ ಸಣ್ಣ ಕಥೆ. ಕೆಲ ದಿನಗಳ ಹಿಂದೆ ನಗರದ ಜಯದೇವ ಆಸ್ಪತ್ರೆಯ ಬಳಿಯ ಸಿಗ್ನಲ್‌ನಲ್ಲಿ ಕೆಂಪು ದೀಪ ನಮ್ಮನ್ನು ನಿಲ್ಲಿಸಿತು. ಆ ಸೆಕೆಂಡ್‌ಗಳ ಅಂತರದಲ್ಲಿ ಒಂದಿಬ್ಬರು ಜುಮ್ ಅಂತ ಝೂಮ್ ಮಾಡಿ ಆಗಿತ್ತು. ನಮ್ಮ ಹಿಂದೆ ಅಕ್ಕ ಪಕ್ಕದಲ್ಲಿ ಹಲವು ವಾಹನಗಳು ಕೆಂಪು ದೀಪ ನೋಡುತ್ತ ಹಸಿರಿನ ನಿಶಾನೆಗೆ ಕಾತುರರಾಗಿದ್ದರು. ನಮ್ಮಗಳ ಪಕ್ಕದ ಡಿವೈಡರ್ ಬಳಿಯಲ್ಲಿ ಒಂದು ಗೋವಿನ ಕುಟುಂಬ ನಿಂತಿತ್ತು. ಅವುಗಳ ಮುಖಭಾವ ನೋಡಿದರೆ ಅವುಗಳಿಗೆ ನಗರ ಜೀವನ ಒಗ್ಗಿ ಹೋಗಿದೆ ಎನಿಸುತ್ತಿತ್ತು. ಒಂದೇ ಕುಟುಂಬದವರಾದರೂ ಅಲ್ಲಿ ಸರತಿ ಸಾಲು ಬಿಟ್ಟಿರಲಿಲ್ಲ. ಮೊದಲು ಇದ್ದದ್ದು ಒಬ್ಬ ಹಿರಿಯ ಮಹಿಳಾಮಣಿ. ಆಕೆ ನಿಂತಿದ್ದ ಗಾಂಭಿರ್ಯವೇ ಅದೊಂದು ಹಿರಿ ತಲೆ ಎಂಬುದನ್ನು ಸೂಚಿಸು ತ್ತಿತ್ತು. ಆಕೆಯ ಹಿಂದೆ ಒಬ್ಬ ತರುಣಿ. ನಿಮಗೆ ಅದರ ಏಜ್ ಹೇಗೆ ಗೊತ್ತಾಯಿತು ಅಂತೀರಾ! ಅದು ಬಾಯಲ್ಲಿ ಏನನ್ನೋ ಮೆಲುಕು ಹಾಕುತ್ತ ತನ್ನೆರಡು ಕಣ್ಣುಗಳನ್ನು ಅತ್ತಿಂದಿತ್ತ ಹೊರಳಾಡಿ ಸುತ್ತ ಚಂಚಲತೆಯ ಮೂರ್ತಿ ಎಂಬಂತಿತ್ತು. ಅದರ ಹಿಂದೆ ಇನ್ನೊಂದು ಮರಿ ಮಹಿಳೆ. ಅವರ ಭಾಷೆಯಲ್ಲಿ ಕರು. ಅದರ ವಯಸ್ಸಿಗೆ ತುಂಟಾಟ ಖಾತ್ರಿ. ಆದರೆ, ಇದು ತನ್ನ ವಯಸ್ಸಿಗೆ ಮೀರಿದ ಗಾಂಭೀರ್ಯವನ್ನು ಪ್ರದರ್ಶಿಸುತ್ತ ಸರತಿಯಲ್ಲಿ ಮೂರನೆಯದಾಗಿತ್ತು. ಇವುಗಳ ಚಿತ್ರ ನನ್ನ ಕಣ್ಣಿನ ಕ್ಯಾಮೆರಾದಲ್ಲಿ ಅಚ್ಚಳಿಯದೇ ಮೂಡಿ ಬಂದಿದೆ. ಓದುಗರೂ ಅದನ್ನು ನಿಮ್ಮ ಕಣ್ಣುಗಳ ಮುಂದೆ ಅವರವರೇ ತಂದುಕೊಳ್ಳಬಹುದು ನಂತರದಲ್ಲಿ ಹಸಿರು ನಿಶಾನೆ ಬಂದ ಮೇಲೆ ನಾವು ಮನುಜರು ನಮ್ಮ ಪಾಡಿಗೆ ನಾವು ಮುಂದಿನ ನಿಲ್ದಾಣದ ಕಡೆಗೆ ಹೊರಟೆವು. ಸಿಗ್ನಲ್‌ನಲ್ಲೇ ಇಷ್ಟು ಶಿಸ್ತು ಕಂಡ ಅವುಗಳ ವರ್ತನೆ ಮುಂದೆ ಅಷ್ಟೇ ಶಿಸ್ತಿನದಾಗಿರಬಹುದಲ್ಲವೇ. ಹಾಗೆ ನೋಡಿದರೆ ಸಣ್ಣ ಇರುವೆಯಿಂದ ಮೊದಲಾಗಿ ಬೃಹತ್ ಗಾತ್ರದ ಆನೆಗಳೂ ಸಹ ಶಿಸ್ತಿನ ಸಿಪಾ ಯಿಗಳೇ ಎಂಬುದರಲ್ಲಿ ಸಂದೇಹವೇ ಇಲ್ಲ. ಅದಕ್ಕೇ ಅಲ್ಲವೇ ನಮ್ಮ ವರನಟ ಡಾ.ರಾಜಕುಮಾರರವರು 'ಪ್ರಾಣಿಗಳೇ ಗುಣದಲಿ ಮೇಲು ಮಾನವನದಕಿಂತ ಕೀಳು' ಎಂದು ಹೇಳಿದ್ದು.

• ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)

ಶ್ರೇಷ್ಠ ಶಿಕ್ಷಣತಜ್ಞ ಜಾನ್ ಡ್ಯೂಯಿ ಅವರು, "ಶಿಕ್ಷಣವು ಜೀವನಕ್ಕೆ ಸಿದ್ಧತೆಯಲ್ಲ; ಶಿಕ್ಷಣವೇ ಜೀವನ" ಎಂದು ಹೇಳಿದ್ದಾರೆ. ಜೀವನದಲ್ಲಿ ಶಿಕ್ಷಣವೆಂಬುದು ಅಜ್ಞಾನವೆಂಬ ಕತ್ತಲೆಯನ್ನು ನೀಗಿಸಿ ಜ್ಞಾನದ ಬೆಳಕು ಚೆಲ್ಲಿದರೆ ಅದುವೇ ನಮ್ಮ ಬದುಕಿನ ದಾರಿದೀಪವಾಗಬಲ್ಲದು. ಜ್ಞಾನ ಎಂದರೆ ಕೇವಲ ಪುಸ್ತಕದ ಜ್ಞಾನವಲ್ಲ. ಅದು ಬದುಕಿನ ಪಾಠ, ಅನುಭವ, ಸದ್ಗುಣಗಳು ಮತ್ತು ಶ್ರಮದ ಮೂಲಕ ನಮ್ಮಲ್ಲಿ ಉದಯಿಸುವ ಅರಿವು. ಜೀವನದಲ್ಲಿ ಕಷ್ಟಗಳನ್ನು ಹೇಗೆ ಎದುರಿಸಬೇಕೆನ್ನುವ ಆತ್ಮವಿಶ್ವಾಸ ಮೂಡಿಸುವ ಮತ್ತು ಉಜ್ವಲ ಭವಿಷ್ಯಕ್ಕೆ ಸರಿಯಾದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಬದುಕಿನ ಸಾರ್ಥಕತೆಗೆ ಮತ್ತು ಬದುಕಿಗೊಂದು ಭದ್ರ ಬುನಾದಿ ಹಾಕುವ ದಾರಿದೀಪವಾಗಿದೆ. ಜ್ಞಾನವು ಕೇವಲ ಓದುವುದು, ಬರೆಯುವುದು, ಅಂಕ ಪಡೆಯುವುದು ಮತ್ತು ಪದವಿ ಪಡೆಯಲು ಪೂರಕವಲ್ಲ. ಅದು ನಮ್ಮ ಬದುಕಿನಲ್ಲಿ ಎದುರಾಗುವ ಏರಿಳಿತ, ಕಷ್ಟ-ನಷ್ಟಗಳನ್ನು ಸಮರ್ಥವಾಗಿ ಎದುರಿಸುವ ಎದೆಗಾರಿಕೆ ಮತ್ತು ಸಂಬಂಧಗಳನ್ನು ಮತ್ತು ಜೀವನದ ಸತ್ಯಾಸತ್ಯೆಯ ಬಗ್ಗೆ ಅರ್ಥಗ್ರಹಿಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಒಡಮೂಡಿಸುವ ಕಲೆಯಾಗಿದೆ.

ಜೀವನವೆಂಬ ಪಥದಲ್ಲಿ ನಮಗೆ ಸೋಲು, ವೈಫಲ್ಯ, ಹತಾಶೆ, ನಿರಾಶೆ ಎದುರಾಗಿರಬಹುದು. ಜ್ಞಾನದ ದೀವಿಗೆಯಿಂದ ಆ ಸಮಸ್ಯೆಯನ್ನು ಛಲಗಾರಿಕೆಯೊಂದಿಗೆ ಹೇಗೆ ಎದುರಿಸಬೇಕೆನ್ನುವ ಮತ್ತು ಆ ಸಂದರ್ಭದಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಕಾರಿಯಾಗುತ್ತದೆ. ನಾವು ಕೇವಲ ಜ್ಞಾನವಂತರಾದರೆ ಸಾಲದು. ಸಮಾಜದಲ್ಲಿ ಇತರರಿಗೆ ಮಾದರಿ ಮತ್ತು ಅನುಕರಣೀಯ ವ್ಯಕ್ತಿ-ಶಕ್ತಿಯಾಗಿ ಸತ್ಯ, ಪ್ರಾಮಾಣಿಕತೆ, ತ್ಯಾಗ, ಸಹಾನುಭೂತಿ, ಅನುಕಂಪ, ಹಿರಿಯರನ್ನು ಗೌರವಿಸುವ ಭಾವ, ಸದಾಚಾರ, ಸನ್ನಡತೆ, ಸದ್ಭಾವ, ಸಮಭಾವ ಮತ್ತು ಸಮಷ್ಟಿಭಾವದಂತಹ ನೈತಿಕ-ಮೌಲ್ವಿಕ ಗುಣಗಳನ್ನು ಅಳವಡಿಸಿಕೊಂಡಾಗ ಮಾತ್ರ ಜ್ಞಾನವು ನಮಗೆ ಬದುಕಿಗೊಂದು ಮಾರ್ಗದರ್ಶಿಯಾಗಬಲ್ಲದು. ಅದುವೇ ನಮಗೆ ಬದುಕುವ ರೀತಿ-ನೀತಿ, ಜೀವನ-ಮೌಲ್ಯಗಳನ್ನು ಕಲಿಸುತ್ತದೆ. ಜೀವನಾನುಭವದಿಂದ ಕಲಿತ ಪಾಠಗಳು ನಮಗೆ ಶಾಶ್ವತ ಜ್ಞಾನವನ್ನು ನೀಡುತ್ತವೆ. ಬದುಕೆಂಬ ಸಾಗರದಲ್ಲಿ ನೊರೆ-ತೊರೆಗಳಂತೆ ಎದುರಾಗುವ ಸವಾಲುಗಳನ್ನು ಎದುರಿಸುವ ಆತ್ಮಬಲವನ್ನು ನೀಡುತ್ತದೆ. ಸದಾ ನಮ್ಮನ್ನು ಆಲೋಚನಾಪರರನ್ನಾಗಿ ಮಾಡುತ್ತಾ, ಆತ್ಮಸ್ಥೈರ್ಯದೊಂದಿಗೆ ಮುನ್ನಡೆಯಲು ದಾರಿ ತೋರುತ್ತದೆ.

ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನವು ಕೇವಲ ಕಲಿಕೆಗೆ ಮಾತ್ರ ಸೀಮಿತಗೊಳ್ಳುತ್ತಿರುವುದು ವಿಷಾದನೀಯ ಸಂಗತಿ. ಅದಕ್ಕಾಗಿ ಶಿಕ್ಷಣದ ಜತೆಗೆ ಮೌಲ್ವಿಕ ವಿಚಾರಧಾರೆಗಳನ್ನು ಮಕ್ಕಳ ಮನದಲ್ಲಿ ಬಿತ್ತಬೇಕಾಗಿರುವುದು ಇಂದಿನ ತುರ್ತು ಅಗತ್ಯತೆಯಾಗಿದೆ. ಮೌಲ್ಯಾಧಾರಿತ ಶಿಕ್ಷಣವು ಕೇವಲ ಶೈಕ್ಷಣಿಕ ಜ್ಞಾನವಲ್ಲ. ಅದು ವಿದ್ಯಾರ್ಥಿ ಮತ್ತು ಮಕ್ಕಳಲ್ಲಿ ನೈತಿಕತೆ,



ಜ್ಞಾನವೇ ದಾರಿ, ಅದೇ ಬದುಕಿನ ದೀಪ

ಜೀವನ-ಕೌಶಲ್ಯ, ಮೌಲ್ಯಗಳು ಮತ್ತು ಸಾಮಾಜಿಕ ಬದ್ಧತೆ ಮತ್ತು ಜವಾಬ್ದಾರಿಗಳನ್ನು ಬೆಳೆಸುತ್ತಾ, ಸಮಗ್ರ ಶಿಕ್ಷಣದ ಗುರಿಯನ್ನು ಈಡೇರಿಸುವದರ ಮೂಲಕ ಸಮಾಜದಲ್ಲಿ ಸಾಮರಸ್ಯದಿಂದ ಬದುಕುವ ಉತ್ತಮ ಸತ್ಪ್ರಜೆಗಳನ್ನಾಗಿ ರೂಪಿಸುವಂತಾಗಬೇಕು. ತಂದೆ-ತಾಯಿ, ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಮಹಾಪುರುಷರ ನೀತಿ ಕಥೆ, ಯಶೋಗಾಥೆ ಮತ್ತು ಜೀವನ ಪಾಠವನ್ನು ತಿಳಿಸುವಂತಹ ನಿದರ್ಶನಗಳನ್ನು ಹೇಳುತ್ತಾ, ಮೌಲ್ಯಯುತವಾದ ಜೀವನಕ್ಕೆ ಭದ್ರ ಅಡಿಪಾಯ ಹಾಕಬೇಕು.

ಇಂದಿನ ಆಧುನಿಕ ಮತ್ತು ಸಂಕೀರ್ಣಮಯವಾಗುತ್ತಿರುವ ಈ ಸಮಾಜದಲ್ಲಿ ಮಕ್ಕಳು ಹೆಚ್ಚು ಸ್ವಯಂ ಕೇಂದ್ರಿತವಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ತಾವಾಯಿತು ತಮ್ಮ ಮೊಬೈಲ್ ಫೋನಾಯಿತು ಎಂಬಂತೆ ಮನೆಯ ಕೊಠಡಿಯಲ್ಲಿ ಸ್ವಯಂಬಂಧಿಗಳಾಗಿ ವೃಥಾ ಕಾಲಹರಣ ಮಾಡುವ ಪ್ರವೃತ್ತಿಯು ಪೋಷಕರನ್ನು ಚಿಂತಾಕ್ರಾಂತರನ್ನಾಗಿ ಮಾಡಿದೆ. ಮನೆಗೆ ಯಾರು ಬಂದರೂ ಹೋದರೂ ಅವರ ಪರಿವೆಯೇ ಇಲ್ಲದೇ ತಮ್ಮ ಪಾಡಿಗೆ ತಾವಿದ್ದು, ಮೊಬೈಲ್ ಫೋನಿನ ಫೋಭಿಯಾದಲ್ಲಿ ಸಿಲುಕಿದ್ದಾರೆ. ಇದಕ್ಕೆಲ್ಲ ಪರಿಹಾರವೆಂದರೆ, ಮಕ್ಕಳಿಗೆ ನೀತಿ ಶಿಕ್ಷಣ, ಮೌಲ್ಯ ಶಿಕ್ಷಣ ನೀಡಬೇಕು ಎಂಬ ಕೂಗು ಎಲ್ಲೆಡೆಯಲ್ಲೂ ಕೇಳಿ ಬರುತ್ತಿದೆ. ಆದ್ದರಿಂದ ವಿದ್ಯಾರ್ಥಿಗಳ ಮೇಲೆ ಮೌಲ್ಯಗಳನ್ನು ಹೇರದೇ ಅವರು ಶಾಲೆ-ಕಾಲೇಜು ವಾತಾವರಣದಲ್ಲಿ ಗಳಿಸಲು ಸಾಧ್ಯವಾಗುವಂತಹ ಪರಿಸರ ನಿರ್ಮಿಸುವುದು, ಸವಾಲು ಮತ್ತು ಸಂಕಷ್ಟದ ಸಂದರ್ಭಗಳಲ್ಲಿ ಅವರಲ್ಲಿ ಸ್ವಯಂ ಅರಿವಿನ ಬಗ್ಗೆ ಜಾಗೃತಿ ಮೂಡಿಸುತ್ತಾ, ಸ್ವಯಂ ನಿರ್ಧಾರಗಳ ಮೂಲಕ ಜವಾಬ್ದಾರಿಯುತ ಆಯ್ಕೆಗಳನ್ನು ಮಾಡುವಂತೆ ಸಜ್ಜುಗೊಳಿಸುವ ಕಾರ್ಯ ನಡೆಯಬೇಕಾಗಿದೆ. ಜ್ಞಾನ ಎಂದರೆ ಸಂಪೂರ್ಣ ಕತ್ತಲೆಯನ್ನು ಅಳಿಸುವುದಲ್ಲ. ಅದು ಮುಂದಿನ ಹೆಜ್ಜೆ ಇಡಲು ಬೇಕಾದಷ್ಟು ಬೆಳಕು ಕೊಡುವ ದೀವಿಗೆಯಗಿದೆ. ಶಿಕ್ಷಣವೆಂಬ ದೀಪವನ್ನು ಬೇರೆಲ್ಲೂ ಹುಡುಕಬೇಡಿ. ಓದಿದ, ಕಲಿತ ಪಾಠ, ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಮಹಾತ್ಮರ ಮಾತುಗಳು, ಸಾಧಕರ ಬದುಕುಗಳು ನಮಗೆಲ್ಲ ಸಾಧನೆಯ ಮುಂದಿನ ಹಜ್ಜೆಗಳಾಗಲಿ. ಪೋಷಕರು ಮತ್ತು ಶಿಕ್ಷಕರು ಕೇವಲ ಮೌಲ್ಯಗಳ ಬೋಧನೆ ಮಾಡದೇ ತಾವು ಸ್ವತಃ ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಿಗೆ ಅನುಕರಣೀಯವಾಗಬೇಕು ಅಂದಾಗ ಮಾತ್ರ ಜ್ಞಾನವೇ ಬದುಕಿಗೊಂದು ದಾರಿದೀಪವಾಗಬಲ್ಲದು ಎನ್ನುವುದು ನನ್ನ ಆಶಯ.

ಬೆಂಗಳೂರಿನ ರಸ್ತೆಗಳಲ್ಲಿ ಬಣ್ಣ ಚೆಲ್ಲಿದವರು ಯಾರು?

• ವೀಣಾ ಭಟ್, ಬೆಂಗಳೂರು

ಬೆಂಗಳೂರು ರಸ್ತೆಗಳಲ್ಲೆಲ್ಲ ಗುಲಾಬಿ ರಂಗು ಚೆಲ್ಲಿದೆ. ಬೆಂಗಳೂರು ಪಿಂಕ್ ಸಿಟಿ ಆಗಿ ನಿವಾಸಿಗಳನ್ನು ಆಕರ್ಷಿಸುತ್ತಿದೆ, ಜೊತೆಗೆ ಮನಸ್ಸಿಗೆ ಖುಷಿ ನೀಡುತ್ತಿದೆ. ಎಲ್ಲೆಲ್ಲೂ ಸೌಂದರ್ಯವೆ.... ಹೇಗೆ ಅಂತೀರಾ... ? ಟಬೆಬುಯಾ ರೋಸಿಯಾ ಎಂಬ ಹೆಸರಿನ ಪಿಂಕ್ ಹೂವು ಬೆಂಗಳೂರಿನ ಬೀದಿ ಬೀದಿಗಳಲ್ಲಿ ಅರಳಿ ನಿಂತಿದೆ. ಇದನ್ನು ರೋಸಿ ಟ್ರಂಪೆಟ್ ಟ್ರೀ ಎಂದೂ ಕರೆಯುತ್ತಾರೆ. ಹಿಂದಿಯಲ್ಲಿ ಇದನ್ನು 'ಬಸಂತ್ ರಾಣಿ' ಎಂದು ಕರೆಯಲಾಗುತ್ತದೆ. ಟಬೆಬುಯಾ ಸಸ್ಯಶಾಸ್ತ್ರದ ಬಿಗ್ನೋನಿಯೇಸಿ ಕುಟುಂಬಕ್ಕೆ ಸೇರಿದೆ. ಇದು ಮೂಲತಃ ಪೆರು ದೇಶದ ಹೂವು. ಈ ಗುಲಾಬಿ ಬಣ್ಣದ ಹೂಗಳು ಕಾಲಕ್ಕನುಗುಣವಾಗಿ ಅರಳುತ್ತವೆ. ಈ ಜಾತಿಯ ಮರಗಳು ದಕ್ಷಿಣ ಮೆಕ್ಸಿಕೋ, ವೆನೆಜುವೆಲಾ ಮತ್ತು ಈಕ್ವೆಡಾರ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಹೂವನ್ನು ಎಲ್-ಸಾಲ್ವೆಡಾರ್ ದೇಶ ತನ್ನ ರಾಷ್ಟ್ರೀಯ ಹೂವಾಗಿ ಘೋಷಿಸಿದೆ.

ಈ ಮರವನ್ನು ಹೆಚ್ಚಾಗಿ ಅಲಂಕಾರಿಕ ಮರವಾಗಿ ಉದ್ಯಾನಗಳಲ್ಲಿ ನೆಡಲಾಗುತ್ತದೆ. ಮಳೆಗಾಲದಲ್ಲಿ ಇದು ನೆರಳು ನೀಡುತ್ತದೆ. ಮಾರ್ಚ್ ತಿಂಗಳಿನಲ್ಲಿ, ವಸಂತ ಋತುವಿನಾಗಮನವಾದಂತೆ ಎಲೆಗಳು ಉದುರಿ ಹೂಗಳು ಅರಳಲು ಆರಂಭವಾಗುತ್ತವೆ. ಸುಮಾರು 30 ಮೀಟರು ಎತ್ತರದವರೆಗೆ ಬೆಳೆಯುವ ಇದು ಉಷ್ಣವಲಯದಲ್ಲಿ ಬೆಳೆಯುವ ಮರವಾಗಿದೆ. ಹೂವುಗಳು ನಸುಗುಲಾಬಿ, ಕಡುಗುಲಾಬಿ, ನಸುನೇರಳೆ... ಹೀಗೆ ವಿವಿಧ ಛಾಯೆಯಲ್ಲಿರುತ್ತವೆ. ಪರಾಗಸ್ಪರ್ಶವು ಕೀಟಗಳಿಂದ ಸಂಭವಿಸುತ್ತದೆ. ಹೂವುಗಳು ಟ್ಯಾನೇಜರ್, ಹಮ್ಮಿಂಗ್ ಬರ್ಡ್ಸ್ ಮತ್ತು ಓರಿಯೊಲ್‌ಗಳಂತಹ ಅನೇಕ ಪಕ್ಷಿಗಳನ್ನು ಆಕರ್ಷಿಸುತ್ತದೆ. ಇವುಗಳೂ ಪರಾಗಸ್ಪರ್ಶದಲ್ಲಿ ನೆರವಾಗುತ್ತವೆ. ಈ ಮರವು ಔಷಧೀಯ ಗುಣಗಳನ್ನೂ ಒಳಗೊಂಡಿದೆ. ತೊಗಟೆಯ ಕಷಾಯವನ್ನು ಔಷಧವಾಗಿ ಉಪಯೋಗಿಸುತ್ತಾರೆ.

ಇನ್ನು ಇವು ಬೆಂಗಳೂರಿಗೆ ಬಂದದ್ದು ಹೇಗೆ? ಬ್ರಿಟಿಷರ ಕಾಲ ಕೊನೆಗೊಳ್ಳುವ ಸಮಯ, ಆಗ ತಾನೇ ಸ್ವಾತಂತ್ರ್ಯ ಬಂದಿತ್ತು. ಆ ಸಮಯದಲ್ಲಿ ನಮ್ಮ ತೋಟಗಾರಿಕಾ ತಜ್ಞರು ಬೆಂಗಳೂರಿನಲ್ಲಿ ವಿವಿಧ ಜಾತಿಯ ಹೂವುಗಳು ಮತ್ತು ಸಸ್ಯಗಳನ್ನು ಬೆಳೆಯುವ ಬಗ್ಗೆ ಚರ್ಚಿಸಿ ಈ ಹೂವಿನ ಮರಗಳನ್ನು ಬೆಂಗಳೂರಿಗೆ ಉಡುಗೊರೆಯಾಗಿ ಕೊಟ್ಟರು. ಇವರಲ್ಲದೆ, ಬೆಂಗಳೂರನ್ನು ಉದ್ಯಾನ ನಗರವನ್ನಾಗಿಸುವುದರಲ್ಲಿ 80ರ ದಶಕದಲ್ಲಿ ಅರಣ್ಯ ಇಲಾಖೆ ಮುಖ್ಯಸ್ಥರಾಗಿದ್ದ ದಿವಂಗತ ಶ್ರೀ.ಎಸ್.ಜಿ.ನೇಗಿನಾಳ್ ಅವರದು ದೊಡ್ಡ ಕೊಡುಗೆಯಿದೆ.

ಬೆಂಗಳೂರಿನ ಲಾಲ್ ಬಾಗ್, ಜಯನಗರ 4ನೇ ಬ್ಲಾಕ್, ಕಬ್ಬನ್ ಪಾರ್ಕ್‌ಗೆ ಹೋದರೆ ಟಬೆಬುಯಾ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದು. ಅಲ್ಲದೆ ನಗರದ ಅನೇಕ ಕಡೆ ರಸ್ತೆಗಳಲ್ಲಿ ಟಬೆಬುಯಾ ಮರಗಳನ್ನು ನೋಡಬಹುದು. ಹೊರಗೆ ಹೋದಾಗ ಈ ಹೂಗಳನ್ನು ನೋಡಲು ಮರೆಯದಿರಿ. ಒಮ್ಮೆ ಅತ್ತ ಕಣ್ಣು ಹಾಯಿಸಿ ನಿಮ್ಮ ಚಿಂತೆಯೆಲ್ಲ ಮರೆತುಬಿಡಿ. ಹಾಗೆಯೇ ಈ ಮರಗಳನ್ನು ನೆಡಿಸಿದವರಿಗೆ ನಮಿಸಿ....

ಕಾಡ್ಗಿಚ್ಚು ಜೀವಸಂಕುಲಕ್ಕೆ ಕುತ್ತು

• ಶೇಖರಯ್ಯ ಟಿಎಚ್‌ಎಂ, ಗೆದ್ದಲಗಟ್ಟೆ, ಕೂಡ್ಲಿಗಿ

ಚಳಿಗಾಲ ಮುಗಿದು ಬೇಸಿಗೆ ಕಾಲ ಆರಂಭವಾಗುತ್ತಿದೆ. ಅದರಲ್ಲೂ ಅತಿ ಹೆಚ್ಚು ಬಿಸಿಲು ಇರುವ ಪ್ರದೇಶಗಳಾದ ಬಯಲು ಸೀಮೆಯ ಜೀವಿ ಸಂಕುಲಗಳಿಗೆ ಬೇಸಿಗೆ ಕಾಲ ಸವಾಲಿನ ಕಾಲವಾಗಿದೆ. ಆಹಾರ,ನೀರು ದೊರಕದಂತಹ ಸ್ಥಿತಿಯಲ್ಲೂ ಹಾಗೋ ಹೀಗೋ ತಮ್ಮ ಜೀವವನ್ನು ಹಿಡಿದಿಟ್ಟುಕೊಂಡಿರುತ್ತವೆ. ಮುಂಬರುವ ಮಳೆಗಾಲಕ್ಕಾಗಿ ಎದುರು ನೋಡುತ್ತಿರುತ್ತವೆ. ಒಣಎಲೆಗಳನ್ನು, ಲಭ್ಯವಿರುವ ಕರಡ ಬಾಧೆ ಮೊದಲಾದ ಹುಲ್ಲನ್ನು ತಿಂದು ಬದುಕುವ ಸಸ್ಯಾಹಾರಿಗಳು. ಇದೇ ಸಸ್ಯಾಹಾರಿಗಳನ್ನು ತಿಂದು ಬದುಕುವ ಹಲವು ಮಾಂಸಾಹಾರಿಗಳು ಸಂಕಷ್ಟದಿಂದಲೇ ತಮ್ಮ ಬೇಸಿಗೆಯ ದಿನಗಳನ್ನು ದೂಡುತ್ತವೆ. ಇಂತಹ ಕಷ್ಟಕ್ಕೆ ಬರೆ ಎಳೆದಂತೆ ಎದುರಾಗುವುದೇ ಈ ಕಾಡ್ಗಿಚ್ಚು. ಹೆಸರೇ ಹೇಳುವಂತೆ ಕಾಡಿನಲ್ಲಿ ನೈಸರ್ಗಿಕವಾಗಿ ಅಥವಾ ಮಾನವನ ಚಟುವಟಿಕೆಗಳ ಕಾರಣದಿಂದ ಬೀಳುವ ಬೆಂಕಿಯನ್ನು ಕಾಡ್ಗಿಚ್ಚು ಎನ್ನಬಹುದು.

ಕಾಡಿನಲ್ಲಿ ಬೀಳುವ ಬೆಂಕಿಗೆ ಬಹುಪಾಲು ಸಂದರ್ಭದಲ್ಲಿ ಮಾನವರೇ ಕಾರಣವೆಂಬುದು ನೋವಿನ ಸಂಗತಿ. ಕಾಡಿಗೆ ಬೀಳುವ ಬೆಂಕಿಯು ಲಕ್ಷಾಂತರ ಜೀವಿಗಳ ವಿನಾಶಕ್ಕೆ ಕಾರಣವಾಗುವುದೆಂಬ ಸತ್ಯ ಗೊತ್ತಿದ್ದರೂ ಕಾಡಿಗೆ ಬೆಂಕಿ ಇಡುವ ನರನ ಬುದ್ಧಿಗೆ ಏನೆನ್ನಬೇಕೆಂಬುದೇ ತಿಳಿಯದು. ಕಾಡಿಗೆ ಬೆಂಕಿಬಿದ್ದರೆ ತಮ್ಮ ಜೀವಿ ಸಂಕುಲಗಳನ್ನು ಗೂಡುಗಳಲ್ಲಿ ಬಚ್ಚಿಟ್ಟಿದ್ದ ಪಕ್ಷಿಗಳ ಮೊಟ್ಟೆಗಳು, ಪುಟ್ಟಮರಿಗಳು ಬೆಂಕಿಗೆ ಆಹುತಿಯಾಗುತ್ತವೆ. ತಮ್ಮ ಕರುಳ ಕುಡಿಗಳನ್ನು ಕಳೆದುಕೊಂಡ ಈ ಪಕ್ಷಿಗಳ ಗೋಳು ನಮಗೆ ಅರ್ಥವಾಗುವುದಾದರೂ ಯಾವಾಗ?, ಹಾಗೆಯೇ ಮಣ್ಣಿನ ಗೂಡುಗಳಲ್ಲಿ ನೆಮ್ಮದಿಯಾಗಿ ಬದುಕು ಕಟ್ಟಿಕೊಂಡಿದ್ದ ಇರುವೆ, ಗೊದ್ದ ಸೇರಿ ಸೂಕ್ಷ್ಮಾಣು ಜೀವಿಗಳು ಬೆಂಕಿಯಲ್ಲಿ ಉರಿದು ಹೋಗುತ್ತವೆ. ಅವುಗಳು ಕಟ್ಟಿಕೊಂಡಿದ್ದ ಕನಸುಗಳೆಲ್ಲವೂ ಬೆಂಕಿಯ ಜ್ವಾಲೆಯಲ್ಲಿ ಮಾಯವಾಗುತ್ತವೆ. ಹುತ್ತಗಳಲ್ಲಿದ್ದ ಸರೀಸೃಪಗಳು ಸುಟ್ಟು ಕರಕಲಾಗುತ್ತವೆ. ಹೀಗೆ ಬೆಂಕಿಯ ಕೆನ್ನಾಲಿಗೆಯಿಂದ ಹೊರಬರಲಾಗದ ಹಲವಾರು ಜೀವಿಗಳು ಬೆಂಕಿಗೆ ಆಹುತಿಯಾಗುತ್ತವೆ. ನಾವೆಲ್ಲ ಉಸಿರಾಡಲು ಅತ್ಯಗತ್ಯವಾದ ಆಕ್ಸಿಜನ್ ಅನ್ನು ಉತ್ಪಾದಿಸುವ ಮರಗಿಡಗಳು ಸುಟ್ಟು ಕರಕಲಾಗಿ ಪ್ರಾಣಿ ಸಂಕುಲಕ್ಕೆ ಕುತ್ತು ಬರುತ್ತದೆ.

ಬೆಂಕಿಗೆ ಹಸಿಯಾದರೇನು? ಬಿಸಿಯಾದರೇನು? ಎಂಬ ಮಾತಿನಂತೆ ತನ್ನ ಕೆನ್ನಾಲಿಗೆ ಚಾಚುತ್ತ ಬಲಿ ಪಡೆಯುತ್ತದೆ. ಇಂತಹ ಸಮಯದಲ್ಲಿ ಹಾಗೋ ಹೀಗೋ ಜೀವವನ್ನು ಹಿಡಿದಿಟ್ಟುಕೊಂಡ ಹಲವು ಜೀವಿಗಳು ಬದುಕಲಿಕ್ಕೆ ಬೇಕಾದ ಆಹಾರ ಕಾಡಿನಲ್ಲಿ ದೊರಕದೇ ಹೋದಾಗ, ಅನಿವಾರ್ಯವಾಗಿ ನಾಡಿಗೆ ನುಗ್ಗುತ್ತವೆ. ಬೆಳೆದ ಬೆಳೆಗಳನ್ನು ತಿನ್ನಲಾರಂಭಿಸುತ್ತವೆ. ರೈತರಿಗೆ ಸಂಕಷ್ಟವನ್ನು ತಂದೊಡ್ಡುತ್ತವೆ. ಕೆಲವೊಮ್ಮೆ ಮನುಷ್ಯರ ಪ್ರಾಣಕ್ಕೂ ಕುತ್ತು ತರುತ್ತವೆ. ನಿಮಗೊಂದು ಉದಾಹರಣೆ ಹೇಳುವುದಾದರೆ ಕಾಡಿನಲ್ಲಿದ್ದ ಮೇವನ್ನು ತಿಂದು ಬದುಕುತ್ತಿದ್ದ ಜಿಂಕೆಗಳಿಗೆ ಕಾಡ್ಗಿಚ್ಚಿನ ಕಾರಣದಿಂದ ಮೇವು ದೊರಕದೇ ಹೋದಾಗ, ಅನಿವಾರ್ಯವಾಗಿ ನಾಡಿನತ್ತ ಆಗಮಿಸುತ್ತವೆ. ಈ ಜಿಂಕೆಗಳನ್ನು ಬೇಟೆಯಾಡುತ್ತಿದ್ದ ಮಾಂಸಾಹಾರಿಗಳಿಗೆ ಕಾಡಿನಲ್ಲಿ ಆಹಾರ ದೊರಕದೇ ಹೋಗಿ, ಅವೂ ಆಹಾರವನ್ನು ಹರಸುತ್ತಾ ನಾಡಿನತ್ತ ಆಗಮಿಸುತ್ತವೆ. ಹೀಗೆ ಕಾಡ್ಗಿಚ್ಚು ಇಡೀ ಆಹಾರ ಸರಪಳಿಯನ್ನೇ ತುಂಡರಿಸುತ್ತದೆ.

ಮರಗಿಡಗಳ ಘರ್ಷಣೆಯಿಂದ ಉಂಟಾಗುವ ಕಾಡ್ಗಿಚ್ಚಿನ ಪ್ರಮಾಣ ತೀರಾ ಕಡಿಮೆ ಎಂದೇ ಹೇಳಬಹುದು. ಮಾನವರ ಕಾರಣದಿಂದ ಕಾಡಿಗೆ ಬೆಂಕಿ ಬಿದ್ದ ಉದಾಹರಣೆಗಳೇ ಅಧಿಕ. ಹೀಗಾಗಿ ಪ್ರಜ್ಞಾವಂತ ಸಮಾಜ ಈ ಬಗ್ಗೆ ಎಚ್ಚೆತ್ತುಕೊಳ್ಳಬೇಕಿದೆ. ಕಾಡಿದ್ದರೆ ನಾಡೆಂಬ ಸತ್ಯ ಅರಿಯಬೇಕಿದೆ. ಕಾಡಿನ ಮಧ್ಯೆ ಸಂಚರಿಸುವ ದಾರಿಹೋಕರು ಬಿಡಿ, ಸಿಗರೇಟು ಸೇದಿ ಎಸೆಯದಿರುವ ಸಾಮಾನ್ಯ ತಿಳಿವಳಿಕೆಯನ್ನು ಮೂಡಿಸಿಕೊಳ್ಳಬೇಕಿದೆ. ಅರಣ್ಯ ಇಲಾಖೆಯವರು ನೀಡುವ ಮಾರ್ಗದರ್ಶನವನ್ನು ಪಾಲಿಸಬೇಕಿದೆ. ಕಾಡಂಚಿನ ಜನರು ವಿಶೇಷ ಕಾಳಜಿಯಿಂದ ಕಾಡನ್ನು ಬೆಂಕಿಯಿಂದ ರಕ್ಷಿಸಲು ಸಹಕರಿಸಬೇಕಿದೆ. ಆಕಸ್ಮಿಕವಾಗಿ ಕಾಡಿಗೆ ಬೆಂಕಿ ಬಿದ್ದರೆ ತಕ್ಷಣ ಅರಣ್ಯ ಇಲಾಖೆಯವರ ಗಮನಕ್ಕೆ ತರಬೇಕಿದೆ. ಹಾಗೆಯೇ ಅರಣ್ಯ ಇಲಾಖೆಯವರು ವಿಭಿನ್ನ ಕಾರ್ಯಕ್ರಮಗಳ ಮೂಲಕ ಅರಣ್ಯ ಸಂರಕ್ಷಣೆಯ ಅಗತ್ಯವನ್ನು ನಾಗರಿಕರಿಗೆ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡಬೇಕಿದೆ. ಶಾಲಾ-ಕಾಲೇಜುಗಳಲ್ಲಿ ಮಕ್ಕಳಿಗೆ ತಿಳುವಳಿಕೆ ಮೂಡಿಸಬೇಕಿದೆ. ಆಧುನಿಕ ತಂತ್ರಜ್ಞಾನಗಳ ಸಹಾಯದಿಂದಲೂ ಕಾಡ್ಗಿಚ್ಚನ್ನು ಪತ್ತೆಹಚ್ಚಿ, ನಂದಿಸುವ ಯೋಜನೆಗಳು ಇತ್ತೀಚೆಗೆ ಸಾಕಾರಗೊಳ್ಳುತ್ತಿವೆ. ಬೇಸಿಗೆ ಆರಂಭವಾಗುವ ಮುನ್ನವೇ ಅರಣ್ಯ ಇಲಾಖೆಯವರು ಬೆಂಕಿಯಿಂದ ಕಾಡನ್ನು ರಕ್ಷಿಸುವ ಪರಿಣಾಮಕಾರಿ ಯೋಜನೆಗಳನ್ನು ಹಾಕಿಕೊಳ್ಳಬೇಕಿದೆ. ಬೇಸಿಗೆಯಲ್ಲಿ ಹುಲ್ಲು, ಬಾದೆಗಳನ್ನು ಸುಟ್ಟರೆ ಮಳೆಗಾಲದಲ್ಲಿ ಸಮೃದ್ಧವಾಗಿ ಬೆಳೆಯುತ್ತದೆ ಎಂಬ ತಪ್ಪು ಪರಿಕಲ್ಪನೆಯನ್ನು ಜನರಿಂದ ದೂರ ಮಾಡಿಸಬೇಕಿದೆ.

ಸಂವಿಧಾನದಲ್ಲಿ ಹೇಳಿರುವ ಮೂಲಭೂತ ಕರ್ತವ್ಯಗಳಲ್ಲಿ ಕಾಡು, ನದಿಗಳು, ಕೆರೆಗಳು, ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಜೀವಂತ ಜೀವಿಗಳ ಬಗ್ಗೆ ದಯೆ ತೋರುವುದು ಒಂದಾಗಿದೆ. ಇಡೀ ಸಮಾಜವೇ ದೃಢಸಂಕಲ್ಪದ ಮೂಲಕ ಕಾಡನ್ನು ರಕ್ಷಿಸುವ ಹೊಣೆಯನ್ನು ಹೊರಬೇಕಿದೆ. ಏಕೆಂದರೆ ಈ ಮಣ್ಣು ನಮ್ಮದು. ಈ ಗಾಳಿ ನಮ್ಮದು. ಕಲಕಲನೆ ಹರಿಯುತಿಹ ನೀರು ನಮ್ಮದುಎಂಬ ಕವಿವಾಣಿ ನಿಜವಾಗಬೇಕಿದೆ. ಕಾಡಿನ ರಕ್ಷಣೆ ನಮ್ಮ ಸಂಸ್ಕೃತಿಯಾಗಬೇಕಿದೆ.ಕಾಡನ್ನು ರಕ್ಷಿಸುವ ಮೂಲಕ ನಾಡನ್ನು ರಕ್ಷಿಸುವ ಕಾರ್ಯವಾಗಬೇಕಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1		■	2		3	■	4	5
	■	■		■		■	■	
6	7			■	8		9	
■		■	■	■	■	■		■
■	10			■	11			■
■		■	■	■	■	■		■
12			13	■	14			15
	■	■		■		■	■	
16		■	17			■	18	

ಎಡದಿಂದ ಬಲಕ್ಕೆ

1. ಪ್ರತಿದಿನ ಅಥವಾ ಯಾವಾಗಲೂ (2)
2. ಇಂದ್ರಿಯ ನಿಗ್ರಹ ಅಥವಾ ಹತೋಟಿ ಎಂದರ್ಥ (3)
4. ಅಕ್ಕನ ಗಂಡ (2)
6. ಹೂವಿನಿಂದ ದುಂಬಿಯು ಹೀರುವ ರಸ (4)
8. ಬುದ್ಧನಿಗೆ ಮತ್ತೊಂದು ಹೆಸರು (4)
10. ಗತಿ ಕಾಣಿಸಲು ಬಂದಿದ್ದಾಳೆ ಪತಿವ್ರತೆ (3)
11. ಹೂವಿನ ಧೂಳಿಯು ರಾಗದೊಂದಿಗೆ ಬಂದಿದೆ (3)
12. ಎಳೆಯ ಮಗು ಮತ್ತೊಂದು ದನದೊಂದಿಗೆ ಬಂದಿದೆ (4)
14. ನಮ್ರತೆಯಿಂದ ಕೂಡಿದ ಎಂದರ್ಥ (4)
16. ಉದ್ಧಟನಲ್ಲ, ಧೈರ್ಯಶಾಲಿ (2)
17. ಕಂಡವರೆದುರು ಕೈಚಾಚುವ ನಿರ್ಗತಿಕ (3)
18. ಸಣ್ಣ ಸೇತುವೆ (2)

ಮೇಲಿಂದ ಕೆಳಕ್ಕೆ

1. ಹೆಸರಿಲ್ಲದಂತೆ ಅಳಿದು ಹೋಗುವಿಕೆ (3)
2. ವಾದವಲ್ಲ, ಪರಸ್ಪರ ಸಂಭಾಷಣೆ (3)
3. ಬೀಸುವ ಗಾಳಿ (3)
5. ಆತ ಮಾಡಿದ ಒತ್ತಾಯ (3)
7. ಅನ್ಯರನ್ನು ಅಲಕ್ಷಿಸು (5)
9. ತುಂಬಾ ನಿಧಾನವಾಗಿ ನಡೆಯುವುದನ್ನು ದೊಡ್ಡಗಾತ್ರದ ಪ್ರಾಣಿಯೊಂದಿಗೆ ಸಮೀಕರಿಸಿ ಹೀಗೆ ಹೇಳುವರು (5)
12. ಕಾಮಾಲೆಯಾದವರಿಗೆ ಕಂಡದ್ದೆಲ್ಲ ಈ ಬಣ್ಣ (3)
13. ಕೇಳಿದ್ದನ್ನೆಲ್ಲ ಕೊಡುವ ದೇವಲೋಕದ ಕಾಮಧೇನು (3)
14. ಮೇಲೆ ನಮೂದಿಸಿದ ಎಂದರ್ಥ (3)
15. ಮೃತ್ಯು ದೇವನೊಂದಿಗೆ ಬಂದಿರುವ ಜೋಡಿ (3)

ಸರಿಯುತ್ತರಗಳು

ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಸೂರ್ಯ ನಮಸ್ಕಾರ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಬೆಳಗಿನ ಜಾವದ ತಂಪಾದ ಗಾಳಿ ಬೀಸುತ್ತಿದ್ದರೂ, ರಾಜೀವನ ಮನಸ್ಸಿನಲ್ಲಿ ಮಾತ್ರ ಬಿರುಗಾಳಿ ಎದ್ದಿತ್ತು. ಜೀವನದ ಸೋಲುಗಳು, ಕೆಲಸದ ಒತ್ತಡ ಮತ್ತು ಭವಿಷ್ಯದ ಚಿಂತೆಗಳು ಅವನನ್ನು ಕುಗ್ಗಿಸಿದ್ದವು. ಅಂದು ನಿದ್ದೆ ಬಾರದೆ ಮನೆಯ ತಾರಸಿಯ ಮೇಲೆ ಕುಳಿತು ಶೂನ್ಯವನ್ನೇ ನೋಡುತ್ತಿದ್ದ ರಾಜೀವನ ಕಣ್ಣುಗಳಲ್ಲಿ ಹತಾಶೆ ತುಂಬಿತ್ತು.

ಅವನ ತಾತ, ಸದಾ ಪ್ರಶಾಂತವಾಗಿರುವ ಹಿರಿಯ ಜೀವ, ರಾಜೀವನ ಭುಜದ ಮೇಲೆ ಮೆಲ್ಲನೆ ಕೈ ಇಟ್ಟರು. ರಾಜೀವ, ಕತ್ತಲೆ ಎಷ್ಟೇ ದಟ್ಟವಾಗಿದ್ದರೂ, ಸೂರ್ಯೋದಯವನ್ನು ತಡೆಯಲು ಅದಕ್ಕೆ ಸಾಧ್ಯವಿಲ್ಲ. ಬಾ, ಇಂದು ಆ ಸೂರ್ಯನ ಅಪ್ಪುಗೆಯಲ್ಲಿ ನಿನ್ನ ನೋವನ್ನು ಕರಗಿಸೋಣ, ಎಂದರು. ತಾತ ಅವನನ್ನು ಪೂರ್ವ ದಿಕ್ಕಿಗೆ ನಿಲ್ಲಿಸಿ, ಸೂರ್ಯ ನಮಸ್ಕಾರದ ಸಂಸ್ಕಾರವನ್ನು ಅವನಿಗೆ ಧಾರೆ ಎರೆದರು.

ರಾಜೀವ ಕೈಗಳನ್ನು ಜೋಡಿಸಿ ನಿಂತನು. ತಾತ ಹೇಳಿದರು, ರಾಜೀವ, ಮೊದಲ ಮಂತ್ರ 'ಓಂ ಮಿತ್ರಾಯ ನಮಃ'. ಇದರರ್ಥ ಸೂರ್ಯ ಎಲ್ಲರಿಗೂ ಮಿತ್ರ. ನೀನು ಒಂಟಿಯಲ್ಲ, ಈ ಪ್ರಕೃತಿ ನಿನ್ನ ಜೊತೆಗಿದೆ ಎಂದು ಭಾವಿಸು. ರಾಜೀವನಿಗೆ ತಾನು ಏಕಾಂಗಿಯಲ್ಲ ಎಂಬ ಸಣ್ಣ ಧೈರ್ಯ ಮೂಡಿತು.

ಕೈಗಳನ್ನು ಮೇಲಕ್ಕೆತ್ತಿ ಹಿಂದಕ್ಕೆ ಬಾಗುವಾಗ (ಹಸ್ತೌತ್ತನಾಸನ), ಓಂ ರವಯೇ ನಮಃ ಎನ್ನುತ್ತಾ, ನಿನ್ನ ದುಃಖದ ಭಾರವನ್ನು ಇಳಿಸಿ, ರವಿಯಂತೆ ಪ್ರಕಾಶಿಸಲು ಸಿದ್ಧನಾಗು, ಎಂದರು. ರಾಜೀವ ಆಕಾಶದ ಕಡೆ ಮುಖ ಮಾಡಿದಾಗ, ಅವನ ಎದೆಯಲ್ಲಿದ್ದ ಭಾರ ಹಗುರಾದಂತೆ ಭಾಸವಾಯಿತು.

ಮುಂದಕ್ಕೆ ಬಾಗಿ ಪಾದಗಳನ್ನು ಮುಟ್ಟುವಾಗ (ಹಸ್ತಪಾದಾಸನ), ಓಂ ಸೂರ್ಯಾಯ ನಮಃ ಎಂದರು. ನಿನ್ನ ಸೋಲಿನ ಕತ್ತಲೆಯನ್ನು ಆ ಸೂರ್ಯನಿಗೆ ಒಪ್ಪಿಸಿಬಿಡು ರಾಜೀವ, ಅವನು ಕತ್ತಲೆ ನಿವಾರಕ, ಎಂದ ಮಾತು ರಾಜೀವನ ಮನ ಮುಟ್ಟಿತು. ಕಾಲನ್ನು ಹಿಂದಕ್ಕೆ ಚಾಚಿ ತಲೆ ಎತ್ತಿದಾಗ (ಅಶ್ವ ಸಂಚಲನಾಸನ), ಓಂ ಭಾನವೇ ನಮಃ ಎಂಬ ಮಂತ್ರ ಬಂತು. ನೋಡು ರಾಜೀವ, ಕತ್ತಲೆಯನ್ನು ಸರಿಸಿ ಬರುವ ಆ ಭಾನುವಿನ ತೇಜಸ್ಸು ನಿನ್ನಲ್ಲೂ ಇದೆ, ಎಂದರು ತಾತ.

ದಂಡಾಸನ ಮತ್ತು ಸಾಷ್ಟಾಂಗ ನಮಸ್ಕಾರ ಮಾಡುವಾಗ, ಓಂ ಖಗಾಯ ನಮಃ ಮತ್ತು ಓಂ ಪೂಷ್ಣೇ ನಮಃ ಎಂದು ಜಪಿಸಿದರು. ಭೂತಾಯಿ ನಿನ್ನನ್ನು ತಾಯಿಯಂತೆ ಪೋಷಿಸುತ್ತಿದ್ದಾಳೆ. ನೀನು ಬಲಹೀನನಲ್ಲ, ಈ ಸೃಷ್ಟಿಯ ಶಕ್ತಿ ನಿನ್ನ ಬೆನ್ನಿಗಿದೆ, ಎಂಬ ಮಾತುಗಳು ರಾಜೀವನ ಕಣ್ಣಲ್ಲಿ ನೀರು ಹೆಪ್ಪುಗಟ್ಟಿತ್ತು. ಅದು ದುಃಖದ ಹನಿಗಳಲ್ಲ, ಕೃತಜ್ಞತೆಯ ಕಣ್ಣೀರಾಗಿತ್ತು.

ಹಾವಿನಂತೆ ಹೆಡೆ ಎತ್ತಿ (ಭುಜಂಗಾಸನ) ಓಂ ಹಿರಣ್ಯ ಗರ್ಭಾಯ ನಮಃ ಎಂದಾಗ, ತಾತ ಗಟ್ಟಿಯಾಗಿ ಹೇಳಿದರು, ರಾಜೀವ, ನಿನ್ನೊಳಗೆ ಒಂದು ಚಿನ್ನದಂತಹ ಸುಂದರ ಮನಸ್ಸಿದೆ. ಸೋಲುಗಳು ಅದನ್ನು ಮರೆಮಾಚಿರಬಹುದು, ಆದರೆ ನಾಶಮಾಡಲು ಸಾಧ್ಯವಿಲ್ಲ. ಈ ಮಾತು ರಾಜೀವನ ಎದೆಯಲ್ಲಿದ್ದ ನಡುಕವನ್ನು ನಿಲ್ಲಿಸಿ, ಆತ್ಮವಿಶ್ವಾಸವನ್ನು ತುಂಬಿತು.

ಮುಂದಿನ ಆಸನಗಳಲ್ಲಿ ಓಂ ಮರೀಚಯೇ ನಮಃ, ಓಂ ಆದಿತ್ಯಾಯ ನಮಃ, ಓಂ ಸವಿತ್ರೇ ನಮಃ ಮತ್ತು ಓಂ ಅರ್ಕಾಯ ನಮಃ ಎಂದು ಹೇಳುತ್ತಾ, ರಾಜೀವ ತನ್ನ ಅಸ್ತಿತ್ವವನ್ನು ಬ್ರಹ್ಮಾಂಡದ ಶಕ್ತಿಗೆ ಜೋಡಿಸಿದನು. ಕೊನೆಯದಾಗಿ, ಮತ್ತೆ ನೇರವಾಗಿ ನಿಂತು (ತಾಡಾಸನ) ಓಂ ಭಾಸ್ಕರಾಯ ನಮಃ ಎಂದು ಕೈ ಮುಗಿದಾಗ, ದಿಗಂತದಲ್ಲಿ ಸೂರ್ಯ ಪೂರ್ತಿಯಾಗಿ ಮೂಡಿಬಂದಿದ್ದನು. ಬರೀ ಆಗಸದಲ್ಲಿ ಮಾತ್ರವಲ್ಲ, ರಾಜೀವನ ಮನಸ್ಸಿನಲ್ಲೂ ಸೂರ್ಯೋದಯವಾಗಿತ್ತು.

ರಾಜೀವ ದೀರ್ಘವಾಗಿ ಉಸಿರು ಬಿಟ್ಟನು. ಅವನ ಕೆನ್ನೆಯ ಮೇಲೆ ಹರಿಯುತ್ತಿದ್ದ ಆನಂದ ಬಾಷ್ಪ ಬೆಳಗಿನಜಾವದ ಸೂರ್ಯನ ಕಿರಣಗಳು ತಾಗಿ ಮಿನುಗುತ್ತಿತ್ತು. ಅವನು ತಾತನ ಪಾದ ಮುಟ್ಟಿ, ತಾತ, ಇಷ್ಟು ದಿನ ನಾನು ಕತ್ತಲನ್ನೇ ನೋಡುತ್ತಿದ್ದೆ, ಇಂದು ನನ್ನೊಳಗಿನ ಬೆಳಕನ್ನು ತೋರಿಸಿದಿರಿ, ಎಂದನು. ಪ್ರತಿ ಬಾರಿ ಬಿದ್ದಾಗಲೂ, ಸೂರ್ಯನಂತೆ ಮತ್ತೆ ಏಳಬಹುದು ಎಂಬ ಸತ್ಯವನ್ನು ರಾಜೀವ ಕಂಡುಕೊಂಡನು.

ಭಾರತೀಯ ಸನಾತನ ಧರ್ಮದಿಂದ, ಪದ್ಧತಿಗಳಿಂದ ನಮಗೆ ಸಿಕ್ಕ ಯೋಗ, ಸೂರ್ಯ ನಮಸ್ಕಾರ ಮುಂತಾದ ಸಂಸ್ಕಾರಗಳು ಬರೀ ದೈಹಿಕವಾಗಿ ಅಲ್ಲ ಮಾನಸಿಕವಾಗಿ ಅದಕ್ಕೂ ಮಿಗಿಲಾಗಿ ಸರ್ವತೋಮುಖವಾಗಿ ನಮ್ಮ ಮನುಷ್ಯ ಜನ್ಮವನ್ನು ಔನ್ನತ್ಯಕ್ಕೆ ಕರೆದೊಯ್ಯುವ ಸಾಮರ್ಥ್ಯವಿರುವ ಹಿರಿಯರ ಆಶೀರ್ವಾದ ರೂಪದ ವರಗಳು.

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಸೆಮೀಸ್ ಪ್ರವೇಶಕ್ಕೆ ಜಿಂಬಾಬ್ವೆ ವಿರುದ್ಧ ಗೆಲುವು ಅನಿವಾರ್ಯ | ತಂಡದಲ್ಲಿ ಮಹತ್ತರ ಬದಲಾವಣೆ ಸಾಧ್ಯತೆ

ಭಾರತಕ್ಕಿಂದು ಮಾಡು-ಮಡಿ ಪಂದ್ಯ

ಚೆನ್ನೈ: ಟಿ20 ವಿಶ್ವಕಪ್ ಸೆಮಿಫೈನಲ್ ಸ್ಥಾನವನ್ನು ಜೀವಂತವಿರಿಸಿಕೊಳ್ಳುವ ನಿಟ್ಟಿನಲ್ಲಿ ಸೂಪರ್-8 ಪಂದ್ಯದಲ್ಲಿ ಭಾರತ ತಂಡ ಇಂದು ಜಿಂಬಾಬ್ವೆ ವಿರುದ್ಧ ಸೆಣಸಾಡಲಿದ್ದು, ಪಂದ್ಯ ಗೆಲ್ಲುವ ಅನಿವಾರ್ಯತೆಯಲ್ಲಿದೆ. ಎರಡೂ ತಂಡಗಳ ಈ ಮಹತ್ವದ ಹಣಾಹಣಿಯು ಇಲ್ಲಿನ ಎಂ.ಎ ಚಿದಂಬರಂ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆಯಲಿದೆ.

ಗೆಲ್ಲಲೇಬೇಕಾದ ಪಂದ್ಯ ಇದಾಗಿರುವುದರಿಂದ ಭಾರತೀಯ ತಂಡದ ಆಯ್ಕೆ ಮಂಡಳಿಯು ಆಡುವ ಹನ್ನೊಂದರ ಬಳಗದಲ್ಲಿ ಹಲವಾರು ಬದಲಾವಣೆಗಳನ್ನು ಮಾಡುವುದು ಖಚಿತವಾಗಿದೆ. ಮೇಲ್ನೋಟಕ್ಕೆ ಭಾರತವು ಮೂರು ಬದಲಾವಣೆಯೊಂದಿಗೆ ಆಡಲಿಳಿಯಬಹುದು. ಅಮದಾಬಾದ್‌ನ ಮೋದಿ ಕ್ರೀಡಾಂಗಣದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಸೂಪರ್-8 ಪಂದ್ಯದಿಂದ ಹೊರಗುಳಿದಿದ್ದ ಉಪನಾಯಕ ಅಕ್ಷರ್ ಪಟೇಲ್ ಅವರು ವಾಷಿಂಗ್ಟನ್ ಸುಂದರ್ ಬದಲಿಗೆ ಆಡುವ ಸಾಧ್ಯತೆ ಹೆಚ್ಚಿದೆ. ಭಾರತ ಪರ ಸುಂದರ್ 2 ಪಂದ್ಯಗಳನ್ನು ಆಡಿದ್ದರೂ ಬ್ಯಾಟಿಂಗ್ ಅಥವಾ ಬೌಲಿಂಗ್‌ನಲ್ಲಿ ಯಾವುದೇ ಮಹತ್ವದ ಕೊಡುಗೆ ನೀಡುವಲ್ಲಿ ವಿಫಲರಾಗಿದ್ದರು. ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಕೇವಲ ಎರಡು ಓವರ್ ಬೌಲಿಂಗ್ ಮಾಡಿ ವಿಕೆಟ್ ಕೂಡ ಪಡೆಯಲು ಅವರಿಂದ ಸಾಧ್ಯವಾಗಲಿಲ್ಲ, ಬ್ಯಾಟಿಂಗ್‌ನಲ್ಲಿ 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದು 11 ಎಸೆತಗಳಲ್ಲಿ 11 ರನ್ ಗಳಿಸಿದ್ದರು. ಸುಂದರ್ ಜೊತೆಗೆ ತಿಲಕ್ ವರ್ಮಾ, ಅಭಿಷೇಕ್ ಶರ್ಮಾ ಕೂಡಾ ತಂಡದಿಂದ ಹೊರಗುಳಿಯುವ ಸಾಧ್ಯತೆ ಹೆಚ್ಚು. ರಿಂಕು ಸಿಂಗ್ ಅವರು ಈಗಾಗಲೇ ತಮ್ಮ ತಂದೆಯ ಅನಾರೋಗ್ಯದ ಹಿನ್ನೆಲೆಯಲ್ಲಿ ತಂಡದಿಂದ ದೂರ ಉಳಿದಿದ್ದಾರೆ. ಆ ಕಾರಣಕ್ಕಾಗಿ ಸಂಜು ಸ್ಯಾಮ್ಸನ್‌ಗೆ ಒಂದು ವೇಳೆ ಸ್ಥಾನ ದೊರೆತರೂ ಆಶ್ಚರ್ಯಪಡಬೇಕಿಲ್ಲ.

ಭಾರತ ಸಂಭಾವ್ಯ ತಂಡ
ಸೂರ್ಯಕುಮಾರ್ ಯಾದವ್ (ನಾಯಕ), ಸಂಜು ಸ್ಯಾಮ್ಸನ್, ಸಂಜು ಸ್ಯಾಮ್ಸನ್ (ಕೀಪರ್), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ.

ಭಾರತ- ಜಿಂಬಾಬ್ವೆ
ಟಿ20 ಮುಖಾಮುಖಿ
ಒಟ್ಟು ಪಂದ್ಯಗಳು: 13
ಭಾರತದ ಗೆಲುವು: 10
ಜಿಂಬಾಬ್ವೆಯ ಗೆಲುವು: 3

ಜಿಂಬಾಬ್ವೆ ಸಂಭಾವ್ಯ ತಂಡ
ಸಿಕಂದರ್ ರಝಾ (ನಾಯಕ), ಬ್ರಿಯಾನ್ ಬೆನೆಟ್, ತಡಿವಾನಾಶೆ ಮರುಮಾನಿ (ಕೀಪರ್), ರಿಯಾನ್ ಬರ್ಲ್, ತಶಿಂಗಾ ಮುಸೆಕಿವಾ, ಟೋನಿ ಮುನ್ಯೊಂಗಾ, ಡಿಯೋನ್ ಮೈಯರ್ಸ್, ಬ್ರಾಡ್ ಇವಾನ್ಸ್, ಗ್ರೇಮ್ ಕ್ರೀಮರ್, ರಿಚರ್ಡ್ ನಾಗರವಾ, ಬ್ಲೆಸ್ಸಿಂಗ್ ಮುಜರಬಾನಿ.

ಸ್ಪಿನ್ನರ್‌ಗಳಿಗೆ ಚೆನ್ನೈ ಪಿಚ್ ಅನುಕೂಲಕರವಾಗಿರುವ ಕಾರಣ ಕುಲದೀಪ್ ಯಾದವ್ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಗಿಟ್ಟಿಸಬಹುದು. ಟೂರ್ನಮೆಂಟ್‌ನಲ್ಲಿ ಅವರು ಕೇವಲ ಒಂದು ಪಂದ್ಯವನ್ನು ಮಾತ್ರ ಆಡಿದ್ದಾರೆ. ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಮೂರು ಓವರ್‌ಗಳಲ್ಲಿ 14 ರನ್‌ಗಳಿಗೆ ಒಂದು ವಿಕೆಟ್ ಪಡೆದಿದ್ದರು.

ಅದೇ ರೀತಿ ಜಿಂಬಾಬ್ವೆ ತಂಡ ಕೂಡಾ ಆಡುವ ಹನ್ನೊಂದರ ಬಳಗದಲ್ಲಿ ಕೆಲವು ಪ್ರಮುಖ ಬದಲಾವಣೆಗಳನ್ನು ಮಾಡಲು ಮುಂದಾಗಿದೆ. ಈಗಾಗಲೇ ಈ ವಿಶ್ವಕಪ್‌ನಲ್ಲಿ ನಾಯಕ ಸಿಕಂದರ್ ರಝಾ ಉತ್ತಮ ಫಾರ್ಮ್ ಕಂಡುಕೊಂಡಿದ್ದಾರೆ. ಟೋನಿ ಮುನ್ಯೊಂಗಾ ಕೂಡಾ ಉತ್ತಮ ರನ್ ಕಲೆ ಹಾಕಿದ್ದಾರೆ. ಬೌಲರ್‌ಗಳ ಪೈಕಿ ಮುಜರಬಾನಿ ಅಂತೂ ಪಂದ್ಯದಿಂದ ಪಂದ್ಯಕ್ಕೆ ಉತ್ತಮ ಲಯವನ್ನು ಕಂಡುಕೊಳ್ಳುತ್ತಾ ಹೋಗುತ್ತಿದ್ದಾರೆ.

ಪಿಚ್ ರಿಪೋರ್ಟ್: ಚೆಪಾಕ್ ಕ್ರೀಡಾಂಗಣದ ಪಿಚ್ ಸ್ಪಿನ್ ಮತ್ತು ನಿಧಾನಗತಿಯ ಬೌಲಿಂಗ್‌ಗೆ ಹೆಚ್ಚು ಸಹಕಾರಿ, ಹೀಗಿದ್ದರೂ ಬ್ಯಾಟ್ಸ್‌ಮನ್‌ಗಳಿಗೂ ಅನುಕೂಲಕರವಾಗಿದೆ. 170-180 ಸ್ಕೋರ್‌ಗಳು ಮೊದಲ ಇನ್ನಿಂಗ್ಸ್‌ನಲ್ಲಿ ಸುಲಭವಾಗಿ ಕಲೆ ಹಾಕಬಹುದು. ಪಂದ್ಯ ಸಾಗಿದಂತೆ ಸ್ಪಿನ್ನರ್‌ಗಳು ಹೆಚ್ಚು ಹಿಡಿತ ಸಾಧಿಸಬಹುದು. ಚೇಸಿಂಗ್ ಕೊಂಚ ಕಷ್ಟಕರವಾದುದರಿಂದ ಟಾಸ್ ಗೆದ್ದ ತಂಡ ಮೊದಲು ಬ್ಯಾಟಿಂಗ್ ಆಯ್ದುಕೊಳ್ಳಬಹುದು.

ಹವಾಮಾನ ವರದಿ: ಚೆನ್ನೈನಲ್ಲಿ ಹವಾಮಾನ ಮುನ್ಸೂಚನೆ ಉತ್ತಮವಾಗಿದ್ದು, ಆಕಾಶವು ಶುಭ್ರವಾಗಿರುವ ಕಾರಣ ಮಳೆ ಬೀಳುವ ಸಾಧ್ಯತೆ ಇಲ್ಲ. ಪಂದ್ಯದ ಸಮಯದಲ್ಲಿ 26-29 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ನಿರೀಕ್ಷಿಸಬಹುದು. ಆರ್ದ್ರತೆಯು ಶೇಕಡಾ 70ಕ್ಕಿಂತ ಹೆಚ್ಚಾಗುವ ನಿರೀಕ್ಷೆಯಿದೆ.

ಸೂಪರ್-8 ಕದನದ ಮೊದಲ ಪಂದ್ಯದಲ್ಲಿ ಭಾರತವು ದ.ಆಫ್ರಿಕಾ ವಿರುದ್ಧ ಸೋತು ಯಾವುದೇ ಅಂಕ ಗಳಿಸುವಲ್ಲಿ ವಿಫಲವಾಯಿತು. ಜಿಂಬಾಬ್ವೆ ಕೂಡಾ ವೆಸ್ಟ್ ಇಂಡೀಸ್ ವಿರುದ್ಧ ಸೋತು ಯಾವುದೇ ಅಂಕ ಗಳಿಸಲೂ ಕೂಡಾ ಅದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಭಾರತದ ಪಾಲಿಗೆ ಈ ಪಂದ್ಯವು ಮಾಡು ಇಲ್ಲವೇ ಮಡಿ ಎಂಬಂತಾಗಿದ್ದು, ಗುರುವಾರದ ಈ ಹಣಾಹಣಿ ಬಹಳ ರೋಚಕತೆಯಿಂದ ಕೂಡಿರಲಿದೆ ಎಂಬುವುದಂತೂ ಕ್ರಿಕೆಟ್‌ಪ್ರೇಮಿಗಳ ನಿರೀಕ್ಷೆಯಾಗಿದೆ.

3 ಅಂಕದೊಂದಿಗೆ ಸೆ.ಫೈನಲ್ ಸನಿಹದಲ್ಲಿ ನ್ಯೂಜಿಲೆಂಡ್

ವಿಶ್ವಕಪ್: ಲಂಕಾ ಹೊರಕ್ಕೆ

ಕೊಲಂಬೊ: ಇಲ್ಲಿ ಬುಧವಾರ ನಡೆದ ಟಿ20 ವಿಶ್ವಕಪ್ ಸೂಪರ್-8 ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಆತಿಥೇಯ ಶ್ರೀಲಂಕಾವನ್ನು 61 ರನ್‌ಗಳಿಂದ ಮಣಿಸಿದೆ. ಈ ಪಂದ್ಯದ ಮೂಲಕ ಲಂಕನ್ನರು ವಿಶ್ವಕಪ್‌ನಿಂದ ಹೊರಬಿದ್ದರೆ, ಕಿವೀಸ್ ತಂಡವು ಸೆಮಿಫೈನಲ್ ಅರ್ಹತೆಯನ್ನು ಇನ್ನೂ ಜೀವಂತವಾಗಿರಿಸಿದೆ.

ನ್ಯೂಜಿಲೆಂಡ್ ಪರ ಬ್ಯಾಟಿಂಗ್‌ನಲ್ಲಿ 32 ರನ್ ಮತ್ತು ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆದ ಭಾರತೀಯ ಮೂಲದ ರಚಿನ್ ರವೀಂದ್ರ ಗೆಲುವಿನ ರೂವಾರಿ ಎನಿಸಿದರು. ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 168 ರನ್ ಗಳಿಸಿತು. ಆ ಗುರಿ ಬೆಂಬತ್ತಿದ ಶ್ರೀಲಂಕಾ 8 ವಿಕೆಟ್ ನಷ್ಟಕ್ಕೆ 107 ರನ್ ಗಳಿಸಲಷ್ಟೇ ಶಕ್ತವಾಯಿತು.

ನ್ಯೂಜಿಲೆಂಡ್‌ನ ಇನ್ನಿಂಗ್ಸ್ ಆರಂಭ ಚೆನ್ನಾಗಿರಲಿಲ್ಲ. 30 ರನ್ ಆಗುವಷ್ಟರಲ್ಲಿ 23 ರನ್ ಗಳಿಸಿದ್ದ ಫಿನ್ ಅಲೆನ್ ಅವರು ವಿಕೆಟ್ ಕಳೆದುಕೊಂಡರು. ಆ ಬಳಿಕ ಟಿಮ್ ಸೀಪರ್ಟ್ ಮತ್ತು ರಚಿನ್ ರವೀಂದ್ರ ಸ್ವಲ್ಪ ಹೊತ್ತು ಜತೆಯಾದರು. ಆದರೆ ತಂಡದ ಮೊತ್ತ 34 ಆದಾಗ 8 ರನ್ ಗಳಿಸಿದ್ದ ಸೀಪರ್ಟ್ ಔಟ್ ಆದರು.

ನಂತರ ರಚಿನ್ ರವೀಂದ್ರ ಮತ್ತು ಗ್ಲೆನ್ ಫಿಲಿಪ್ಸ್ ಸ್ವಲ್ಪ ಹೊತ್ತು ಜತೆಯಾಟ ಆಡಿದರು. ತಂಡ 75 ರನ್ ಗಳಿಸಿದ್ದ ವೇಳೆ 18 ಬಾಲ್‌ಗಳಿಂದ 18 ರನ್ ಗಳಿಸಿದ್ದ ಗ್ಲೆನ್ ಫಿಲಿಪ್ಸ್ ಔಟ್ ಆದರು. 32 ಬಾಲ್‌ಗಳಲ್ಲಿ 22 ರನ್ ಗಳಿಸಿದ್ದ ರಚಿನ್ ರವೀಂದ್ರ ಅವರು ಮಹೇಶ್ ತೀಕ್ಷಣ ಅವರ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು.

ಡೇರಿಲ್ ಮಿಚೆಲ್ ಕೇವಲ 3 ರನ್ ಗಳಿಸಿ ಔಟ್ ಆದರೆ, ಕಿವೀಸ್ ಪರ ನಾಯಕ ಮಿಚೆಲ್ ಸ್ಯಾಂಟ್ನರ್ ಕೇವಲ 26 ಬಾಲ್‌ಗಳಿಂದ 47 ರನ್ ಗಳಿಸಿ ನ್ಯೂಜಿಲೆಂಡ್ ತಂಡವು 150 ರನ್‌ಗಳ ಗಡಿ ದಾಟಲು ನೆರವಾದರು. ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 2 ಬೌಂಡರಿಗಳಿದ್ದವು. ಮೆಕಾಂಚಿ 23 ಬಾಲ್‌ಗಳಿಂದ 31 ರನ್ ಗಳಿಸಿ ಅಜೇಯರಾಗುಳಿದರು.

ಶ್ರೀಲಂಕಾ ಪರ ಮಹೇಶ್ ತೀಕ್ಷಣ 30 ರನ್‌ಗಳನ್ನು ಹಾಗೂ ದುಷ್ಮಂತ್ ಚಮೀರ 38 ರನ್‌ಗಳನ್ನು ನೀಡಿ ತಲಾ 3 ವಿಕೆಟ್ ಪಡೆದು ಯಶಸ್ವಿ ಬೌಲರ್‌ಗಳೆನಿಸಿದರು.

ರಚಿನ್ ರವೀಂದ್ರ ಆಲ್‌ರೌಂಡ್ ಪ್ರದರ್ಶನ

169 ರನ್‌ಗಳ ಗೆಲುವಿನ ಗುರಿಯನ್ನು ಪಡೆದ ಶ್ರೀಲಂಕಾ ಆರಂಭದಿಂದಲೇ ಹಿನ್ನಡೆ ಅನುಭವಿಸಿತು. ಆರಂಭಿಕ ಆಟಗಾರ ಪಾತುಂ ನಿಸ್ಸಂಕ ಮೊದಲ ಬಾಲ್‌ನಲ್ಲೇ ಔಟ್ ಆದರು. ಆ ಬಳಿಕ ಕುಸಲ್ ಮೆಂಡಿಸ್ ಮತ್ತು ಚರಿತ್ ಅಸಲಂಕಾ ಸ್ವಲ್ಪ ಹೊತ್ತು ಜತೆಯಾಟ ಆಡಿದರು. ಆದರೆ 9 ಬಾಲ್‌ಗಳಲ್ಲಿ 5 ರನ್ ಗಳಿಸಿದ್ದ ವೇಳೆ ಅಸಲಂಕಾ ಅವರು ಮ್ಯಾಟ್ ಹೆನ್ರಿ ಬೌಲಿಂಗ್‌ನಲ್ಲಿ ಔಟ್ ಆದರು.

ಕುಸಲ್ ಮೆಂಡಿಸ್ 22 ಬಾಲ್‌ಗಳಲ್ಲಿ 11 ರನ್ ಗಳಿಸಿ ಪೆವಿಲಿಯನ್ ಸೇರಿದರು. ಪವನ್ ರತ್ನಾಯಕೆ 18 ಬಾಲ್‌ಗಳಲ್ಲಿ 10 ರನ್ ಗಳಿಸಿ ರಚಿನ್ ರವೀಂದ್ರ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ಬಳಿಕ ಕಮಿಂದು ಮೆಂಡಿಸ್ 23 ಬಾಲ್‌ಗಳನ್ನು ಎದುರಿಸಿ 31 ರನ್ ಗಳಿಸಿ ಮಿಚೆಲ್ ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ಗ್ಲೆನ್ ಫಿಲಿಫ್ಸ್‌ಗೆ ಕ್ಯಾಚ್‌ಗೆ ಬಲಿಯಾದರು.

ಆ ನಂತರ ಕ್ರೀಸ್‌ಗೆ ಬಂದ ಲಂಕಾ ನಾಯಕ ದಾಸುನ್ ಶನಕ ಕೇವಲ 3 ರನ್ ಗಳಿಸಿದರು. ದುಶನ್ ಹೇಮಂತ 3 ರನ್‌ಗೆ ವಿಕೆಟ್ ಕಳೆದುಕೊಂಡರು. ದುನಿತ್ ವೆಲ್ಲಲಾಗೆ 23 ಬಾಲ್‌ಗಳನ್ನು ಎದುರಿಸಿ 29 ರನ್ ಗಳಿಸಿ ಮಿಂಚಿ ಗ್ಲೆನ್ ಫಿಲಿಪ್ಸ್ ಬೌಲಿಂಗ್‌ನಲ್ಲಿ ರಚಿನ್ ರವೀಂದ್ರ ಅವರಿಗೆ ಕ್ಯಾಚ್ ನೀಡಿ ಔಟ್ ಆದರು.

ಒಂದ್ ಕಪ್ ಮಾತು

ಪಾಕ್ ಮಾಧ್ಯಮಗಳ ಬಗ್ಗೆ ಇರ್ಫಾನ್ ವ್ಯಂಗ್ಯ



ದೆಹಲಿ: ಪಾಕಿಸ್ತಾನ ತಂಡವು ಸೆಮಿಫೈನಲ್ ತಲುಪುವ ಸಾಧ್ಯತೆಗಳು ಬಹುತೇಕ ದೂರವಾದ ನಂತರ ಭಾರತದ ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್ ಪಾಕಿಸ್ತಾನದ ಟ್ರೋಲ್ ಮಾಧ್ಯಮಗಳ ವಿರುದ್ಧ ವಾಗ್ದಾಳಿ ನಡೆಸಿದರು. ಪಾಕಿಸ್ತಾನದ ಮಾಧ್ಯಮಗಳ ಕೆಲವು ವಿಭಾಗಗಳು ತಮ್ಮದೇ ಆದ ಆಟಗಾರರ ಮೇಲೆ ತೀವ್ರ ಒತ್ತಡ ಹೇರುತ್ತಿವೆ ಎಂದು ಪಠಾಣ್ ಟೀಕಿಸಿದರು. ಭಾರತ ತಂಡವು ಪಂದ್ಯವೊಂದರಲ್ಲಿ ಸೋತಾಗಲೆಲ್ಲಾ ಅದೇ ಮಾಧ್ಯಮಗಳು ಅವರನ್ನು ಅಪಹಾಸ್ಯ ಮಾಡುತ್ತವೆ, ಆದರೆ ಪಾಕಿಸ್ತಾನ ಸೋಲನ್ನು ಎದುರಿಸಿದಾಗ ಮೌನವಾಗಿರುತ್ತವೆ ಎಂದು ಅವರು ಹೇಳಿದ್ದಾರೆ. ಪಾಕಿಸ್ತಾನ ತಂಡವು ಒತ್ತಡವನ್ನು ಚೆನ್ನಾಗಿ ನಿಭಾಯಿಸುವುದಿಲ್ಲ, ಅದರ ಹೋರಾಟಗಳು ತಮ್ಮದೇ ಆದ ಟ್ರೋಲ್ ಮಾಧ್ಯಮಗಳೊಂದಿಗೆ ಬಹಳಷ್ಟು ಸಂಬಂಧ ಹೊಂದಿವೆ. ಅವರು ತಂಡವನ್ನು ನಿಜವಾಗಿಯೂ ಬೆಂಬಲಿಸುವುದಿಲ್ಲ, ಬದಲಾಗಿ ನಿರಂತರವಾಗಿ ತಂಡದ ಮೇಲೆ ಅಪಾರ ಒತ್ತಡವನ್ನು ಹಾಕುತ್ತಾರೆ ಎಂದು ಪಠಾಣ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ವಿಶ್ವಕಪ್ ಸೆಮೀಸ್ ಆನ್‌ಲೈನ್ ಟಿಕೆಟ್

ದೆಹಲಿ: ವಿಶ್ವಕಪ್ ಟೂರ್ನಿಯ ಸೂಪರ್ 8 ಹಂತವು ಕುತೂಹಲದ ಘಟ್ಟದಲ್ಲಿರುವಂತೆಯೇ ಇದೀಗ ಸೆಮಿಫೈನಲ್ ಪಂದ್ಯಗಳ ಟಿಕೆಟ್ ಗಳ ಆನ್‌ಲೈನ್ ಮಾರಾಟ ಆರಂಭವಾಗಿದೆ. ಈ ಬಗ್ಗೆ ಐಸಿಸಿಯು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಪ್ರಕಟಣೆ ನೀಡಿದ್ದು ಫೆಬ್ರವರಿ 24ರಂದು ಸಂಜೆ 7ರಿಂದ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ನೀಡಲು ಆರಂಭಿಸಿದೆ ಎಂದು ಮಾಹಿತಿ ನೀಡಿದೆ. ಪ್ರಸ್ತುತ ವಿಶ್ವಕಪ್ ಟೂರ್ನಿ ಹೈಬ್ರಿಡ್ ಮಾದರಿಯಲ್ಲಿ ನಡೆಯುತ್ತಿರುವುದರಿಂದ ಸೆಮಿಫೈನಲ್ ಪಂದ್ಯ ಎಲ್ಲಿ ನಡೆಯುವುದು ಎಂಬುದರ ಬಗ್ಗೆ ಇನ್ನೂ ಅಂತಿಮ ತೀರ್ಮಾನ ಆಗಿಲ್ಲ. ಐಸಿಸಿಯ ಸದ್ಯದ ತೀರ್ಮಾನದಂತೆ ಮೊದಲ ಸೆಮಿಫೈನಲ್ ಪಂದ್ಯ ಕೋಲ್ಕತಾದಲ್ಲಿ ಮತ್ತು ಎರಡನೇ ಸೆಮಿಫೈನಲ್ ಪಂದ್ಯ ಮುಂಬೈನಲ್ಲಿ ನಡೆಸುವುದೆಂದು ನಿರ್ಧಾರ ಆಗಿದೆ. ಒಂದು ವೇಳೆ ಪಾಕಿಸ್ತಾನ ತಂಡ ಸೆಮಿಫೈನಲ್ ಪ್ರವೇಶಿಸಿದ್ದೇ ಆದಲ್ಲಿ ಆಗ ಕೋಲ್ಕತಾದಲ್ಲಿ ನಡೆಯುವ ಮೊದಲ ಸೆಮಿಫೈನಲ್ ಪಂದ್ಯ ಕೊಲಂಬೊಗೆ ಸ್ಥಳಾಂತರ ಆಗಲಿದೆ.

ರಿಚರ್ಡ್ ಪೈಬಸ್ ಆಫ್ಘಾನ್ ಕೋಚ್

ಕಾಬುಲ್: ಇಂಗ್ಲೆಂಡ್‌ನ ಮಾಜಿ ಬ್ಯಾಟ್ಸ್‌ಮನ್ ಜೊನಾಥನ್ ಟ್ರಾಟ್ ಅವರ ಅಧಿಕಾರಾವಧಿ ಕೊನೆಗೊಂಡ ನಂತರ, ಅಫಘಾನಿಸ್ತಾನ ತಂಡ ರಿಚರ್ಡ್ ಪೈಬಸ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ. ಈ ವಿಷಯವನ್ನು ಅಫಘಾನಿಸ್ತಾನ ಕ್ರಿಕೆಟ್ ಮಂಡಳಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಪ್ರಸ್ತುತ ನಡೆಯುತ್ತಿರುವ ಟಿ20 ವಿಶ್ವಕಪ್‌ನಲ್ಲಿ ಅಫಘಾನಿಸ್ತಾನ ತಂಡವು ಗುಂಪು ಹಂತದಲ್ಲೇ ಸೋತು ನಿರ್ಗಮಿಸಿತ್ತು. 61 ವರ್ಷದ ಪೈಬಸ್, ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಕೋಚಿಂಗ್ ವೃತ್ತಿ ಅನುಭವನ್ನು ಹೊಂದಿದ್ದು, ಈ ಹಿಂದೆ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳ ಕೋಚ್ ಆಗಿ ಸೇವೆ ಸಲ್ಲಿಸಿದ್ದಾರೆ. 1999ರ ವಿಶ್ವಕಪ್‌ನಲ್ಲಿ ಪಾಕಿಸ್ತಾನ ತಂಡ ಫೈನಲ್‌ಗೆ ತಲುಪುವಲ್ಲಿ ಪೈಬಸ್ ಮಾರ್ಗದರ್ಶನ ಪ್ರಮುಖವಾಗಿತ್ತು. 2016ರಲ್ಲಿ ವೆಸ್ಟ್ ಇಂಡೀಸ್‌ನ ಪುರುಷ, ಮಹಿಳಾ ಮತ್ತು ಅಂಡರ್-19 ತಂಡಗಳು ವಿಶ್ವಕಪ್ ಗೆದ್ದಾಗ ಅವರು ವೆಸ್ಟ್ ಇಂಡೀಸ್‌ನ ಕ್ರಿಕೆಟ್ ಮಂಡಳಿಯ ನಿರ್ದೇಶಕರಾಗಿದ್ದರು. ಅವರು 2012ರಲ್ಲಿ ಬಾಂಗ್ಲಾದೇಶದ ಮುಖ್ಯ ಕೋಚ್ ಆಗಿ ಅಲ್ಪಾವಧಿ ಸೇವೆ ಸಲ್ಲಿದ್ದರು.

ನಾಳೆಯ ಪಂದ್ಯಗಳು

ವೆಸ್ಟ್ ಇಂಡೀಸ್ vs ದ.ಆಫ್ರಿಕಾ
ಸೂಪರ್-8
ಸ.3 ಗಂಟೆ ಅಹಮದಾಬಾದ್

ಭಾರತ vs ಜಿಂಬಾಬ್ವೆ
ಸೂಪರ್-8
ಸ್ಥಳ ▸▸ ಚೆನ್ನೈ
ಪಂದ್ಯಾರಂಭ : ರಾ.7

2 ತಂಡಗಳಿಗೂ ಮಹತ್ವದ ಪಂದ್ಯ | ಇಂದಿನ ಪಂದ್ಯ ವಿಜೇತರು ಸೆಮೀಸ್‌ಗೆ ಲಗ್ಗೆ

ವಿಂಡೀಸ್, ದ. ಆಫ್ರಿಕಾಕ್ಕೂ ಸೆ.ಫೈನಲ್ ತಲುಪುವ ಕಾತರ

ಅಹಮದಾಬಾದ್: ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗುರುವಾರದಂದು ಇಲ್ಲಿನ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವು ದ. ಆಫ್ರಿಕಾವನ್ನು ಎದುರಿಸಲಿದೆ.

ಈಗಾಗಲೇ ಈ ಎರಡೂ ತಂಡಗಳು ಸೂಪರ್-8 ಹಂತದ ಒಂದೊಂದು ಪಂದ್ಯವನ್ನು ಗೆದ್ದು ತಲಾ 2 ಅಂಕಗಳನ್ನು ಪಡೆದಿವೆ. ಹಾಗಾಗಿ ಈ ಮಹತ್ವದ ಪಂದ್ಯದಲ್ಲಿ ಯಾವ ತಂಡ ಗೆಲ್ಲುತ್ತದೆಯೋ, ಆ ತಂಡವು 2 ಅಂಕಗಳನ್ನು ಸಂಪಾದಿಸಿ ಸೆಮಿ ಫೈನಲ್ ತಲುಪುವುದು ಖಚಿತ.

ಫೆ.22ರಂದು ನಡೆದ ಸೂಪರ್-8 ಪಂದ್ಯದಲ್ಲಿ ದ. ಆಫ್ರಿಕಾ ತಂಡ ಭಾರತವನ್ನು ಸೋಲಿಸಿತ್ತು. ಮೊದಲು ಬ್ಯಾಟಿಂಗ್ ಮಾಡಿದ್ದ ಹರಿಣ ಪಡೆ 7 ವಿಕೆಟ್‌ಗಳಿಗೆ 187 ರನ್ ಗಳಿಸಿತ್ತು. ಆ ಬಳಿಕ ಅದು ಭಾರತವನ್ನು 111 ರನ್‌ಗಳಿಗೆ ಆಲೌಟ್ ಮಾಡಿ ಭರ್ಜರಿ ಜಯ ದಾಖಲಿಸಿತ್ತು.

ಫೆ.23ರಂದು ಆಯೋಜನೆಗೊಂಡಿದ್ದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ತಂಡವು ಜಿಂಬಾಬ್ವೆಯನ್ನು ಸೋಲಿಸಿ ಸೂಪರ್-8 ಪಂದ್ಯದಲ್ಲಿ ತನ್ನ ಶುಭಾರಂಭ ಮಾಡಿತ್ತು. ಮೊದಲು ಬ್ಯಾಟ್ ಮಾಡಿದ್ದ ವೆಸ್ಟ್ ಇಂಡೀಸ್ 6 ವಿಕೆಟ್‌ಗೆ 254 ರನ್ ಕಲೆ ಹಾಕಿತ್ತು. ಆ ಬಳಿಕ ಅದು ಜಿಂಬಾಬ್ವೆಯನ್ನು 147 ರನ್‌ಗಳಿಗೆ ಆಲೌಟ್ ಮಾಡಿ ಗೆಲುವಿನ ನಗೆ ಬೀರಿತ್ತು.

ಶೇಯ್ ಹೋಪ್ ನಾಯಕತ್ವದ ವಿಂಡೀಸ್ ತಂಡದಲ್ಲಿ ಶಿಮ್ರಾನ್ ಹೆಟ್ಮಾಯೆರ್, ಜೇಸನ್ ಹೋಲ್ಡರ್, ರೊವ್ಮನ್ ಪೊವೆಲ್ ಉತ್ತಮವಾಗಿಯೇ ಈ ಸಲದ ವಿಶ್ವಕಪ್‌ನಲ್ಲಿ ಬ್ಯಾಟಿಂಗ್ ಮಾಡಿದ್ದಾರೆ. ಅದೇ ರೀತಿ ಗುಡಾಕೇಶ್ ಮೋತಿ, ರೊಮೊರಿಯೋ ಶೆಫರ್ಡ್ ಕೂಡಾ ತಮ್ಮ ಬೌಲಿಂಗ್ ಮೊನಚನ್ನು ಉಳಿಸಿಕೊಂಡಿರುವುದು ವಿಂಡೀಸ್ ಪಾಳಯದ ಸಮಾಧಾನಕರ ಸಂಗತಿ ಯಾಗಿದೆ.

ಏಡನ್ ಮಾರ್ಕ್ರಾಮ್ ನಾಯಕತ್ವದ ದ. ಆಫ್ರಿಕಾ ತಂಡದಲ್ಲಿ ಡೇವಿಡ್ ಮಿಲ್ಲರ್, ಕ್ವಿಂಟಾನ್ ಡಿ ಕಾಕ್ ಸೇರಿದಂತೆ ಹಲವಾರು ಬ್ಯಾಟ್ಸ್‌ಮ್ಯಾನ್‌ಗಳು ಈ ಸಲದ ವಿಶ್ವಕಪ್‌ನಲ್ಲಿ ಉತ್ತಮ ಇನ್ನಿಂಗ್ಸ್‌ಗಳನ್ನು ಆಡಿದ್ದಾರೆ. ಅದೇ ರೀತಿ ಬೌಲರ್‌ಗಳಾದ ಲುಂಗಿ ಎನ್‌ಗಿಡಿ, ಮಾರ್ಕೊ ಜಾನ್ಸೆನ್ ಕೂಡಾ ಉತ್ತಮ ಲಯ ದಲ್ಲೇ ಬೌಲಿಂಗ್ ಗುಣಮಟ್ಟವನ್ನು ಕಾಪಾಡಿ ಕೊಂಡಿದ್ದಾರೆ.

ಎರಡೂ ತಂಡವೂ ಒಂದೇ ನೋಟಕ್ಕೆ ಸಮಬಲರಂತೆ ಕಾಣಿಸುವಂತಿದೆ. ಹಾಗಾಗಿ ಇಂದಿನ ವಿಂಡೀಸ್-ದ.ಆಫ್ರಿಕಾ ಕದನವು ರೋಚಕವಾಗುವುದರಲ್ಲಿ ಸಂದೇಹವೇನಿಲ್ಲ ಎಂಬುವುದು ಕ್ರಿಕೆಟ್‌ಪ್ರೇಮಿಗಳ ಆತ್ಮವಿಶ್ವಾಸವಾಗಿದೆ.

ವೆಸ್ಟ್ ಇಂಡೀಸ್ ತಂಡ
ಶೇಯ್ ಹೋಪ್ (ನಾಯಕ), ಶಿಮ್ರಾನ್ ಹೆಟ್ಮಾಯೆರ್, ಜಾನ್ಸನ್ ಚಾರ್ಲ್ಸ್. ಬ್ರ್ಯಾಂಡನ್ ಕಿಂಗ್, ರಾಸ್ಟನ್ ಚೇಸ್, ಜೇಸನ್ ಹೋಲ್ಡರ್, ರೊವ್ಮನ್ ಪೊವೆಲ್, ಶೆರ್ಫೇನ್ ರುದರ್ಫೋರ್ಡ್, ರೊಮಾರಿಯೊ ಶೆಫರ್ಡ್, ಕ್ವಿಂಟಿನ್ ಸ್ಯಾಂಪ್ಸನ್ ಅಕೀಲ್ ಹುಸೇನ್, ಗುಡಕೇಶ್ ಮೋತಿ, ಶಮರ್ ಜೋಸೆಫ್, ಜೇಡನ್ ಸೀಲ್ಸ್, ಮ್ಯಾಥ್ಯೂ ಫಾರ್ಡ್

ದಕ್ಷಿಣ ಆಫ್ರಿಕಾ ತಂಡ
ಏಡನ್ ಮಾರ್ಕ್ರಾಮ್ (ನಾಯಕ), ಕಾರ್ಬಿನ್ ಬೋಷ್, ಡೆವಾಲ್ಡ್ ಬ್ರೂವಿಸ್, ಕ್ವಿಂಟನ್ ಡಿ ಕಾಕ್, ಟೋನಿ ಡಿ ಜೋರ್ಜಿ, ಡೊನೊವನ್ ಫೆರೀರಾ, ಮಾರ್ಕೊ ಜಾನ್ಸೆನ್, ಜಾರ್ಜ್ ಲಿಂಡೆ, ಕೇಶವ್ ಮಹಾರಾಜ್, ಕ್ವೆನಾ ಎಂಫಾಕಾ, ಡೇವಿಡ್ ಮಿಲ್ಲರ್, ಲುಂಗಿ ಎನ್‌ಗಿಡಿ, ಎನ್ರಿಕ್ ಎಸ್ ರಾಮಿಸಾ, ಜಾಮಿಸನ್ ನಾರ್ಟ್ಜೆ.

ನಂ.1 ಸ್ಥಾನದಲ್ಲೇ ಮುಂದುವರಿದ ಅಭಿಷೇಕ್ | ಕುಸಿದ ತಿಲಕ್ ವರ್ಮಾ ಶ್ರೇಯಾಂಕ

ಬುಮ್ರಾ ಟಿ20 ಶ್ರೇಯಾಂಕ ಏರಿಕೆ

ದುಬೈ: ಭಾರತ ಕ್ರಿಕೆಟ್ ತಂಡದ ಖ್ಯಾತ ವೇಗಿ ಜಸ್ಪ್ರೀತ್ ಬುಮ್ರಾ, ನೂತನ ಐಸಿಸಿ ಶ್ರೇಯಾಂಕದಲ್ಲಿ ಭಾರೀ ಏರಿಕೆ ಕಂಡಿದ್ದು, ಟಿ20 ಬೌಲರ್‌ಗಳ ಪಟ್ಟಿಯಲ್ಲಿ ಏಳು ಸ್ಥಾನಗಳ ಪ್ರಗತಿಯೊಂದಿಗೆ ಅಗ್ರ 10ರಲ್ಲಿ ಸ್ಥಾನ ಪಡೆದಿದ್ದಾರೆ. ಪ್ರಸ್ತುತ 669 ರೇಟಿಂಗ್ ಅಂಕದೊಂದಿಗೆ ಎಂಟನೇ ಸ್ಥಾನಕ್ಕೆ ತಲುಪಿದ್ದಾರೆ. ಹಾಲಿ ಟಿ20 ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ 15 ರನ್‌ಗೆ 3 ವಿಕೆಟ್ ಗಳಿಸಿದ್ದು ಅವರ ಶ್ರೇಯಾಂಕದಲ್ಲಿ ಗಮನಾರ್ಹ ಜಿಗಿತಕ್ಕೆ ಕಾರಣವಾಯಿತು.

ದಕ್ಷಿಣ ಆಫ್ರಿಕಾದ ಕಾರ್ಬಿನ್ ಬಾಷ್ ಮತ್ತು ವೆಸ್ಟ್ ಇಂಡೀಸ್‌ನ ಮ್ಯಾಥ್ಯೂ ಫೋರ್ಡ್ ಶ್ರೇಯಾಂಕದಲ್ಲಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಿದ್ದಾರೆ. ಬಾಷ್ 21 ಸ್ಥಾನಗಳ ಭಾರಿ ಜಿಗಿತವನ್ನು ಸಾಧಿಸಿ ಟಿ20 ಬೌಲರ್‌ಗಳ ಶ್ರೇಯಾಂಕದಲ್ಲಿ ಮೂರನೇ ಸ್ಥಾನವನ್ನು ತಲುಪಿದರೆ, ಫೋರ್ಡ್ 23 ಸ್ಥಾನಗಳ ಏರಿಕೆ ಕಂಡು ಏಳನೇ ಸ್ಥಾನವನ್ನು ತಲುಪಿದ್ದಾರೆ.

ಕಾರ್ಬಿನ್ ಬಾಷ್ ಭಾರತದ ವಿರುದ್ಧದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಅವರು ಮೂರು ಓವರ್‌ಗಳಲ್ಲಿ 12 ರನ್‌ಗೆ 2 ವಿಕೆಟ್ ಪಡೆದಿದ್ದರು. ಬೌಲಿಂಗ್ ಆಲ್‌ರೌಂಡರ್ ಆಗಿದ್ದ ಅವರು ಈ ಹಿಂದೆ ಯುಎಇ ವಿರುದ್ಧದ ಪಂದ್ಯದಲ್ಲಿ ನಾಲ್ಕು ಓವರ್‌ಗಳಲ್ಲಿ 12 ರನ್‌ಗೆ 3 ವಿಕೆಟ್ ಪಡೆದಿದ್ದರು. ವೆಸ್ಟ್ ಇಂಡೀಸ್‌ನ ಫೋರ್ಡ್ ಕೂಡ ಕಳೆದ ಎರಡು ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು. ಇಟಲಿ ವಿರುದ್ಧ 19 ರನ್‌ಗೆ 3 ವಿಕೆಟ್ ಪಡೆದ ನಂತರ ಜಿಂಬಾಬ್ವೆ ವಿರುದ್ಧ 27 ರನ್ ನೀಡಿದ 2 ವಿಕೆಟ್ ಪಡೆದಿದ್ದರು.

ಈ ಮಧ್ಯೆ ಜಿಂಬಾಬ್ವೆ ನಾಯಕ ಸಿಕಂದರ್ ರಝಾ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರಿಂದ ಐಸಿಸಿ ಟಿ20 ಆಲ್‌ರೌಂಡರ್‌ಗಳ ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ರಝಾ 45 ರನ್ ಗಳಿಸಿದರು, ಸೂಪರ್ ಎಂಟರ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 27 ರನ್ ಗಳಿಸಿದ್ದರು.

ಭಾರತದ ಮಧ್ಯಮ ಕ್ರಮಾಂಕದ ಆಟಗಾರ ತಿಲಕ್ ವರ್ಮಾ ಬ್ಯಾಟ್ಸ್‌ಮನ್‌ಗಳ ಶ್ರೇಯಾಂಕದಲ್ಲಿ ಮೂರು ಸ್ಥಾನ ಕುಸಿದು ಏಳನೇ ಸ್ಥಾನಕ್ಕೆ ತಲುಪಿದ್ದಾರೆ. ಆದರೆ ಇಶಾನ್ ಕಿಶನ್ ಕಳೆದ ದಕ್ಷಿಣ ಆಫ್ರಿಕಾ ವಿರುದ್ಧ ಸೊನ್ನೆ ಸುತ್ತಿದ್ದರೂ ಮೂರು ಸ್ಥಾನಗಳ ಜಿಗಿತ ಕಂಡಿದ್ದಾರೆ. ಸತತ ಬ್ಯಾಟಿಂಗ್ ವೈಫಲ್ಯದ ಮಧ್ಯೆಯೂ ಅಭಿಷೇಕ್ ಶರ್ಮಾ ನಂ.1 ಸ್ಥಾನ ಉಳಿಸಿಕೊಂಡಿದ್ದಾರೆ.

ಸ್ವೀಡನ್‌ನ ಡುಪ್ಲಾಂಟಿಸ್ ಮತ್ತೆ ಗೆಲುವಿನ ಓಟ

ಕ್ಲೆರ್ಮಾನ್ ಫೆರಾಂಡ್ (ಫ್ರಾನ್ಸ್): ಸ್ವೀಡನ್‌ನ ಅರ್ಮಾಂಡ್ ಡುಪ್ಲಾಂಟಿಸ್ ಅವರು ಇಲ್ಲಿ ನಡೆದ ಆಲ್ ಸ್ಟಾರ್ ಪರ್ಚ್' ಕೂಟದ ಪೋಲ್ ವಾಲ್ಟ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡರು. ದೈಹಿಕ ಸಮಸ್ಯೆ ಎದುರಿಸಿದ್ದರೂ ಅವರು ತಮ್ಮ ಗೆಲುವಿನ ಓಟ ಮುಂದುವರಿಸಿದರು. ಆದರೆ ಈ ಬಾರಿ ವಿಶ್ವದಾಖಲೆಯನ್ನು ಸುಧಾರಿಸಿಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸಲು ಕೊನೆಯ ಕ್ಷಣದಲ್ಲಿ ನಿರ್ಧರಿಸಿದ ಸೋಲಿಲ್ಲದ ಸರದಾರ ಎನಿಸಿದ ಡುಪ್ಲಾಂಟಿಸ್ ಮೊದಲ ಯತ್ನದಲ್ಲಿ 6.06 ಮೀ. ಜಿಗಿದು ಚಿನ್ನದ ಪದಕ ಖಚಿತಪಡಿಸಿಕೊಂಡರು. ಆಸ್ಟ್ರೇಲಿಯಾದ ಕರ್ಟಿಸ್ ಮಾರ್ಷಲ್ (6.0 ಮೀ.) ಹಾಗೂ ಗ್ರೀಸ್‌ನ ಇಮ್ಯಾನುವೆಲ್ ಕೆರಾಲಿಸ್ (5.90 ಮೀ.) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ತಮ್ಮದಾಗಿಸಿಕೊಂಡರು. 26 ವರ್ಷ ವಯಸ್ಸಿನ ಡುಪ್ಲಾಂಟಿಸ್ ಅವರು 2023ರಿಂದ ಸತತ 37 ಕೂಟಗಳಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. ಟೋಕಿಯೊದಲ್ಲಿ ನಡೆದ 2025ರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 6.30ಮೀ. ಜಿಗಿದು 14ನೇ ಬಾರಿಗೆ ವಿಶ್ವ ದಾಖಲೆ ಸ್ಥಾಪಿಸಿದ್ದರು.

ಹಾರ್ದಿಕ್‌ಗೆ ಬ್ಯಾಟಿಂಗ್ ಭಡ್ತಿ ನೀಡಲು ಸ್ಪಿನ್ ದಿಗ್ಗಜ ಸಲಹೆ

ಪಾಂಡ್ಯ ಪರ ಕುಂಬ್ಳೆ ಬ್ಯಾಟಿಂಗ್

ಬೆಂಗಳೂರು: ಟಿ20 ವಿಶ್ವಕಪ್‌ನಲ್ಲಿ ಭಾರತ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರೆ ಏನಾಗುತ್ತದೆ? ಎಂಬ ಪ್ರಶ್ನೆಗೆ ದಿಗ್ಗಜ ಅನಿಲ್ ಕುಂಬ್ಳೆ ಉತ್ತರಿಸಿದ್ದು, ಅಂತಹ ಸನ್ನಿವೇಶದಲ್ಲಿ ಭಾರತ ಹಾರ್ದಿಕ್ ಪಾಂಡ್ಯ ಅವರ ಕ್ರಮಾಂಕದಲ್ಲಿ ಬಡ್ತಿ ನೀಡಬೇಕಾಗಿದೆ ಎಂದು ಹೇಳಿದ್ದಾರೆ.

ಮಾಧ್ಯಮ ಸಂದರ್ಶನದಲ್ಲಿ ಬುಧವಾರ ಮಾತನಾಡಿದ ಕುಂಬ್ಳೆ, ಭಾರತವು ತಾತ್ಕಾಲಿಕ ಆಯ್ಕೆಗೆ ಹೋಗುವ ಬದಲು ಹಾರ್ದಿಕ್ ಅವರನ್ನು ನಂಬುವ ಸಮಯ ಬಂದಿದೆ. ಒತ್ತಡವನ್ನು ಎದುರಿಸುವ ಮತ್ತು ಭಾರತವನ್ನು ಗೆಲುವಿನ ಸ್ಥಾನಕ್ಕೆ ಕೊಂಡೊಯ್ಯುವ ಕೌಶಲ್ಯ ಹಾರ್ದಿಕ್ ಪಾಂಡ್ಯಗೆ ಇದೆ ಎಂದು ಭಾರತದ ಮಾಜಿ ಕೋಚ್ ಕುಂಬ್ಳೆ ಹೇಳಿದ್ದಾರೆ.

ಒತ್ತಡವನ್ನು ನಿವಾರಿಸಲು ಬೇರೆ ಯಾರಾದರೂ ಪರ್ಯಾಯವಾಗಿ ಆಡುವ ಬದಲು ಹಾರ್ದಿಕ್ ಪಾಂಡ್ಯ ಆ ಹಂತದಲ್ಲಿ ಆಡುವುದನ್ನು ನಾನು ನೋಡಲು ಬಯಸುತ್ತೇನೆ ಎಂದಿದ್ದಾರೆ. ಒತ್ತಡವನ್ನು ನಿರ್ವಹಿಸುವ ಮತ್ತು ಪಂದ್ಯವನ್ನು ಗೆಲುವಿನ ಸ್ಥಾನಕ್ಕೆ ಕೊಂಡೊಯ್ಯುವ ಸಾಮರ್ಥ್ಯ ಪಾಂಡ್ಯ ಹೊಂದಿದ್ದಾರೆ. ಆದ್ದರಿಂದ ಜಿಂಬಾಬ್ವೆ ಅಥವಾ ವೆಸ್ಟ್ ಇಂಡೀಸ್ ವಿರುದ್ಧ ಭಾರತವು ಆ ರೀತಿಯ ಪರಿಸ್ಥಿತಿಗೆ ಸಿಲುಕಿದರೆ ಭಾರತವು ಇಂತಹ ವಿಷಯಗಳನ್ನು ಗಂಭೀರವಾಗಿ ಪರಿಗಣಿಸುವುದು ಉತ್ತಮ ಎಂದು ಕುಂಬ್ಳೆ ಹೇಳಿದ್ದಾರೆ.

ಭಾರತ ತಂಡವು ತನ್ನ ಮುಂದಿನ ಪಂದ್ಯದಲ್ಲಿ ಖಂಡಿತವಾಗಿಯೂ ಉತ್ತಮವಾಗಿ ಆಡಬೇಕಾಗುತ್ತದೆ, ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ 20 ರನ್‌ಗೆ 3 ವಿಕೆಟ್ ಕಿತ್ತರೂ ಆ ಬಳಿ ನೀರಸ ಪ್ರದರ್ಶನ ತೋರಿದ್ದು ತಂಡದ ಸೋಲಿಗೆ ಪ್ರಮುಖ ಕಾರಣ ಎಂದು ಕುಂಬ್ಳೆ ಹೇಳಿದ್ದಾರೆ.

ಭಾರತ ಪರ ಹಾರ್ದಿಕ್ 4 ಮತ್ತು 5ನೇ ಕ್ರಮಾಂಕದಲ್ಲಿ ಅದ್ಭುತ ದಾಖಲೆಯನ್ನು ಹೊಂದಿರುವುದರಿಂದ ಕುಂಬ್ಳೆ ಈ ಸಲಹೆ ನೀಡಿದ್ದಾರೆ. ಪಾಂಡ್ಯ ಆರು ಪಂದ್ಯಗಳಲ್ಲಿ 131 ರನ್ ಗಳಿಸಿದ್ದಾರಲ್ಲದೆ 43.66 ಸರಾಸರಿ ಮತ್ತು 238.18 ಸ್ಟ್ರೈಕ್‌ರೇಟ್ ಹೊಂದಿದ್ದಾರೆ. 5ನೇ ಸ್ಥಾನದಲ್ಲಿ ಪಾಂಡ್ಯ 30ಕ್ಕಿಂತ ಹೆಚ್ಚಿನ ಸರಾಸರಿಯಲ್ಲಿ ಮತ್ತು 154.47 ಸ್ಟ್ರೈಕ್ ರೇಟ್‌ನಲ್ಲಿ 1208 ರನ್‌ಗಳನ್ನು ಗಳಿಸಿದ್ದಾರೆ.

2ನೇ ದಿನವೂ ಬಸವಳಿದ ಕರ್ನಾಟಕ ಬೌಲರ್‌ಗಳು | 6 ವಿಕೆಟ್‌ಗೆ 527 ರನ್ ಕಲೆ ಹಾಕಿದ ಪರಸ್ ದೋಗ್ರಾ ತಂಡ

ಜಮ್ಮು ಕಾಶ್ಮೀರ ಬೃಹತ್ ಮೊತ್ತ

ಹುಬ್ಬಳ್ಳಿ: ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡವು 8 ಬಾರಿಯ ಚಾಂಪಿಯನ್ ಕರ್ನಾಟಕದ ವಿರುದ್ಧ ದಿಟ್ಟ ಪ್ರದರ್ಶನ ನೀಡಿ ಬೃಹತ್ ಮೊತ್ತ ಕಲೆ ಹಾಕಿದೆ.

ಮೊದಲನೇ ದಿನಾಂತ್ಯಕ್ಕೆ 2 ವಿಕೆಟ್ ಕಳೆದುಕೊಂಡು 284 ರನ್ ಗಳಿಸಿದ್ದ ಪರಸ್ ದೋಗ್ರಾ ಬಳಗವು 2ನೇ ದಿನಾಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 527 ರನ್‌ಗಳನ್ನು ಕಲೆ ಹಾಕಿದೆ. ಪಂದ್ಯದ ಮೊದಲನೇ ದಿನ 2 ವಿಕೆಟ್ ಗಳಿಸಲಷ್ಟೇ ಶಕ್ತವಾಗಿದ್ದ ಕರ್ನಾಟಕದ ಬೌಲರ್‌ಗಳಿಗೆ ಬುಧವಾರ ಕೇವಲ 4 ವಿಕೆಟ್ ಮಾತ್ರ ಕೈ ಸೇರಿತು.

ಇಲ್ಲಿನ ಕೆಎಸ್ ಸಿಎ ಕ್ರೀಡಾಂಗಣದಲ್ಲಿ ಎರಡನೇ ದಿನದಾಟ ಮುಂದುವರಿಸಿದ ಶುಭಂ ಪುಂಡಿರ್ ಮತ್ತು ಅಬ್ದುಲ್ ಸಮದ್ 3ನೇ ವಿಕೆಟ್ ಜತೆಯಾಟವನ್ನು 124 ರನ್ ಗಳಿಗೆ ಏರಿಸಿದರು. ತಂಡದ ಮೊತ್ತ 303 ಆಗಿದ್ದಾಗ ಶುಭಂ ಪುಂಡಿರ್(121 ರನ್) ಅವರನ್ನು ಶಾರ್ಟ್ ಲೆಗ್‌ನಲ್ಲಿದ್ದ ಕೆ.ವಿ ಅನೀಶ್ ಅವರಿಗೆ ಕ್ಯಾಚ್ ಕೊಡಿಸುವಲ್ಲಿ ಮಧ್ಯಮ ವೇಗಿ ವಿದ್ಯಾಧರ್ ಪಾಟೀಲ್ ಯಶಸ್ವಿಯಾದರು. 247 ಎಸೆತಗಳನ್ನು ಎದುರಿಸಿದ ಶುಭಂ ಪುಂಡೀರ್ 12 ಬೌಂಡರಿ ಮತ್ತು 2 ಸಿಕ್ಸರ್ ಗಳಿದ್ದ 121 ರನ್ ಗಳಿಸಿದರು. ಅವರು ಔಟಾಗಿ ನಾಲ್ಕು ರನ್ ಗಳಾಗುವಷ್ಟರಲ್ಲಿ ಅರ್ಧಶತಕ ಬಾರಿಸಿದ್ದ ಅಬ್ದುಲ್ ಸಮದ್ (60 ರನ್) ಅವರು ಪ್ರಸಿದ್ಧ ಕೃಷ್ಣ ಬೌಲಿಂಗ್‌ನಲ್ಲಿ ಕೀಪರ್ ಕೃತಿಕ್ ಕೃಷ್ಣಗೆ ಕ್ಯಾಚ್ ನೀಡಿದರು.

ಪರಸ್ ದೋಗ್ರಾ ನಾಯಕನಾಟ: ಪ್ರಸಿದ್ಧ ಕೃಷ್ಣ ಬೌನ್ಸರ್ ನಲ್ಲಿ ಗಾಯಾಳುವಾಗಿ ನಿವೃತ್ತರಾಗಿದ್ದ ಅವರು ಶುಭ ಪುಂಡಿರ್ ಬುಧವಾರ ಕ್ರೀಸಿಗೆ ಆಗಮಿಸಿ ಬ್ಯಾಟಿಂಗ್ ಮುಂದುವರಿಸಿದರು. ಕನಯ್ಯ ವಾಧವನ್ (70) ಜತೆ 5ನೇ ವಿಕೆಟ್‌ಗೆ 110 ರನ್ ಮತ್ತು ಸಾಹಿಲ್ ಲೋತ್ರಾ ಜೊತೆ 6ನೇ ವಿಕೆಟ್‌ಗೆ 54 ರನ್‌ಗಳ ಜತೆಯಾಟ ಆಡಿದರು. ಶತಕದ ಕಡೆ ಮುನ್ನುಗ್ಗುತ್ತಿದ್ದ ಅವರನ್ನು ಶ್ರೇಯಸ್ ಗೋಪಾಲ್ ಅವರು ಕ್ಲೀನ್ ಬೌಲ್ಡ್ ಮಾಡಿದರು.

2ನೇ ದಿನಾಂತ್ಯಕ್ಕೆ 57 ರನ್ ಗಳಿಸಿದ ಸಾಹಿಲ್ ಲೋತ್ರಾ ಮತ್ತು 20 ರನ್ ಗಳಿಸಿರುವ ಅಬಿದ್ ಮುಷ್ತಾಕ್ ಅವರು ಗುರುವಾರಕ್ಕೆ ಕ್ರೀಸ್ ಕಾಯ್ದುಕೊಂಡಿದ್ದಾರೆ. ಅವರಿಬ್ಬರೂ ಈಗಾಗಲೇ 7ನೇ ವಿಕೆಟ್‌ಗೆ 46 ರನ್‌ಗಳ ಜತೆಯಾಟವಾಡಿ ಕರ್ನಾಟಕದ ಬೌಲರ್‌ಗಳಿಗೆ ತಲೆನೋವಾಗಿ ಪರಿಣಮಿಸಿದ್ದಾರೆ.

ಜಮ್ಮು ಕಾಶ್ಮೀರ ಸಂಕ್ಷಿಪ್ತ ಸ್ಕೋರ್
527/6: ಯವಿರ್ ಹಸನ್ 88(150), ಶುಭಂ ಪುಂಡಿರ್ 121(247), ಪರಸ್ ದೋಗ್ರಾ 70(166), ಅಬ್ದುಲ್ ಸಮದ್ 61(104), ಕನ್ಹೆಯ್ಯ ವಾಧವನ್ 70(109), ಸಾಹಿಲ್ ಲೋಹ್ರಾ 57(93), ಅಬಿದ್ ಮುಷ್ತಾಕ್ 20(31), ಇತರೆ 34.
ಬೌಲಿಂಗ್: ಪ್ರಸಿದ್ಧ ಕೃಷ್ಣ 90ಕ್ಕೆ 3, ವಿದ್ಯಾಧರ ಪಾಟೀಲ್ 104ಕ್ಕೆ 1, ಶ್ರೇಯಸ್ ಗೋಪಾಲ್ 130ಕ್ಕೆ 1, ಶಿಖರ್ ಶೆಟ್ಟಿ 112ಕ್ಕೆ 1.

ಡೋಗ್ರಾ ಡಿಚ್ಚಿ: 50% ದಂಡ
ರಣಜಿ ಫೈನಲ್‌ನ 2ನೇ ದಿನವಾದ ಗುರುವಾರ ಜಮ್ಮು-ಕಾಶ್ಮೀರದ ನಾಯಕ ಪರಾಸ್ ಡೋಗ್ರಾ ವಿವಾದಕ್ಕೀಡಾದರು. ಕರ್ನಾಟಕದ ಯುವ ಆಟಗಾರ ಕೆ.ವಿ. ಅವಿನಾಶ್‌ಗೆ ಡಿಚ್ಚಿ ಹೊಡೆದು ಅಸಭ್ಯ ವರ್ತನೆ ತೋರಿದ್ದಾರೆ. ದೇಶಿ ಕ್ರಿಕೆಟ್‌ನಲ್ಲಿ ಅಪಾರ ಅನುಭವ ಹೊಂದಿರುವ 41 ವರ್ಷದ ಹಿರಿಯ ಆಟಗಾರ ಯುವ ಆಟಗಾರನ ಜೊತೆ ನಡೆದುಕೊಂಡ ರೀತಿಗೆ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾಗಿತ್ತು. ಆ ದುರ್ನಡತೆಗೆ ತಕ್ಕ ಶಿಕ್ಷೆಯಾಗಿದ್ದು, ಬಿಸಿಸಿಐ ಜಮ್ಮು ಮತ್ತು ಕಾಶ್ಮೀರದ ನಾಯಕನಿಗೆ ಪಂದ್ಯದ ಶುಲ್ಕದ ಶೇಕಡಾ 50ರಷ್ಟನ್ನು ದಂಡ ವಿಧಿಸಿದೆ.